ಕರ್ನಾಟಕ ಸರ್ಕಾರ
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಕನ್ನಡ ಭಾಷಾಭಿವೃದ್ಧಿ ಯೋಜನೆ

ಗುಲಬರ್ಗಾ ವಿಶ್ವವಿದ್ಯಾಲಯ
ಗುಲಬರ್ಗಾ

ಬೀದರ ಜಿಲ್ಲೆಯ ತತ್ತ್ವಪದಕಾರರ ಸ್ಮಾರಕಗಳು

(ಭಾಲ್ಕಿ-ಹುಮನಾಬಾದ-ಸಂಪುಟ-೩)

ಡಾ. ಎಸ್.ಎಮ್. ಹಿರೇಮಠ



ಕನ್ನಡ ಅಧ್ಯಯನ ಸಂಸ್ಥೆ
ಗುಲಬರ್ಗಾ ವಿಶ್ವವಿದ್ಯಾಲಯ
ಗುಲಬರ್ಗಾ-585 106

ಬೀದರ ಜಿಲ್ಲೆಯ
ತತ್ತ್ವಪದಕಾರರ ಸ್ಮಾರಕಗಳು
(ಭಾಲ್ಕಿ – ಹುಮನಾಬಾದ – ಸಂಪುಟ – ೩)

ಕರ್ನಾಟಕ ಸರ್ಕಾರ

ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ಕನ್ನಡ ಭಾಷಾಭಿವೃದ್ಧಿ ಯೋಜನೆ
ತತ್ತ್ವಪದಕಾರರ ಸ್ಮಾರಕಗಳ ಕ್ಷೇತ್ರಕಾರ್ಯ
ಹಾಗೂ ಸಂಪುಟಗಳ ಪ್ರಕಟನಾ ಯೋಜನೆ-೨

ಬೀದರ ಜಿಲ್ಲೆಯ
ತತ್ತ್ವಪದಕಾರರ ಸ್ಮಾರಕಗಳು

(ಭಾಲ್ಕಿ – ಹುಮನಾಬಾದ – ಸಂಪುಟ – ೩)

ಪ್ರಧಾನ ಸಂಶೋಧಕರು ಮತ್ತು ಲೇಖಕರು
ಡಾ. ಎಸ್. ಎಮ್. ಹಿರೇಮಠ

ಕನ್ನಡ ಅಧ್ಯಯನ ಸಂಸ್ಥೆ
ಗುಲಬರ್ಗಾ ವಿಶ್ವವಿದ್ಯಾಲಯ
ಗುಲಬರ್ಗಾ – ೫೮೫ ೧೦೬

ನಮ್ಮ ಹಿಂದಿದೆ. ಈ ಮಹಾಪರಂಪರೆಯ ಮುಂಚೂಣಿಯಲ್ಲಿ ನಾವಿದ್ದೇವೆ. ಕನ್ನಡವನ್ನು ಇನ್ನೂ ಎತ್ತರಕ್ಕೆ ತೆಗೆದುಕೊಂಡು ಹೋಗುವ ಬಹುಮುಖ್ಯ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ. ಕನ್ನಡ ಕಟ್ಟುವ ಈ ಮಹತ್ವದ ಕೈಂಕರ್ಯಕ್ಕೆ ಎಲ್ಲರೂ ಕೈಜೋಡಿಸಬೇಕಾಗಿದೆ.

ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯ ಹಲವು ಯೋಜನೆಗಳ ಅಡಿಯಲ್ಲಿ ಈಗ ಸಿದ್ಧಪಡಿಸಿರುವ ಬೀದರ ಜಿಲ್ಲೆಯ ತತ್ತ್ವಪದಕಾರರ ಸ್ಮಾರಕಗಳು (ಭಾಲ್ಕಿ – ಹುಮನಾಬಾದ : ಸಂ – ೩) ಸಂಪುಟವನ್ನು ಪ್ರಕಟಿಸಲು ಶ್ರಮಿಸಿದ ಲೇಖಕರನ್ನು ಅಭಿನಂದಿಸಿ, ಈ ಕೃತಿಗಳು ನಾಡಿನ ಸಹೃದಯರ ಮನಗೆಲ್ಲಲಿ ಎಂದು ಹಾರೈಸಿ ಶುಭ ಕೋರುತ್ತೇನೆ.

ಡಿ.ವಿ. ಸದಾನಂದಗೌಡ

ಮುಖ್ಯಮಂತ್ರಿಗಳು

ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ

ಕನ್ನಡ ಭಾಷಾಭಿವೃದ್ಧಿ ಯೋಜನೆ ಸಮಿತಿ

ಅಧ್ಯಕ್ಷರು
ಪ್ರೊ. ಈ.ಟಿ. ಪುಟ್ಟಯ್ಯ
ಕುಲಪತಿಗಳು

ಉಪಾಧ್ಯಕ್ಷರು
ಪ್ರೊ. ಎಸ್.ಎಲ್. ಹಿರೇಮಠ
ಕುಲಸಚಿವರು

ಸಂಚಾಲಕರು
ಪ್ರೊ. ನಾಗಾಬಾಯಿ ಬುಳ್ಳಾ
ಅಧ್ಯಕ್ಷರು, ಕನ್ನಡ ಅಧ್ಯಯನ ಸಂಸ್ಥೆ

ಸದಸ್ಯರು

ಡಾ. ಪಿ.ಕೆ.ಖಂಡೋಬಾ
ಡಾ. ವ್ಹಿ.ಜಿ.ಪೂಜಾರ
ಡಾ. ವೀರಣ್ಣ ದಂಡೆ
ಡಾ. ಎಚ್.ಟಿ.ಪೋತೆ
ಡಾ. ಜಯಶ್ರೀ ದಂಡೆ
ಡಾ. ಡಿ.ಬಿ.ನಾಯಕ
ಡಾ. ಬಸವರಾಜ ಸಬರದ
ಡಾ. ಬಿ.ಎಸ್. ಪೋಲಿಸ ಪಾಟೀಲ
ಡಾ. ಎಸ್.ಎಂ. ಹಿರೇಮಠ
ಡಾ. ರಾಜಪ್ಪ ದಳವಾಯಿ

ಸ್ಮಾರಕಗಳ (ಭಾಲ್ಕಿ – ಹುಮನಾಬಾದ : ಸಂ – ೩) ಸಂಶೋಧನ ಸಂಪುಟವನ್ನು ಪ್ರಕಟಿಸುತ್ತಿದೆ ಎಂಬ ವಿಚಾರ ತಿಳಿದು ನನಗೆ ತುಂಬಾ ಸಂತೋಷವಾಗಿದೆ.

ಕನ್ನಡ ತೇರು ಎಳೆಯುವ ಮಹತ್ಕಾರ್ಯದಲ್ಲಿ ಎಲ್ಲಾ ವಿಶ್ವವಿದ್ಯಾಲಯಗಳ ಕನ್ನಡ ವಿಭಾಗಗಳು ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಪ್ರೇರೇಪಿಸಿ, ಉತ್ತೇಜಿಸಿ ಆ ಎಲ್ಲ ವಿಶೇಷ ಯೋಜನೆಗಳನ್ನು ಕಾರ್ಯಗತಗೊಳಿಸುವಂತೆ ನಿರ್ದೇಶನ ನೀಡಿರುವ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಆಯುಕ್ತರಾದ ಶ್ರೀ ಮನು ಬಳಿಗಾರ್ ಅವರನ್ನು ಈ ಸಂದರ್ಭದಲ್ಲಿ ಅಭಿನಂದಿಸುತ್ತೇನೆ. ಈ ಮಾಲೆಯಲ್ಲಿ ಈ ಬಗೆಯ ಇನ್ನೂ ಅನೇಕ ಕೃತಿಗಳು ಕನ್ನಡಿಗರಿಗೆ ದೊರೆಯಲಿವೆ ಎಂಬ ವಿಚಾರ ತಿಳಿದಾಗಲಂತೂ ನನಗೆ ಇನ್ನಷ್ಟು ಮಹದಾನಂದವಾಗಿದೆ. ಇದರ ಪೂರ್ಣ ಪ್ರಯೋಜನವನ್ನು ನಾಡಿನ ಜನತೆ ಪಡೆಯುವಂತಾಗಲಿ.

ರಾಜ್ಯ ಸರ್ಕಾರದ ಈ ಯೋಜನೆ ಕನ್ನಡ ನಾಡು–ನುಡಿ ಸಂಸ್ಕೃತಿಯ ಪುನರುತ್ಥಾನಕ್ಕೆ ಕಾರಣವಾಗಿದೆ. ಈ ಮೂಲಕ ವಿವಿಧ ಜ್ಞಾನ ಶಿಸ್ತುಗಳಲ್ಲಿ ಕನ್ನಡಿಗರ ಅಧ್ಯಯನ ಆಸಕ್ತಿ ಬೆಳೆಯಲು ವಿವಿಧ ಕ್ರಿಯಾ ಯೋಜನೆಗಳು ಸಹಕಾರಿಯಾಗಿವೆ. ಇದರಿಂದ ಹೊಸ ಚೈತನ್ಯವನ್ನು ಹುಟ್ಟುಹಾಕುವ ಹೊಸ ಸಂಚಲನವನ್ನು ಉಂಟುಮಾಡುವ ಅನನ್ಯ ಪರಂಪರೆಯೊಂದಕ್ಕೆ ಚಾಲನೆ ಸಿಕ್ಕಂತಾಗಿದೆ.

ಈ ಪರ್ವಕಾಲದಲ್ಲಿ ನಾವಿದ್ದೇವೆ ಎನ್ನುವದು ಸಂತಸದ ಸಂಗತಿ. ಕನ್ನಡದ ಅಪೂರ್ವ ಪರಂಪರೆಯನ್ನು ಉಳಿಸಿ ಬೆಳೆಸುವ ಮಹತ್ಕಾರ್ಯದಲ್ಲಿ ಎಲ್ಲರೂ ಕೈ ಜೋಡಿಸಿದ್ದಾರೆ. ನಾಡು–ನುಡಿಯ ಅಭಿವೃದ್ಧಿ ವಿಚಾರದಲ್ಲಿ ಸರ್ಕಾರ ಸದಾ ಸಹಕಾರ ನೀಡುವದು. ಕನ್ನಡಿಗರಿಗೆ ಒಳಿತಾಗಲಿ, ಸರ್ವರೂ ಸುಖ ಶಾಂತಿಯಿಂದ ಬದುಕಿ ಬಾಳಲೆಂದು ಹೃದಯತುಂಬಿ ಹಾರೈಸುವೆ.

ಗೋವಿಂದ. ಎಂ. ಕಾರಜೋಳ

ಸಚಿವರು

ಡಿ.ವಿ.ಸದಾನಂದಗೌಡ
ಮುಖ್ಯಮಂತ್ರಿ
ಸಿಎಂ/ಪಿಎಸ್/57/11

ಕರ್ನಾಟಕ ಸರ್ಕಾರ

ವಿಧಾನಸೌದ
ಬೆಂಗಳೂರು-560 001
ದಿ: 02.11.2011

ಶುಭ ಹಾರೈಕೆ

ನಮ್ಮ ಸರ್ಕಾರದ ಪ್ರಯತ್ನದ ಫಲವಾಗಿ ಕನ್ನಡಕ್ಕೆ ಶಾಸ್ತ್ರೀಯ ಭಾಷೆಯ ಸ್ಥಾನ ದೊರೆತಿದ್ದು, ಈ ಹಿನ್ನೆಲೆಯಲ್ಲಿ ಕನ್ನಡ ಭಾಷಾಭಿವೃದ್ಧಿ ಯೋಜನೆ ಕಾರ್ಯಕ್ರಮಗಳಿಗೆ ನಮ್ಮ ಸರ್ಕಾರ ವಿಶೇಷ ಅನುದಾನವಾಗಿ ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳಿಗೆ ತಲಾ ಎರಡು ಕೋಟಿ ರೂಪಾಯಿ ಅನುದಾನವನ್ನು ಮೀಸಲಿಟ್ಟು ಈಗಾಗಲೇ ಒಂದು ಕೋಟಿ ರೂಪಾಯಿ ಬಿಡುಗಡೆ ಮಾಡಲಾಗಿದೆ. ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯೂ ಸೇರಿದಂತೆ ನಾಡಿನ ವಿಶ್ವವಿದ್ಯಾಲಯಗಳ ಕನ್ನಡ ವಿಭಾಗಗಳು ಈ ಕಾರ್ಯಯೋಜನೆಯನ್ನು ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಕಾರ್ಯತತ್ಪರರಾಗಿರುವುದು ಮೆಚ್ಚತಕ್ಕ ಸಂಗತಿ.

ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿ, ವಚನ ಸಾಹಿತ್ಯ, ದಾಸ ಸಾಹಿತ್ಯ, ತತ್ತ್ವಪದ ಸಾಹಿತ್ಯ, ದಲಿತ-ಬಂಡಾಯ ಸಾಹಿತ್ಯ, ಜಾನಪದ, ಶಾಸನ, ಇತಿಹಾಸ, ಹಸ್ತಪ್ರತಿ, ಸಾಹಿತ್ಯ ಚರಿತ್ರೆ, ರಂಗಭೂಮಿ, ತಂತ್ರಜ್ಞಾನ, ಕನ್ನಡೇತರರಿಗೆ ಕನ್ನಡ ಪರಿಚಯ ಮೊದಲಾದ ವಿಷಯಗಳಿಗೆ ಸಂಬಂಧಿಸಿದಂತೆ ರೂಪಿಸಲಾದ ವಿವಿಧ ಕ್ರಿಯಾಯೋಜನೆಗಳು ಹೆಚ್ಚು ಉಪಯುಕ್ತಕಾರಿಯಾಗಿವೆ. ಕನ್ನಡ ಅಧ್ಯಯನ ಮತ್ತು ಸಂಶೋಧನಾ ವ್ಯಾಪ್ತಿಯನ್ನು ವಿಸ್ತರಿಸುವುದರ ಮೂಲಕ ಕನ್ನಡಕ್ಕೆ ಹೊಸ ಆಯಾಮಗಳನ್ನು ಜೋಡಿಸಿದೆ. ಈ ಕಾರ್ಯದಲ್ಲಿ ನಾಡಿನ ಅನೇಕ ಸಂಶೋಧನಾಸಕ್ತರು ಪಾಲುಗೊಂಡಿದ್ದು, ಅವರ ಎಲ್ಲ ಸಂಶೋಧನೆ, ಅಧ್ಯಯನ, ಪುಸ್ತಕ ರೂಪದಲ್ಲಿ ಪ್ರಕಟಗೊಳ್ಳುತ್ತಿರುವುದು ಶ್ಲಾಘನೀಯ.

ಕನ್ನಡ ಭಾಷೆಗೆ ಎರಡು ಸಾವಿರ ವರ್ಷಗಳ ಸುದೀರ್ಘ ಇತಿಹಾಸವಿದೆ. ಸಮೃದ್ಧವೂ, ಪ್ರಬುದ್ಧವೂ ಆದ ಕನ್ನಡ ಭಾಷಾ ಸಾಹಿತ್ಯ ತನ್ನ ಭಾಷಿಕ, ಸಾಂಸ್ಕೃತಿಕ, ಸಾಹಿತ್ಯಿಕ ಅನನ್ಯತೆಯಿಂದ ಜಾಗತಿಕ ಮಟ್ಟದಲ್ಲಿ ಗುರುತಿಸಿಕೊಂಡಿದೆ. ಈ ಬೆಳವಣಿಗೆಗೆ ಕನ್ನಡದ ಅಸಂಖ್ಯಾತ ಕವಿಗಳೂ, ಲೇಖಕರೂ, ಕಲಾವಿದರೂ ಕಾರಣರಾಗಿದ್ದಾರೆ. ಕನ್ನಡ ಭಾಷೆ ಸೃಜನಶೀಲವಾಗಿ ಮತ್ತು ಶಾಸ್ತ್ರೀಯವಾಗಿ ಶ್ರೇಷ್ಠ ಮಟ್ಟದ ಬೆಳವಣಿಗೆಯನ್ನು ಹೊಂದಿದೆ. ವೈವಿಧ್ಯಪೂರ್ಣವಾದ ಒಂದು ದೊಡ್ಡ ಪರಂಪರೆ

ಭಾಷೆ ಸ್ಥಾನಮಾನವನ್ನು ನೀಡಿರುವುದು ಎಲ್ಲಾ ರೀತಿಯಿಂದಲೂ ಸಮಂಜಸ ಹಾಗೂ ಸೂಕ್ತ ಎಂಬುವುದಕ್ಕಾಗಿ. ೨೦೦೮ರಲ್ಲಿ ಕನ್ನಡಕ್ಕೆ ಶಾಸ್ತ್ರೀಯ ಸ್ಥಾನಮಾನ ದೊರೆತ ಸಂದರ್ಭದಲ್ಲಿ ಕರ್ನಾಟಕದ ಅಂದಿನ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್.ಯಡಿಯೂರಪ್ಪ ನವರು ಕರ್ನಾಟಕದ ಎಲ್ಲಾ ವಿಶ್ವವಿದ್ಯಾಲಯಗಳ ಕನ್ನಡ ವಿಭಾಗಗಳಿಗೂ ಎರಡೆರಡು ಕೋಟಿ ಅನುದಾನವನ್ನು ಬಿಡುಗಡೆ ಮಾಡಿ ಅದರ ಅಡಿಯಲ್ಲಿ ಕನ್ನಡ ಸಾಹಿತ್ಯ ಸಂಸ್ಕೃತಿಯ ಸಂವರ್ಧನೆಯ ಯೋಜನೆಗಳು ನೆರವೇರುವಂತಾಗಲಿ ಎಂದು ತಿಳಿಸಿದ್ದರು. ಅದರಂತೆ ಕರ್ನಾಟಕದ ವಿವಿಧ ಭಾಗದ ವಿಶ್ವವಿದ್ಯಾಲಯದ ಕನ್ನಡ ವಿಭಾಗಗಳು ಕನ್ನಡ ಸಾಹಿತ್ಯ ಪರಂಪರೆ ಕುರಿತಾಗಿ ಅನೇಕ ಸಂಶೋಧನ ಯೋಜನೆಗಳನ್ನು ಕೈಗೆತ್ತಿಕೊಂಡಿರುತ್ತವೆ.

ಈ ಹಿನ್ನೆಲೆಯಲ್ಲಿ ಗುಲ್ಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯು ವಿಭಿನ್ನ ಸಂಪುಟಗಳ ಪ್ರಕಟಣಾ ಯೋಜನೆಯನ್ನು ಹಮ್ಮಿಕೊಂಡು ಅದರಡಿಯಲ್ಲಿ **ಬೀದರ ಜಿಲ್ಲೆಯ ತತ್ತ್ವಪದಕಾರರ ಸ್ಮಾರಕಗಳು** ((ಭಾಲ್ಕಿ – ಹುಮನಾಬಾದ : ಸಂ – ೩) ಎಂಬ ಸಂಶೋಧನ ಸಂಪುಟವನ್ನು ಪ್ರಕಟಿಸಿದೆ. ಕನ್ನಡ ಆಸಕ್ತರು ನಮ್ಮ ನಾಡು, ನುಡಿ, ಸಾಹಿತ್ಯ, ಸಂಸ್ಕೃತಿ, ಪರಂಪರೆ ಕುರಿತಂತೆ ಸಮಗ್ರ ಅರಿವನ್ನು ಪಡೆಯುವಂತೆ ಸಂಪುಟಗಳು ರಚಿತವಾಗಿರುತ್ತವೆ. ಇಂಥದೊಂದು ಯೋಜನೆಯನ್ನು ಕೈಗೆತ್ತಿಕೊಂಡು ಅದರ ಮೊದಲ ಹಂತದ ಕಾರ್ಯ ಮುಗಿಸಿ, ಮುಂದಿನ ಹಂತದಲ್ಲಿಯೂ ಈ ಬಗೆಯ ಇನ್ನಷ್ಟು ಗ್ರಂಥಗಳ ಪ್ರಕಟಣೆಯ ಯೋಜನೆಗಳನ್ನು ಕೈಗೆತ್ತಿಕೊಂಡು ಉತ್ಸಾಹದಿಂದ ಮುಂದುವರೆಸುತ್ತಿರುವ ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಪ್ರಾಧ್ಯಾಪಕರು, ಯೋಜನೆಯ ಪ್ರಧಾನ ಸಂಶೋಧಕರು ಮತ್ತು ಲೇಖಕರು ಆದ ಡಾ. ಎಸ್.ಎಮ್.ಹಿರೇಮಠ ಅವರನ್ನು, ಕುಲಪತಿ ಪ್ರೊ. ಈ.ಟಿ.ಪುಟ್ಟಯ್ಯ ಅವರನ್ನು ಮತ್ತು ಕುಲಸಚಿವ ಪ್ರೊ.ಎಸ್.ಎಲ್.ಹಿರೇಮಠ ಅವರನ್ನು, ಕನ್ನಡ ಅಧ್ಯಯನ ಸಂಸ್ಥೆಯ ಅಧ್ಯಕ್ಷರಾದ ಡಾ. ನಾಗಾಬಾಯಿ ಬುಳ್ಳಾ ಅವರನ್ನು ನಾನು ಕರ್ನಾಟಕ ಸರ್ಕಾರದ ಪರವಾಗಿ ಅಭಿನಂದಿಸುತ್ತೇನೆ.

ಬಿ. ಬಸವರಾಜು

ಕಾರ್ಯದರ್ಶಿ

ಗೋವಿಂದ. ಎಂ. ಕಾರಜೋಳ
ಸಣ್ಣ ನೀರಾವರಿ,
ಕನ್ನಡ ಮತ್ತು ಸಂಸ್ಕೃತಿ ಸಚಿವರು

ಕರ್ನಾಟಕ ಸರ್ಕಾರ

ನಂ. 330, 3ನೇ ಮಹಡಿ
ವಿಧಾನಸೌಧ
ಬೆಂಗಳೂರು– 560 001
ದಿ: 16.11.2011

ಶುಭಹಾರೈಕೆ

ಕನ್ನಡ ನಾಡು–ನುಡಿಗೆ ಸುದೀರ್ಘವಾದ ಇತಿಹಾಸವಿದೆ. ಭವ್ಯ ಪರಂಪರೆಯನ್ನು ಈ ನಾಡು ಹೊಂದಿದೆ. ಭಾರತೀಯ ಭಾಷೆಗಳಲ್ಲಿಯೇ ಅತಿ ಹೆಚ್ಚು ಜ್ಞಾನಪೀಠ ಪ್ರಶಸ್ತಿಗಳನ್ನು ಪಡೆದಿರುವ ಹೆಗ್ಗಳಿಕೆಗೆ ನಮ್ಮ ಭಾಷೆ ಪಾತ್ರವಾಗಿದೆ. ಈ ನಾಡಿನ ಕವಿಗಳು, ಸಾಹಿತಿಗಳು, ಕಲಾವಿದರು, ಸಂಶೋಧಕರು, ಶಿಕ್ಷಣತಜ್ಞರು, ವಿಜ್ಞಾನಿಗಳು ವಿಶ್ವದಾದ್ಯಂತ ಹೆಸರು ಮಾಡಿದ್ದಾರೆ.

ಕನ್ನಡ ನಾಡು–ನುಡಿಗೆ ಸಂಬಂಧಪಟ್ಟ ಮಾತುಗಳು ರಾಮಾಯಣ ಮಹಾಭಾರತಗಳಲ್ಲಿ ಕಂಡು ಬರುತ್ತವೆ. ಕ್ರಿಸ್ತಪೂರ್ವದಿಂದಲೇ ಕನ್ನಡ ಭಾಷೆಯ ಅಸ್ತಿತ್ವವನ್ನು ಸಂಶೋಧಕರು ಗುರುತಿಸಿದ್ದಾರೆ. ಕ್ರಿಸ್ತಶಕ ೪೫೦ ರ ಹಲ್ಮಿಡಿಶಾಸನ ಕನ್ನಡದ ಉಪಲಬ್ಧವಿರುವ ಮೊದಲ ಲಿಖಿತ ರೂಪದ ಶಾಸನ. ಕನ್ನಡದ ಆದಿ ಮಹಾಕವಿ ಪಂಪನಿಗಿಂತ ಹಿಂದೆಯೇ ಒಂದು ಸಮೃದ್ಧವಾದ ಸಾಹಿತ್ಯ ಪರಂಪರೆಯನ್ನು ಕನ್ನಡ ಕಂಡಿದೆ ಎಂಬುದಕ್ಕೆ ಸಂಶೋಧಕರು ಸಾಕಷ್ಟು ಪುರಾವೆಗಳನ್ನು ನೀಡಿದ್ದಾರೆ. ಶಾತವಾಹನರು, ಕದಂಬರು, ಚಾಲುಕ್ಯರು, ಗಂಗರು, ರಾಷ್ಟ್ರಕೂಟರು, ಹೊಯ್ಸಳರು, ವಿಜಯನಗರದ ಅರಸರು, ಮೈಸೂರು ಅರಸರು ಈ ನಾಡಿನ ಕಲೆ, ಸಾಹಿತ್ಯ, ವಾಸ್ತುಶಿಲ್ಪ, ಸಂಗೀತ ಮೊದಲಾದ ಕ್ಷೇತ್ರಗಳಲ್ಲಿ ಅಪೂರ್ವ ಕೊಡುಗೆ ನೀಡಿದ್ದಾರೆ.

ಇಂಥ ಅಪೂರ್ವ ಪರಂಪರೆ ಹೊಂದಿರುವ ಕನ್ನಡ ಭಾಷೆಯನ್ನು ಕೇಂದ್ರ ಸರ್ಕಾರ ಶಾಸ್ತ್ರೀಯ ಭಾಷೆ ಎಂದು ಘೋಷಿಸಿದೆ. ಕನ್ನಡದ ಕೆಲಸಕ್ಕೆ ಕೈ ಜೋಡಿಸಿರುವ ಕರ್ನಾಟಕ ರಾಜ್ಯ ಸರ್ಕಾರ 'ಕನ್ನಡ ಭಾಷಾಭಿವೃದ್ಧಿ ಯೋಜನೆ'ಗೆ ವಿಶೇಷ ಅನುದಾನ ಬಿಡುಗಡೆ ಮಾಡಿದೆ. ಈ ಹಿನ್ನೆಲೆಯಲ್ಲಿ ಕರ್ನಾಟಕದ ವಿವಿಧ ವಿಶ್ವವಿದ್ಯಾಲಯಗಳಲ್ಲಿ ಕನ್ನಡ ಕಟ್ಟುವ ಕೆಲಸ ಭರದಿಂದ ನಡೆದಿದೆ. ಕನ್ನಡದ ಇತಿಹಾಸ, ಭಾಷೆ, ಸಾಹಿತ್ಯ, ಪರಂಪರೆ, ಜಾನಪದ, ವಿಜ್ಞಾನ, ಮಾನವಿಕ ಇನ್ನಿತರ ಅಂಶಗಳನ್ನು ಕುರಿತ ಹೊತ್ತಿಗೆಗಳು ಸಿದ್ಧವಾಗುತ್ತಿವೆ. ಇಂತಹ ಮಹತ್ವದ ಹಲವು ಯೋಜನೆಗಳ ಅಡಿಯಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯು ಬೀದರ ಜಿಲ್ಲೆಯ ತತ್ತ್ವಪದಕಾರರ

ದಾಸವರೇಣ್ಯರ ಕಾಲಕ್ಕೆ ಜನಸಮೂಹದ ಅಂತರಂಗವನ್ನು ರಾಗ, ತಾಳಗಳ ಮುಖೇನ ಕಾಂತಾಸಮ್ಮಿತ ಭಾವದ ಮೂಲಕವೇ ಮುಟ್ಟತೊಡಗಿತು. 'ವೀರನಾರಾಯಣನೇ ಕವಿ, ಲಿಪಿಕಾರ ಕುವರವ್ಯಾಸ, ಕೇಳುವ ಸೂರಿಗಳೆ ಜಂಗಮ ಜನಾರ್ಧನರು' ಎನ್ನುತ್ತಾನೆ ಕುಮಾರವ್ಯಾಸ. ಹೀಗೆ ಅರಮನೆಯಿಂದ ಜನಸಾಮಾನ್ಯರ ಕಡೆಗೆ ಪ್ರವಹಿಸಿದ ಕನ್ನಡ ಸಾಹಿತ್ಯ ಪರಂಪರೆಯೇ ವೈವಿಧ್ಯಮಯವಾದುದು. ಆಧುನಿಕ ಕನ್ನಡ ಸಂದರ್ಭದ ಕವಿ, ಕಥೆಗಾರ, ಕಾದಂಬರಿಕಾರರ ಪ್ರತಿಭಾನ್ವಿತ ಬರವಣಿಗೆಯಂತೂ ಸಮಸ್ತ ಕನ್ನಡಿಗರ ಅರಿವಿಗೆ ಬಂದಿರುವಂಥದ್ದೆ. ಹೀಗೆ ಒಂದೂವರೆ ಸಾವಿರ ವರ್ಷಗಳ ಸ್ಪಷ್ಟ ಮತ್ತು ಸಮಗ್ರ ಇತಿಹಾಸವಿರುವ ಕನ್ನಡ ಭಾಷಾ ಶ್ರೀಮಂತಿಕೆಗೆ ೨೦೦೮ರಲ್ಲಿ ಭಾರತ ಸರ್ಕಾರ ಶಾಸ್ತ್ರೀಯ ಸ್ಥಾನಮಾನ ನೀಡಿತು. ಈ ಸಂದರ್ಭದಲ್ಲಿ ಕರ್ನಾಟಕ ಸರ್ಕಾರವೂ ಕೂಡ ಕನ್ನಡನಾಡಿನ ಎಲ್ಲ ವಿಶ್ವವಿದ್ಯಾಲಯಗಳ ಕನ್ನಡ ವಿಭಾಗಗಳಿಗೆ ತಲಾ ಎರಡು ಕೋಟಿ ರೂಪಾಯಿಗಳ ಅನುದಾನವನ್ನು ಬಿಡುಗಡೆ ಮಾಡಿತು. ಈಗ ಎಲ್ಲ ವಿಶ್ವವಿದ್ಯಾಲಯಗಳು ಕನ್ನಡ ಸಾಹಿತ್ಯ, ಸಂಸ್ಕೃತಿ ತತ್ಸಂಬಂಧದ ಸಂಶೋಧನೆಯ ಯೋಜನೆಗಳಲ್ಲಿ ತೊಡಗಿಸಿಕೊಂಡಿವೆ. ಈ ನಿಟ್ಟಿನಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯು ಹಲವು ಸಂಪುಟಗಳ ಪ್ರಕಟಣಾ ಯೋಜನೆಯನ್ನು ಕೈಗೆತ್ತಿಕೊಂಡು ಅದರ ಅಡಿಯಲ್ಲಿ ಇದೀಗ **ಬೀದರ ಜಿಲ್ಲೆಯ ತತ್ತ್ವಪದಕಾರರ ಸ್ಮಾರಕಗಳು** (ಭಾಲ್ಕಿ – ಹುಮನಾಬಾದ : ಸಂ – ೩) ಎನ್ನುವ ಸಂಶೋಧನ ಸಂಪುಟವನ್ನು ಪ್ರಕಟಿಸಿ ಬಿಡುಗಡೆ ಮಾಡುತ್ತಿದೆ. ಈ ಯೋಜನೆಯ ಯಶಸ್ಸಿಗೆ ಕಾರಣರಾದ ಗುಲಬರ್ಗಾ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ. ಈ. ಟಿ. ಪುಟ್ಟಯ್ಯ ಅವರಿಗೆ, ಕುಲಸಚಿವರಾದ ಪ್ರೊ. ಎಸ್.ಎಲ್. ಹಿರೇಮಠ ಅವರಿಗೆ, ಪ್ರಾಧ್ಯಾಪಕರೂ ಹಾಗೂ ಕನ್ನಡ ಅಧ್ಯಯನ ಸಂಸ್ಥೆಯ ಅಧ್ಯಕ್ಷರಾದ ಡಾ. ನಾಗಾಬಾಯಿ ಬುಳ್ಳಾ ಅವರಿಗೆ, ಈ ಯೊಜನೆಯ ಪ್ರಧಾನ ಸಂಶೋಧಕರು ಮತ್ತು ಲೇಖಕರು ಆದ ಡಾ. ಎಸ್.ಎಮ್.ಹಿರೇಮಠ ಅವರಿಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಪರವಾಗಿ ನಾನು ಹೃತ್ಪೂರ್ವವಾಗಿ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಮನು ಬಳಿಗಾರ್

ಆಯುಕ್ತರು

ಬಿ. ಬಸವರಾಜು ಭಾ.ಆ.ಸೇ.
ಸರ್ಕಾರದ ಕಾರ್ಯದರ್ಶಿಗಳು
ಕನ್ನಡ ಮತ್ತು ಸಂಸ್ಕೃತಿ
ಹಾಗೂ ವಾರ್ತಾ ಇಲಾಖೆ

ಕರ್ನಾಟಕ ಸರ್ಕಾರ

೨, ನೆಲಮಹಡಿ, ವಿಕಾಸ ಸೌಧ,
ಬೆಂಗಳೂರು– ೫೬೦ ೦೦೧
☐ ೨೨೨೦೫೭೮೧ಮ ೨೨೦೩೪೦೦
ಫ್ಯಾಕ್ಸ್: ೨೨೩೫೩೧೦೫
ಇ-ಮೇಲ್: secy-kc@karnataka. Gov.in

ದಿ: ೨೪.೧೦.೨೦೧೧

ಶುಭಹಾರೈಕೆ

ದ್ರಾವಿಡ ಭಾಷಾ ಪರಂಪರೆಯ ನಡುವೆ ಕನ್ನಡ ಭಾಷೆಯ ಶ್ರೀಮಂತಿಕೆ ಮತ್ತು ಅದರ ಸಾಂಸ್ಕೃತಿಕ ವೈವಿಧ್ಯತೆ ಎದ್ದುಕಾಣುವಂತಿದೆ. ತಮಿಳು ಭಾಷೆಯ ಪರಂಪರೆಗೆ ಸರಿಸಮಾನವಾಗಿಯೇ ಬೆಳೆದು ಬಂದಿರುವ ಕನ್ನಡಕ್ಕೆ ನಿಖರವಾಗಿಯೇ ಒಂದೂವರೆ ಸಾವಿರ ವರ್ಷಗಳಿಗೂ ಮೀರಿದ ಇತಿಹಾಸವಿದೆ. ಕ್ರಿ.ಶ.೪೫೦ರ ಹಲ್ಮಿಡಿ ಶಾಸನದ ಕಾಲಕ್ಕೆ ಕನ್ನಡ, ಕರ್ನಾಟಕದಲ್ಲಿ ಬಳಕೆಯಲ್ಲಿತ್ತು. ವ್ಯಾಸಕೃತ ಮಹಾಭಾರತದಲ್ಲಿಯೇ ಕರ್ನಾಟಕದ ಪ್ರಸ್ತಾಪವಿದೆ. ಶಾತವಾಹನರು, ಕದಂಬರು ಇಲ್ಲಿನ ಪ್ರಾಚೀನ ಅರಸು ಮನೆತನದವರೆಂದು ಇತಿಹಾಸಕಾರರು ಗುರುತಿಸಿರುತ್ತಾರೆ. ಗ್ರೀಕ್ ಭೂಗೋಳಶಾಸ್ತ್ರದ ಟಾಲೆಮಿಯ ಪ್ರವಾಸಿ ಬರವಣಿಗೆಯಲ್ಲಿಯೇ ಕನ್ನಡ ನಾಡಿನ ಅನೇಕ ಪ್ರದೇಶಗಳ ಪ್ರಸ್ತಾಪ ಇರುವುದನ್ನು ಸಂಶೋಧಕ ಗೋವಿಂದ ಪೈ ಅವರು ಬೆಳಕಿಗೆ ತಂದರು. ಅಶೋಕನು ದಕ್ಷಿಣ ಭಾರತದಲ್ಲಿ ಹಾಕಿಸಿದ ಶಾಸನಗಳು ಮೊದಲು ದೊರಕಿರುವುದು ಕರ್ನಾಟಕದಲ್ಲಿಯೇ! ಚಿತ್ರದುರ್ಗದ ಸಿದ್ದಾಪುರ, ರಾಯಚೂರಿನ ಮಸ್ಕಿ ಭಾಗದಲ್ಲಿ ದೊರಕಿರುವ ಶಾಸನದಿಂದಲೇ ಅಶೋಕನಿಗೆ 'ದೇವನಾಂಪ್ರಿಯ' ಎಂಬ ಬಿರುದು ಇದ್ದಿತೆಂದು ತಿಳಿದುಬರುತ್ತದೆ. ಅಶೋಕನು ದಕ್ಷಿಣ ಭಾರತದ ಕರ್ನಾಟಕದಲ್ಲಿ ತನ್ನ ಶಾಸನಗಳನ್ನು ಹಾಕಿಸಿದನೆಂದರೆ ಕರ್ನಾಟಕದಲ್ಲಿಯ ಭಾಷಾಪ್ರದೇಶಗಳು ಚೆನ್ನಾಗಿಯೇ ನೆಲೆಯೂರಿದ್ದವೆಂದು ತಿಳಿಯಬಹುದಾಗಿರುತ್ತದೆ. ಇಷ್ಟೇ ಅಲ್ಲದೆ ಕಾಳಿದಾಸನ ಕಾಲ ನಿಗದಿ ಮಾಡುವುದರಲ್ಲಿಯೂ ಮೊದಲು ಸಹಾಯಕ್ಕೆ ಬಂದದ್ದು ಕರ್ನಾಟಕದ ಐಹೊಳೆಯ ಮೇಗುತಿ ದೇವಾಲಯದ ರವಿಕೀರ್ತಿಯ ೫ನೇ ಶತಮಾನದ ಶಾಸನ. 'ಅಯ್ಯಾಹೊಳೆಯ' ಐನೂರು ಜನ ವ್ಯಾಪಾರಸ್ಥರು ದಕ್ಷಿಣ ಭಾರತದ ವ್ಯಾಪಾರವನ್ನೆಲ್ಲ ನಿಯಂತ್ರಿಸುತ್ತಿದ್ದರಂತೆ. ಅಂದರೆ ಭಾರತದ ಇತಿಹಾಸಕ್ಕೆ ತನ್ನದೇ ಆದ ಕಾಣಿಕೆ ನೀಡಿದ ಕರ್ನಾಟಕದ ಸಾಂಸ್ಕೃತಿಕ ಪರಂಪರೆಯ ಈ ಹೆಗ್ಗುರುತುಗಳನ್ನು ಇಲ್ಲಿ ಪ್ರಸ್ತಾಪಿಸುತ್ತಿರುವುದರ ಕಾರಣವೆಂದರೆ, ಭಾರತ ಸರಕಾರ ಕನ್ನಡಕ್ಕೆ ಶಾಸ್ತ್ರೀಯ

ಹಾಗೂ ಪ್ರಕಟನೆ, ಶರಣಸಾಹಿತ್ಯ ವಿಮರ್ಶಾ ಸಂಪುಟಗಳ ಪ್ರಕಟನೆ ಈ ಮುಂತಾದ ಮಹತ್ವದ ಸಂಶೋಧನಾ ಯೋಜನೆಗಳನ್ನು ಕೈಗೆತ್ತಿಕೊಂಡು ಅಧ್ಯಯನ ನಡೆಸುತ್ತಿರುವರು. ಇವುಗಳಲ್ಲಿ ತತ್ತ್ವಪದಕಾರರ ಸ್ಮಾರಕಗಳ ಕ್ಷೇತ್ರಕಾರ್ಯ ಹಾಗೂ ಸಂಪುಟಗಳ ಪ್ರಕಟನಾ ಯೋಜನೆ (ಭಾಗ-೨)ಯೂ ಒಂದು. ಈ ಯೋಜನೆಗೆ ಸಂಬಂಧಿಸಿದಂತೆ ಬೀದರ ಜಿಲ್ಲೆಯ ತತ್ತ್ವಪದಕಾರರ ಸ್ಮಾರಕಗಳ ಮೂರು ಸಂಪುಟಗಳು ಹಾಗೂ ಕೊಪ್ಪಳ ಜಿಲ್ಲೆಯ ತತ್ತ್ವಪದಕಾರರ ಸ್ಮಾರಕಗಳ ಮೂರು ಸಂಪುಟಗಳು ಬೆಳಕು ಕಾಣುತ್ತಿರುವುದು ವಿಶೇಷದ ಸಂಗತಿ. ಈಗ ಆರು ಸಂಪುಟಗಳಲ್ಲಿ ಬೀದರ ಜಿಲ್ಲೆಗೆ ಸಂಬಂಧಿಸಿದಂತೆ ಮೂರು ಸಂಪುಟಗಳು ಪ್ರಕಟಗೊಳ್ಳುತ್ತಲಿವೆ. ಈ ಕಾರ್ಯವು ನನಗೆ ಅತಿವ ಹರ್ಷವನ್ನುಂಟು ಮಾಡಿದೆ.

ಪ್ರಸ್ತುತ "ಬೀದರ ಜಿಲ್ಲೆಯ ತತ್ತ್ವಪದಕಾರರ ಸ್ಮಾರಕಗಳು" ಎನ್ನುವ ಹೆಸರಿನ ಮೂರು ಸಂಪುಟಗಳನ್ನು ನಮ್ಮ ವಿಶ್ವವಿದ್ಯಾಲಯದ ಕನ್ನಡ ಪ್ರಾಧ್ಯಾಪಕರಾದ ಡಾ. ಎಸ್.ಎಮ್.ಹಿರೇಮಠ ಅವರು ವಿಶೇಷ ಶ್ರಮವಹಿಸಿ ಕ್ಷೇತ್ರ ಕಾರ್ಯ ಕೈಕೊಂಡು ಸಿದ್ಧಪಡಿಸಿರುವರು. ಈ ಸಂಪುಟಗಳು ಪ್ರಸ್ತುತ ಜ್ಞಾನಕ್ಷೇತ್ರಕ್ಕೆ ಮತ್ತು ಸಮಾಜಕ್ಕೆ ಉಪಯುಕ್ತ ಆಕರಗಳಾಗಿವೆ. ಇಲ್ಲಿ ಎಷ್ಟೋ ಅಜ್ಞಾತ – ಅಲ್ಪಜ್ಞಾತ ತತ್ತ್ವಪದಕಾರರು ಮತ್ತು ಅವರ ಸ್ಮಾರಕಗಳು ಬೆಳಕು ಕಾಣುತ್ತಿವೆ. ತತ್ತ್ವಪದಕಾರರನ್ನು ಕುರಿತು ಬರೆದ ಇಲ್ಲಿನ ಲೇಖನಗಳು ಹಾಗೂ ಆಯಾ ತತ್ತ್ವಪದಕಾರರಿಗೆ ಸಂಬಂಧಿಸಿದ ಸ್ಮಾರಕಗಳ ಚಿತ್ರಗಳು ತುಂಬ ಮೌಲಿಕವಾದುವಾಗಿವೆ. ಒಟ್ಟಿನಲ್ಲಿ ಪ್ರಸ್ತುತ ಸಂಪುಟಗಳು ಹೊಸ ಆವಿಷ್ಕಾರ ಹಾಗೂ ಚಿಂತನೆಗಳಿಗೆ ಉತ್ತಮ ದಾರಿಯನ್ನು ನಿರ್ಮಿಸುವಲ್ಲಿ ಯಶಸ್ವಿಯಾಗಿವೆ. ಇಂಥ ಮೌಲಿಕವಾದ ಸಂಪುಟಗಳನ್ನು ಸಿದ್ಧಪಡಿಸಿದ ಈ ಯೋಜನೆಯ ಪ್ರಧಾನ ಸಂಶೋಧಕರೂ, ಲೇಖಕರೂ ಆದ ಡಾ.ಎಸ್.ಎಮ್.ಹಿರೇಮಠ ಅವರಿಗೂ, ಕನ್ನಡ ಅಧ್ಯಯನ ಸಂಸ್ಥೆಯ ಅಧ್ಯಕ್ಷರಾದ ಡಾ. ನಾಗಾಬಾಯಿ ಬುಳ್ಳಾ ಅವರಿಗೂ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿಗಳಾದ ಶ್ರೀ. ಬಿ.ಬಸವರಾಜು ಅವರಿಗೂ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಆಯುಕ್ತರಾದ ಶ್ರೀ ಮನು ಬಳಿಗಾರ ಅವರಿಗೂ ಅಲ್ಲದೆ ಇತರ ಅಧಿಕಾರಿ ವರ್ಗದವರಿಗೂ ವಿಶೇಷ ಕೃತಜ್ಞತೆಗಳು ಸಲ್ಲುತ್ತವೆ.

ಪ್ರೊ. ಈ.ಟಿ. ಪುಟ್ಟಯ್ಯ
ಕುಲಪತಿಗಳು

ಮನು ಬಳಿಗಾರ್ ಕ.ಆ.ಸೇ
ಆಯುಕ್ತರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಕರ್ನಾಟಕ ಸರ್ಕಾರ

ಕನ್ನಡ ಭವನ, ಜೆ.ಸಿ. ರಸ್ತೆ,
ಬೆಂಗಳೂರು– ೫೬೦ ೦೦೧
ದಿ: ೧೫.೧೦.೨೦೧೧

ನಲ್ನುಡಿ

ಕನ್ನಡ ಸಾಹಿತ್ಯ ಮತ್ತು ಸಾಂಸ್ಕೃತಿಕ ಪರಂಪರೆಯೇ ಕುತೂಹಲಕರ ಮತ್ತು ವೈವಿಧ್ಯಮಯವಾದುದು. ಹತ್ತನೆಯ ಶತಮಾನ ಮತ್ತು ಅದರ ಪೂರ್ವಯುಗವನ್ನು 'ವೀರಯುಗ' ಎಂದು ವಿದ್ವಾಂಸರು ಕರೆದಿರುವುದಲ್ಲದೆ, ಆ ಕಾಲಕ್ಕೆ ಬಂದ ಕೃತಿಗಳೆಲ್ಲವೂ ಕ್ಷಾತ್ರಧರ್ಮ ಮತ್ತು ಅದರ ಮೌಲ್ಯಗಳನ್ನೇ ಹೇಳುವಂಥವಾಗಿರುತ್ತವೆ. ಪಂಪ ಬರೆದದ್ದು ವಿಕ್ರಮಾರ್ಜುನ ವಿಜಯವಾದರೆ ರನ್ನ ಬರೆದದ್ದು ಸಾಹಸಭೀಮ ವಿಜಯ. ಇದೆಲ್ಲಕ್ಕಿಂತ ಪೂರ್ವದಲ್ಲಿ ಕವಿರಾಜ ಮಾರ್ಗಕಾರನು ಕನ್ನಡ ನಾಡಿನ ಜನಗಳನ್ನು ಕಲಿಗಳೆಂದೂ, ಕವಿಗಳೆಂದೂ ಮುಕ್ತಕಂಠದಿಂದ ಪ್ರಶಂಸಿಸುತ್ತಾನೆ. ಕನ್ನಡ ನಾಡಿನ ಸಾಂಸ್ಕೃತಿಕ ಇತಿಹಾಸವನ್ನು ಕುರಿತು ಆರಂಭ ಕಾಲಕ್ಕೆ ಎಲ್ಲ ಕವಿಗಳು ಹೇಳುವ ಮಾತಿನಲ್ಲಿ ಆಶ್ಚರ್ಯಕರ, ಕುತೂಹಲಕರ ಹೊಂದಾಣಿಕೆ ಇದೆ. ಕವಿರಾಜ ಮಾರ್ಗಕಾರನು ಕನ್ನಡ ಜನರು ಕವಿಗಳೂ, ಕಲಿಗಳೂ ಆಗಿದ್ದರೆಂದರೆ, ಪಂಪ ತಾನೇ ಸತ್ಕವಿ, ಕಲಿ ಎಂದು ಹೇಳಿಕೊಳ್ಳುತ್ತಾನೆ. ಪಂಪ, ರನ್ನರ ಕೃತಿಗಳಲ್ಲಿ ಬರುವ ಸ್ತ್ರೀಪಾತ್ರಗಳು ಕೂಡ ಪುರುಷ ಪರಾಕ್ರಮವನ್ನು ಪುರಸ್ಕರಿಸಿ ಮಾತನಾಡುತ್ತವೆ. ಇದು ಕನ್ನಡ ನಾಡಿನ ಹತ್ತನೆಯ ಶತಮಾನ ಮತ್ತು ಅದರ ಪೂರ್ವ ವಿವರವಾದರೆ ಹನ್ನೆರಡನೆಯ ಶತಮಾನದ ಸಂಗತಿಯೇ ಬೇರೆ. ಅರಮನೆಯಲ್ಲಿ ಬೆಳೆದ ಸಾಹಿತ್ಯ ಸಾಮಾನ್ಯರ ನಡುವೆ ಬಂದು ಚಳುವಳಿಯ ರೂಪ ಪಡೆದುಕೊಂಡಿತು. ಪಾಂಡಿತ್ಯಪೂರ್ಣ ಸಾಹಿತ್ಯ ಸೃಷ್ಟಿಗಿಂತ ಜನಸಾಮಾನ್ಯರಿಗೆ ಅರ್ಥವಾಗುವ ಸಂಗತಿ ಮುಖ್ಯವೆಂಬ ಧೋರಣೆಯ ರಚನಕಾರರ ಪ್ರವೃತ್ತಿ ಪ್ರಭುತ್ವವನ್ನೇ ಪ್ರತಿಭಟಿಸಿ ಹೊರಬಂದದ್ದು ಆಶ್ಚರ್ಯಕರ ಬೆಳೆವಣಿಗೆ. ಬಸವಣ್ಣ, ಅಕ್ಕಮಹಾದೇವಿ, ಹರಿಹರ, ರಾಘವಾಂಕ ಇವರೆಲ್ಲ ಅರಸನ ವೈಭವದ ಆಸ್ಥಾನವನ್ನು ಬಿಟ್ಟು ಬಂದವರೆ. ತಮ್ಮ ಸಾಹಿತ್ಯ ಕೃತಿಗಳಲ್ಲಿ ಮಾನವೀಯತೆ, ಸರ್ವಸಮಾನತೆ, ಭಕ್ತಿ ಮತ್ತು ಅಧ್ಯಾತ್ಮವನ್ನು ಸಂಸ್ಥಾಪಿಸಿದವರು; ಅದಕ್ಕನುಗುಣವಾದ ಕಥೆ ಹಾಗೂ ಪಾತ್ರಗಳನ್ನೇ ಸೃಷ್ಟಿಸಿದರು.

ವಚನಕಾರರ ಕಾಲಕ್ಕೆ ಸಾಮಾನ್ಯ ಜನರ ನಡುವೆ ಬಂದ ಸಾಹಿತ್ಯವು

ನಿಂತವರು. ಮಾನವತೆಯ ಗಾಳಿಯನ್ನೆ ಉಸಿರಾಡಿಸುತ್ತಿರುವವರು. ಇವರ ಸಹಜ ಮತ್ತು ಸಮನ್ವಯದ ಬದುಕೆ ಸಾಮಾಜಿಕ ಸಾಮರಸ್ಯ, ಜನಾಂಗಿಕ ಭಾವೈಕ್ಯ, ಸಕಲ ಜೀವ ಹಿತ ಸಾಧನೆಯ ದೃಷ್ಟಿಕೋನ ಇವುಗಳಿಗೆ ನಿದರ್ಶನವಾಗುತ್ತದೆ. "ತಾವು ಜೀವಿಸುವಂತೆ ಸಕಲ ಜೀವಿಗಳೂ ಜೀವಿಸಬೇಕೆಂಬುದು" ತತ್ತ್ವಪದಕಾರರ ಒಟ್ಟು ಆಶಯ ಮತ್ತು ಅವರ ಸಾಹಿತ್ಯದ ಸಾರ – ಸಾರಾಯ. ಇಂಥವರ ಜೀವನ ಸಾಧನೆ – ಸ್ಮಾರಕಗಳ ಸಂಶೋಧನೆಗಾಗಿ ನಾನು ಬೀದರ ಜಿಲ್ಲೆಯ ಸು. ಆರು ನೂರಕ್ಕೆ ಮೇಲ್ಪಟ್ಟ ಸ್ಥಳಗಳನ್ನು ತಿರುಗಿದ್ದೇನೆ. ಅಲ್ಲಲ್ಲಿನ ಸಂಶೋಧನೆಯ ವಿವರಗಳು ಸಂಗ್ರಹಗೊಂಡು, ಸಂಪುಟಗಳ ರೂಪದಲ್ಲಿ ಈಗ ನಿಮ್ಮ ಕೈಯಲ್ಲಿವೆ.

ಕನ್ನಡ ಭಾಷಾಭಿವೃದ್ಧಿ ಯೋಜನೆ ಆರಂಭಗೊಂಡು, ಅನುದಾನವು ಬಿಡುಗಡೆಗೊಂಡುದು ಆಗಿನ ಕರ್ನಾಟಕ ಸರ್ಕಾರದ ಮುಖ್ಯಮಂತ್ರಿಗಳಾಗಿದ್ದ ಸನ್ಮಾನ್ಯ ಶ್ರೀ ಬಿ.ಎಸ್.ಯಡಿಯೂರಪ್ಪನವರ ಕಾಲದಲ್ಲಿ. ಅವರ ಕನ್ನಡ ಕೈಂಕರ್ಯ ಭಾವದ ವ್ಯಕ್ತಿತ್ವಕ್ಕೆ ಶರಣು ಎನ್ನುತ್ತೇನೆ.

ಕನ್ನಡ ತಾಯಿಯ ಈ ಸೇವಾ ಯೋಜನೆಯ ಸಾರಥ್ಯವು ಮುಂದಿನ ದಿನಗಳಲ್ಲಿ ಧಾರಣ ಮಾಡಿದವರು ಸಧ್ಯದ ಮುಖ್ಯಮಂತ್ರಿಗಳಾಗಿರುವ ಸನ್ಮಾನ್ಯ ಶ್ರೀ ಸದಾನಂದಗೌಡರು. ಅವರು ಹಸನ್ಮುಖ ಮನ–ಹೃದಯದಿಂದ ಇಂತಹ ಮಹತ್ವದ ಸಂಶೋಧನೆಗಳಿಗೆ ಬೆನ್ನುಬಲವಾಗಿ ನಿಂತುಕೊಂಡು ಶುಭ ಹಾರೈಸುತ್ತಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳಿಗೆ ಗೌರವದಿಂದ ನಮಿಸುತ್ತೇನೆ.

ಕರ್ನಾಟಕ ಸರ್ಕಾರದ ಸನ್ಮಾನ್ಯ ಸಣ್ಣ ನೀರಾವರಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರಾಗಿರುವ ಮಾನ್ಯ ಶ್ರೀ ಗೋವಿಂದ ಎಂ. ಕಾರಜೋಳ ಅವರು ಸರಕಾರದ ಆಶಯಗಳನ್ನು ಸಾಕಾರವಾಗಿಸುತ್ತ, ವಿಶ್ವವಿದ್ಯಾಲಯಗಳಲ್ಲಿ ಕನ್ನಡದ ಮಹತ್ವದ ಸಂಶೋಧನ ಕಾರ್ಯಗಳು ನಡೆಯಲು ಆರ್ಥಿಕ ನೆರವು ನೀಡುತ್ತಲಿದ್ದಾರೆ. ಮಾನ್ಯ ಶ್ರೀ ಗೋವಿಂದ ಎಂ. ಕಾರಜೋಳ ಅವರಿಗೆ ಹೃತ್ಪೂರ್ವಕ ಪ್ರಣಾಮಗಳು.

ಸರಕಾರದ ಕಾರ್ಯಯೋಜನೆಗಳನ್ನು ಸಕ್ರೀಯವಾಗಿ ತಲುಪುವಂತೆ ಆಸ್ಥೆವಹಿಸಿ ಕಾರ್ಯ ನಿರ್ವಹಿಸುವವರು ಅದರ ಪ್ರಮುಖ ಅಧಿಕಾರಿಗಳು. ಇಂದು ಅಂತಹ ಸ್ಥಾನದಲ್ಲಿ ಈ ಕಾರ್ಯಯೋಜನೆಗಳಿಗೆ ಸಂಬಂಧಿಸಿದಂತೆ ಸರಕಾರದ ಕಾರ್ಯದರ್ಶಿಗಳಾಗಿರುವ ಶ್ರೀ ಬಿ. ಬಸವರಾಜು ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಆಯುಕ್ತರಾಗಿರುವ ಶ್ರೀ ಮನು ಬಳಿಗಾರ ಅವರು ಇದ್ದಾರೆ. ಮಾನ್ಯ ಬಸವರಾಜು ಅವರು ತುಂಬು ಮನದಿಂದ ಕನ್ನಡದ ಕಾರ್ಯಗಳಿಗೆ ಬೆಂಬಲಿಸುತ್ತ;

ಪ್ರೊ. ಈ.ಟಿ. ಪುಟ್ಟಯ್ಯ
ಕುಲಪತಿಗಳು

ಕಾರ್ಯಸೌಧ
ಗುಲಬರ್ಗಾ ವಿಶ್ವವಿದ್ಯಾಲಯ,
ಗುಲಬರ್ಗಾ
ದಿ: ೨೫.೧೦.೨೦೧೧

ಕುಲಪತಿಗಳ ನುಡಿ

ಗುಲಬರ್ಗಾ ವಿಶ್ವವಿದ್ಯಾಲಯವು ಹೈದ್ರಾಬಾದ ಕರ್ನಾಟಕ ಪ್ರದೇಶದ ಹೆಮ್ಮೆಯ ವಿದ್ಯಾಸಂಸ್ಥೆಯಾಗಿದೆ. ೧೯೭೦-೭೧ರಲ್ಲಿ ಇದು ಕರ್ನಾಟಕ ವಿಶ್ವವಿದ್ಯಾಲಯದ ಒಂದು ಸ್ನಾತಕೋತ್ತರ ಕೇಂದ್ರವಾಗಿ, ಮುಂದೆ ೧೯೮೦ರಲ್ಲಿ ಸ್ವತಂತ್ರ ವಿಶ್ವವಿದ್ಯಾಲಯವಾಗಿ ಮಾರ್ಪಟ್ಟಿತು. ಕಳೆದ ಮೂವತ್ತು ವರ್ಷಗಳಿಂದ ಈ ವಿಶ್ವವಿದ್ಯಾಲಯವು ಬೋಧನೆ, ಸಂಶೋಧನೆ ಹಾಗೂ ಪ್ರಕಟನೆಗಳ ಮೂಲಕ ಜನಮನ್ನಣೆಯನ್ನು ಗಳಿಸಿದೆ. ಈ ವಿಶ್ವವಿದ್ಯಾಲಯದ ಬೌದ್ಧಿಕ ಆಸ್ತಿ ಬೋಧನೆ ಮತ್ತು ಸಂಶೋಧನೆ. ಇವು ಸಾಕಾರಗೊಳ್ಳುವುದು ಪ್ರಕಟನೆಗಳ ಮೂಲಕವೆ ಗುಲಬರ್ಗಾ ವಿಶ್ವವಿದ್ಯಾಲಯದ ಪ್ರಸಾರಾಂಗವು ಅನೇಕ ಮೌಲಿಕವಾದ ಪ್ರಕಟಣೆಗಳನ್ನು ಪ್ರಕಟಿಸಿದೆ. ಕನ್ನಡ ಅಧ್ಯಯನ ಸಂಸ್ಥೆಯ ಪ್ರಾಧ್ಯಾಪಕರುಗಳು ಇದುವರೆಗೆ ನಾಲ್ಕು ನೂರಕ್ಕೂ ಹೆಚ್ಚು ಪುಸ್ತಕಗಳನ್ನು ಪ್ರಕಟಿಸಿದುದು ತುಂಬ ಹೆಮ್ಮೆಯ ಸಂಗತಿಯಾಗಿದೆ. ಕನ್ನಡ ಅಧ್ಯಯನ ಸಂಸ್ಥೆಯ ಸಂಶೋಧನ ವಿದ್ಯಾರ್ಥಿಗಳು ಬರೆದ ಸಂಶೋಧನ ಲೇಖನಗಳ ಸಂಕಲನ 'ಜ್ಞಾನ ಗಂಗಾ' ಸಂಚಿಕೆಗಳಂತೂ ತುಂಬ ಜನಪ್ರಿಯವಾಗಿವೆ. ಒಟ್ಟಿನಲ್ಲಿ ಕನ್ನಡ ಅಧ್ಯಯನ ಸಂಸ್ಥೆಯು ತನ್ನ ಅಪೂರ್ವ ಪ್ರಕಟನೆಗಳ ಮೂಲಕ ಜನಮೆಚ್ಚುಗೆಯನ್ನು ಪಡೆದಿದೆ.

ಕರ್ನಾಟಕ ಸರ್ಕಾರವು ಸುವರ್ಣ ಮಹೋತ್ಸವದ ಸಂದರ್ಭದಲ್ಲಿ ಕನ್ನಡ ಭಾಷೆ, ಸಂಸ್ಕೃತಿ ಮತ್ತು ಸಾಹಿತ್ಯಕ್ಕೆ ಸಂಬಂಧಿಸಿದಂತೆ ಉನ್ನತ ಸಂಶೋಧನೆ ನಡೆಸಲೆಂಬ ಧ್ಯೇಯವನ್ನಿರಿಸಿಕೊಂಡು ನಮ್ಮ ವಿಶ್ವವಿದ್ಯಾಲಯಕ್ಕೆ ವಿಶೇಷ ಅನುದಾನವನ್ನು ನೀಡಿದೆ. ಕನ್ನಡ ಭಾಷಾಭಿವೃದ್ಧಿ ಯೋಜನೆಯಡಿ ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯವು ನೀಡಿದ ಅನುದಾನ ಪಡೆದು ನಮ್ಮ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯ ಪ್ರಾಧ್ಯಾಪಕರು ಬಸವಾದಿ ಶರಣರ ಸ್ಮಾರಕಗಳು, ತತ್ತ್ವಪದಕಾರರ ಸ್ಮಾರಕಗಳು, ಕೀರ್ತನಕಾರರ ಸ್ಮಾರಕಗಳು, ಹೈದ್ರಾಬಾದ ಕರ್ನಾಟಕ ಸಾಂಸ್ಕೃತಿಕ ವಿಷಯಕೋಶ, ಹೈದ್ರಾಬಾದ ಕರ್ನಾಟಕದ ಸಾಹಿತ್ಯ ಚರಿತ್ರೆ, ಆಧುನಿಕ ನಾಟಕಗಳು, ಹಸ್ತಪ್ರತಿಗಳ ಸಂರಕ್ಷಣೆ

ಸಾಂಸ್ಕೃತಿಕ ಮನದಿಂದ ಸಹಕರಿಸಿದವರು ಪ್ರಿಂಟ್ ಪಾರ್ಕ್ ಮುದ್ರಣಾಲಯದ ಒಡೆಯರಾದ ಶ್ರೀ ಜಿ.ಬಿ.ಪಾಟೀಲರು. ಅವರಿಗೆ ಈ ಸಂದರ್ಭದಲ್ಲಿ ಮನಃಪೂರ್ವಕ ಕೃತಜ್ಞತೆಗಳು ಸಲ್ಲಿಸಲೆಬೇಕಾಗುತ್ತದೆ.

ಕನ್ನಡ ಅಧ್ಯಯನ ಸಂಸ್ಥೆ,
ಗುಲಬರ್ಗಾ ವಿಶ್ವವಿದ್ಯಾಲಯ,
ಗುಲಬರ್ಗಾ

ಡಾ. ಎಸ್.ಎಮ್.ಹಿರೇಮಠ
ಪ್ರಾಧ್ಯಾಪಕರು,
ಮೊ: ೯೪೪೮೨೫೧೬೦೦

ಪ್ರಧಾನ ಸಂಶೋಧಕರ ನುಡಿ

ಕನ್ನಡ ಭಾಷೆಗೆ ಶಾಸ್ತ್ರೀಯ ಸ್ಥಾನ ದೊರಕಿದ ಈ ಸಂದರ್ಭವೊಂದು ಶಿವದ ಸಂದರ್ಭವಾಗಿದೆ. ಈ ಸಂದರ್ಭದಲ್ಲಿ ಕನ್ನಡವೇ ಆಗಿರುವ ಸರಕಾರ ಮತ್ತು ಸಮಾಜದ ಮನಸ್ಸುಗಳು ಕನ್ನಡ ಧರ್ಮ–ಸಾಹಿತ್ಯ–ಸಂಸ್ಕೃತಿಗೆ ಮತ್ತೊಮ್ಮೆ ಸುವರ್ಣಯುಗವೊಂದನ್ನು ಪ್ರಾಪ್ತೀಕರಿಸಿಕೊಡುವ ಪಥದಲ್ಲಿ ಪ್ರವೃತ್ತವಾಗಬೇಕಾಗಿದೆ. ಕನ್ನಡ ಭಾಷಾಭಿವೃದ್ಧಿ ಯೋಜನೆಯ ಆಶ್ರಯದಲ್ಲಿ ಸರಕಾರವು ಉದಾರ ಮತ್ತು ಕಳಕಳಿಯ ಮನದಿಂದ ನೀಡುತ್ತಿರುವ ವಿಪುಲವಾದ ಅನುದಾನವು ಸತ್ಪಾತ್ರಕ್ಕೆ ಸಲ್ಲುವಂತೆ ಸದುಪಯೋಗ ಮಾಡಿಕೊಂಡು ಕನ್ನಡದ ಶಾಸ್ತ್ರೀಯ ನೆಲೆಗೆ ಪೂರಕವಾಗಿರುವ ಕಾರ್ಯಸಾಧನೆಗಳನ್ನು ಪ್ರಾಮಾಣಿಕ ಮನದಿಂದ ಆಗು ಮಾಡಬೇಕಾಗಿದೆ. ಬೀದರ ಜಿಲ್ಲೆಯ ತತ್ತ್ವಪದಕಾರರ ಸ್ಮಾರಕಗಳ ಸಂಶೋಧನೆ ಮತ್ತು ಪ್ರಕಟಣಾ ಯೋಜನೆಯು ಅಂತಹ ಮಹತ್ವದ ಕಾರ್ಯ ಸಾಧನೆಗಳಲ್ಲಿ ಒಂದು.

ಬಸವಾದಿ ಶಿವಶರಣರ ನಂತರದಲ್ಲಿ ಮತ್ತೊಮ್ಮೆ "ಜನ ಬದುಕಲೆಂದು" ಜನರ ನಡುವೆ ಹುಟ್ಟಿ ಬದುಕುತ್ತ, ಜನಪದ ನಿಲುವಿನ ಕಾಳಜಿಗಳನ್ನು ದೊಡ್ಡ ಸಾಹಿತ್ಯಕ ಪರಂಪರೆಯಾಗಿ ಸಮಾಜಕ್ಕೆ ನೀಡಿದವರು ಕಲ್ಯಾಣ ಕನ್ನಡ ಪ್ರದೇಶದ ತತ್ತ್ವಪದಕಾರರು. ಶರಣ ಚಳುವಳಿಗೆ ಮಾಧ್ಯಮವಾಗಿದ್ದ ಅನುಭವ ಮಂಟಪದ ಪರಿಕಲ್ಪನೆ ಇಲ್ಲಿ ಮತ್ತೆ ನಮಗೆ ಅಮೂರ್ತ ರೂಪದಲ್ಲಿ ಕ್ರಿಯಾಶೀಲಗೊಂಡಂತೆ ಅನುಭವವಾಗುತ್ತದೆ. ತತ್ತ್ವಪದ ಸಾಹಿತ್ಯವು ಹೆಚ್ಚಾಗಿ ಅರಮನೆ–ಗುರುಮನೆ–ಪಂಡಿತರ ಮನೆಗಳಲ್ಲಿ ಹುಟ್ಟಿದ್ದಲ್ಲ. ಅದು ಆಕಾಶದ ಕುಸುಮದಂತಿರುವ ತತ್ತ್ವ ಬೋಧನೆಗೂ ತೊಡಗುವುದಿಲ್ಲ. ಮಠದ ಸ್ವಾಮಿ, ಆರೂಢಸಾಧಕ, ವ್ಯುತ್ಪತ್ತಿಯ ವಿದ್ವಾಂಸ – ಇವರೊಂದಿಗೆ ಸರಿಮಿಗಲಾಗಿ ನಿಂತುಕೊಂಡು ತತ್ತ್ವಪದಗಳನ್ನು ಕಟ್ಟಿ (ರಚಿಸಿ) ಹಾಡಿದ, ಹಾಡುತ್ತಿರುವವರು ನೇಕಾರ, ಕುಂಬಾರ, ಕಂಬಾರ, ಹಡಪಿಗ, ಮಾದಾರ, ಅಸ್ಪೃಷ್ಯ, ಕಬ್ಬಲಿಗ, ಕುರುಬ, ಡೋಹರ, ಸಮಗಾರ, ಮುಸ್ಲೀಮ ಮುಂತಾದ ಜಾತಿ – ಮತ – ಪಂಥ – ಪಂಗಡಾದಿಗಳಿಂದ ಬಂದವರು. ಅವರೆಲ್ಲ ತತ್ತ್ವ ಸಾಹಿತ್ಯದ ನೆಲೆಯಲ್ಲಿ ಸಾಮರಸ್ಯದ ಸಂಸ್ಕಾರಗೊಂಡು ಮನುಷ್ಯರಾಗಿ

ಆಗುತ್ತಲಿದೆ. ಶಿಷ್ಟ–ಪರಿಶಿಷ್ಟ ಸಾಂಸ್ಕೃತಿಕ ಪರಂಪರೆಗಳೆರಡರ ಮೌಲೀಕರಣ ಅಥವಾ ಪುನರ್ ಮೌಲೀಕರಣದ ಕಾರ್ಯದಲ್ಲಿ ತತ್ತ್ವಪದಗಳು ಮಹತ್ವದ ಪಾತ್ರವನ್ನು ನಿರ್ವಹಿಸಬಲ್ಲವುಗಳಾಗಿವೆ. ತತ್ತ್ವಪದಕಾರರು ತಮಗೆ ಅರಿವಿಲ್ಲದೆಯೇ ಅನುಭಾವದ ಚಳುವಳಿಯೊಂದನ್ನು ಹುಟ್ಟುಹಾಕಿದ್ದಾರೆ; ಅದನ್ನು ಜೀವಂತವಾಗಿ ತಮ್ಮ ರಚನೆಯ ಜೀವಂತಿಕೆಯ ಮೂಲಕ ಮುನ್ನೆಡೆಸಿಕೊಂಡು ನಡೆದಿದ್ದಾರೆ.

ತತ್ತ್ವಪದಗಳ ಸ್ವರೂಪವೇನು? – ಈ ಪ್ರಶ್ನೆಯನ್ನು ಕುರಿತಂತೆ ಕನ್ನಡದ ಹಲವಾರು ವಿದ್ವಾಂಸರು–ಸಂಶೋಧಕರು ತಮ್ಮ ತಮ್ಮ ವ್ಯಾಖ್ಯೆಗಳನ್ನು ನೀಡಿದ್ದಾರೆ. ಬಸವಾದಿ ಶರಣರ ವಚನಗಳ ಸ್ವರೂಪ ವಿವೇಚನೆಯಂತೆಯೇ, ತತ್ತ್ವಪದ ಸ್ವರೂಪದ ವಿವೇಚನೆಯೂ ಇದೆಯೆಂದು ನಾನು ಭಾವಿಸುತ್ತೇನೆ. ಶರಣರು ಯಾವುದೇ ಶಾಸ್ತ್ರೀಯ ನಿಯಮಗಳನ್ನು ಎದುರಿನಲ್ಲಿ ಇಟ್ಟುಕೊಂಡು ವಚನಗಳನ್ನು ಬರೆಯಲಿಲ್ಲ. ಹಾಗೆಯೇ ತತ್ತ್ವಪದಕಾರರು ಯಾವುದೇ ಸಾಹಿತ್ಯಿಕ ರಚನೆಯ ನಿಯಮಗಳನ್ನು ಅಧ್ಯಯನ ಮಾಡಿದವರಲ್ಲ; ಅವುಗಳ ಅರಿವೂ ಅವರಿಗಿಲ್ಲ. ಶರಣರು ವಚನಗಳನ್ನು ತಮಗೆ 'ಒಲಿದಂತೆ ಹಾಡಿದರು'. ತತ್ತ್ವಪದಕಾರರು ಇದಕ್ಕೆ ಹೊರತಾದವರಲ್ಲ. ಅವರ ಆಧ್ಯಾತ್ಮದ ಮನಸ್ಸು ಒಲಿದಂತೆ ಹೃದಯದಲ್ಲಿ ಮೂಡಿದ ಹಾಡನ್ನು ದನಿಯೆತ್ತಿ ಹಾಡಿದರು. 'ತತ್ತ್ವಪದ' ಅಥವಾ 'ತತ್ತ್ವದ ಹಾಡು' ಎಂಬ ರಚನೆಯು ಮುಖ್ಯವಾಗಿ ಗೇಯ ಪ್ರಧಾನವಾದುದು.

ತತ್ತ್ವಪದಕಾರರು ತಮ್ಮ ಅನುಭಾವದ–ಆಧ್ಯಾತ್ಮಿಕ ವಿಚಾರಗಳನ್ನು ಮಾತಾಗಿ, ಕತೆಯಾಗಿ ಕಟ್ಟಿಕೊಡದೆ; ಹಾಡಾಗಿ ಹಾಡಿದರು. ಹೀಗಾಗಿ ಅವುಗಳಿಗೆ ಅವುಗಳದ್ದೆ ಆದ ಒಂದು ಲಯವಿದೆ; ಶ್ರುತಿಯಿದೆ. ಆದುದರಿಂದ ಅವುಗಳಲ್ಲಿ ಕಿವಿಗೆ ಇಂಪನ್ನು ನೀಡುವ ಶಕ್ತಿಯು ತನ್ನ ತಾನೆ ಅಡಕವಾಗಿದೆ. ಹಾಡುವ ಕಾರಣದಿಂದಲೇ ಕೆಲವರು ತತ್ತ್ವಪದಗಳನ್ನು 'ಸ್ವರವಚನ'ವೆಂದು ಗುರುತಿಸಿದರು. 'ಕೈವಲ್ಯದ ಹಾಡುಗಳು' ಎಂಬ ಹೆಸರಿನಿಂದಲೂ ತತ್ತ್ವಪದಗಳು ಮೂಡಿ ಬಂದುದುಂಟು. ತತ್ತ್ವಪದಕಾರರು ತಾವು ಬರೆದ ಅಥವಾ ಒರೆದ ಹಾಡುಗಳ ಕೊನೆಯಲ್ಲಿ ತಮ್ಮದೇ ಆದ ಮುದ್ರಿಕೆಯೊಂದನ್ನು ಇರಿಸಿಕೊಂಡಿದ್ದಾರೆ. ಈ ಮುದ್ರಿಕೆಯು ವಚನಕಾರರ ವಚನಗಳಿಗೆ ಕೊನೆಯಲ್ಲಿ ಬರುವ 'ಅಂಕಿತ'ದಂತೆ ಪರಿಭಾವಿಸಿಕೊಳ್ಳಹುದು. ವಚನಗಳು 'ಅಂಕಿತ'ಗೊಂಡು ರಚನೆಯಾಗಿರುವಂತೆ; ತತ್ತ್ವಪದಗಳು ಮುದ್ರೆಗೊಂಡು ರಚಿತವಾಗಿ ಹಾಡುವುದಕ್ಕೆ ಬರುವಂತಿವೆ. ವಚನಗಳನ್ನು ಸ್ವರಗತಿಗೆ ಅಳವಡಿಸಿ ಹಾಡುತ್ತಿರುವುದನ್ನು ನೋಡಬಹುದು. ಈ ಕಾರಣದಿಂದಲೇ ಹಾಡಲು ಬರುವ ವಚನಗಳಂತೆ ಹಾಡಲು ಬರುವ ತತ್ತ್ವಪದಗಳಿಗೆ 'ಸ್ವರವಚನ'ಗಳೆಂದು ಕರೆದಿರುವ ಸಂಭವನೀಯವಿದೆ. ಇದನ್ನು ಇರಿಸಿಕೊಂಡಾಗ ವೀರಶೈವ ಸಂಸ್ಕೃತಿಯ

ಅದಕ್ಕೆ ಬೇಕಾದ ನೆರವನ್ನು ಸರಕಾರದಿಂದ ಒದಗಿಸಿ ಕೊಡುತ್ತಲಿದ್ದಾರೆ. ಅವರಿಗೆ ನನ್ನ ಅನಂತ ನಮನಗಳು. ಶ್ರೀ ಮನು ಬಳಿಗಾರ ಅವರು ಅಧಿಕಾರಿಗಳಾಗಿರುವದರೊಂದಿಗೆ ಸಾಹಿತ್ಯಿಕ ವ್ಯಕ್ತಿತ್ವವುಳ್ಳವರೂ ಆಗಿದ್ದಾರೆ. ಕನ್ನಡ ಶಾಸ್ತ್ರೀಯ ಭೂಮಿಕೆಗೆ ಸಾಧಾರವಾಗಿರುವ ಕಾರ್ಯ ಚಟುವಟಿಕೆಗಳಿಗೆ ತಕ್ಷಣವೆ ಸ್ಪಂದಿಸುವ ಮನವುಳ್ಳ ಶ್ರೀ ಮನುಬಳಿಗಾರ ಅವರಿಗೆ ನಮೋ ಎನ್ನುತ್ತೇನೆ.

ಗುಲಬರ್ಗಾ ವಿಶ್ವವಿದ್ಯಾಲಯದ ಸರ್ವತೋಮುಖ ಪ್ರಗತಿಗಾಗಿ ಮನಃಪೂರ್ವಕ ಕಾರ್ಯನಿರತರಾಗಿರುವ ಕುಲಪತಿಗಳಾದ ಪ್ರೊ. ಈ.ಟಿ.ಪುಟ್ಟಯ್ಯನವರು ಮತ್ತು ಕುಲಸಚಿವರಾಗಿರುವ ಪ್ರೊ. ಎಸ್.ಎಲ್.ಹಿರೇಮಠ ಅವರು ನಮಗೆಲ್ಲ ಪ್ರೋತ್ಸಾಹದಾಯಕ ಶಕ್ತಿಗಳಾಗಿದ್ದಾರೆ.

ಗೌರವನೀಯ ಕುಲಪತಿಗಳಾಗಿರುವ ಪ್ರೊ. ಈ.ಟಿ. ಪುಟ್ಟಯ್ಯನವರು ಕನ್ನಡ ಮನಸ್ಸಿನ ವಿಜ್ಞಾನಿಗಳು, ನಾವು ಕರ್ತವ್ಯಗಳನ್ನು ಮರೆತು ನಿಂತಾಗ ಎಚ್ಚರಿಸುತ್ತಾರೆ. ಅವುಗಳನ್ನು ಸರಿಯಾಗಿ ನಿರ್ವಹಿಸಿದಾಗ ಪ್ರಾಂಜಲ ಮನದಿಂದ ಶ್ಲಾಘಿಸುತ್ತಾರೆ. ಈ ಕಾರ್ಯ ಸಾಧನೆಗಳ ಹಿಂದೆ ಬೆಳಕಾಗಿ ನಿಂತಿರುವ ಪ್ರೊ. ಈ.ಟಿ.ಪುಟ್ಟಯ್ಯನವರಿಗೆ ವಿನೀತ ಭಾವದಿಂದ ವಂದಿಸುತ್ತೇನೆ.

ಮಾನ್ಯ ಕುಲಸಚಿವರಾದ ಪ್ರೊ. ಎಸ್.ಎಲ್. ಹಿರೇಮಠ ಅವರು ಇಂತಹ ಯೋಜನೆಗಳ ಸಂದರ್ಭದಲ್ಲಿ ನಮಗೆ ಬೇಕಾದ ಸೌಲಭ್ಯಗಳನ್ನು ಒದಗಿಸಿಕೊಡುವಲ್ಲಿ ಎಂದೂ ಬೇಸರಿಸಿದವರಲ್ಲ. ನಗುತ್ತಲೇ ಶಾಂತ ಮನದಿಂದ ಈ ಕಾರ್ಯ ಸಾಧನೆಗಳಿಗಾಗಿ ಬೆನ್ನು ಚಪ್ಪರಿಸುತ್ತಿದ್ದಾರೆ. ಮಾನ್ಯ ಕುಲಸಚಿವರಾದ ಪ್ರೊ. ಎಸ್.ಎಲ್.ಹಿರೇಮಠ ಅವರಿಗೂ ನಾನು ಮನಃಪೂರ್ವಕ ನಮಿಸುತ್ತೇನೆ.

ಕನ್ನಡ ಅಧ್ಯಯನ ಸಂಸ್ಥೆಯು ನನ್ನ ಸಂಶೋಧನ–ಅಧ್ಯಯನ ಸಾಧನೆಗಳಿಗೆ ಫಲವತ್ತಾದ ನೆಲವಾಗಿದೆ. ಇದನ್ನು ಹದಗೊಳಿಸಿದವರು ಅಧ್ಯಯನ ಸಂಸ್ಥೆಯ ಹಿರಿಯರೂ, ಮಿತ್ರರೂ, ಹಿತೈಷಿಗಳೂ ಆಗಿರುವ ಸಹೋದ್ಯೋಗಿಗಳು. ಕನ್ನಡ ಅಧ್ಯಯನ ಸಂಸ್ಥೆಯ ಎಲ್ಲ ಬಳಗಕ್ಕೂ ನಾನು ಆತ್ಮೀಯ ಭಾವದಿಂದ ಸ್ಮರಿಸುತ್ತೇನೆ.

ಈ ಸಂಶೋಧನ ಯೋಜನೆಯನ್ನು ಪೂರೈಸಲು ಸಹಾಯಕವಾಗಿರುವ ಆಕರಗಳನ್ನು ರಚಿಸಿ ಕೊಟ್ಟಿರುವ ವಿದ್ವಾಂಸರಿಗೂ, ಯೋಜನೆಗೆ ಪೂರಕವಾದ ಹಲವಾರು ವಿವರಗಳನ್ನು ನೀಡಿರುವ ಎಲ್ಲ ಸಂಪನ್ಮೂಲ ವ್ಯಕ್ತಿಗಳಿಗೂ ಈ ಸಂದರ್ಭದಲ್ಲಿ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಈ ಸಂಶೋಧನಯೋಜನೆಯ ಎಲ್ಲ ಸಂಪುಟಗಳನ್ನು ಸರ್ವಾಂಗ ಸುಂದರವಾಗಿಸಲು ಹಲವಾರು ಉಪಯುಕ್ತ ಸಲಹೆ ಸೂಚನೆಗಳನ್ನು ನೀಡಿ

i) ಆರಂಭದಲ್ಲಿ 'ಪಲ್ಲವಿ' ಇರುವುದು.

ii) ಪಲ್ಲವಿಯೊಂದಿಗೆ 'ಅನುಪಲ್ಲವಿ' ಎಂಬ ವಾಚಕವಿರುವುದು.

iii) ಒಟ್ಟು ಹಾಡಿನಲ್ಲಿ ಮೂರು, ಐದು, ಏಳು, ಒಂಬತ್ತು ಅಥವಾ ಹನ್ನೊಂದು ನುಡಿಗಳಿರುವುದು ಸಾಮಾನ್ಯ. ಇದಕ್ಕೆ ಹೊರತಾದ ನುಡಿಯ ಸಂಖ್ಯೆಯೂ ಕಾಣಬಹುದು, ಬಹು ಸಂಖ್ಯಾತ ಹಾಡುಗಳಲ್ಲಿ ನುಡಿಯ ಚರಣಗಳು ನಾಲ್ಕರ ಸಂಖ್ಯೆಯಲ್ಲಿಯೇ ಇರುತ್ತವೆ.

iv) ಹಾಡಿನ ಕೊನೆಯ ನುಡಿಯಲ್ಲಿ ಕವಿಯು ಇಟ್ಟುಕೊಂಡಿರುವ ಅಂಕಿತವು ಬರುತ್ತದೆ.

v) ತತ್ತ್ವಪದಗಳು ಬಹು ದೀರ್ಘವಾಗಿರುವುದು ಕಡಿಮೆ.

vi) ಸಂಗೀತಗಾರರು ತತ್ತ್ವಪದಗಳಿಗೆ ರಾಗ-ತಾಳಗಳನ್ನು ಅಳವಡಿಸಿ ಹಾಡುತ್ತಾರೆ. ಅದರಂತೆ ಅವುಗಳನ್ನು ಪ್ರಕಟಿಸಿರುತ್ತಾರೆ.

vii) ಕೆಲವು ಸಮಯದಲ್ಲಿ ತತ್ತ್ವಪದಕಾರನಿಗೆ ಸಂಗೀತ ಜ್ಞಾನವಿದ್ದರೆ, ತಾನು ರಚಿಸುವ ಹಾಡುಗಳನ್ನು ತಾಳ-ರಾಗಬದ್ಧವಾಗಿಯೇ ರಚಿಸುತ್ತಾನೆ.

ಇವೆಲ್ಲ ತತ್ತ್ವಪದ ಸಾಹಿತ್ಯಕ್ಕೆ ಹೊಂದಿಸಬಹುದಾದ ಸ್ಥೂಲವಾದ ರಾಚನಿಕ ನೇಮಗಳೆಂದು ಭಾವಿಸಬೇಕು. ವಚನ ಸಾಹಿತ್ಯ ಪರಂಪರೆಯಲ್ಲಿ ಭಿನ್ನ-ಭಿನ್ನ ನೆಲೆಯಿಂದ ಬಂದ ಅನುಭಾವಿಗಳೆಲ್ಲ ಶರಣರಾಗಿ ವಚನಗಳನ್ನು ರಚನೆ ಮಾಡಿದರು. ಅದರಂತೆ ತತ್ತ್ವಪದಕಾರರ ಆಶ್ರಮಗಳು ಹತ್ತು- ಹಲವಾರು. ಗುರು ಮನೆಯಿಂದ ಮೊದಲಗೊಂಡು, ಗುಡಿಸಲಿನವರೆಗೂ ಆ ವ್ಯಾಪ್ತಿಯು ಬೆಳೆಯುತ್ತದೆ. ಅಸಂಖ್ಯಾತ ತತ್ತ್ವಪದಕಾರರು ತಮಗೆ ಹಿಂದಿದ್ದ ಶರಣರ ಪರಂಪರೆಯ ಧೋರಣೆಗಳನ್ನು ಅಲ್ಲಲ್ಲಿ ಅನುಕರಿಸುವಂತೆ ಕಂಡರೂ, ಅವರು ತಮ್ಮದೇ ಆದ ವಿನೂತನ ಹಾದಿಯೊಂದು ರೂಪಿಸಿಕೊಂಡರು. ಅದುವೆ "ತತ್ತ್ವಪದ"ದ ಹಾದಿ. ಜನಸಾಮಾನ್ಯರೆಲ್ಲ ಆಧ್ಯಾತ್ಮ ಸಾಧಕರಾಗಿ, ಅನುಭಾವಿಗಳಾಗಿ, ಕವಿಗಳಾಗಿ ಹಾಡಿದ ಹಾದಿ. ತನ್ಮೂಲಕ ತಮ್ಮ ಗುರುತ್ವವನ್ನೂ, ತಮಗೆ ಬೇಕಾಗಿರುವ ದೈವತ್ವದ ನೆಲೆಯನ್ನೂ ಸ್ವತಃ ರೂಪಿಸಿಕೊಂಡರು. ತತ್ತ್ವಪದಕಾರರಲ್ಲಿ ಬಹುಸಂಖ್ಯಾತರು ಸಾಮಾನ್ಯ ನೆಲೆಯವರು; ಸಮಾಜದ ಅತ್ಯಂತ ಕೆಳಸ್ತರದಿಂದ ಬಂದವರು ಅಲ್ಲಿ ಹೆಚ್ಚಿನವರು. ಹೀಗಿರುವಾಗ ಅವರು ಮಾರ್ಗ ಯಾವುದು? ದೇಶಿ ಯಾವುದು? ಎಂಬಂತಹ ಕಾವ್ಯಮೀಮಾಂಸೆಯ ಚರ್ಚೆಗಳಿಗೆ ತಮ್ಮನ್ನು ಒಡ್ಡಿಕೊಳ್ಳಲು ಹೋಗಲಿಲ್ಲ. ಅದರ ಗೊಡವೆಯೂ ಅವರಿಗೆ ಬೇಕಾಗಿರಲಿಲ್ಲ. ತಾವು ಬದುಕಿದ್ದ ಮಣ್ಣಿನ ಸತ್ವವನ್ನೇ

ಪ್ರಸ್ತಾವನೆ

ವಚನ ವಾಙ್ಮಯ ಸೆಲೆಗೆ ಹನ್ನೆರಡನೆಯ ಶತಮಾನದ ಕಾಲಸಂದರ್ಭವು ಮಾತೃಸ್ಥಾನವಾಗಿರುವಂತೆ, ತತ್ತ್ವಪದ ಸಾಹಿತ್ಯದ ಸೆಲೆಗೂ ಅದೇ ಯುಗಮಾನವೇ ಜನ್ಯಸ್ಥಾನವೆಂದರೆ ತಪ್ಪಾಗಲಾರದು. ಬಸವಾದಿ ಶಿವಶರಣರಲ್ಲಿ ಬಹುಸಂಖ್ಯಾತರು ವಚನಗಳನ್ನು ರಚಿಸಿದಂತೆ, ಕೆಲವರು ಹಾಡುಗಳನ್ನು ರಚಿಸಿದ್ದಾರೆ. ಬಸವಾದಿ ಶಿವಶರಣರು ಅನುಭಾವಿಗಳು. ಆದುದರಿಂದ ಅವರ ಅನುಭಾವದ ಅಭಿವ್ಯಕ್ತಿಗೆ ಮಾಧ್ಯಮವಾಗಿಯೇ ವಚನಗಳು ಹೊರಹೊಮ್ಮಿ ಬಂದಿವೆ. ಹಾಗೆಯೆ ಶರಣರ ಹಾಡುಗಳು ಅನುಭಾವದ ಶಿವರಸವನ್ನೆ ತುಂಬಿಕೊಂಡು ಹೊರಬಂದಿವೆ. ತತ್ತ್ವಪದಗಳು– ಎಂದರೆ ಇನ್ನೊಂದು ಅರ್ಥದಲ್ಲಿ ಅನುಭಾವದ ಹಾಡುಗಳೇ ಆಗುತ್ತವೆ. ಆದುದರಿಂದ ಈ ಹಾಡು ಪ್ರಕಾರದ ಪರಂಪರೆಗೆ ಶ್ರೀಕಾರ ಬರೆದವರು ಬಸವಾದಿ ಶರಣರೆಂದು ಇಟ್ಟುಕೊಳ್ಳಬೇಕು. ಮುಂದೆ ಹದಿನೈದು–ಹದಿನಾರನೆಯ ಶತಮಾನದಲ್ಲಿ ಹಲವಾರು ಸ್ವರವಚನ–ತತ್ತ್ವಪದಕಾರರು ಈ ಪರಂಪರೆಯನ್ನು ಮುಂದುವರೆಸಿದುದು ಕಂಡುಬರುತ್ತದೆ. ನಂತರದಲ್ಲಿ ಉತ್ತರ ಕರ್ನಾಟಕ; ಅದರಲ್ಲೂ ಕಲ್ಯಾಣ ಕರ್ನಾಟಕ ಪ್ರದೇಶದಲ್ಲಿ ವಿಪುಲವಾಗಿ ತತ್ತ್ವಪದ ಸಾಹಿತ್ಯವು ಬೆಳೆದುಬಂದಿದೆ. ಇದಕ್ಕೆ ಕಾರಣ ಮುಂದಿನ ದಿನಗಳಲ್ಲಿ ಉಂಟಾದ ಬಸವಾದಿ ಶರಣರ ಅನುಭಾವ ಜೀವನದ ಪ್ರಭಾವ ಪರಿಣಾಮವೇ ಆಗಿದೆ. ಕನ್ನಡ ಸಾಹಿತ್ಯ–ಸಂಸ್ಕೃತಿಗೆ ವಚನ ಸಾಹಿತ್ಯದಂತೆ ತತ್ತ್ವಪದ ಸಾಹಿತ್ಯವೂ ಸಹ ಒಂದು ಮೌಲಿಕ ಕಾಣಿಕೆಯೆ ಆಗಿದೆ.

ತತ್ತ್ವಪದ ಸಾಹಿತ್ಯದ ಬೇರುಗಳು ಹನ್ನೆರಡನೆಯ ಶತಮಾನದ ಅನುಭಾವದ ಒಡಲಿನಲ್ಲಿ ಚಿಗುರಿದ ಪರಿಯನ್ನು ಕಂಡುಕೊಂಡರೂ, ಆ ಬೇರುಗಳು ಹೆಮ್ಮರವಾಗಿ ಬಾಹ್ಯ ಜಗತ್ತಿಗೆ ಗೋಚರವಾದುದು ಕನ್ನಡ ನಾಡಿನ ಹದಿನೈದು, ಹದಿನಾರು, ಹದಿನೇಳು, ಹದಿನೆಂಟು, ಹತ್ತೊಂಬತ್ತು ಮತ್ತು ಇತ್ತೀಚಿನ ಶತಮಾನಗಳಲ್ಲಿ. ಬಹುಕಾಲದವರೆಗೆ ವಿದ್ವಾಂಸ–ಸಂಶೋಧಕರ ನಿರ್ಲಕ್ಷ್ಯಕ್ಕೆ ಒಳಗಾದ ಈ ಸಾಹಿತ್ಯ ಪರಂಪರೆಯು ಇಂದು ಪಂಡಿತ–ಪಾಮರರನ್ನೆಲ್ಲ ತನ್ನತ್ತ ಕರೆಯುತ್ತಲಿದೆ. ಸಂಸ್ಕೃತಿಯ ಶೋಧಕರಿಗಂತೂ ಈ ಸಾಹಿತ್ಯದ ಶೋಧ; ಸಂಗ್ರಹ, ಅಧ್ಯಯನದ ಕಾರ್ಯವು ಅತ್ಯಂತ ಮಹತ್ವದ್ದಾಗಿ ಕಾಣುತ್ತಲಿದೆ. ಹೀಗಾಗಿಯೇ ಅಜ್ಞಾತ ಅಲ್ಪಜ್ಞಾತವಾಗಿದ್ದ ತತ್ತ್ವಪದ ಸಾಹಿತ್ಯವು ಈಗ ಬಹುಮುಖೀ ಆಯಾಮಗಳಲ್ಲಿ ಚಿಂತನೆಗೆ ಒಳಗಾಗಿದೆ;

ಆಗಬಲ್ಲರು. ಹೀಗೆ ಹತ್ತು ಹಲವು ಆಯಾಮಗಳಲ್ಲಿ ತಮ್ಮ ಸಾಧನೆಯನ್ನು ತೋರುತ್ತ; ಆಧ್ಯಾತ್ಮ ನಾಯಕರಾಗಿ ನಿಂತುಕೊಂಡಿದ್ದಾರೆ ಕೆಳವರ್ಗದ ತತ್ತ್ವಪದಕಾರರು. ಅವರು ತಮ್ಮ ನೆಲೆಯಲ್ಲಿಯೆ ಬಂಡವಾಳಶಾಹಿ-ವಸಾಹತುಶಾಹಿಗಳನ್ನು ಸದ್ದಿಲ್ಲದೆ ವಿರೋಧಿಸಿದಂತೆ ಕಾಣುತ್ತದೆ. ನಾಡಿನಲ್ಲಿರುವ ಗಿಳಿಗೆ ಪಂಜರದ ಬಂಧನ; ಹೊತ್ತು ಹೊತ್ತಿಗೆ ಕೈ ತುತ್ತನ್ನು ಇಕ್ಕುವ ಮಾಲಿಕನ ಕೈಯ್ಯ ಹಂಗು, ದೇಹ ಉಪಚಾರದ ಆರೈಕೆ ಇವೆಲ್ಲ ಬೇಕಾದಾವು. ಕಾಡಿನ ಕೋಗಿಲೆಗೆ ಇವು ಯಾವುದರ ಮುಲಾಜೂ ಇರಲಾರದು. ನಿಸರ್ಗದ ಆಶ್ರಯದಲ್ಲಿ ಸ್ವಚ್ಛಂದವಾಗಿ ವಿಹರಿಸುತ್ತ; ಅಲ್ಲಿ ಸಿಕ್ಕದ್ದನ್ನು ತಿಂದು, ಸಂತೃಪ್ತಿಯಿಂದ ಹಾಡುತ್ತಿರುತ್ತದೆ. ಅದರಂತೆ ಈ ತತ್ತ್ವಪದಕಾರರು.

ತತ್ತ್ವಪದ ಸಾಹಿತ್ಯವು ನಿಜವಾದ ಭಾವೈಕ್ಯದ ಭಂಡಾರ. ಎಷ್ಟೋ ಮುಸ್ಲೀಮ ತತ್ತ್ವಪದಕಾರರು ವೀರಶೈವ ಸಂಸ್ಕೃತಿಯ ದೀಕ್ಷೆಯನ್ನು ಧರಿಸಿ; ವೀರಶೈವ ತತ್ತ್ವ-ಸಿದ್ಧಾಂತ ಕುರಿತು ಹಾಡುಗಳನ್ನು ರಚಿಸಿದ್ದಾರೆ. ಹಾಗೆಯೇ ಹಿಂದೂ-ವೀರಶೈವ ತತ್ತ್ವಪದಕಾರರು ಮುಸ್ಲೀಂ ಸಂತರಲ್ಲಿ ಭಕ್ತಿಯುಳ್ಳವರಾಗಿ, ಅವರ ಬಗೆಗೆ ಸ್ತುತಿ-ಸ್ತೋತ್ರ ಪರವಾದ ಹಾಡುಗಳನ್ನು ಬರೆದಿರುವರು. ತತ್ತ್ವಪದಕಾರರಲ್ಲಿ ಎಲ್ಲ ಜಾತಿ-ಪಂಥ-ಪಂಗಡಗಳ ಕವಿಗಳಿರುವುದನ್ನು ಕಾಣಬಹುದು. ಅವರು ಎಂದೂ ಭೇದ-ಭಾವವನ್ನು ಮುಂದೊಡ್ಡಿಕೊಂಡು ಬದುಕಲಿಲ್ಲ; ಎಲ್ಲರೊಂದಿಗೆ ಬೆರೆತು; ಎಲ್ಲ ದೇವರನ್ನೂ ಆರಾಧಿಸುತ್ತ; ಬಹು ಸಂಸ್ಕೃತಿಯನ್ನು ಮನ್ನಿಸುತ್ತ ಸಾಮರಸ್ಯದ ಜೀವನ ಸಾಗಿಸುತ್ತಿದ್ದಾರೆ. ತತ್ತ್ವಪಕಾರರ ಸಾಹಿತ್ಯಿಕ ಚಳುವಳಿಯು ನಿಜವಾದ ಅರ್ಥದಲ್ಲಿ ಭಾವೈಕ್ಯದ ಸಾಂಸ್ಕೃತಿಕ ಚಳುವಳಿಯಾಗಿದೆ.

ತತ್ತ್ವಪದಕಾರರು ತಮ್ಮ ಸಾಧನೆಗಾಗಿ ಒಬ್ಬ ದೇವರನ್ನು ನಂಬಿರಬಹುದು; ಒಂದು ಧರ್ಮದ ತತ್ತ್ವಾಚರಣೆಯಲ್ಲಿ ತೊಡಗಿರಬಹುದು. ಆದರೆ ಅವರು ತಾವು ನಂಬಿದ ದೇವರು-ಧರ್ಮಗಳನ್ನು ಎಂದೂ ಸಂಘರ್ಷದ ಸಾಧನೆಗಳಾಗಿ ಮಾಡಿಕೊಳ್ಳಲಾರರು. ಶಿವ, ಅಲ್ಲಾ, ಬುದ್ಧ, ಏಸು, ಬಸವ, ಪೈಗಂಬರ ಇವರೆಲ್ಲ ಅವರ ತಾತ್ವಿಕ ಅನುಭಾವದ ರೂಪಕದಲ್ಲಿ ಐಕ್ಯರಾಗುತ್ತಾರೆ. ಆಗ ಅವರಲ್ಲಿ ಎದ್ದು ಕಾಣುವುದು ತಾತ್ವಿಕತೆಯ ಮಿಡಿತವೆ ಹೊರತು, ವಿರಸದ ಬಡಿತವಂತೂ ಅಲ್ಲವೆ ಅಲ್ಲ. ಹೀಗಾಗಿಯೇ ಮುಸ್ಲೀಂ ತತ್ತ್ವಪದಕಾರರು ಬಸವಾದಿ ಶರಣರ ಉತ್ಸವದಲ್ಲಿ ಭಾಗವಹಿಸುತ್ತಾರೆ. ಹಿಂದೂಗಳ ಹಬ್ಬ ಹರದಿನಗಳಲ್ಲಿ ಸಂಭ್ರಮದಿಂದ ಭಾಗವಹಿಸಿ ಹರುಷದಾಳುತ್ತಾರೆ. ಹಿಂದೂಗಳಾದ ಕವಿಗಳು ಮೋಹರಂ ಹಾಡುಗಳನ್ನು ರಚಿಸಿ; ಅಲಾವಿ ಪೀರನನ್ನು ಹಿಡಿದು ಕುಣಿಯುತ್ತಾರೆ. ತತ್ತ್ವಪದಕಾರರು ದೇವರು-ಧರ್ಮದ ಮೇಲ್ಮೆಯನ್ನು ಎತ್ತಿ ಹಿಡಿದು ಸಾರಲು ಹೊರಟ ಪ್ರತಿಪಾದಕರಲ್ಲ. ಅವರಿಗೆ

ಪರಿವೇಷದಲ್ಲಿಯೇ ಸ್ವರವಚನಗಳ ರಚನೆ ನಡೆಯಿತೆಂದು ಹೇಳಬಹುದೇನೋ ಈ ಕಾರಣದಿಂದಲೇ ಕೆಲವರು ವೀರಶೈವ ಸಂಸ್ಕೃತಿಯ ಪ್ರಭಾವದಲ್ಲಿ ರಚನೆಗೊಂಡವುಗಳು ಸ್ವರವಚನಗಳಾದರೆ, ಅನ್ಯ ಸಾಂಸ್ಕೃತಿಕ ಪರಿಸರದಲ್ಲಿ ರಚನೆಗೊಂಡು ತಾತ್ತ್ವಿಕ ಹಾಡುಗಳನ್ನು ತತ್ತ್ವಪದಗಳೆಂದು ಕರೆದಿದ್ದಾರೆ. ಏನೇ ಇರಲಿ ಸ್ವರ ವಚನ–ತತ್ತ್ವಪದಗಳ ಸಾರ ಸಾರಾಯವು ಹೆಚ್ಚಾಗಿ ಆಧ್ಯಾತ್ಮಿಕ ಚಿಂತನೆಯೇ ಆಗಿದೆ. ಕೈವಲ್ಯ ಪದಗಳು ಆಧ್ಯಾತ್ಮ ಪರವಾದವುಗಳು. ಕೈವಲ್ಯವನ್ನು ಕುರಿತು ಅವು ಹಾಡುತ್ತವೆ. ಮನುಷ್ಯನಿಗೆ ಮೋಕ್ಷದ ಪಥವನ್ನು ದರ್ಶನ ಮಾಡಿಸಿಕೊಡುವ ದಿಶೆಯಲ್ಲಿ ಈ ಪದ್ಯಗಳು ಸಾಧಕನಿಗೆ ಬೋಧೆಯಂತೆ ಕೇಳುತ್ತವೆ. ಕೈವಲ್ಯ ಸಾಧನೆಗೆ ಬೇಕಾದ ಆಚರಣೆಗಳನ್ನು ಕೈವಲ್ಯದ ಹಾಡುಗಳು ಮನುಷ್ಯನಿಗೆ ತಿಳಿಸುತ್ತವೆ. ಒಟ್ಟಾರೆ ಸಾಧಕಜೀವನ ಆತ್ಮದ ಧ್ವನಿಯಂತೆಯೆ ಈ ಹಾಡುಗಳು ಇರುತ್ತವೆ. ಹೀಗಾಗಿ ಕೈವಲ್ಯದ ಹಾಡು ಮತ್ತು ತತ್ತ್ವಪದಗಳಲ್ಲಿ ವ್ಯತ್ಯಾಸಗಳನ್ನು ಗುರುತಿಸುವುದು ಸರಿಯಾದುದಲ್ಲವೆಂದೇ ನನ್ನ ತಿಳಿಕೆ. ಜನಪದರು ಭಜನೆಯ ಮೂಲಕ ತಮ್ಮ ಆರಾಧ್ಯ ದೇವರನ್ನು ಭಜಿಸುತ್ತ ಬಂದಿದ್ದಾರೆ. ಭಜನೆಯ ಕ್ರಿಯೆಯಲ್ಲಿ ಅವರು ಭಜನೆಯ ಪದಗಳನ್ನು ಹಾಡುತ್ತಾರೆ. ಎಲ್ಲ ಭಜನೆಯ ಪದಗಳು ಕೈವಲ್ಯ ಅಥವಾ ತತ್ತ್ವಪದಗಳಾಗುವುದಿಲ್ಲ. ಏಕೆಂದರೆ ಭಜನೆಯ ಪದಗಳು ಕೆಲವೊಮ್ಮೆ ಸ್ತುತಿ–ಸ್ತೋತ್ರ ಪರವಾಗಿದ್ದು ಆಧ್ಯಾತ್ಮಿಕ ಪರವಾದ ಚಿಂತನೆಯು ಅಲ್ಲಿ ಕಾಣಲಾರದು. ಆದರೆ ಭಜನೆಯಲ್ಲಿ ಹಲವಾರು ತತ್ತ್ವಪದಗಳೂ ಸಹ ಹಾಡಲ್ಪಡುವುದು ಸತ್ಯ. ತತ್ತ್ವಭರಿತವಾದ 'ಪದ'ವು 'ತತ್ತ್ವಪದ'ವೆಂಬುದು ಸ್ಥೂಲವಾದ ಒಂದು ವ್ಯಾಖ್ಯೆಯಾದರೂ, ಇಲ್ಲಿರುವ 'ತತ್ತ್ವ'ದ ವಿಶೇಷ ಅರ್ಥವು 'ತತ್ತ್ವಪದ' ಸಾಹಿತ್ಯ ಪ್ರಕಾರಕ್ಕೆ ಅದರದ್ದೇ ಆದ ವಿಶಿಷ್ಟ ಸ್ಥಾನವೊಂದನ್ನು ದೊರಕಿಸಿಕೊಡುತ್ತದೆ. ಸಾಮಾನ್ಯ ಅರ್ಥದಲ್ಲಿ 'ತತ್ತ್ವ'ವೆಂದರೆ ಯಾವುದೋ ಒಂದು ನಿಯಮ; ಕಟ್ಟಳೆ ಬಂಧ – ಎಂದಾಗಬಹುದು. ಆದರೆ ಆಧ್ಯಾತ್ಮಿಕ ಪರಿಭಾಷೆಯಲ್ಲಿ 'ತತ್ವ'ವೆಂಬ ಶಬ್ದವನ್ನು ಆತ್ಮ ಮತ್ತು ಪರಮಾತ್ಮಗಳಿಗೆ ಪರ್ಯಾಯವಾಗಿ ಪ್ರಯೋಗಿಸಲಾಗುತ್ತದೆ. ಯಾವ ಹಾಡುಗಳು ಆತ್ಮದ ವಿಕಾಸ; ಉನ್ನತಿಗೆ, ಮತ್ತು ಪರಮಾತ್ಮ ಸ್ಥಲದ ಸಿದ್ಧಿಗೆ ಹಾದಿಯನ್ನು ತೋರಿಸಬಲ್ಲವೋ, ಅಂತಹ ಹಾಡುಗಳನ್ನು 'ತತ್ತ್ವಪದ'ಗಳೆಂದು ಕರೆಯಬಹುದಾಗಿದೆ. ಜೀವನಕ್ಕೆ ಧಾರಕವಾಗಬಲ್ಲ ನೀತಿಯನ್ನು ಒಳಗೊಂಡಿರುವ ಹಾಡುಗಳೂ ಈ ಪರಿಧಿಗೆ ಸೇರಿಸಬಹುದು.

ತತ್ತ್ವಪದ ಸಾಹಿತ್ಯ ಪರಂಪರೆ ಅತ್ಯಂತ ನಿಚ್ಚಳಗೊಳ್ಳುತ್ತ ನಡೆದಂತೆ, ಬಹುಶ; ತತ್ತ್ವಪದಕಾರರೆ ತಮ್ಮ ಹಾಡುಗಳಿಗೆ ಒಂದು ಸ್ವರೂಪಸಂಹಿತೆಯನ್ನು ನಿರ್ಮಿಸಿಕೊಂಡಂತೆ ಕಾಣುತ್ತದೆ. ಇಂದು ಯಾವುದೇ ತತ್ತ್ವಪದಕಾರನ ತತ್ತ್ವಪದವು ಮುಂದಿನ ಈ ಸಾಮಾನ್ಯ ಲಕ್ಷಣಗಳನ್ನು ಒಳಗೊಂಡಿರುವುದನ್ನು ಕಾಣಬಹುದು:

ತತ್ತ್ವಪದಕಾರರಲ್ಲಿ ಹೆಚ್ಚಿನ ಜನರು "ಆಶುಕವಿತ್ವ" ಶಕ್ತಿಯುಳ್ಳವರು. ಅವರೆಲ್ಲ ಕುರಿತು ಓದದ ಕಾವ್ಯ ಪ್ರಯೋಗ ಪರಿಣತ ಮತಿಗಳು. ಆಗಿಂದಾಗಲೇ ಅವರು ಹಾಡುಗಳನ್ನು ಕಟ್ಟಿ ಹಾಡಿ ಬಿಡುತ್ತಾರೆ. ಅವರಿಗೆ ಬೇಕಾದ ವಸ್ತು–ವಿಷಯ ಕೊಟ್ಟರೆ ಅದು ಹಾಡಾಗಿ ಬಿಡುತ್ತದೆ. ಅತ್ಯಂತ ಮಧುರವಾದ ತತ್ತ್ವಪೂರ್ಣವಾದ ಹಾಡಾಗುತ್ತದೆ. ಹುಟ್ಟು ಪ್ರತಿಭಾವಂತರಾದ ಅವರು ಹಾಡು ಕಟ್ಟುವುದು ಪವಿತ್ರ ಕಾರ್ಯವೆಂದೇ ತಿಳಿದುಕೊಂಡಿರುತ್ತಾರೆ. ಆ ಶಕ್ತಿಯು "ದೇವರು ತಮಗೆ ನೀಡಿದ ವರ"ವೆಂದು ಅವರು ಭಾವಿಸುತ್ತಾರೆ.

ತಮಗೆ ಈ ಶಕ್ತಿ ದಕ್ಕಿದೆಯೆಂದು ಯಾವಾಗ ಬೇಕೋ ಆವಾಗ ಅವರು ಹಾಡುಗಳನ್ನು ಕಟ್ಟಲಾರರು. ಅವರ ಮನಸ್ಸು ಸಮ್ಮತಿಸಿದಾಗ ಮಾತ್ರ ಅವರು ಕಾವ್ಯ ರಚನಾ ಕ್ರಿಯೆಗೆ ತೊಡಗುತ್ತಾರೆ. ಆಗ ಅವರಿಗೆ ಕಾಗದ ಬೇಕಿಲ್ಲ; ಲೆಕ್ಕಣಿಕೆ ಬೇಕಿಲ್ಲ. ತಮ್ಮಷ್ಟಕ್ಕೇ ತಾವೇ ಹಾಡಿಕೊಂಡು ತತ್ತ್ವಪದದ ಪೂರ್ಣ ಅಭಿವ್ಯಕ್ತಿ ಪೂರೈಸುತ್ತಾರೆ. ಬಡತನವನ್ನು ವರವಾಗಿಸಿಕೊಂಡಿರುವುದು ತತ್ತ್ವಪದಕಾರರ ವಿಶೇಷ ಶಕ್ತಿಯೆಂದು ಹೇಳಬೇಕು. ಇಂದು ನಮಗೆ ಬೀದರ ಜಿಲ್ಲೆಯಲ್ಲಿ ಲಭ್ಯವಾಗಿರುವ ತತ್ತ್ವಪದಕಾರರಲ್ಲಿ ಹೆಚ್ಚಿನವರು ಬಡತನದ ಬೆಂಕಿಯಲ್ಲಿ ಬೆಂದು ಪರಿಶುದ್ಧ ಚಿನ್ನದಂತಾದವರು, ಎರಡು ಹೊತ್ತಿನ ಗಂಜಿಗೆ ಗತಿಯಿಲ್ಲದಿದ್ದರೂ ಅದರ ಬಗೆಗೆ ಅವರು ಚಿಂತಿಸಿದವರಲ್ಲ; ಚಿಂತಿಸುತ್ತಿಲ್ಲ. ಭೌತಿಕ ಬಡತನದ ಬವಣೆಯಲ್ಲಿ ಬದುಕುತ್ತಲೇ ಅವರು ಮೌಖಿಕವಾದ ತತ್ತ್ವಪದಗಳ ರಚನೆ ಮಾಡಿದ್ದಾರೆ; ಮಾಡುತ್ತಲಿದ್ದಾರೆ. ತಾವು ರಚಿಸಿದ ಹಾಡುಗಳನ್ನು ಬಾಳಿನ ಗೋಳು ಮರೆಯಲು ಹಾಡುತ್ತಾರೆ; ಇಲ್ಲವೆ ಹಾಡುಗಾರರಿಂದ ಹಾಡಿಸಿ, ಕೇಳಿ, ಆನಂದಪಟ್ಟು ನೋವಿನಲ್ಲೂ ನಗುತ್ತ ಜೀವಿಸುತ್ತಾರೆ. ತತ್ತ್ವಪದಕಾರರು ಭೌತಿಕ ಸಂಪತ್ತಿನ ದೃಷ್ಟಿಯಿಂದ ಬಡವರೆ ಹೊರತು ಸಾಂಸ್ಕೃತಿಕ ದೃಷ್ಟಿಯಿಂದ ಮಹಾಸಿರಿವಂತರು. ಅವರಲ್ಲಿನ ಹೃದಯ ಶ್ರೀಮಂತಿಕೆಯಂತೂ ಅನುಪಮವಾದುದು.

ತತ್ತ್ವಪದಕಾರರಲ್ಲಿ ನಿರಕ್ಷರಿಗಳು ಹೆಚ್ಚಿನವರಿದ್ದಾರೆ. ಶಾಲೆಗೆ ಹೋದರೂ ಕೆಲವರು ಕಲಿತದ್ದು ಅತ್ಯಂತ ಕಡಿಮೆ ಪ್ರಮಾಣದ ಶಿಕ್ಷಣ. ಬೀದರ, ಕಲಬುರ್ಗಿ ಭಾಗದಲ್ಲಿರುವ ತತ್ತ್ವಪದಕಾರರು ಕಲಿತದ್ದು ಉರ್ದು, ಮರಾಠಿ, ಮೋಡಿ. ಆದುದರಿಂದ ಅವರು ಕನ್ನಡದ ಭಾಷೆಯನ್ನು ಉರ್ದು, ಮರಾಠಿ ಇಲ್ಲವೆ ಮೋಡಿ ಲಿಪಿಯಲ್ಲಿಯೇ ಬರೆದುದುಂಟು. ಅವರು ಹೋದುದು ಗವಠಿ ಶಾಲೆಗಳಿಗೆ. ಸರಕಾರಿ ಶಾಲೆಗಳಲ್ಲಿ ಕಲಿತವರು ಅಲ್ಪ ಸಂಖ್ಯೆಯಲ್ಲಿ ಸಿಕ್ಕುತ್ತಾರೆ. ಗವಠಿ ಶಾಲೆಯಲ್ಲಿ ಮಾಸ್ತರಿಕೆ ಮಾಡಿಕೊಂಡಿದ್ದವರೂ ಹಾಡುಗಳನ್ನು ಬರೆದುದುಂಟು. ಯಾರು ಆಧುನಿಕ ಶಾಲೆಗಳಲ್ಲಿ ಕನ್ನಡವನ್ನು ಓದಿರುವರೋ ಅವರ ಹಾಡುಗಳಲ್ಲಿ ಶಿಷ್ಟ ಭಾಷೆಯ

ಮೈಗೊಂಡು; ಅದರ ಸಾರವನ್ನೇ ತಮ್ಮ ರಚನೆಗಳಲ್ಲಿ ತುಂಬಿದರು; ಹೊರ ಹೊಮ್ಮಿಸಿದರು. ಹಳೆಯ ತತ್ತ್ವಪದಕಾರರನ್ನೇ 'ತದ್‌ವತ್' ಆಗಿ ಅನುಕರಿಸುವ ಮುಲಾಜೂ ಅವರಲ್ಲಿ ಕಾಣುವುದಿಲ್ಲ. ಅವರ ಹಾಡುಗಳನ್ನು ನೋಡಿದರೆ ತಮ್ಮ ಸಮಕಾಲೀನ ಸಂದರ್ಭಕ್ಕೆ ತಟ್ಟುವ ಮುಟ್ಟುವ ತಹತಹಿಕೆ ಎದ್ದು ಕಾಣುತ್ತದೆ. ಸಮಕಾಲೀನ ಸಂದರ್ಭದ ಎಷ್ಟೋ ವಸ್ತು–ವಿಷಯ–ಆಕರಾದಿಗಳು ತತ್ತ್ವಪದಕಾರರ ಹಾಡುಗಳ ತಾತ್ವಿಕ ಚಿಂತನೆಗೆ ಪ್ರತಿಮೆ–ರೂಪಕಗಳಾಗಿ ನಿಂತುಕೊಳ್ಳುತ್ತವೆ.

ತಮ್ಮ ನಾಲಗೆಗೆ ದತ್ತವಾದ ಭಾಷೆಯನ್ನು ಬಳಕೆ ಮಾಡುವಲ್ಲಿ ತತ್ತ್ವಪದಕಾರರು ಎಂದೂ ಹಿಂದೆ–ಮುಂದೆ ನೋಡುವುದಿಲ್ಲ. ಅವರಿಗೆ ಶೀಲ–ಅಶ್ಲೀಲವೆಂಬ ಭೇದವು ಕಾಣುವುದೇ ಇಲ್ಲ. ಹೈದರಾಬಾದು ಕರ್ನಾಟಕ ಪ್ರದೇಶದ ಭಾಗಗಳಾಗಿರುವ ಬೀದರ, ಕಲಬುರ್ಗಿ, ರಾಯಚೂರು, ಕೊಪ್ಪಳ ಜಿಲ್ಲೆಯಲ್ಲಿನ ತತ್ತ್ವಪದಕಾರರ ಹಾಡುಗಳು ಬಹು ಭಾಷಾ ಪದಗಳಿಂದ ಕೆಲವೊಮ್ಮೆ ಕೂಡಿಕೊಂಡು ಹೊರಬಂದಿವೆ. ಉರ್ದು, ಮರಾಠಿ, ತೆಲಗು ಮುಂತಾದ ಶಬ್ದಗಳು ಕವಿಗಳು ತಮಗೆ ದಕ್ಕಿದಂತೆ ಬಳಸಿಕೊಂಡಿರುವುದುಂಟು. ಈ ಕಾರಣದಿಂದಲೇ ಕೆಲವರು "ತತ್ತ್ವಪದ ಸಾಹಿತ್ಯವೆಂದರೆ–ಭಾಷೆ ಸಂಸ್ಕೃತಿಯ ಸಂಕರದಿಂದ ಜನಿಸಿದ ಹಾಡುಪ್ರಕಾರವೆಂದು" ತಿಳಿದಿರುವುದುಂಟು. ಅವರು ಭಾಷೆಯನ್ನು ಮುಕ್ತವಾಗಿ ಬಳಸಿದ್ದಾರೆ; ಶಕ್ತವಾಗಿ ಬಳಸಿದ್ದಾರೆ. ತತ್ತ್ವಪದ ಸಾಹಿತ್ಯದಲ್ಲಿ ಗ್ರಾಮ್ಯದೊಂದಿಗೆ ಶಿಷ್ಟಭಾಷೆಯೂ ಬಳಕೆಯಾಗದೆ ಇಲ್ಲ. ಆದರೆ ಗ್ರಾಮ್ಯ ಭಾಷೆಯ ಯಜಮಾನಿಕೆಯಲ್ಲಿ ಅದು ಸೇವಕನಂತೆ ಕಾಣುತ್ತದೆಂಬುದು ಸತ್ಯದ ಮಾತು.

ಹಿಂದಿನ ಹಲವಾರು ಪಂಡಿತ–ಸಂಶೋಧಕರು ತತ್ತ್ವಪದಕಾರರನ್ನು ಕೇವಲ ಮೇಲು ವರ್ಗದವರಲ್ಲೇ ಹುಡುಕಾಡಿ; ತಮ್ಮ ಕಾಲ ಬಳಿಯಲ್ಲೇ ಇರುವ ತತ್ತ್ವಪದ ಸಾಹಿತ್ಯದ ಅಮೂಲ್ಯ ನಿಧಿಯನ್ನು ಕಳೆದುಕೊಂಡು ಬಿಟ್ಟಿದ್ದಾರೆ. ಅದನ್ನು ಚರಿತ್ರೆಯಲ್ಲಿ ದಾಖಲಿಸದೆ ಬಿಟ್ಟು ಅಪಚಾರ ಮಾಡಿದ್ದಾರೆ. ಸಂತರಾಮ ಮಹಾರಾಜ; ಕಲ್ಲಪ್ಪ ಮಹಾರಾಜ ಎಂಬ ಹೆಸರುಗಳು ಕಿವಿಯ ಮೇಲೆ ಬಿದ್ದೊಡನೆ ನಮ್ಮ ಲಕ್ಷ್ಯವು ಯಾವ ಕಡೆಗೆ ಹರಿಯುತ್ತದೆ? ಪೂರ್ವಾಶ್ರಮದಲ್ಲಿ ಇವರೆಲ್ಲ ವೀರಶೈವೇತರರು. ಅಸ್ಪೃಶ್ಯರು. ಅನ್ಯ ಪಂಥದವರೊಂದಿಗೆ ವಾಗ್ವಾದ ನಡೆಯಿಸಿ ಶಿವಪಾರಮ್ಯವನ್ನು ಸ್ಥಾಪಿಸಬಲ್ಲ ಸಾಮರ್ಥ್ಯವುಳ್ಳವರು. ಏಕದೇವೋಪಾಸನೆಯೊಂದಿಗೆ ಬಹು ದೇವತಾರ್ಚನೆಯ ಕ್ರಮವನ್ನೂ ಒಪ್ಪಿಕೊಂಡವರು. ತಮಗೆ ತಾವು ಗುರುವಾಗಿ; ಗುರುತ್ವದ ನೆಲೆಗೆ ಮಹತ್ವ ನೀಡುತ್ತ; ಅನ್ಯರಿಗೆ ಗುರುವಾಗಬಲ್ಲ; ಆಧ್ಯಾತ್ಮದ ಮಹಾರಾಜರಾಗಬಲ್ಲ ಸಾಮರ್ಥ್ಯವನ್ನು ಸಿದ್ಧಿಸಿಕೊಂಡವರು. ಅವರು ಸಂತರೂ ಆಗಬಲ್ಲರು; ಶರಣರೂ ಆಗಬಲ್ಲರು; ಮಹಾರಾಜರೂ ಆಗಬಲ್ಲರು; ದಾಸರೂ

ಹೊರುತ್ತಾಳೆ. ಮೈ ಮುರಿದು ದುಡಿದು ತಂದು ಮನೆ ಮಂದಿಗೆಲ್ಲ ಅನ್ನವನ್ನು ಹಾಕುತ್ತಾಳೆ. ಒಟ್ಟಾರೆ ತನ್ನ ಗಂಡನ ತತ್ತ್ವಪದ ಸಾಹಿತ್ಯ ರಚನೆಗೆ ಯಾವುದೇ ಆತಂಕ ಬರದಿರಲೆಂಬಂತೆ; ಆ ಗರತಿ ನಡೆದುಕೊಳ್ಳುವುದನ್ನು ಕಾಣಬಹುದು.

ವಿದ್ವಾಂಸ ವರ್ಗವು ತತ್ತ್ವಪದಕಾರರನ್ನು ಕಳೆದುಕೊಳ್ಳುವಲ್ಲಿ ಇನ್ನೊಂದು ಪ್ರಮಾದವು ಮಾಡಿದೆ. ಕೆಲವು ತತ್ತ್ವಪದಕಾರರು ಜೀವನಾರಭ್ಯದಿಂದಲೇ ಹಾಡುಗಳನ್ನು ಬರೆಯುವುದು; ಅಥವಾ ಕಟ್ಟುವುದಕ್ಕೆ ತೊಡಗಿದ್ದರೆ, ಮತ್ತೆ ಕೆಲವರು ಹಾಡುಗಳನ್ನು ಹಾಡುತ್ತ ರಚನೆಯ ಶಕ್ತಿಯನ್ನು ಸಿದ್ಧಿಸಿಕೊಂಡಿದ್ದಾರೆ. ಜೀವನದ ಬಹು ಭಾಗವೆಲ್ಲ ಬೇರೆಯವರ ಹಾಡುಗಳನ್ನು ಹಾಡುವುದರಲ್ಲಿಯೇ ಕಳೆದು; ಬದುಕಿನ ಉತ್ತರ ಭಾಗದಲ್ಲಿ ಅವರು ಕೆಲವು ಹಾಡುಗಳನ್ನು ಬರೆದಿದ್ದಾರೆ. ಅಂತಹ ಹಲವಾರು ತತ್ತ್ವಪದಕಾರರು ನಮಗೆ ಸಿಕ್ಕುತ್ತಾರೆ. ಹಾಡುಗಾರನ ಒಳಗೆ ಅಡಗಿರುವ ಕವಿಯ ಪರಿಚಯವಾಗುವುದು ಅವನ ಹತ್ತಿರಕ್ಕೆ ಹೋದಾಗ; ಅವನೊಂದಿಗೆ ಆಪ್ತವಾದ ಸಂವಾದಕ್ಕೆ ತೊಡಗಿದಾಗ. ಇಂತಹ ಪ್ರಯತ್ನಗಳಿಗೆ ತೊಡಗದ ಕೆಲವರು ಹಾಡುಗಾರನಲ್ಲಿ ಅಡಗಿರುವ ಕವಿಯನ್ನು ಕಂಡುಕೊಳ್ಳದೆ "ಅವನೊಬ್ಬ ಕೇವಲ ಹಾಡುಗಾರ" ಎಂದು ತಮ್ಮ ಪರಿಮಿತ ಜ್ಞಾನದ ಅಳತೆಯಿಂದ ನಿರ್ಧರಿಸಿಬಿಡುತ್ತಾರೆ. ಇದು ಸರಿಯಾದ ಕ್ರಮವಲ್ಲ. ಇದರಿಂದ ತತ್ತ್ವಪದ ಸಾಹಿತ್ಯ ಚರಿತ್ರೆಗೆ ಅಪಾರ ನಷ್ಟವು ಒದಗುತ್ತದೆಂಬ ಅರಿವು ಸಂಶೋಧಕರಿಗೆ ಇರಬೇಕಾದುದು ಅವಶ್ಯಕ. ಎಲ್ಲರೂ ಅವನನ್ನು 'ಹಾಡುಗಾರ'ನೆಂದು ಗುರುತಿಸುತ್ತಿರುವಾಗ ಆತನು ಕೆಲವು ಹಾಡುಗಳನ್ನು ರಚನೆ ಮಾಡಿದ್ದರೂ, ಅದನ್ನು ಬಹಿರಂಗವಾಗಿ ಹೇಳಿಕೊಳ್ಳಲು ಹಿಂಜರಿಯುತ್ತಾನೆ. ಜನಪದ ಪರಿಸರದಲ್ಲಿ ಬದುಕಿದ ಅವರಿಗೆ ಇನ್ನೊಂದೆಡೆಗೆ ಅಕ್ಷರ ಲೋಕದ ವಿದ್ವಾಂಸರ ಭಯವೂ ಕಾಡುತ್ತಲಿರುತ್ತದೆ. ಹೀಗಾಗಿ ಅಂಥವರ ಎದುರು ಅವರು "ತಾವು ಕವಿಗಳು" ಎಂದು ಹೇಳಿಕೊಳ್ಳದೆ; 'ಹಾಡುಗಾರರು' ಎಂದು ಹೇಳಿಕೊಂಡು ಪಾರಾಗಿ ಹೋಗುತ್ತಾರೆ. ತತ್ತ್ವಪದಗಳ ಹಾಡುಗಾರಿಕೆಯ ಕಲೆಯು ಹಲವಾರು ವ್ಯಕ್ತಿಗಳನ್ನು ತತ್ತ್ವಪದ ರಚನೆಗೆ ಪ್ರೇರಣೆ ಒದಗಿಸಿದೆಯೆಂಬುದರಲ್ಲಿ ಎರಡು ಮಾತಿಲ್ಲ. ಅನುಭಾವಿಗಳ ಸಂಗದ ಫಲವು ಅದಕ್ಕೆ ಇನ್ನೊಂದು ಒತ್ತಾಸೆ.

ಆಶುಕವಿಗಳಾದ ತತ್ತ್ವಪದಕಾರರು ಹಳೆಯದನ್ನೇ ಹಾಡುವುದಿಲ್ಲ; ಹಾಡಿದ್ದನ್ನೇ ಹಾಡುವುದಿಲ್ಲ. ಅವರ ಹಾಡುಗಳು ಆಧ್ಯಾತ್ಮಿಕ ಹಿನ್ನೆಲೆ ಹೊಂದಿರುವಂತೆ ಸಂದರ್ಭಸ್ಫೂರ್ತವೂ ಆಗಿರುತ್ತವೆ. ಹೀಗಾಗಿ ಅವು ಹೊಸ ಹೊಸ ವಿಷಯ ಸನ್ನಿವೇಶಗಳನ್ನು ಒಳಗೊಂಡೇ ಮೂಡಿಬರುತ್ತವೆ. ಆಯಾ ಸಂದರ್ಭದ ರೀತಿ-ನೀತಿಗಳನ್ನು ತತ್ತ್ವಪದಕಾರರು ಸಮಾಜಕ್ಕೆ ಅರುಹದೆ ಇರಲಾರರು. ಅವರು

ಎಲ್ಲವೂ ಅಷ್ಟೆ; ಎಲ್ಲರೂ ಅಷ್ಟೆ. ಅವರು ಎಲ್ಲವನ್ನೂ ತಮ್ಮ ಸಾಧನೆಗೆ 'ಬೋಧೆ'ವೆಂದು ಭಾವಿಸುತ್ತಾರೆ. ಆದುದರಿಂದ ತತ್ತ್ವಪದಕಾರರ ಹಾದಿಯೆಂದರೆ "ಬೋಧಪಥ"ವೆಂದು ಹೇಳಬಹುದು.

ತತ್ತ್ವಪದಕಾರರು 'ಗುರು'ವಿಗೆ ಮಹತ್ವದ ಸ್ಥಾನ ನೀಡುತ್ತಾರೆ. ಗುರು ಮುಖೇನ ಅವರು ತತ್ತ್ವಪದ ರಚನೆಯ ರಹಸ್ಯವನ್ನು ತಿಳಿದುಕೊಳ್ಳುತ್ತಾರೆ. ಹೀಗೆ ಗುರುವಿನ ಮೂಲಕ ಹಾಡಿನ ರಚನೆ ಕಲಿತ ಗುರುಪುತ್ರರಾದ ತತ್ತ್ವಪದಕಾರರು ಗುರುವಿನ ಹೆಸರನ್ನೇ ತಮ್ಮ ಹಾಡುಗಳಿಗೆ ಅಂಕಿತವಾಗಿಟ್ಟುಕೊಳ್ಳುತ್ತಾರೆ. ಗುರು ಇಲ್ಲದೆ; ಸ್ವಯಂ ಗುರುವಾಗಿ ನಿಂತು ಹಾಡುಗಳನ್ನು ರಚಿಸುವವರ ಸಂಖ್ಯೆ ಕಡಿಮೆ. ಅಂಥವರಿಗೆ ಅವರಲ್ಲಿನ ಅರಿವೆ ಗುರುವಾಗಿ ಬೋಧೆ ನೀಡುತ್ತದೆಂದು ತಿಳಿಯಬೇಕು. ಗುರುವಿನ ಆಯ್ಕೆಯಲ್ಲೂ ಅವರಿಗೆ ತರತಮದ ಭಾವನೆಯಿಲ್ಲ. ಮೇಲಿನವನು ಕೆಳಜಾತಿಯಲ್ಲಿರುವ ವ್ಯಕ್ತಿಯನ್ನು ಗುರುವಾಗಿ ಹೊಂದಬಲ್ಲನು. ಮೇಲಿನವರಲ್ಲಿನ ವ್ಯಕ್ತಿಯು ಗುರುವಾಗಿ ನಿಂತು ಕೆಳಗಿನ ಸ್ತರದಲ್ಲಿರುವ ಹಾಡುಗಾರನ ಎಲ್ಲ ನಿಲುವುಗಳಲ್ಲಿಯೂ ಎತ್ತಿಹಿಡಿದು ಉದ್ಧರಿಸಬಲ್ಲನು. ಹಿಂದೂವಿಗೆ ಮುಸ್ಲೀಮ ಗುರುವಾಗಬಲ್ಲನು; ಮುಸ್ಲೀಮನಿಗೆ ಹಿಂದೂ ಗುರುವಾಗಬಲ್ಲನು. ತತ್ತ್ವಪದಕಾರರ ಗ್ರಹಿಕೆ–ಮಂಡನೆ–ಪರಿಭಾವನೆ–ಕಲ್ಪನೆ ಇಂತಹವುಗಳೆಲ್ಲ ಗುರುತ್ವದ ಅಧಿನಿಯಂತ್ರಣಕ್ಕೆ ಒಳಪಟ್ಟಂತೆ ಕಾಣುತ್ತದೆ. ಆಸ್ತಿಕಮನದ ಜನಪದರಿಗೆ ಇದು ರಕ್ತಗತವಾದ ಗುಣವೆ ಆಗಿದೆ. ತತ್ತ್ವಪದಕಾರರಲ್ಲಿ ಹೆಚ್ಚಿನವರು ಶುದ್ಧ ಜಾನಪದ ಸಂಸ್ಕೃತಿಯ ಒಡಲಿನಿಂದ ಹುಟ್ಟಿದ ಮಕ್ಕಳೆಂಬುದನ್ನು ಮರೆಯುವಂತಿಲ್ಲ.

ತತ್ತ್ವಪದಗಳಲ್ಲಿ ಹಲವಾರು ಪ್ರತಿಮೆ–ಪ್ರತೀಕ–ಸಂಕೇತಗಳು ಎದುರಾಗುತ್ತವೆ. ಹೀಗೆಂದ ಮಾತ್ರಕ್ಕೆ ಅವು ಅತ್ಯಂತ ಕ್ಲಿಷ್ಟವಾದವುಗಳೆಂದು ಭಾವಿಸುವ ಹಾಗಿಲ್ಲ. ಜನಸಾಮಾನ್ಯರಿಗೆ ಸರಿಯಾಗಿ ಅರ್ಥಮಾಡಿ ಕೊಡಲೆಂದೇ ಅಂತಹ ಸಂಕೇತಾದಿಗಳನ್ನು ತತ್ತ್ವಪದಕಾರರು ಬಳಕೆ ಮಾಡುತ್ತಾರೆ. ಅವರಲ್ಲಿ ಬರುವ ಸಂಕೇತಗಳು ಅತ್ಯಂತ ಸ್ಥಳೀಯವಾದವುಗಳಾಗಿರುತ್ತವೆ. ದೈನಂದಿನ ಬದುಕಿನಲ್ಲಿ ಎಲ್ಲರಿಗೂ ಪರಿಚಿತವಿರುವ ಮಾದರಿಗಳನ್ನೇ ಅವರು ತಮ್ಮ ಹಾಡುಗಳಲ್ಲಿ ವಿವರಿಸುತ್ತಾರೆ. ಜಾತ್ರೆ, ಥೇರು, ಪಲ್ಲಕ್ಕಿ, ನಾಯಿ, ಚೇಳು, ಹುಲಿ, ಹಾವು ಇಂತಹ ಹಲವಾರು ಪ್ರತಿಮಾತ್ಮಕ ಶಬ್ದಗಳನ್ನು ಉಲ್ಲೇಖಿಸುತ್ತ ಹೋಗಬಹುದಾಗಿದೆ. ತಮ್ಮ ಪರಿಸರದಲ್ಲಿನ ವಸ್ತುಗಳನ್ನು ರೂಪಕವಾಗಿ ಉಪಯೋಗಿಸುವುದರಿಂದ ಪರಂಪರಾಗತವಾಗಿ ಬಂದಿರುವ ರೂಪಕ–ಪ್ರತೀಕಗಳು ಬದಿಗೆ ಸರಿಯುತ್ತವೆ. ಉದ್ದೇಶಪೂರ್ವಕವಾಗಿ ಅವುಗಳನ್ನು ತ್ಯಜಿಸಲೇಬೇಕೆಂಬ ಹಠವೇನೂ ತತ್ತ್ವಪದಕಾರರಲ್ಲಿ ಇರಲಾರದು. ಆದರೆ ಸಮಕಾಲೀನ ಸಂದರ್ಭವು ಎಷ್ಟೋ ಸಲ ಅಂತಹ ಪ್ರೇರಣೆಯನ್ನು ತತ್ತ್ವಪದಕಾರರಿಗೆ ದೊರಕಿಸಿಕೊಡುವುದುಂಟು.

ಕಳೆದುಕೊಳ್ಳದಿರಬೇಕೆಂಬ ಭಾವನೆ ಈ ಪದದ ಹಿಂದಿದೆ. ಅದನ್ನು ಸ್ವೀಕರಿಸುವ ಇರಾದೆಯೂ ಅಲ್ಲಿ ಕಾಣಿಸುವುದಿಲ್ಲ, 'ಬಾಜಾರ' ಆಕರ್ಷಕವಾಗಿದೆ. ಅದನ್ನು ಸುತ್ತಾಡಿ ನೋಡಲು ಈ ತತ್ತ್ವಪದ ಹೇಳಿದರೂ ಅವಧಾನದಿಂದಿರಬೇಕೆಂಬ ಎಚ್ಚರಿಕೆಯೂ ಅಲ್ಲಿದೆ. ಅಲ್ಲದೆ ಅದರಿಂದ ನಾವು ನಮ್ಮದನ್ನು ಮತ್ತು ನಮ್ಮತನವನ್ನು ಕಳೆದುಕೊಳ್ಳಬಹುದೆಂಬ ಭಯ–ಆತಂಕವೂ ಕಾಣಿಸಿಕೊಳ್ಳುತ್ತದೆ. 'ಕಳಕೋ ಬ್ಯಾಡ ನಿನ್ನ ಘೊಂಗಡಿ' 'ಜತನ ಮಾಡಿಕೋ ಚೀಲಾ ಚುಂಗಡಿ' ಮುಂತಾದ ಮಾತುಗಳು ಇದನ್ನು ಸೂಚಿಸುತ್ತವೆ. ಮುಂಬಯಿಯಂಥ ನಗರಿಗಳು ವಸಹಾತು ಶಾಹಿಯ ಪರಿಣಾಮ. ಅದರ ಆಕರ್ಷಣೆಗೆ ದೇಶೀಯರು ಆಕರ್ಷಿತರಾಗುತ್ತಾರೆ ಎಂಬುದನ್ನು 'ಮಾಯಾದ ಮುಂಬಯಿ ಬಜಾರ' ಎಂಬುದು ಸೂಚಿಸುತ್ತದೆ. ನಮ್ಮದೆಲ್ಲ ಇಂಥಾ ನಗರಗಳಲ್ಲಿ ಕಳೆದು ಹೋಗಿ ಬಿಡಬಹುದೆಂಬ–ಆತಂಕ ಭಯ ಈ ಪದದ ಹಿಂದಿರುವಂತಿದೆ. 'ದೇಸೀ'ಯನ್ನು 'ಜತನ'ವಾಗಿಟ್ಟುಕೊಳ್ಳುವ ಪ್ರಯತ್ನವೂ ಕೂಡ ವಸಹಾತ ಶಾಹಿಯನ್ನು ಎದುರಿಸುವ ಒಂದು ವಿಧಾನ. ೨೦ನೇ ಶತಮಾನದಲ್ಲೂ ಅದರ ಹಿಂದಿನ ಶತಮಾನಗಳ ತತ್ತ್ವಪದಗಳ ಪರಂಪರೆ ಮುಂದುವರೆದಿದೆ ಎಂಬುದನ್ನು ಸೂಚಿಸಲು ಮೇಲಿನ ವಿವರಣೆ ಕೊಡಲಾಗಿದೆ." (ತತ್ತ್ವಪದಕಾರರು ಮತ್ತು ವಸಾಹತ ಶಾಹಿ ವ್ಯವಸ್ಥೆ, ಪುಟ–೪೮).

ಈ ಮೇಲಿನ ವಿವರಣೆಯು ತತ್ತ್ವಪದಗಳ ಅಧ್ಯಯನದ ಹೊಸ ದೃಷ್ಟಿಕೋನಕ್ಕೆ ಸಾಧಕವೆನಿಸುತ್ತದೆ. ಹೀಗೆ ತತ್ತ್ವಪದಗಳನ್ನು ಇಂದಿನ ಕಾಲದಲ್ಲಿ ವಿಶ್ಲೇಷಣೆ–ವಿಮರ್ಶೆಯ ದೃಷ್ಟಿಯಿಂದ ಅಧ್ಯಯನ ಮಾಡುವುದು ಅವಶ್ಯಕವಾಗಿದೆ. ಜಾಗತೀಕರಣದ ಸಂದರ್ಭದಲ್ಲಿ ಈ ಸಾಹಿತ್ಯವು ತನ್ನ ಪ್ರತಿರೋಧವನ್ನು ಒಡ್ಡುವ ಕ್ರಿಯೆ ಕಾಣಬಹುದು. ಅಧ್ಯಯನದ ಹರವು ಬೆಳೆದಂತೆ ಇಂತಹ ಹಲವು ಹತ್ತು ಸತ್ಯಗಳು ತತ್ತ್ವಪದ ಸಾಹಿತ್ಯದ ಒಡಲಿನಲ್ಲಿಯೇ ಗೋಚರಿಸಲು ಆರಂಭವಾಗುತ್ತವೆ.

'ಅಂಕಿತ'ದ ಬಳಕೆಯು ತತ್ತ್ವಪದ ಸ್ವರೂಪದ ಪ್ರಧಾನ ಅಂಶವೇ ಆಗಿ ಕಾಣುತ್ತದೆ. ಎಲ್ಲೋ ಕ್ವಚಿತ್ತಾಗಿ ಕೆಲವು ಕವಿಗಳು ಅಂಕಿತವಿಲ್ಲದೆ ತತ್ತ್ವಪದವೆಂಬ ಹೆಸರಿನಲ್ಲಿ ಹಾಡುಗಳನ್ನು ರಚಿಸಿದ ಉದಾಹರಣೆಗಳು ಲಭ್ಯವಾಗುತ್ತವೆ. ಆದರೆ ಬಹುಸಂಖ್ಯಾತ ತತ್ತ್ವಪದಗಳಿಗೆಲ್ಲ ಕೊನೆಯಲ್ಲಿ ಅಂಕಿತವು ಇದ್ದೇ ಇರುತ್ತದೆ. 'ಅಂಕಿತ'ವು ಬಹುಮುಖಿಯಾದುದು. ಅದರಲ್ಲಿ ತತ್ತ್ವಪದಕಾರರು ತಮ್ಮ ಗುರುಭಕ್ತಿ, ದೈವೀ ಭಕ್ತಿ, ದೇಶಭಕ್ತಿ, ಜನ್ಮಸ್ಥಳದ ಭಕ್ತಿ ಇಂತಹವೆಲ್ಲ ವ್ಯಕ್ತಗೊಳಿಸುತ್ತಾರೆ. ತಮ್ಮ ಹೆಸರನ್ನೇ ಅಂಕಿತವಾಗಿ ಬಳಕೆ ಮಾಡುವ ತತ್ತ್ವಪದಕಾರರು ತಮ್ಮ ಅಸ್ಮಿತೆಯನ್ನು ಕಾಣಿಸುತ್ತಾರೆಂದು ಹೇಳಬಹುದು.

ಪ್ರಾಚೀನ ತತ್ತ್ವಪದಕಾರರ ಪರಂಪರೆ ಹೆಚ್ಚು ಆಧ್ಯಾತ್ಮ ನಿಷ್ಠವಾಗಿರುವುದು ಕಂಡುಬರುತ್ತದೆ. ಆದರೆ ಆಧುನಿಕ ತತ್ತ್ವಪದಕಾರರಿಗೆ ಸಂಬಂಧಪಟ್ಟಂತೆ ಈ

ಪ್ರಯೋಗ ಕಂಡುಬರುತ್ತದೆ. ಯಾರು ಗವಠಿಯಲ್ಲಿ ಓದಿರುವರೋ ಅವರ ಭಾಷೆಯು ಜಾನಪದ ಸತ್ವದಿಂದ ಕೂಡಿದ್ದು, ಆಡು ನುಡಿಯ ಬೆಡಗಿನಿಂದ ಮೋಡಿ ಮಾಡುತ್ತದೆ. ನಿರಕ್ಷರಿಗಳ ಭಾಷಾ ಪ್ರಯೋಗವೂ ಅತ್ಯಂತ ಶಕ್ತಿಶಾಲಿಯಾದುದೇ ಆಗಿದೆ. ಜನರಾಡುವ ನಾಲಗೆಯ ನುಡಿಯನ್ನೇ ತಮ್ಮ ಹಾಡಿಗೆ ಅಭಿವ್ಯಕ್ತಿಯ ಹಾದಿಯಾಗಿಸಿಕೊಂಡ ಇವರು ಅತ್ಯಂತ ಸ್ವಚ್ಛಂದ ರೀತಿಯಲ್ಲಿ ಹಾಡುಗಳನ್ನು ಕಟ್ಟಿಕೊಂಡು ಹೋಗಿದ್ದಾರೆ. ತಾವು ಕಟ್ಟಿದ ಹಾಡನ್ನು ಸ್ಮರಣೆಯ ಶಕ್ತಿಯಿಂದ ರಕ್ಷಿಸಿಕೊಂಡಿದ್ದು, ಬರಹ ಬಲ್ಲವರಿಂದ ಬರೆಯಿಸಿದ್ದಾರೆ. ಇಲ್ಲವೆ ಮೌಖಿಕ ಪರಂಪರೆಯಿಂದಲೇ ಅದನ್ನು ತಲೆಯಿಂದ ತಲೆಗೆ ಪ್ರಸಾರಗೊಳ್ಳುತ್ತ ಹೋಗುವಂತೆ ಮಾಡಿದ್ದಾರೆ. ನಿರಕ್ಷರ ಲೋಕದ ತತ್ತ್ವಪದಗಳು ಅಕ್ಷರ ಲೋಕವನ್ನು ನಿಜಕ್ಕೂ ತಲೆದೂಗುವಂತೆ ಮಾಡುತ್ತವೆ; ಮಾಡಿವೆ.

ತತ್ತ್ವಪದಕಾರರು ತಮ್ಮ ಹಾಡಿನ ಕೃಷಿಯಿಂದ ಸಾಮಾಜಿಕ ಜೀವನದಲ್ಲಿ ಸಾಮರಸ್ಯವನ್ನು ತರಲು ಪ್ರಯತ್ನಿಸಿದಂತೆ, ಅವರು ತಮ್ಮ ವೈಯಕ್ತಿಕ ಬದುಕಿನಲ್ಲೂ ಸಮರಸ ಭಾವದಿಂದಲೇ ಬದುಕಿದ್ದಾರೆ. ಅವರು ಸಾಧಿಸಿದ ಸಮರಸ ಭಾವದ ಸಿದ್ಧಿಯು ಕುಟುಂಬ ಜೀವನದಿಂದಲೇ ಮೊದಲಾಗಿದೆ. ಸತಿ–ಪತಿಗಳು ಒಂದಾಗಿ ನಿರ್ವಹಿಸುವ ಅವರ ಬದುಕು ನಿರಾಭರಣ ಸುಂದರ ಮತ್ತು ಸಂತೃಪ್ತಿಯ ಬದುಕಾಗಿ ಕಾಣುತ್ತದೆ. ಪತಿಯು ಹಾಡುಕಟ್ಟಿ ಹಾಡುತ್ತಾನೆ. ಅದನ್ನು ಸತಿಯಾದವಳು ಅನುಕರಿಸುತ್ತಾಳೆ. ಒಂದೊಂದು ಸಲ ಪತಿಯು ಹಾಡುವಾಗ ತಪ್ಪಿದಲ್ಲಿ ಅಥವಾ ನುಡಿಗಳು ಹಿಂದೆ ಮುಂದೆ ಆದಾಗ, ಥಟ್ಟನೆ ಹೆಂಡತಿಯಾದವಳು ಅದನ್ನು ಸರಿಪಡಿಸಿ ಹಾಡುತ್ತಾಳೆ. ಒಂದಾಗಿ ಬದುಕುತ್ತ; ಅದರ ನಿರ್ವಹಣೆಗೆ ಒಂದಾಗಿ ದುಡಿಯುತ್ತ; ಬಾಳಿನ ಕಹಿ–ಸಿಹಿಗಳನ್ನು ಒಂದಾಗಿಯೇ ಅನುಭವಿಸುತ್ತಲಿರುವ ತತ್ತ್ವಪದಕಾರ ದಂಪತಿಗಳು ಸಾಹಿತ್ಯ ರಚನೆಯಲ್ಲೂ ತಮ್ಮ ಏಕತೆಯನ್ನು ಕಾಣಿಸುತ್ತಾರೆ. ಆದುದರಿಂದ ತತ್ತ್ವಪದಕಾರರ ಬದುಕೆಂದರೆ ಭೌತಿಕ ಸತಿ ಮತ್ತು ಮೋಕ್ಷದ ಸತಿ ಉಭಯರ ಸಂಗಮದ ನೆಲೆಯೆನ್ನಬೇಕು. ಎಷ್ಟೋ ಸಲ ಪತಿಯಾದವನು ತತ್ತ್ವಪದಗಳನ್ನು ಹಾಡಲೆಂದು; ಭಜನೆಯ ಕಾರ್ಯಕ್ರಮ ನಡೆಯಿಸಿಕೊಡಲೆಂದು ಬೇರೆ–ಬೇರೆ ಸ್ಥಳಗಳಿಗೆ ಹೋಗುವುದು ಅನಿವಾರ್ಯವೇ ಆಗುತ್ತದೆ. ತಿರುಗಾಟ ಅಥವಾ ಸ್ಥಳದಿಂದ ಸ್ಥಳಕ್ಕೆ ಸಂಚಾರ ಮಾಡುವುದು ತತ್ತ್ವಪದಕಾರರ ಬದುಕಿನ ಒಂದು ಅನಿವಾರ್ಯ ಭಾಗದಂತೆಯೇ ಇದೆ. ಇಂತಹ ಸಂದರ್ಭದಲ್ಲಿ ಹೆಂಡತಿಯಾದವಳು ಮನೆಯ ವ್ಯವಸ್ಥೆಯನ್ನು ನೋಡಿಕೊಳ್ಳುತ್ತಾಳೆ. ಮಕ್ಕಳನ್ನು ಸಾಕುತ್ತಾಳೆ. ಮನೆಯಲ್ಲಿರುವ ಇತರ ಸದಸ್ಯರ ಬೇಕು–ಬೇಡಗಳನ್ನು ಅನುಲಕ್ಷಿಸಿ, ಒಟ್ಟು ಕುಟುಂಬವನ್ನು ಸರಿಯಾಗಿ ನಡೆಯಿಸುವ ಜವಾಬ್ದಾರಿ

ರಾಷ್ಟ್ರಕೂಟರು, ಕಲ್ಯಾಣಿ ಚಾಲುಕ್ಯರು, ಕಳಚುರಿಯರು, ಕಾಕತಿಯರು, ಯಾದವರು ಮುಂತಾದ ಹಿಂದೂ ಅರಸು ಮನೆತನಗಳ ಆಳ್ವಿಕೆಯೊಂದಿಗೆ ಮುಸ್ಲೀಮರ ಆಡಳಿತದ ಪದ್ಧತಿಯನ್ನು ಈ ಸ್ಥಳವು ಕಂಡಿದೆ.

ಬೌದ್ಧ, ಜೈನ, ವೈಷ್ಣವ, ಶೈವ, ವೀರಶೈವಾದಿ ಧರ್ಮಗಳ ಆಡುಂಬೊಲವಾಗಿಯೂ ಬೀದರ ಜಿಲ್ಲೆ ನಿಂತುಕೊಂಡಿದೆ. ತನ್ನ ನೆಲೆಯದ್ದೇ ಆದ ಕಲ್ಯಾಣದ ಮೂಲಕ ಪ್ರಪಂಚವು ಹಿಂದೆಂದೂ ಕಂಡರಿಯದ ಕ್ರಾಂತಿಯನ್ನು ಘಟಿಸಿದುದು ಅದರ ಹೆಗ್ಗಳಿಕೆಗೆ ಸಾಕ್ಷಿಯಾಗಿದೆ.

ಹಿಂದೂ–ಮುಸ್ಲೀಮ ವಾಸ್ತು ಶಿಲ್ಪಗಳ ಸಮನ್ವಯತೆಯೂ ಈ ಜಿಲ್ಲೆಯ ಶಿಲ್ಪಕಲೆಯ ಮುಖ್ಯ ಗುಣವಾಗಿದೆ. ಚಿದ್ರಿಕಲೆ, ಬಿದರಿ ಕಲೆಗಳು ಬೀದರನ್ನು ವಿಶ್ವಕಲೆಯ ಭೂಪಟದಲ್ಲಿ ನಿಲ್ಲುವಂತೆ ಮಾಡಿವೆ.

ಹಿಂದೂ–ಮುಸ್ಲೀಮ ಭಾವೈಕ್ಯದ ಸ್ಥಳವಾಗಿರುವ ಬೀದರ ಜಿಲ್ಲೆಯು ತತ್ತ್ವಪದ ಸಾಹಿತ್ಯ ಪರಂಪರೆಯಲ್ಲಿಯೂ ಅದರ ಸತ್ವವನ್ನು ಅಳವಡಿಸಿಕೊಂಡಿದೆ. ಬೀದರ ಜಿಲ್ಲೆಯ ತತ್ತ್ವಪದಕಾರರಲ್ಲಿ ಹಲವಾರು ಜಾತಿ–ಮತ–ಪಂಥ–ಪಂಗಡಗಳ ತತ್ತ್ವಪದಕಾರರಿರುವಂತೆ, ಹಲವು ವೃತ್ತಿ ಮೂಲದವರೂ ಆಗಿದ್ದಾರೆ. ಬೀದರ ಜಿಲ್ಲೆಯ ತತ್ತ್ವಪದಕಾರರ ಅಧ್ಯಯನವೆಂದರೆ ಒಂದು ಅರ್ಥದಲ್ಲಿ 'ವೈವಿಧ್ಯತೆಯಲ್ಲಿ ಏಕತೆ'ಯ ಅಧ್ಯಯನವೇ ಆಗಿದೆ.

ಬೀದರ ಜಿಲ್ಲೆಯ ತತ್ತ್ವಪದಕಾರರನ್ನು ಕುರಿತು ಈ ಮೊದಲಿಗೆ ಹಲವಾರು ವಿದ್ವಾಂಸರು ತಮ್ಮ ತಮ್ಮ ಪರಿಮಿತ ನೆಲೆಯಲ್ಲಿ ಕಾರ್ಯ ಮಾಡಿರುವುದುಂಟು. ದೇಶಾಂಶ ಹುಡಗಿ, ಡಾ.ಬಸವರಾಜ ಸಬರದ, ಡಾ. ಗುರುಲಿಂಗಪ್ಪ ಧಬಾಲೆ, ಡಾ. ಐಶ್ವರ್ಯ, ಶ್ರೀ ಕಾಶಿನಾಥರೆಡ್ಡಿ, ಡಾ.ಮಾಣಿಕರಾವ ಧನಾಶ್ರೀ ಮುಂತಾದವರನ್ನು ಈ ಸಂದರ್ಭದಲ್ಲಿ ಹೆಸರಿಸಲೇಬೇಕಾಗುತ್ತದೆ. ಡಾ.ಗುರುಲಿಂಗಪ್ಪ ದಭಾಲೆ ಅವರು "ಬೀದರ ಜಿಲ್ಲೆಯ ಅನುಭಾವ ಕವಿಗಳು" ಎಂಬ ವಿಷಯವನ್ನು ಇಟ್ಟುಕೊಂಡು ಪಿಎಚ್.ಡಿ. ಅಧ್ಯಯನ ಕೈಗೊಂಡು ಬೀದರ ಜಿಲ್ಲೆಯ ತತ್ತ್ವಪದ ಸಾಹಿತ್ಯ ಪರಂಪರೆಯ ಮೇಲೆ ಬೆಳಕು ಚೆಲ್ಲುವ ಕಾರ್ಯ ಮಾಡಿದಂತೆ, ಡಾ. ಐಶ್ವರ್ಯ ಅವರು "ಬೀದರ ಜಿಲ್ಲೆಯ ದಲಿತ ತತ್ತ್ವಪದಕಾರ"ರನ್ನು ಕುರಿತು ಪಿಎಚ್.ಡಿ. ಅಧ್ಯಯನ ಕೈಗೊಂಡು ಅಜ್ಞಾತವಾಗಿದ್ದ ಕೆಳವರ್ಗದ ಅನುಭಾವಿ ಕವಿಗಳನ್ನು ಹೊರಗೆ ಹಾಕಿದ್ದಾರೆ. ಉಳಿದ ಹಲ–ಕೆಲವು ವಿದ್ವಾಂಸರು ಕವಿಗಳ ತತ್ತ್ವಪದಗಳ ಸಂಪಾದನ ಕಾರ್ಯ ಕೈಗೊಂಡಿದ್ದಾರೆ. ಇವೆಲ್ಲ ಪ್ರಯತ್ನಗಳು ನಮ್ಮ ಯೋಜನೆಯ ಸಂದರ್ಭದಲ್ಲಿ ಮಹತ್ವದ ಸುಳುಹುಗಳಾಗಿ ನಿಂತುಕೊಂಡಿರುವುದು ಸತ್ಯ.

ಸಮಾಜವನ್ನು 'ಶಿವ ಸಮಾಜ'ವಾಗಿಸುವತ್ತ ಹೊರಟವರೆ. ಅದರ ಓರೆ–ಕೋರೆಗಳನ್ನು ಸರಿಪಡಿಸುವ ಕಳಕಳಿಯ ಆವೇಶದಲ್ಲಿ ನೀತಿಯ ವಿವರಗಳು ಹಾಡಾಗಿ ಮೂಡಿ ಬರುತ್ತವೆ. ಹೀಗಾಗಿ ಪ್ರಚಲಿತ ವಿದ್ಯಮಾನಗಳೂ ಅಲ್ಲಿ ಕಾಣುವಂತಾಗುತ್ತವೆ. ವಿಡಂಬನೆಯ ಮೂಲಕವೂ ಅವರು ತಿಳಿಕೆಯನ್ನು ನೀಡುವಲ್ಲಿ ಹಿಂದೆ–ಮುಂದೆ ನೋಡಲಾರರು. ಅವರಿಗೆ ಯಾರ ಮುಲಾಜೂ ಇಲ್ಲ. ನಿರ್ಭಿಡೆಯಿಂದ ಮಾತನಾಡುವ ಧೀರರು ಅವರು. ಅವರ ಧೀರ ನಡೆಯ ಅಭಿವ್ಯಕ್ತಿಯಿಂದಾಗಿ ಒಮ್ಮೊಮ್ಮೆ ತತ್ತ್ವಪದಗಳು ಕಠೋರವೂ ಎನಿಸುತ್ತವೆ.

ತತ್ತ್ವಪದಗಳು ಅನುಭವ–ಅನುಭಾವಗಳೆರಡರ ಸಮನ್ವಯದ ಧ್ವನಿಗಳು. ವೀರಶೈವದ ನೆಲೆಯಲ್ಲಿ ಅನುಭವ–ಅನುಭಾವದ ತಾರತಮ್ಯವಿಲ್ಲ. ಆದರೆ ವೀರಶೈವೇತರ ಪರಿಧಿಯಲ್ಲಿ ನಿಂತು ವಿಚಾರ ಮಾಡುವಾಗ ಈ ಭೇದವು ಕಾಣುವಂತಾಗುತ್ತದೆ. ಭೌತಿಕ ಬದುಕಿನಿಂದ ಬಂದುದು ಅನುಭವವೆಂತಲೂ; ಆತ್ಮಜ್ಞಾನವೇ 'ಅನುಭಾವ'ವೆಂತಲೂ ಅಲ್ಲಿ ಹೇಳಲಾಗುತ್ತದೆ. ವೀರಶೈವರು ಭೌತಿಕ ಬದುಕಿನ ರಂಗವನ್ನು ಆತ್ಮ ಸಾಧನೆಗೆ ಕಮ್ಮಟವೆಂದು ತಿಳಿದುಕೊಂಡರು. ಪ್ರಪಂಚದಲ್ಲಿಯೇ ಪಾರಮಾರ್ಥದ ಸಿದ್ಧಿಯನ್ನು ಹೊಂದುವುದು ಅವರ ಸಿದ್ಧಾಂತದ ರೀತಿಯಾಗಿದೆ. ಜಗತ್ತಿನ ಜ್ಞಾನವು ಅನುಭವವಾಗಿ; ಬ್ರಹ್ಮದ ಜ್ಞಾನವು ಅನುಭಾವವಾಗಿ, ಒಂದನ್ನೊಂದು ಸಂಧಿಸದೆ ವೀರಶೈವತ್ವದಲ್ಲಿ ಉಳಿಯಲಾರವು. ಎಲ್ಲಿ ಜಗತ್ತು ಮಿಥ್ಯವೆನಿಸಿ, ಬ್ರಹ್ಮವೊಂದೇ ಸತ್ಯವಾಗಿರುತ್ತದೆಯೋ ಅಂಥಲ್ಲಿ ಈ ತಾರತಮ್ಯವು ವಿಹಿತವಾದುದೆನಿಸುತ್ತದೆ. ವೀರಶೈವರಿಗೆ ಜಗತ್ತು ಸತ್ಯವಾಗಿರುವಂತೆ; ಬ್ರಹ್ಮವೂ ಸತ್ಯವೆ. ಹೀಗಾಗಿ ಅನುಭವವೂ ಗ್ರಾಹ್ಯವೆ; ಅನುಭಾವವೂ ಗ್ರಾಹ್ಯವೆ. ಅವರಿಗೆ ಅನುಭವದ ವಿಕಾಸೀಕರಣದ ಹಂತವೇ ಅನುಭಾವ ಸ್ಥಲ. ಈ ಕ್ರಿಯಾಚರಣೆಯನ್ನೇ ತತ್ತ್ವಪದಕಾರರು ತಮ್ಮ ಹಾಡುಗಳಲ್ಲಿ ಹಲವು ಹಂತಗಳಲ್ಲಿ ನಿವೇದಿಸಿರುವುದುಂಟು.

ತತ್ತ್ವಪದಗಳು ಇಂದು ಆಧುನಿಕ ವಿದ್ವಾಂಸರಿಗೆ ಹಲವಾರು ಒಳನೋಟಗಳನ್ನು ಕಾಣುವಂತೆ ಮಾಡುತ್ತವೆಯೆಂಬುದಕ್ಕೆ ಈ ಉಲ್ಲೇಖವು ನಿದರ್ಶನವಾಗಿ ಗಮನಿಸಬೇಕು: "ಕೊಳ್ಳೂರು ಹುಸನಾ ಸಾಹೇಬರ (೧೯೦೦–೧೯೬೪) 'ಹಾಯ್ದು ನೋಡು ಹೈದ್ರಾಬಾದಿ ಅಂಗಡಿ" ವಸಾಹತುಶಾಹಿಯ ಸ್ವರೂಪ, ಅದರ ಕಾರ್ಯವೈಖರಿ, ಅದು ಪಲ್ಲಟಗೊಳಿಸುವ ರೀತಿ ಇತ್ಯಾದಿಗಳನ್ನು ತುಂಬಾ ಚೆನ್ನಾಗಿ ಮತ್ತು ಪರಿಣಾಮಕಾರಿಯಾಗಿ ಗ್ರಹಿಸಿದೆ. ಹಿಂದಿನ ಪದದ ಆಶಯಕ್ಕಿಂತ ಇದು ಭಿನ್ನ. ಹೈದರಾಬಾದಿನ ಅಂಗಡಿ. ಅಲ್ಲಿ ಬಿಕರಿಗಿರುವ ವಸ್ತುಗಳು ಹೊಸ ಕಾಲದವು. ಅದರ ಬಗ್ಗೆ ಆತಂಕ ಗಾಬರಿಯಿಲ್ಲದಿದ್ದರೂ ಅಲ್ಲಿ ಎಚ್ಚರ

ಮಾತು ನೂರಕ್ಕೆ ನೂರು ಸತ್ಯವೆಂದು ಹೇಳುವಂತಿಲ್ಲ. ಅವರಲ್ಲಿ ಹಲವಾರು ಕವಿಗಳು ಆಧ್ಯಾತ್ಮದ ಅನುಭವಿಲ್ಲದೆ ತತ್ತ್ವಪದಗಳ ಅನುಕರಣೆಯಿಂದ ಹಾಡುಗಳನ್ನು ಬರೆದಿರುವುದುಂಟು. ಬಸವಾದಿ ಶಿವಶರಣರಿಂದ ಆರಂಭಗೊಂಡ ವಚನ ವಾಙ್ಮಯವು ಆಧುನಿಕ ಕಾಲದಲ್ಲೂ ಮುಂದುವರೆದಿದೆಯಾದರೂ, ಇಂದು ವಚನ ರಚನೆ ಮಾಡುವವರೆಲ್ಲ ಬಸವಾದಿ ಶಿವಶರಣರಂತೆ ಅನುಭಾವಸತ್ವ, ಶರಣಶಕ್ತಿ ಹೊಂದಿದವರೆ ಆಗಿದ್ದಾರೆಂದು ಹೇಳುವುದಕ್ಕೆ ಸಾಧ್ಯವಿಲ್ಲ. ಇದರಂತೆಯೇ ಇಂದು ನಾವು ತತ್ತ್ವಪದ ಸಾಹಿತ್ಯದ ಪರಂಪರೆಯನ್ನು ಅನುಲಕ್ಷಿಸಿದರೆ ಸಾಕು.

ಎಲ್ಲಿ ಆಧ್ಯಾತ್ಮ ನೆಲೆವಿಡಿದು ತತ್ತ್ವಪದಗಳು ಮೂಡಿಬಂದಿವೆಯೋ ಅವು ನಿಜವಾಗಿಯೂ ಪರಿಣಾಮಕಾರಿಯಾಗಿವೆ. ಅಂತಹ ರಚಯಿತೃಗಳ ಇರುವಿಕೆಯು ಲೋಕ ವಿಲಕ್ಷಣವಾಗಿಯೂ ಕಂಡುಬರುತ್ತದೆ. ಅಸ್ತವ್ಯಸ್ತವಾಗಿ ಉಡುಗೆ-ತೊಡುಗೆ ಧರಿಸುವುದು, ಊರೂರು ಅಲೆದಾಡುವುದು, ಬೇಜವಾಬ್ದಾರಿಯಿಂದ ವರ್ತಿಸುವುದು, ಗಾಂಜಾ ಸೇದುವುದು, ಮದ್ಯಸೇವನೆ, ಹುಚ್ಚನಂತೆ ನಡೆದುಕೊಳ್ಳುವುದು, ಮೌನವಾಗಿರುವುದು, ಕೆಲವೊಮ್ಮೆ ಅವಶ್ಯಕತೆಗೆ ಮೀರಿ ಮಾತನಾಡುವುದು, ಧ್ಯಾನಮಗ್ನನಾಗಿ ತಾಸುಗಟ್ಟಲೇ ಕಣ್ಣು ಮುಚ್ಚಿ ಕುಳಿತು ಬಿಡುವುದು ಹೀಗೆ ಹಲವಾರು ವಿಚಿತ್ರ ಕ್ರಿಯೆಗಳು ಅವರಲ್ಲಿ ಕಂಡುಬರುತ್ತವೆ.

ಬೀದರ ಜಿಲ್ಲೆಯ ತತ್ತ್ವಪದ ಪರಂಪರೆಯು ಮೇಲಿನ ವಿವರಗಳಿಗೆ ಹೊರತಾಗಿ ನಿಲ್ಲುವುದಿಲ್ಲ. ಈ ಜಿಲ್ಲೆಯ ತತ್ತ್ವಪದ ಪರಂಪರೆಯು ಸುಮಾರು ಹದಿನೆಂಟನೆಯ ಶತಮಾನದಿಂದ ಆರಂಭಗೊಳ್ಳುತ್ತದೆ.

ಕನ್ನಡ ನಾಡಿನ ಹನ್ನೆರಡನೆಯ ಶತಮಾನದ ಶರಣರ ಚಳುವಳಿಯು ವಿಶ್ವ ಸಂಸ್ಕೃತಿಯ ದೃಷ್ಟಿಯಿಂದ ಅತ್ಯಂತ ಮಹತ್ವದ ಸಾಂಸ್ಕೃತಿಕ ಚಳುವಳಿಯೆಂದು ಒಪ್ಪಿಕೊಳ್ಳುವಾಗ ಅದಕ್ಕೆ ಆಶ್ರಯವಾದ ಬೀದರ ಸ್ಥಳದ ನೆನಪು ಬಾರದೆ ಇರುವುದಿಲ್ಲ. ಇಂದು ಜಿಲ್ಲಾ ಸ್ಥಳವಾಗಿರುವ ಬೀದರ ಜಿಲ್ಲೆ ಔರಾದ, ಹುಮನಾಬಾದ, ಬಸವಕಲ್ಯಾಣ, ಭಾಲ್ಕಿ ತಾಲ್ಲೂಕುಗಳನ್ನು ಒಳಗೊಂಡಿದೆ. ಬೀದರ ಒಂದು ತಾಲ್ಲೂಕಾ ಸ್ಥಳವಾಗಿ ಎಣಿಕೆ ಮಾಡುವಾಗ ಒಟ್ಟು ಜಿಲ್ಲೆ ಐದು ತಾಲ್ಲೂಕಾಗಳ ವ್ಯಾಪ್ತಿ ಹೊಂದುತ್ತದೆ. ಹಿತಕರವಾದ ಹವಾಗುಣವನ್ನು ಹೊಂದಿರುವ ಈ ಜಿಲ್ಲೆಯು ಸಂಸ್ಕೃತಿಯ ದೃಷ್ಟಿಯಿಂದಲೂ ಸಮೃದ್ಧವಾಗಿದೆ.

ಪುರಾಣ-ಇತಿಹಾಸದ ಆಕರಗಳು ಇದನ್ನು 'ವಿದುರಾನಗರ' 'ಕುಂತಳದೇಶ'ವೆಂದು ಕರೆದಿವೆ. ಬಹುಶಃ ವಿಶ್ವ ಪ್ರಸಿದ್ಧವಾದ ಬಿದರಿ ಕಲೆಗೆ ಇದು ಮಾತೃಕೆಯಾದುದರಿಂದ 'ಬೀದರ' ಎಂಬ ನಾಮ ಧಾರಣ ಮಾಡಿರಬೇಕು. ನಂದರು, ಮೌರ್ಯರು, ಶಾತವಾಹನರು, ವಾಕಟಕರು, ಬದಾಮಿ ಚಾಲುಕ್ಯರು,

೧೮. ಶಂಕರದಾಸ (ಕ್ರಿ.ಶ.ಸು. ೧೯೩೫) ೧೬೨

೧೯. ಮಸ್ತಾನಲಿ ಇಸ್ಮಾಯಿಲ್ ಸಾಹೇಬ ಮಚಕುರಿ(ಕ್ರಿ.ಶ.ಸು. ೧೯೩೬ –೧೯೯೬) ೧೬೯

೨೦. ಹಣಮಂತ ಮಹಾರಾಜ(ಕ್ರಿ.ಶ.ಸು. ೧೯೩೬) ೧೭೭

೨೧. ಪಂಚಾಕ್ಷರಿ ಸ್ವಾಮಿ (ಕ್ರಿ.ಶ.ಸು. ೧೯೩೮) ೧೮೫

೨೨. ಶಿವರಾಮ (ಕ್ರಿ.ಶ.ಸು. ೧೯೪೦) ೧೯೨

೨೩. ಚಂದ್ರಪ್ಪ ಬಾವಿಕಟ್ಟಿ (ಕ್ರಿ.ಶ.ಸು. ೧೯೪೫) ೧೯೮

೨೪. ದೇವಿಂದ್ರಪ್ಪ ಹಜನಾಳ (ಕ್ರಿ.ಶ.ಸು. ೧೯೪೬) ೨೦೫

೨೫. ಬಾಬುರಾವ ಜಾಧವ (ಕ್ರಿ.ಶ.ಸು. ೧೯೪೭) ೨೧೨

೨೬. ನೀಲಕಂಠ ಜ್ಯಾಂತಿ (ಕ್ರಿ.ಶ.ಸು. ೧೯೪೯) ೨೧೯

೨೭. ಪುಂಡಲಿಕ (ಕ್ರಿ.ಶ.ಸು. ೧೯೪೯) ೨೨೭

೨೮. ಮಾಣಿಕಪ್ಪ (ಕ್ರಿ.ಶ.ಸು. ೧೯೫೦) ೨೩೩

೨೯. ಮಲ್ಲಪ್ಪ ವಾಗ್ಮೊರೆ(ಕ್ರಿ.ಶ.ಸು. ೧೯೫೦) ೨೪೦

೩೦. ಆತ್ಮಾನಂದ ಪಾಂಡುರಂಗ (ಕ್ರಿ.ಶ.ಸು. ೧೯೫೪ –೨೦೧೦) ೨೪೮

ಹುಮನಾಬಾದ ತಾಲ್ಲೂಕ

೧. ಮಾಣಿಕ ಪ್ರಭು ಮಹಾರಾಜ (ಕ್ರಿ.ಶ.ಸು. ೧೮೧೭ –೧೮೬೫) ೨೫೮

೨. ಸಿದ್ಧಪ್ರಭು (ಕ್ರಿ.ಶ.ಸು. ೧೮೭೨ –೧೯೭೭) ೨೭೨

೩. ನನ್ನೆಸಾಬ (ಕ್ರಿ.ಶ.ಸು. ೧೮೭೪ –೧೯೮೫) ೨೮೮

೪. ಸಂತರಾಮ ಮಹಾರಾಜ (ಕ್ರಿ.ಶ.ಸು. ೧೮೮೦ –೧೯೬೮) ೨೬೪

೫. ತುಕಾರಾಮ ಉಪ್ಪಾರ (ಕ್ರಿ.ಶ.ಸು. ೧೮೮೪ –೧೯೪೯) ೨೯೮

೬. ಗುರುಪಾದಪ್ಪ ಶಿವರೆಡ್ಡಿ (ಕ್ರಿ.ಶ.ಸು. ೧೮೮೫ –೧೯೮೦) ೩೦೩

೭. ಹಣಮಂತರಾವ ಮಂಕಾಲ (ಕ್ರಿ.ಶ.ಸು. ೧೯೦೨ –೧೯೮೫) ೩೧೧

ಪ್ರಸ್ತುತ ಯೋಜನೆ "ಹೈದ್ರಾಬಾದ ಕನ್ನಡ ಪ್ರದೇಶದ ತತ್ತ್ವಪದಕಾರರ ಸ್ಮಾರಕಗಳ ಸಂಶೋಧನೆ ಮತ್ತು ಪ್ರಕಟಣೆ" ಎಂಬುದಾಗಿದೆ. ಈ ಯೋಜನೆಯ ಭಾಗ ಎರಡರಲ್ಲಿ ನಾನು ಬೀದರ ಮತ್ತು ಕೊಪ್ಪಳ ಜಿಲ್ಲೆಯ ತತ್ತ್ವಪದಕಾರರ ಸ್ಮಾರಕಗಳ ಸಂಶೋಧನೆ ಕೈಗೊಂಡಿದ್ದೇನೆ. ಬೀದರ ಜಿಲ್ಲೆಗೆ ಸಂಬಂಧಿಸಿದಂತೆ ಸಿದ್ಧಗೊಂಡಿರುವ ಮೂರು ಸಂಪುಟಗಳು ಇಂದು ನಿಮ್ಮ ಕೈಯಲ್ಲಿವೆ.

ಈ ಸಂಪುಟಗಳಲ್ಲಿ ಬರುವ ತತ್ತ್ವಪದಕಾರರು ನಿಮ್ಮೊಂದಿಗೆ ತಮ್ಮ ಸ್ಮಾರಕಗಳ ಮೂಲಕವೆ ಸಂವಾದಕ್ಕೆ ಇಳಿಯುತ್ತಾರೆ. ಹೀಗಾಗಿ ಅವರ ಬದುಕು ಮತ್ತು ಸಾಹಿತ್ಯಿಕ ಸಾಧನೆ ಕುರಿತು ಅತ್ಯಂತ ಸಂಕ್ಷಿಪ್ತವಾಗಿ ಬರೆಯಲಾಗಿದೆ.

ತತ್ತ್ವಪದಕಾರನಿಗೆ ಸಂಬಂಧಿಸಿದಂತೆ ಯಾವ ಯಾವ ಸ್ಮಾರಕಗಳು ದೊರಕುತ್ತವೆಯೋ ಅವುಗಳತ್ತ ಹೆಚ್ಚಾಗಿ ಗಮನವನ್ನು ಕೇಂದ್ರಿಕರಿಸಲಾಗಿದೆ. ಸ್ಮಾರಕಗಳ ಸಂಗ್ರಹ ಕಾರ್ಯ ಯೋಜನೆ ಇದಾಗಿದ್ದರಿಂದ ಆಯಾ ಸ್ಥಳಕ್ಕೆ ಅನಿವಾರ್ಯವಾಗಿ ಹೋಗಲೇಬೇಕಾಯಿತು. ಹೀಗಾಗಿ ಈ ಅಧ್ಯಯನದ ಸಂದರ್ಭದಲ್ಲಿ ನಾನು ಬೀದರ ಜಿಲ್ಲೆಯ ಆರುನೂರಕ್ಕೂ ಮೇಲ್ಪಟ್ಟು ಹಳ್ಳಿಗಳನ್ನೆಲ್ಲ ಸುತ್ತಿದ್ದೇನೆ. ತತ್ತ್ವಪದಕಾರ ಇರುವ ಅಥವಾ ಗತಿಸಿ ಹೋಗಿರುವ ಮನೆಗೆ ಪ್ರತ್ಯಕ್ಷದರ್ಶಿಯಾಗಿ ಭೇಟಿ ನೀಡಿದ್ದೇನೆ. ಕವಿಗೆ ಸಂಬಂಧಿಸಿದ ವ್ಯಕ್ತಿಗಳೊಡನೆ ವಿಚಾರ ವಿನಿಮಯ ಮಾಡಿದ್ದೇನೆ. ಆ ಪರಿಸರದಲ್ಲಿರುವ ಸ್ಮಾರಕಗಳನ್ನು ಚಿತ್ರೀಕರಿಸಿಕೊಂಡು ಸಂಪುಟಗಳಲ್ಲಿ ದಾಖಲಿಸುವ ಕಾರ್ಯ ಮಾಡಿದ್ದೇನೆ. ಇಲ್ಲಿ ಹಿಂದೆಲ್ಲಿಯೂ ದಾಖಲಾಗದ ಎಷ್ಟೋ ತತ್ತ್ವಪದಕಾರರು ಅವರ ಸ್ಮಾರಕಗಳೊಂದಿಗೆ ಮೊಟ್ಟ ಮೊದಲಿಗೆ ದಾಖಲಾಗಿದ್ದಾರೆ. ಹೀಗಿದ್ದರೂ ಎಲ್ಲವನ್ನೂ ನಾನು ಸಂಶೋಧಿಸಿದ್ದೇನೆಂದು ಹೇಳುವ ಧೈರ್ಯ ನನಗಿಲ್ಲ.

ಈ ಸಂಪುಟಗಳ ರಚನಾ ಕಾರ್ಯದ ಹಿನ್ನೆಲೆಯಲ್ಲಿ ಅತೀವ ತಾಳ್ಮೆ-ಸಹನೆ, ಅಪಾರ ಪರಿಶ್ರಮ, ಅಖಂಡ ಆಸಕ್ತಿ, ಸಂಶೋಧನೆಯ ದಾಹ, ಕರ್ನಾಟಕ ಸರಕಾರವು ಉದಾರ ಮನದಿಂದ ಕನ್ನಡ ಭಾಷಾಭಿವೃದ್ಧಿಗಾಗಿ ನೀಡಿರುವ ಲಕ್ಷಾನುಗಟ್ಟಲೇ ಹಣವಿರುವಂತೆ, ಸಂಪುಟಗಳ ಒಡಲಲ್ಲಿ ಬೀದರ ಜಿಲ್ಲೆಯ ಅಪೂರ್ವ ಮತ್ತು ಅನನ್ಯವಾದ ತತ್ತ್ವಪದ ಸಾಹಿತ್ಯದ ಸಂಪತ್ತು ಅಡಕಗೊಂಡಿದೆ.

ಈ ಸಂಪತ್ತಿಗೆ ವಾರಸುದಾರರಾದ ನೀವು-ನಾವುಗಳು ಇಂತಹ ಸಾಂಸ್ಕೃತಿಕ ನೆಲದಲ್ಲಿ ಬದುಕುತ್ತಿದ್ದೇವೆಂಬುದೇ ಸೌಭಾಗ್ಯದ ಮಾತಲ್ಲವೇನು?

ಡಾ. ಎಸ್.ಎಂ. ಹಿರೇಮಠ

ಪರಿವಿಡಿ

ಬಾಲ್ಕಿ ತಾಲ್ಲೂಕ

೧. ಮಲ್ಲಿಕಾರ್ಜುನ ಚಾಮರಡ್ಡಿ (ಕ್ರಿ.ಶ.ಸು. ೧೮೧೧ –೧೯೦೧) ೩

೨. ರೇವಪ್ಪಯ್ಯನವರು (ಕ್ರಿ.ಶ.ಸು. ೧೮೩೧ –೧೯೩೬) ೧೨

೩. ಅಪ್ಪಾರಾವ ಕುಲಕರ್ಣಿ(ಕ್ರಿ.ಶ.ಸು. ೧೮೬೦ –೧೯೩೨) ೪೮

೪. ನೀಲಕಂಠ ಮಹಾರಾಜ (ಕ್ರಿ.ಶ.ಸು. ೧೮೭೫ –೧೯೫೫) ೫೫

೫. ಕರಿಬಸವೇಶ್ವರ ಲೇಗಂಟಿ (ಕ್ರಿ.ಶ.ಸು. ೧೮೮೩ –೧೯೬೫) ೬೧

೬. ಶಿವಮೂರ್ತೆಪ್ಪ ಮೈನಳ್ಳಿ (ಕ್ರಿ.ಶ.ಸು. ೧೮೮೫ –೧೯೪೦) ೭೮

೭. ಚೆನ್ನಯ್ಯಸ್ವಾಮಿ ಮಠಪತಿ (ಕ್ರಿ.ಶ.ಸು. ೧೮೯೦ –೧೯೫೦) ೮೩

೮. ಸಿದ್ಧಯ್ಯ ಮಠಪತಿ (ಕ್ರಿ.ಶ.ಸು. ೧೯೦೨ –೧೯೮೨) ೯೩

೯. ಸಿದ್ಧರಾಮಪ್ಪ ಮ್ಯಾಕ್ರೆ (ಕ್ರಿ.ಶ.ಸು. ೧೯೧೦ –೨೦೦೫) ೧೦೨

೧೦. ಹುಲೆಪ್ಪ ಕೆಳದೊಡ್ಡಿ (ಕ್ರಿ.ಶ.ಸು. ೧೯೧೫ –೧೯೮೫) ೧೧೨

೧೧. ಕಲ್ಲಪ್ಪ ಗೋರಚಿಂಚೋಳಿ (ಕ್ರಿ.ಶ.ಸು. ೧೯೧೮ –೧೯೯೮) ೧೧೭

೧೨. ಸಂಗಪ್ಪ ಬಿರಾದಾರ (ಕ್ರಿ.ಶ.ಸು. ೧೯೨೩ –೨೦೦೬) ೧೨೩

೧೩. ಭೀಮಾಶಂಕರ ವಳಸಂಗೆ (ಕ್ರಿ.ಶ.ಸು. ೧೯೨೩) ೧೩೧

೧೪. ಹಣಮಂತ ಬಿರಾದಾರ (ಕ್ರಿ.ಶ.ಸು. ೧೯೨೪) ೧೩೭

೧೫. ಕಲ್ಲಪ್ಪ ಮ್ಯಾಲದೊಡ್ಡಿ (ಕ್ರಿ.ಶ.ಸು. ೧೯೨೫) ೧೪೪

೧೬. ಹಣಮಂತ ನಿಟ್ಟೂರೆ (ಕ್ರಿ.ಶ.ಸು. ೧೯೨೭) ೧೫೧

೧೭. ಪಂಚಯ್ಯ ಸ್ವಾಮಿ (ಕ್ರಿ.ಶ.ಸು. ೧೯೩೪ –೨೦೦೬) ೧೫೭

ಭಾಲ್ಕಿ ತಾಲ್ಲೂಕ

ಭಾಲ್ಕಿ ತಾಲ್ಲೂಕ

೧. ಮಲ್ಲಿಕಾರ್ಜುನ ಚಾಮರಡ್ಡಿ (ಕ್ರಿ.ಶ.ಸು. ೧೮೧೧-೧೯೦೧)

ವೀರಶೈವ ಸಂಸ್ಕೃತಿಯ ಅನುಸಂಧಾನಿಯಾಗಿದ್ದ ಮಲ್ಲಿಕಾರ್ಜುನ ಚಾಮರಡ್ಡಿಯವರು ಪವಾಡ ಪುರುಷರೂ; ಶರಣ ಜೀವಿಗಳೂ, ತತ್ತ್ವನಿಷ್ಠರೂ ಆಗಿ ಬದುಕಿದ್ದವರು. ಶ್ರೀಮಂತ ಮನೆತನ, ಪರೋಪಕಾರಕ್ಕೆ ಯಾವಾಗಲೂ ತೆರೆದ ಬಾಗಿಲಿನ ಮನೆ. ಅನ್ನ ದಾಸೋಹದ ನೆಲೆಯಾಗಿದ್ದಂತೆ ಇದ್ದಿತು ಚಾಮರಡ್ಡಿ ಅವರ ಮನೆ. ದಿನ ನಿತ್ಯ ಮಲ್ಲಿಕಾರ್ಜುನ ಅವರಲ್ಲಿಗೆ ಹಲವಾರು ಜನ ಭಕ್ತರು-ಶಿಷ್ಯರು ಬರುತ್ತಿದ್ದರು. ಅವರಿಂದ ಉಪದೇಶ ಆಲಿಸುತ್ತಿದ್ದರು, ಬದುಕಿನ ಮಾರ್ಗವನ್ನು ಕಂಡು ಕೊಂಡು ತಮ್ಮ ದಿಕ್ಕು ಸೇರಿಕೊಳ್ಳುತ್ತಿದ್ದರು.

ಬೀದರ ಜಿಲ್ಲೆ; ಭಾಲ್ಕಿ ತಾಲ್ಲೂಕಿನಲ್ಲಿ ಬರುವ ಖಟಕ್‌ಚಿಂಚೋಳಿ, ಮಲ್ಲಿಕಾರ್ಜುನರಂತಹ ಮಹಾಶಕ್ತಿಗಳ ವಾಸದಿಂದ ತನ್ನ ಖಟಕತ್ವವನ್ನು ಕಳೆದುಕೊಂಡು ಸಾತ್ವಿಕವಾಯಿತೆನ್ನಬೇಕು; ಫಲವತ್ತಾದ ನೆಲೆಯಾಯಿತೆನ್ನಬೇಕು.

ಲಿಂಗಾಯತರೆಡ್ಡಿ ಮನೆತನದಲ್ಲಿ ಮಲ್ಲಿಕಾರ್ಜುನ ಅವರು ಕಿ.ಶ.ಸು. ೧೮೧೧ರ ವರ್ಷದಲ್ಲಿ ಜನಿಸಿದರು.

ಚಾಮರಡ್ಡಿ ಅವರಿಗೆ ಲೌಕಿಕ ಶಿಕ್ಷಣದಕ್ಕಿಂತಲೂ ಆಧ್ಯಾತ್ಮ ಶಿಕ್ಷಣದ ಹಂಬಲವಿದ್ದಿತು. ಆದುದರಿಂದ ಮಠದಯ್ಯಗಳ ಖಾಸಗಿ ಶಾಲೆಯಲ್ಲಿ ಒಂದಿಷ್ಟು ಅಕ್ಷಾರಭ್ಯಾಸ ಕಲಿತು ಹೊರಬಿದ್ದರು. ಸಂಸಾರ ಜೀವನಕ್ಕೂ ಕಾಲಿಟ್ಟರು. ಮಲ್ಲಿಕಾರ್ಜುನ ಅವರ ಪತ್ನಿ ರಾಚಮ್ಮ. ಈ ದಂಪತಿಗಳಿಗೆ ಸಿದ್ಧಪ್ಪನೆಂಬ ಒಬ್ಬನೇ ಮಗನು ಹುಟ್ಟಿದನು. ಇಂದು ಸಿದ್ಧಪ್ಪನ ಸಂತತಿ ಬೆಳೆದಿದೆ. ಖಟಕ್‌ಚಿಂಚೋಳಿಯಲ್ಲಿ ಮಲ್ಲಿಕಾರ್ಜುನ ಅವರ ವಂಶಸ್ಥರು ಇಂದು ಇದ್ದಾರೆ.

ಮಲ್ಲಿಕಾರ್ಜುನ ಅವರದು ಕೃಷಿಕ ಶ್ರೀಮಂತ ಮನೆತನ. ಸಾಕಷ್ಟು ಫಲವತ್ತಾದ ಜಮೀನು ಇದ್ದಿತು. ಆದರೆ ಮಲ್ಲಿಕಾರ್ಜುನ ಅವರು ಹೊಲದ ಕೃಷಿ ಬಿಟ್ಟು ಆಧ್ಯಾತ್ಮ ಕೃಷಿಯಲ್ಲಿ ತೊಡಗಿದರು. ಮದನೂರಿನ ಸಿದ್ಧಲಿಂಗ ಸ್ವಾಮಿಗಳಲ್ಲಿಗೆ ಹೋಗಿ, ಅಲ್ಲಿ ಅವರ ಶಿಷ್ಯರಾಗಿ ಕೆಲವು ಕಾಲ ಆಧ್ಯಾತ್ಮ ಸಾಧನೆಯಲ್ಲಿ ತೊಡಗಿದರು. ಗೋರ್ಟಾದಿಂದ ಹೋದ ಸಿದ್ಧಲಿಂಗರು ಆಂಧ್ರದ ಮದನೂರಿನಲ್ಲಿ ನೆಲೆಸಿದ್ದರು, ಅವರನ್ನೆ ಮಲ್ಲಿಕಾರ್ಜುನ

ಅವರು ತಮ್ಮ ಆರಾಧ್ಯ ಗುರುಗಳಿಂದು ಸ್ವೀಕರಿಸಿದರು. ಲಿಂಗಪೂಜೆ;ಲಿಂಗಾಚಾರದಲ್ಲಿಯೇ ಹೆಚ್ಚು ಸಮಯ ಕಳೆಯತೊಡಗಿದರು. ಆದಷ್ಟು ಇಹಲೋಕದ ಬಂಧನಗಳಿಂದ ಬಿಡುಗಡೆಯಾಗ ತೊಡಗಿದರು. ಸಿದ್ಧಲಿಂಗರ ಸಾನ್ನಿಧ್ಯದ ಸಂಪರ್ಕವೂ ಮಲ್ಲಿಕಾರ್ಜುನ ಅವರನ್ನು ಅನುಭಾವಿಯನ್ನಾಗಿಸಿತು; ಶಿವಯೋಗಿಯನ್ನಾಗಿಸಿತು. ಅವರ ದೇಹವು ಲಿಂಗಸಂಗದಿಂದ ಪರುಷವಾಯಿತು; ಪ್ರಸಾದಕಾಯವಾಯಿತು. ನುಡಿದದ್ದು ಲಿಂಗನುಡಿಯಾಯಿತು. ಮಲ್ಲಿಕಾರ್ಜುನ ಅವರ ಶಿಷ್ಯರ ಸಂಖ್ಯೆ ದಿನೇ ದಿನೇ ಬೆಳೆಯ ತೊಡಗಿತು. ಮಲ್ಲಿಕಾರ್ಜುನ ಅವರು ತಮ್ಮ ಮನೆಯಲ್ಲಿಯೆ ಶಿಷ್ಯರೊಡಗೂಡಿ ಅರ್ಚನ, ಅರ್ಪಣಾನುಭಾವ ಗೋಷ್ಠಿಗಳು ನಡೆಸ ತೊಡಗಿದರು. ಎಳ್ಳ ಅಮವಾಸ್ಯೆಯ ದಿನದಂದು ಪ್ರತಿ ವರುಷ ಬೃಹತ್ ಪ್ರಮಾಣದಲ್ಲಿ ಭಜನೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳ ತೊಡಗಿದರು. ಭಜನೆಯು ಅವರ ಆಧ್ಯಾತ್ಮ ಪ್ರಸಾರದ ಮಾಧ್ಯಮವಾಯಿತು; ಜನೋದ್ಧಾರಕ್ಕೆ ಸಾಧನವಾಯಿತು.

ಮಲ್ಲಿಕಾರ್ಜುನ ಅವರು ಸುಶ್ರಾವ್ಯವಾಗಿ ಹಾಡುತ್ತಿದ್ದರು, ದಮಡಿ ಬಾರಿಸುತ್ತಿದ್ದರು, ಏಕತಾರಿ ನಾದದೊಂದಿಗೆ ಶೃತಿ ಬೆರೆಸಿ ಹಾಡುಗಳಿಗೆ ರಾಗ ಸಂಯೋಜಿಸುತ್ತಿದ್ದರು. ಖಟಕ್‌ಚಿಂಚೋಳಿಯವರೆ ಆಗಿದ್ದ ಅಪ್ಪಾರಾವ ಕುಲಕರ್ಣಿ ಅವರು ಮಲ್ಲಿಕಾರ್ಜುನ ಅವರ ಬಲಗೈಯಾಗಿದ್ದರು; ಪ್ರೀತಿಯ ಶಿಷ್ಯರಾಗಿ ನಿಂತುಕೊಂಡು ಅವರು ಸೇವೆ ಸಲ್ಲಿಸಿದರು. ಗುರು-ಶಿಷ್ಯರು ಏಕೋಭಾವದಿಂದ ಆಧ್ಯಾತ್ಮ ಸಾಧನೆ ಮಾಡಿದರು, ಆಧ್ಯಾತ್ಮ ವಿಷಯಗಳನ್ನು ಪರಸ್ಪರ ವಿನಿಮಯ ಮಾಡಿಕೊಳ್ಳುತ್ತಿದ್ದರು.

ಇಂದು ಖಟಕ್‌ಚಿಂಚೋಳಿಯಲ್ಲಿನ ಜನತೆ ಮಲ್ಲಿಕಾರ್ಜುನ ಚಾಮರಡ್ಡಿಯವರ ಹಲವಾರು ಪವಾಡಗಳನ್ನು ಹೇಳುತ್ತಾರೆ. ಕಾರಾಂಜ ನದಿಯ ನೀರಿನ ಮೇಲೆ ಕಂಬಳಿ ಹಾಸಿ; ತುಂಬಿ ಹರಿಯುತ್ತಿದ್ದ ಪ್ರವಾಹ ದಾಟಿದ್ದು, ತಾಮ್ರದ ಲೋಹವನ್ನೇ ಬಂಗಾರವಾಗಿಸಿ; ಜಂಗಮ ದಾಸೋಹ ಮಾಡುತ್ತಿದ್ದುದು, ದೂರ ಶ್ರವಣ ಶಕ್ತಿಯಿಂದ ಶಿಷ್ಯರ ಅಭೀಪ್ಸೆಯನ್ನು ಈಡೇರಿಸುತ್ತಿದ್ದುದು ಇಂತಹ ಹಲವಾರು ಪವಾಡಗಳು ಅವರ ಜೀವನ ವಿವರಗಳಲ್ಲಿ ಉಲ್ಲೇಖಗೊಳ್ಳುತ್ತವೆ.

ಮಲ್ಲಿಕಾರ್ಜುನ ಚಾಮರಡ್ಡಿ ಅವರು ತತ್ತ್ವಪದಗಳನ್ನು ರಚನೆ ಮಾಡಿದ್ದು ಸಾಹಿತ್ಯದ ಸಲುವಾಗಿಯಲ್ಲ. ಅವರು ಕಂಡ ಸೈದ್ಧಾಂತಿಕ ದರ್ಶನವನ್ನು ಹಾಡುಗಳ ಮೂಲಕ ತಮ್ಮ ಶಿಷ್ಯರಿಗೆ ತಿಳಿಸುವದಕ್ಕಾಗಿ. ಹಲವಾರು ತತ್ತ್ವಪದಗಳು ಅವರಿಂದ ಹೊರ ಬಂದವು. ಅವುಗಳಿಗೆ ಸಿದ್ಧಲಿಂಗರ ಹೆಸರನ್ನು ಅಂಕಿತವಾಗಿ ಇರಿಸಿಕೊಳ್ಳಲಾಗಿದೆ.

ಶಿವಯೋಗ-ಶಿವಸಾಹಿತ್ಯ ಸಾಧಕರಾಗಿ ಬದುಕಿದ್ದ ಚಾಮರಡ್ಡಿ ಅವರು ಕ್ರಿ.ಶ.ಸು. ೧೯೦೧ರ ವರ್ಷದಲ್ಲಿ ಲಿಂಗೈಕ್ಯರಾದರು. ಅವರ ಸಮಾಧಿಯು ಇಂದು ಅವರ ಹೊಲದಲ್ಲಿಯೇ ಕಾಣಬಹುದಾಗಿದೆ.

ಮಲ್ಲಿಕಾರ್ಜುನ ಚಾಮರಡ್ಡಿ ಅವರು ಇಂದಿಲ್ಲ. ಆದರೆ ಅವರ ಸಾಧನೆಯ ಪ್ರಭಾವ ಜನದ ಮೇಲೆ ಉಳಿದು ಕೊಂಡಿದೆ. ಅವರ ನಾಲಗೆಯ ಮೇಲೆ ಮಲ್ಲಿಕಾರ್ಜುನ ಅವರ ತತ್ತ್ವಪದಗಳು ಲಾಸ್ಯವಾಡುತ್ತಲಿವೆ. ಇಲ್ಲಿ ಅವರ ಕೆಲವು ಪದ್ಯಗಳನ್ನು ಕೊಡಲಾಗಿದೆ:

ತಿಳಿಬೇಕೊ ಗುರವಿನ ಕೀಲಿಯನು

ತಿಳಿಬೇಕೊ ಗುರವಿನ ಕೀಲಿಯನು । ಅಲ್ಲಿ
ತಿಳಿದಾರೆ ಒಂದಾಗಿ ತೋರುವನು ॥ ಪ ॥

ಆನಂದಪುರವೆಂಬ ಪಟ್ಟಣಾದ । ಅಲ್ಲಿ
ಒಂದೊಂದು ಹಾದಿಗೆ ವರುವಾದ ॥
ಚಂದಾಗಿ ಸೌಹಾದಿ ತೋರಿದ । ಅಲ್ಲಿ
ಕಂದನ ಬಾಗಿಲು ಕಡಿಲಾಗ್ಯದ ॥ ೧ ॥

ಕಂದನ ಬಾಗಿಲು ಕಡಿಲುಂಟೊ । ಅಲ್ಲಿ
ಹತ್ತಾರು ಒಳಗೆ ಹೊರಗ್ಹೊಂಟೊ ॥
ನಿತ್ಯ ನಿತ್ಯ ಅಲ್ಲಿ ಹೊಗುವದುಂಟೊ । ಅಲ್ಲಿ
ಚಿತ್ತೈಸಿ ತಿಳಿದವನ ಎದೆಗಂಟೊ ॥ ೨ ॥

ಒಂಭತ್ತು ವರುಷದ ಮ್ಯಾಲುಂಟೊ । ಅಲ್ಲಿ
ಹತ್ತು ತೂತಿಗೆ ಹವಳದ ಕಟ್ಟೊ ॥
ನಿತ್ಯ ಚಿಂಚೋಳಿ ಹೊರಗ್ಹೊಂಟೊ । ನಮ್ಮ
ಗುರು ಸಿದ್ಧಲಿಂಗನ ನೆನಹುಂಟೊ ॥ ೩ ॥

(ಯೋಗ ಸಿದ್ಧಾಂತ–ಪು.೨೧)

ತಿಳಿ ತಿಳಿ ತಿಳಿ ತಿಳಿ ತಮ್ಮಾ

ತಿಳಿ ತಿಳಿ ತಿಳಿ ತಿಳಿ ತಮ್ಮಾ । ಅದು
ತಿಳಿಯದೆ ಮರತಿರುಬ್ಯಾಡೊ ಸುಮ್ಮ ॥

ಆತ್ಮನೆಂಬುವಾಶ್ರಮಧಾಮ..... ॥ ಪ ॥
ಸೋಸಿ ನೋಡೊ ಶಾರೀರ ಗ್ರಾಮ
ಆಧಾರನೆಂಬುವಾಶ್ರಮ ಹಿಡಿದು । ಅಲ್ಲಿ
ಚಿದ್ರೂಪ ವರ್ಣವು ತೋರುವದು ॥
ಥರ ಥರ ಥರ ಥರ ನಡುಗುವದೊ.... ॥ ೧ ॥

ಧಿಮಿತ ಧಿಮಿತನಂತ ಕೂಡುವದೊ
ಒಂಬತ್ತು ಬಾಗಿಲ ಕದ ಮುಚ್ಚಿ । ಅಲ್ಲಿ
ಪ್ರೀತಿಲಿಂದೆ ಸಂಜೀವ ಹಚ್ಚಿ ॥
ನೋಡೊ ನೋಡೊ ನೋಡೊ ಪರದಿಯ ಬಿಚ್ಚಿ .... ॥ ೨ ॥

ಚಂದ್ರ ಜ್ಯೋತಿ ಸ್ವರೂಪ ಹಚ್ಚಿ ॥
ನಾದನೆಂಬೊ ಶಬ್ದ ಮೊದಲ್ಹಿಡಿದು । ಆ
ನಾಥ ಪ್ರಭುನ ದಯ ಆಗುವದು ॥
ಧರೆಗೆ ಚಿಂಚೋಳಿ ವರ್ಮವದು । ನಮ್ಮ
ಗುರು ಸಿದ್ಧಲಿಂಗನೊಳು ಕೂಡುವದು ॥ ೩ ॥

(ಅದೇ–ಪು.೨೬)

ಚಿಂತಿದೊಳಗ ಸಂತಿ

ಚಿಂತಿದೊಳಗ ಸಂತಿ ಭ್ರಾಂತಿ ಮಾಡಿರಿ ।
ಸುಳ್ಳೆ ಬಯಲೀಗಿ ಬಯಲಾದ ತಿಳಿರಿ ॥
ಅರುವಿನ ಜನ್ಮಕ್ಕೆ ಬಂದು ಎಚ್ಚರ ಹಿಡಿರಿ ॥
ಗುರು ಮೆಚ್ಚಿದ ಮಾರ್ಗದಿ ನಡಿರಿ ॥ ಪ ॥

ಹುಡುಕುತ್ತ ಹೊಂಟೆವರಿ ದೂರಿಂದ ದಾರಿ ।
ಅಲ್ಲಿ ಬಿದ್ದವರಿ ಚೌರ್‍ಯಾಂಶಿ ಫೇರಿ ॥
ಭಾಳ ದಿವಸಾಯಿತು ಹುಡುಕುತ್ತ ಹೊಂಟೆವರಿ ।
ಈಗ ಸಾಕಾಯಿತು ಮಂಡಲ ಜಾತರಿ ॥ ೧ ॥

ಆರು ಮೂರು ಒಂಬತ್ತು ದಾರಿ ।
ಮ್ಯಾಲಿನಂತರ ಚಂದ್ರನ ಗಿರಿ ॥
ಅಲ್ಲಿ ನಡದಿತ್ರಿ ಮಹದೇವನದೈಶ್ವರಿ ।
ಹೂವಿನ ಭಾಗಶಾಯಿಲಿ ಮುಕ್ತಿ ಕಂಡೆವರಿ ॥ ೨ ॥

ಧರೆಯೊಳು ಚಿಂಚೋಳಿ ಸಿಸ್ತ ।
ಅಲ್ಲಿ ಗುರುಸಿದ್ಧಲಿಂಗ ಮಹದಾತ
ಆತನ ಪಾದಕೆ ಆದೆನೊ ನಮಿತ
ಆಯಿತಿಂದಿಗೆ ನರಜನ್ಮ ಸ್ವಾರ್ಥ ॥ ೩ ॥

(ಅದೇ–ಪು.೨೮)

ನಾ ಹುಟ್ಟಿ ಬಂದೆನೊ

ನಾ ಹುಟ್ಟಿ ಬಂದೆನೊ ಈ ಬ್ರಹ್ಮ ಪುರದಲ್ಲಿ
ಅನರ್ಥ ಆಯಿತಿಲ್ಲಿ । ಜನ್ಮದಲ್ಲಿ ॥ ಪ ॥


ನಾನಾ ಜನ್ಮವ ತಿರುಗಿ ತಿರುಗಿ ಮತ್ತೆ ಬಂದೆನೊ ಮೋಹದಲ್ಲಿ
ಮನವ ಸೋತು ಹೋದ ಮೇಲೆ ಕೂಡಬೇಕು ಯಾರಲ್ಲಿ ॥ ಅ.ಪ ॥

ಬ್ಯಾಸರಾಯಿತು ಮನ ಈ ಘಟ್ಟಸ್ಥಳದಲ್ಲಿ ।
ಹೋಗಿ ಕೂಡಬೇಕಲ್ಲಿ ಸಂತರ ಬಲ್ಲಿ.....
ಅಲ್ಲಿ ಹೋಗಿ ಕುಂತಿದಾರ ಹೇಳಾತರ ಗುರುಕೀಲಿ
ಆ ಕೀಲಿ ತಕ್ಕೊಂಡು ಇಡಬೇಕೆಲ್ಲಿ ।ಜತ್ತಿನಲ್ಲಿ ॥ ೧ ॥

ಎಂಟು ಮದಗಳು ಬಿಟ್ಟು ಬಂಜೆಂಬ ಕುಂಡದಲ್ಲಿ
ಝಳಕ ಮಾಡಿದ ನಾನಲ್ಲಿ .... ಸಿದ್ಧನಲ್ಲಿ
ಅಲ್ಲಿ ಝಳಕ ಮಾಡಿದರೆ ತೊಲಗಿತು ಭವ ಮರಣ
ಪಾವನ ಆದೆನೊ ಸಂತರ ಕರುಣೆಯಲ್ಲಿ । ಸಂಗದಲ್ಲಿ ॥ ೨ ॥

ದೇಶಕಧಿಕವಾದ ವಾಸುಳ್ಳ ಚಿಂಚೋಳಿ ।
ಈಶಸಿದ್ಧನ ಬಳಿಯಲ್ಲಿ ..... ಕೂಡಿದೆನಲ್ಲಿ ॥
ದೋಷ ಗುಣಗಳು ಬಿಟ್ಟು ವಿಷಯವಾಸನೆ ಬಿಟ್ಟು ।
ಹರಚರಣ ಕಂಡೆ ನಾನಿಲ್ಲಿ, ಜನ್ಮದಲ್ಲಿ ॥ ೩ ॥

(ಅದೇ–ಪು.೨೯)



ಮಲ್ಲಿಕಾರ್ಜುನ ಚಾಮರಡ್ಡಿ ಅವರ ಮನೆ (ಖಟಕ್ ಚಿಂಚೋಳಿ)




ಮಲ್ಲಿಕಾರ್ಜುನ
ಚಾಮರಡ್ಡಿ
ಅವರ ಭಾವಚಿತ್ರ




ಮಲ್ಲಿಕಾರ್ಜುನ ಚಾಮರಡ್ಡಿ ಅವರ ಪತ್ನಿ ರಾಚಮ್ಮ




ಮಲ್ಲಿಕಾರ್ಜುನ ಚಾಮರಡ್ಡಿ ಅವರ ಪರಿವಾರ ವರ್ಗ




ಮಲ್ಲಿಕಾರ್ಜುನ ಚಾಮರಡ್ಡಿ ಅವರ ಯೋಗದಂಡ




ಮಲ್ಲಿಕಾರ್ಜುನ ಚಾಮರಡ್ಡಿ ಅವರ ಆಧ್ಯಾತ್ಮ ಸಾಧನ ಸ್ಥಲ



ಮಲ್ಲಿಕಾರ್ಜುನ ಚಾಮರಡ್ಡಿ
ಅವರ ಪೂಜಾಗೃಹ



ಮಲ್ಲಿಕಾರ್ಜುನ
ಚಾಮರಡ್ಡಿ ಅವರ
ಸಮಾಧಿ ದೇವಾಲಯ



ಮಲ್ಲಿಕಾರ್ಜುನ
ಚಾಮರಡ್ಡಿ ಅವರ
ಸಮಾಧಿ

೨. ರೇವಪ್ಪಯ್ಯನವರು (ಕ್ರಿ.ಶ.ಸು. ೧೮೩೧-೧೯೩೬)

"ನಾವದಗಿಯ ರೇವಪ್ಪಯ್ಯ"ನವರೆಂದೇ ಖ್ಯಾತನಾಮರಾಗಿರುವ ರೇವಪ್ಪಯ್ಯನವರು ಸಂಸಾರದಲ್ಲಿದ್ದು, ಅದನ್ನು ಗೆದ್ದ ಸಂತ. ಐಹಿಕ ಬದುಕಿನ ಕಾಮನೆಗಳನ್ನು ಇಲ್ಲವಾಗಿಸಿ ಬದುಕಿದ ಶರಣ. ಬಸವಾದಿ ಶಿವಶರಣರ ತತ್ತ್ವಗಳನ್ನು ಜನಮಾನಸದಲ್ಲಿ ಬೇರೂರಿಸಲು ಹೊರಟ ಆಧ್ಯಾತ್ಮದ ಕೃಷಿಕಾರ, ವೀರಶೈವ ಸಂಸ್ಕೃತಿಯ ಸಾರ ಸಾರಾಯವನ್ನು ಮೈಗೂಡಿಸಿಕೊಂಡು ಬದುಕಿದ ವೀರಶೈವದ ಶಕ್ತಿರೂಪ.

ಬೀದರ ಜಿಲ್ಲೆಯ ಭಾಲ್ಕಿ ತಾಲ್ಲೂಕಿನಲ್ಲಿ ಬರುವ ನಾವದಗಿ ಗ್ರಾಮವು ರೇವಪ್ಪಯ್ಯನವರಿಂದಲೇ "ನವಲಿಂಗಪುರ"ವೆಂಬ ಹೆಸರು ಧಾರಣ ಮಾಡಿದಂತೆ ತೋರುತ್ತದೆ. ವೀರಶೈವ ಸಿದ್ಧಾಂತಗಳಲ್ಲಿ ಒಂದಾಗಿರುವ ನವಲಿಂಗ ಸಕೀಲವನ್ನು ಸಾಧಿಸಿಕೊಂಡು ಸರ್ವಾಂಗ ಲಿಂಗಿ ಅಥವಾ ಲಿಂಗಾಂಗಿಯಾಗಿದ್ದ ರೇವಪ್ಪಯ್ಯನವರು ನೆಲೆ ನಿಂತ ಸ್ಥಳಕ್ಕೆ 'ನವಲಿಂಗ' ಪುರವೆನ್ನದೆ ಬೇರೆ ಹೆಸರು ಒಪ್ಪುವುದೇ ಇಲ್ಲ.

ರೇವಪ್ಪಯ್ಯನವರ ಹಿರಿಯರ ಮೂಲನೆಲೆ ಬೀದರ ಜಿಲ್ಲೆಯಲ್ಲಿ ಬರುವ ಭಾಲ್ಕಿ ತಾಲ್ಲೂಕಿನ ಖಟಕ್ ಚಿಂಚೋಳಿ ಗ್ರಾಮ. ಈ ಗ್ರಾಮವು ಭಾಲ್ಕಿಯಿಂದ ಸು. ೨೦ ಕಿ.ಮೀ ಗಳಷ್ಟು ಅಂತರದಲ್ಲಿದೆ. ಖಟಕ್ ಚಿಂಚೋಳಿ ಗ್ರಾಮದ ಫಾಳಿ ವಂಶದ ಮಠಪತಿ ಅವರ ಮನೆತನವು ರೇವಪ್ಪಯ್ಯನವರ ಹಿರಿಯರ ಮೂಲ ಸ್ಥಾನ. ರೇವಪ್ಪಯ್ಯನವರ ಅಜ್ಜಂದಿರಾದ ನಾಗಯ್ಯ ಸ್ವಾಮಿ ಅವರು ಜಂಗಮ ಕಾರ್ಯಗಳಿಂದ ಜನತೆಯ ಮನದಲ್ಲಿ ಆಧ್ಯಾತ್ಮ ಬೀಜಗಳನ್ನು ಬಿತ್ತುತ್ತ ಹೊರಗಡೆ ಜೀವನ ನಿರ್ವಹಣೆಗೆಂದು ಕೃಷಿಕಾಯಕವನ್ನು ಮಾಡುತ್ತಿದ್ದರು. ನಾಗಯ್ಯ ಸ್ವಾಮಿ ಅವರ ಮಗ ಹಾವಯ್ಯ ಸ್ವಾಮಿಗಳು ನಾವದಗಿ ಗ್ರಾಮಕ್ಕೆ ದತ್ತು ಪುತ್ರನಾಗಿ ಹೋದರು. ಅಲ್ಲಿನ ಮಠಪತಿ ಅವರ ಮನೆಗೆ ಗಂಡು ಸಂತಾನವಿಲ್ಲದ ಕಾರಣ ಮಠಪತಿಯ ಮನೆತನದ ಹಿರಿಯರು ಹಾವಯ್ಯನವರನ್ನು ತಮ್ಮ ಉಡಿಯಲ್ಲಿ ಹಾಕಿಕೊಂಡರು. ನಾವದಗಿಯ ಮಠಪತಿ ಅವರ ಮನೆತನವು ಶ್ರೀಮಂತ ಮನೆತನವಾಗಿತ್ತು. ಅದಕ್ಕೆ ತೊಂಬತ್ತು ಎಕರೆಗಳಷ್ಟು ಭೂಮಿಯಿದ್ದಿತು. ಒಕ್ಕಲುತನವು ವ್ಯವಸ್ಥಿತವಾಗಿ ನಡೆಯುತ್ತಿದ್ದಿತು. ಹಾವಯ್ಯ ಸ್ವಾಮಿಗಳು ಮಠಪತಿ ಅವರ ಮನೆಯ ಮಗನಾಗಿ ತೊಂಬತ್ತು ಎಕರೆ ಭೂಮಿಗೆ ಮಾಲಿಕರಾದರು. ಅವರು ತಮಗೆ ದತ್ತವಾಗಿ ಬಂದ ಮನೆತನ - ಭೂಮಿ ಇವುಗಳನ್ನು ಅತ್ಯಂತ ಕಾಳಜಿಯಿಂದ ನೋಡಿಕೊಂಡರು.

ಕೃಷಿ ಕಾಯಕವನ್ನು ತಮ್ಮ ಜೀವನದ ನಿರ್ವಹಣೆಗೆಂದು ಹಾದಿಯಾಗಿಸಿಕೊಂಡರು. ಹಾವಯ್ಯನವರ ಪತ್ನಿ ನಾಗಮ್ಮನವರು. ಇವರ ತವರು ಮನೆ ಕಲಬುರ್ಗಿ ಜಿಲ್ಲೆ ಚಿತ್ತಾಪೂರ ತಾಲ್ಲೂಕಿನ ಪೇಠಶಿರೂರ ಗ್ರಾಮ. ಇಂದು ಪೇಠಶಿರೂರ ಗ್ರಾಮದಲ್ಲಿ ರೇವಪ್ಪಯ್ಯನ ತಾಯಿಯ ಮನೆತನದ ವಂಶಸ್ಥರಿದ್ದಾರೆ. ಅಲ್ಲಿ ರೇವಪ್ಪಯ್ಯನವರು ಜನಿಸಿದ ಸ್ಮರಣೆಗಾಗಿ ಮೂರ್ತಿ ಪ್ರತಿಷ್ಠಾಪನೆ ಮಾಡಲಾಗಿದೆ. ನಾಗಮ್ಮನವರು ಸದ್ಗೃಹಿಣಿಯಾಗಿದ್ದರು. ಆಚಾರ ಸಂಪನ್ನೆಯಾಗಿದ್ದರು. ಪತಿಯ ಪ್ರತಿಯೊಂದು ಕಾರ್ಯದಲ್ಲಿ ಸಹಧರ್ಮಿಣಿಯಾಗಿ ನಡೆಯುತ್ತಿದ್ದರು. ಬಹುಕಾಲದವರೆಗೆ ಈ ದಂಪತಿಗಳಿಗೆ ಸಂತಾನವು ಆಗಲಿಲ್ಲ. ಹಾವಯ್ಯ – ನಾಗಮ್ಮ ದಂಪತಿಗಳು ರಟಕಲ್ಲಿನ ರೇವಣಸಿದ್ಧೇಶ್ವರರಲ್ಲಿ ಸಂತಾನಕ್ಕಾಗಿ ಹರಕೆ ಹೊತ್ತರು. ರೇವಣಸಿದ್ಧೇಶ್ವರ ಕರುಣೆಯಿಂದಲೇ ಹಾವಯ್ಯ ದಂಪತಿಗಳಿಗೆ ಪುತ್ರರತ್ನವೊಂದು ಪ್ರಾಪ್ತವಾಯಿತು. ರೇವಣಸಿದ್ಧರ ಸ್ಮರಣೆಗಾಗಿ ಹಾವಯ್ಯ ಮತ್ತು ನಾಗಮ್ಮ ದಂಪತಿಗಳು ತಮ್ಮ ಮಗನಿಗೆ 'ರೇವಪ್ಪಯ್ಯ' ಎಂಬ ಹೆಸರನ್ನು ಇರಿಸಿದರು.

ರೇವಪ್ಪಯ್ಯನವರು ತಾಯಿ ತವರೂರಾದ ಪೇಠಶಿರೂರ ಗ್ರಾಮದಲ್ಲಿಯೇ ಜನ್ಮ ತಾಳಿದರು. ಅವರ ಮಾಸಿನಮಗಿ ಹೂಳಿದ ಸ್ಥಳದಲ್ಲಿ ನಂತರ ಹಿರಿಯರು ದೀಪವೊಂದನ್ನು ಇರಿಸಿ, ಇಂದಿಗೂ ಅದನ್ನು ರಕ್ಷಿಸಿಕೊಂಡು ಬರುತ್ತಲಿದ್ದಾರೆ. ಆ ಸ್ಥಳದಲ್ಲಿ ಸ್ಮಾರಕವೊಂದನ್ನು ಗದ್ದುಗೆಯ ರೂಪದಲ್ಲಿ ನಿರ್ಮಿಸಿದ್ದಾರೆ. ರೇವಪ್ಪಯ್ಯನವರು ಕ್ರಿ.ಶ ೧೮೩೧ರಲ್ಲಿ ಹುಟ್ಟಿದರು.

ರೇವಪ್ಪಯ್ಯನವರ ವಿದ್ಯಾಭ್ಯಾಸವು ಖಾಸಗಿ ಶಾಲೆಯಲ್ಲಿ ನಡೆಯಿತು. ಅವರಿಗೆ ಏಳು ವರ್ಷಗಳು ತುಂಬುತ್ತಿರುವಾಗಲೇ ಮೆಹಕರ ಗ್ರಾಮದ ಹಿರೇಮಠದ ಪಟ್ಟದ್ದೇವರಿಂದ ಅಯ್ಯಾಚಾರ ದೀಕ್ಷೆ ಅನುಗೊಳಿಸಲಾಯಿತು. ಆದರೆ ರೇವಪ್ಪಯ್ಯನವರನ್ನು ಎಲ್ಲ ನಿಲುವುಗಳಲ್ಲಿ ಸನ್ನದ್ಧಗೊಳಿಸಿದವರು ಮದನೂರಿನ ಸಿದ್ಧಲಿಂಗ ಶಿವಯೋಗಿಗಳು. ಅವರೆ ರೇವಪ್ಪಯ್ಯನವರ ನಿಜವಾದ ಗುರುಗಳಾಗಿದ್ದಾರೆ.

ರೇವಪ್ಪಯ್ಯನವರು ಕನ್ನಡ, ಸಂಸ್ಕೃತ, ಹಿಂದಿ, ಉರ್ದು, ಮೋಡಿ, ಮರಾಠಿ, ಪಾರ್ಸಿ, ತೆಲಗು ಭಾಷೆಗಳಲ್ಲಿ ಪಾರಂಗತರಾದರು. ಕನ್ನಡ ಸಾಹಿತ್ಯದ ಗ್ರಂಥಗಳನ್ನು ಓದಿದರು. ಬಸವಾದಿ ಶಿವಶರಣರ ವಚನಗಳನ್ನು ಮನನಿಸಿದರು. ಶಿವಪುರಾಣ, ಬಸವಪುರಾಣಾದಿಗಳ ಅಧ್ಯಯನ ಕೈಗೊಂಡರು. ಹಲವಾರು ಪ್ರಾಚೀನ ಗ್ರಂಥ ಮತ್ತು ಹಸ್ತ ಪ್ರತಿಗಳನ್ನು ಸಂಗ್ರಹಿಸಿದರು.

ರೇವಪ್ಪಯ್ಯನವರು ಗೃಹಸ್ಥಾಶ್ರಮಿಗಳಾದರು. ಬೀದರ ಜಿಲ್ಲೆಯ ಹುಮನಾಬಾದ ತಾಲ್ಲೂಕಿನಲ್ಲಿ ಬರುವ ಘುಮ್ಮನಸೂರಿನ ಮಠಪತಿ ಅವರ ಮನೆತನದ ಕನ್ಯೆ ರೇವಮ್ಮನವರು ರೇವಪ್ಪಯ್ಯನವರ ಬದುಕಿನಲ್ಲಿ ಸತಿಯಾಗಿ ಬಂದರು.

ರೇವಪ್ಪಯ್ಯನವರು ಭೌತಿಕ ಬದುಕಿನ ನಿರ್ವಹಣೆಗಾಗಿ ಶಿಕ್ಷಕ ವೃತ್ತಿಯನ್ನು ಆಯ್ಕೆ ಮಾಡಿಕೊಂಡರು. ಖಟಕ್ ಚಿಂಚೋಳಿ ಗ್ರಾಮದಲ್ಲಿ ಒಂದು ಪಾಠಶಾಲೆ ಆರಂಭ ಮಾಡಿದರು. ಅಲ್ಲಿನ ಮಕ್ಕಳಿಗೆ ಸುಜ್ಞಾನ ಬೋಧೆ ಮಾಡುತ್ತ ನಿಂತುಕೊಂಡರು. ಉಳಿದ ಸಮಯದಲ್ಲಿ ಅವರು ಸಂತ-ಶರಣಜೀವರೊಂದಿಗೆ ಅನುಭಾವಗೋಷ್ಠಿ ನಡೆಸುತ್ತಿದ್ದರು. ಒಂದು ಸಲ ಪಾಠ ಹೇಳುವಾಗ ದಡ್ಡ ಹುಡುಗನಿಗೆ ಒಂದು ಏಟು ಹೊಡೆದರು. ಬಾಲಕ ಅಳುತ್ತ ಹೋಗಿ ಪಾಲಕರಿಗೆ ಹೇಳಿದನು. ಅವನ ತಾಯಿ ಬಂದು ರೇವಪ್ಪಯ್ಯನವರನ್ನು ಕುರಿತು "ನೀನು ಜಂಗಮ. ಬಗಲಿಗೆ ಜೋಳಿಗೆ ಹಾಕಿ ಭಿಕ್ಷೆ ಬೇಡುತ್ತ ಊರೂರು ತಿರುಗುವುದು ಬಿಟ್ಟು ಈ ಶಿಕ್ಷಕ ವೃತ್ತಿ ಮಾಡುತ್ತಿದ್ದಿ. ಇದು ನಿನಗೆ ಸಲ್ಲುವುದಿಲ್ಲ" ಎಂದು ಬೈದು ಭಂಗಿಸಿದಳು.

ರೇವಪ್ಪಯ್ಯನವರ ಮನಸ್ಸು ಅದೇಕೋ ಬೇಸರಗೊಂಡಿತು. ಹೆಣ್ಣುಮಗಳ ಮಾತುಗಳು ಮನದಲ್ಲಿ ಮತ್ತೆ ಮತ್ತೆ ಪ್ರತಿಧ್ವನಿತವಾಗ ತೊಡಗಿದವು. ಒಂದು ದಿನ ರೇವಪ್ಪಯ್ಯನವರು ಶಾಲೆಯ ಬಾಗಿಲನ್ನು ಮುಚ್ಚಿ; ದೇಶ ಸಂಚಾರಕ್ಕೆ ಹೊರಟರು. ಭಾರತದುದ್ದಗಲಕ್ಕೂ ಸಂಚಾರ ಮಾಡಿದರು. ಅಲ್ಲಲ್ಲಿ ಅನುಷ್ಠಾನ ಕೈಗೊಂಡರು. ಆಂಧ್ರ-ಮಹಾರಾಷ್ಟ್ರ ರಾಜ್ಯಗಳಲ್ಲಿ ಹೆಚ್ಚಾಗಿ ಪರಿಭ್ರಮಣಗೈದರು. ಸಂಚಾರದಲ್ಲಿ ಬಟ್ಟೆ ಇಲ್ಲದವರಿಗೆ ತಮ್ಮ ಮೈ ಮೇಲಿನ ವಸ್ತ್ರವನ್ನೇ ದಾನ ಮಾಡಿದರು. ಬರಿಗಾಲಿನವರಿಗೆ ತಮ್ಮ ಕಾಲಿನಲ್ಲಿರುವ ಖಡಾವುಗಳನ್ನು ಕೊಟ್ಟರು. ಹೀಗೆ ಸರ್ವಸಂಗ ಪರಿತ್ಯಾಗಿಯಾಗಿ ರೇವಪ್ಪಯ್ಯನವರು ನಿರಂಜನ ಜಂಗಮನಂತೆ ಹೊರಟರು. ತಮ್ಮ ಈ ಪಯಣದಲ್ಲಿ ಹಲವಾರು ಜನರನ್ನು ಉದ್ಧರಿಸುತ್ತ ನಡೆದರು. ಕೊನೆಗೆ ಅವರು ಬಂದು ತಲುಪಿದುದು ನಾವದಗಿ ಗ್ರಾಮಕ್ಕೆ. ಪತ್ನಿ ರೇವಮ್ಮನವರೊಡನೆ ಶರಣ ದಾಂಪತ್ಯದಿಂದ, ಶರಣ ಬದುಕನ್ನು ಬದುಕ ತೊಡಗಿದರು. ಅವರಿಗೆ ವೀರಭದ್ರಯ್ಯನೆಂಬ ಒಬ್ಬನೇ ಒಬ್ಬ ಮಗನು ಇದ್ದನು.

ರೇವಪ್ಪಯ್ಯನವರ ಆಧ್ಯಾತ್ಮ ಅನುಭಾವದ ಪ್ರಭಾವಕ್ಕೆ ಒಳಗಾಗಿ ನೂರಾರು ಜನ ಶಿಷ್ಯರಾದರು. ಅವರ ಶಿಷ್ಯ ಸಮೂಹದಲ್ಲಿ ಸಮಾಜದ ಎಲ್ಲ ಜಾತಿ-ಮತ-ಪಂಥ-ಪಂಗಡದವರಿದ್ದಾರೆ. ಅದರಲ್ಲೂ ಅವರು ಹರಿಜನರ ಉದ್ಧಾರಕ್ಕಾಗಿ ಹಲವಾರು ಕಾರ್ಯಕ್ರಮಗಳನ್ನು ಕೈಕೊಂಡರು. ಅವರ ಮನೆಗಳಿಗೆ ಹೋದರು. ಅಲ್ಲಿ ಪ್ರಸಾದ ಸೇವಿಸಿದರು. ಅವರ ಕೇರಿಗಳಲ್ಲಿ ಶಿವಾನುಭವ ಗೋಷ್ಠಿ ನಡೆಸಿದರು. ಭಾಲ್ಕಿ ತಾಲ್ಲೂಕಿನಲ್ಲಿ ಬರುವ ಜಾಗ್ಯೆ ಗ್ರಾಮವು ಮೇಲಿನ ವಿವರಗಳಿಗೆ ಸಾಕ್ಷಿ ಹೇಳುತ್ತದೆ.

ರೇವಪ್ಪಯ್ಯನವರು ತಮ್ಮ ಲಿಂಗಾರ್ಚನೆಯ ಹೊತ್ತಿನಲ್ಲಿ ಪ್ರತಿದಿನವೂ ಇಪ್ಪತ್ತೊಂದು ಜನ ಜಂಗಮರು ಮತ್ತು ಐದು ಜನ ಮುತ್ತೈದೆಯರ ಪೂಜೆ ಮಾಡಿ, ಪ್ರಸಾದ ಆರೋಗಣೆ ಮಾಡುತ್ತಿದ್ದರು. ಈ ನೇಮವು ಅವರು ಜೀವನಾಂತ್ಯದವರೆಗೂ

ನಿರಂತರವಾಗಿ ನಡೆಸಿಕೊಂಡು ಬಂದರು. ಅವರ ಜೊತೆಯಲ್ಲಿ ಒಂದು ಆಕಳು ಇರುತ್ತಿದ್ದಿತು. ಕ್ರಿಯಾಮೂರ್ತಿಗಳು ರೇವಪ್ಪಯ್ಯನವರನ್ನು ಯಾವಗಲೂ ಹಿಂಬಾಲಿಸುತ್ತಿದ್ದರು. ತ್ರಿಕಾಲಪೂಜೆ–ಅರ್ಪಣ–ಅನುಭಾವ ಅವರ ಒಟ್ಟು ಬದುಕಿನ ಕ್ರಮವಾಗಿದ್ದಿತು.

ರೇವಪ್ಪಯ್ಯನವರು ಹಲವಾರು ದಲಿತರಿಗೆ ಲಿಂಗ ಧಾರಣ ಮಾಡಿದರು. ಸು. ಇಪ್ಪತ್ತೊಂದು ಸಾವಿರ ಜನರಿಗೆ ಪ್ರಸಾದಿಕ ಕರುಣೆ ನೀಡಿದರು. ರೇವಪ್ಪಯ್ಯನವರ ಕಾರ್ಯಗಳಿಗೆ ಹಲವಾರು ಸಂಪ್ರದಾಯಿಕ ವೀರಶೈವ ತಲೆಗಳು ಅಡ್ಡಿಯನ್ನು ಒಡ್ಡಲು ಬಂದವು. ಆದರೆ ರೇವಪ್ಪಯ್ಯನವರ ಆಧ್ಯಾತ್ಮಿಕ ಶಕ್ತಿಯ ಮುಂದೆ ಅವೆಲ್ಲ ಮೋಡದಂತೆ ಕರಗಿ ಹೋದವು. ರೇವಪ್ಪಯ್ಯನವರು ಸಕಲಜೀವ ದಯಾಪಾರಿಗಳಾಗಿದ್ದರು. ಪಶು–ಪಕ್ಷಿಯಾದಿಗಳಲ್ಲಿ ಕರುಣೆವುಳ್ಳವರಾಗಿದ್ದರು. ಮೌಢ್ಯಗಳಲ್ಲಿ ಅವರಿಗೆ ನಂಬುಗೆ ಇರಲಿಲ್ಲ. ಅವರು ವಿಚಾರ ಪೂರ್ಣವಾದ ವೀರಶೈವ ಧರ್ಮವನ್ನು ಕಟ್ಟಿ ನಿಲ್ಲಿಸಿದರು. ತಮ್ಮ ಪತ್ನಿಗೆ ತಮ್ಮ ಬದುಕಿನಲ್ಲಿ ಸಂಪೂರ್ಣವಾದ ಆಧ್ಯಾತ್ಮಿಕ ಸ್ವಾತಂತ್ರ್ಯ ದೊರಕಿಸಿಕೊಟ್ಟು, ವೀರಶೈವ ಧೋರಣೆಯ ಮಹಿಳಾ ಸಮಾನತೆಯನ್ನು ನಿಜಾರ್ಥದಲ್ಲಿ ಅವರು ಸಾಕಾರವಾಗಿಸಿದರು.

ದಿನನಿತ್ಯ ರೇವಪ್ಪಯ್ಯನವರು ಐದು ಮನೆಗಳಿಗೆ ಭಿಕ್ಷೆಗಾಗಿ ಹೋಗುತ್ತಿದ್ದರು. ಅವರು ಊಟ ಮಾಡುತ್ತಿರಲಿಲ್ಲ; ಪ್ರಸಾದವೆಂದು ಅತ್ಯಂತ ಅಲ್ಪ ಆಹಾರವನ್ನು ತೆಗೆದುಕೊಳ್ಳುತ್ತಿದ್ದರು. ಬರಿಗಾಲಿನಿಂದ ನಡೆಯುತ್ತಿದ್ದರು. ಮೈಮೇಲೆ ಒಂದೇ ಒಂದು ಪಂಜೆ ಹೊದ್ದುಕೊಳ್ಳುತ್ತಿದ್ದರು. ಮೆತ್ತನೆಯ ಹಾಸುಗೆಯ ಮೇಲೆ ಮಲಗುತ್ತಿರಲಿಲ್ಲ. ಒಂದು ಬಿಳಿದಾದ ವಸ್ತ್ರ ಹಾಸಿ; ಅದರ ಮೇಲೆಯೆ ಮಲಗುತ್ತಿದ್ದರು. ಅದರ ಒಂದಿಷ್ಟು ಭಾಗ ಹೊದ್ದುಕೊಳ್ಳುತ್ತಿದ್ದರು. ದಿನನಿತ್ಯ ತಣ್ಣೀರಿನ ಸ್ನಾನ ಮಾಡುತ್ತಿದ್ದರು.

ರೇವಪ್ಪಯ್ಯನವರ ಸನ್ನಿಧಾನದಲ್ಲಿ ಹಲವಾರು ಪವಾಡಗಳು ನಡೆದುದುಂಟು. ಅವುಗಳನ್ನು ಅವರು ಮಾಡಲಿಲ್ಲ. ಸರ್ವಾಂಗ ಲಿಂಗಿಯಾದ ಅವರಿಗೆ ಅವು ಸಹಜ ಮಾಟಗಳಂತೆ ಘಟಿಸಿ ಹೋದವು. ನಿಜಾಮ ಅರಸರ ಕಾಲದಲ್ಲಿದ್ದ ರೇವಪ್ಪಯ್ಯನವರಿಗೆ ಅರಸು – ಅಧಿಕಾರಿಗಳು ತಮ್ಮ ಭಕ್ತಿಯನ್ನು ತೋರಿಸುತ್ತಿದ್ದರು. ಅವರ ಆಧ್ಯಾತ್ಮಿಕ ಸಾಧನೆಯ ಕೀರ್ತಿ ಹೈದಾರಾಬಾದಿನವರೆಗೂ ವ್ಯಾಪಿಸಿತ್ತು.

ರೇವಪ್ಪಯ್ಯನವರು ಅತ್ಯಂತ ನಿಷ್ಪಕ್ಷ ಭಾವದವರಾಗಿದ್ದರು. ಅವರ ಮಗ ವೀರಭದ್ರಯ್ಯನವರು ಕಾರಣಾಂತರಗಳಿಂದ ಕೊಲೆಯ ಸಂಚಿನಲ್ಲಿ ಸಿಕ್ಕಿಕೊಂಡರು. ಆಗ ರೇವಪ್ಪಯ್ಯನವರು "ಕೊಲೆ ಮಾಡಿದ ತನ್ನ ಮಗನಿಗೆ ಶಿಕ್ಷೆಯಾಗಲಿ"ಯೆಂದು ಹೇಳಿದರು.

ರೇವಪ್ಪಯ್ಯನವರು ನೂರಾರು ಸ್ಥಳಗಳಲ್ಲಿ ಅನುಷ್ಠಾನ ಮಾಡಿದರು. ಹೀಗಾಗಿ ಇಂದು ಅವರ ಹೆಸರಿನಲ್ಲಿ ಹಲವಾರು ಗುಡಿ–ಸ್ಮಾರಕಗಳು ಬೆಳೆದು ನಿಂತಿವೆ. ಅವರು ಬದುಕಿನ ಕೊನೆಯನ್ನು ಆಂಧ್ರ ಪ್ರದೇಶದ ಜಹಿರಾಬಾದ ತಾಲ್ಲೂಕಿನಲ್ಲಿ ಬರುವ ಸತ್ವಾರ ಗ್ರಾಮದ ಫಾಳೆಪ್ಪ ಹಳೆಂಬರ ಎಂಬ ಭಕ್ತನ ಮನೆಯಲ್ಲಿ ಪೂರೈಸಿದರು. ಅದು ಅವರ ಕೊನೆಯ ಬಿನ್ನಹವೆಂದು ಮೊದಲೆ ಭಕ್ತರಿಗೆ ತಿಳಿಸಿದ್ದರು. ಒಂದು ನೂರಾ ಐದು ವರ್ಷಗಳ ಕಾಲ ಸಾಧಕ ಬದುಕನ್ನು ಬದುಕಿ; ಜನರನ್ನು ಉದ್ಧರಿಸಿದ ರೇವಪ್ಪಯ್ಯನವರು ಕ್ರಿ.ಶ. ೧೯೩೬ರಲ್ಲಿ ಲಿಂಗೈಕ್ಯರಾದರು. ಅವರ ಪ್ರಸಾದಿಕ ಶರೀರವನ್ನು ಮೆರವಣಿಗೆ ಮಾಡುತ್ತ ನಾವದಗಿ ಗ್ರಾಮಕ್ಕೆ ತರಲಾಯಿತು. ಇಂದು ನಾವದಗಿ ಗ್ರಾಮದಲ್ಲಿ ಅವರ ಸಮಾಧಿ ವಿರಾಜಮಾನವಾಗಿದೆ. ರೇವಮ್ಮನವರು ಪತಿಯ ಲಿಂಗೈಕ್ಯದ ನಂತರ ಐದು ವರ್ಷಗಳಕಾಲ ಜೀವಿಸಿದರು. ಅವರ ಸಮಾಧಿಯೂ ರೇವಪ್ಪಯ್ಯನವರ ಸಮಾಧಿಯ ಪಕ್ಕದಲ್ಲಿಯೇ ಮಾಡಲಾಗಿದೆ.

ರೇವಪ್ಪಯ್ಯನವರ ಶಿಷ್ಯರುಗಳಲ್ಲಿ ಒಬ್ಬರಾಗಿದ್ದು; ಅವರನ್ನು ಪ್ರತ್ಯಕ್ಷವಾಗಿ ಕಂಡಿದ್ದ ಹಾಣೇಗಾಂವ ಬಸವಲಿಂಗ ಶಾಸ್ತ್ರಿಗಳು ಅವರ ಸಾಹಿತ್ಯ ಕೃಷಿಯ ಬಗೆಗೆ ಹೇಳಿದ್ದಾರೆ. ಅವರ ಮಾತುಗಳು ಹೀಗಿವೆ: "ರೇವಪ್ಪಯ್ಯನವರು ಬರೆಯಬೇಕೆಂದು ಬರೆಯುತ್ತಿರಲಿಲ್ಲ. ಅವರು ಶಿಷ್ಯರಿಗೆ ಅನುಭಾವ ಉಪದೇಶ ನೀಡುತ್ತಿದ್ದರು. ನಡು ನಡುವೆ ಅವರಿಗೆ ತೋಚಿದ ಅನುಭಾವದ ಪದ್ಯ ಹಾಡಿ ಬಿಡುತ್ತಿದ್ದರು. ಅದು ಅವರ ಆಶುಕವಿತ್ವ ಶಕ್ತಿಯಿಂದಲೇ ಹೊರ ಹೊಮ್ಮಿದ್ದಾಗಿರುತ್ತಿದ್ದಿತು". ಆದರೆ ಅವರ ಹಾಡುಗಳನ್ನು ಯಾರೂ ಸಂಗ್ರಹಿಸಲಿಲ್ಲ. ಕೇಳಿದವರು ಕೆಲ ಕೆಲವರು ಕಲಿತುಕೊಂಡಿದ್ದಾರೆ. ಹೀಗಾಗಿ ಹೆಚ್ಚಿನ ಸಂಖ್ಯೆಯ ಹಾಡುಗಳು ಕಾಲಗರ್ಭದಲ್ಲಿಯೇ ಅಡಗಿ ಹೋಗಿವೆ. ಉಳಿದ ಕೆಲವು ಹಾಡುಗಳಲ್ಲಿ ಕೆಲವನ್ನು ಇಲ್ಲಿ ಕೊಡಲಾಗಿದೆ:

ಜಂಗಮನೊಳಗ ಜಗವು

ಜಂಗಮನಿಲ್ಲ ಜಗದೊಳಗವ್ವ
ಜಂಗಮನೊಳಗ ಜಗ ಎಲ್ಲವ್ವ
ತಂಗಿ ಕೇಳೆ ಶಿವಗಂಗವ್ವ
ಮಂಗಲ ಮೂರುತಿ ಲಿಂಗವ್ವ ॥ ೧ ॥

ಆಕಾರ ಮಾಡಿ ಬಂದೆವ್ವ
ನಿರಾಕಾರ ಮಾಡಿ ನಡದೆವ್ವ

ಹಾಕ್ಯಾಡಿ ಮನಿಯೊಳು ಕುಂತೆವ್ವ
ಅದು ಏಕ ಮುಖ ಐತಿ ಶಾಂತವ್ವ ॥ ೨ ॥

ಶೂನ್ಯ ಸ್ಥಳದಾಗ ಜಂಗಮನವ್ವ
ಜಳಕಕ್ಕ ಬರತಾನ ಗುರ್ತಿಡಿಯವ್ವ
ಬ್ರಹ್ಮನ ಬಿಂದು ಐತೆವ್ವ
ಅದರೊಳು ಕಂದ ತಾನೆ ಆಯಿತೆವ್ವ ॥ ೩ ॥

ಚಂದುಳ್ಳ ಮನಿಗೆ ಹೊಯ್ತೆವ್ವ
ಚಂದ ಚಂದದ ಧ್ವನಿ ತೆಗೆತೆವ್ವ
ಅರುವಿನೊಳು ಅರು ಗುಡ್ಡವ್ವ
ಮರುವಿನ ಮಾಯ ಬಿಡವ್ವ ॥ ೪ ॥

ಪರಿಪರಿ ಲಾಡು ಹೆಡ್ಡವ್ವ
ಪರಮ ಪರುಷಿಗೆ ತಾ ಒಡ್ಡವ್ವ
ಪರಮ ಗುರು ಸಿದ್ಧಲಿಂಗಗೆವ್ವ
ಪರತರ ಮುಕುತಿ ನೀ ಪಡಿಯವ್ವ ॥ ೫ ॥

ದುಷ್ಟಗುಣ ಹಸನಮಾಡು

ದುಷ್ಟ ಗುಣಗಳೆಲ್ಲ ಕುಟ್ಟಿ ಒಬ್ಬಳೆ ಹಸನ ಮಾಡಿ
ಕುಟ್ಟಿ ಕುಟ್ಟಿ ನೀನು ಹಸನವ ಮಾಡು ತಂಗೆಮ್ಮ ॥ ಪ ॥

ಆಧಾರ ಆಯಿತೆ ಗುರುವಿನ ಪಾದಪೂಜವು ಮಾಡಿ
ಪಾದಕ ಸಲ್ಲಿಸಿ ನೀನು ವಾದ ಅಳಿಯೆ ತಂಗೆಮ್ಮ ॥ ೧ ॥

ವಿಭೂತಿ ಧರಿಸಿದ ಈ ಭಾವ ಗೆದಿಬೇಕೆ
ಮನಸು ಮನ ಸೋಸಿ ನಿರ್ಮಳ ಮನದಿಂದ ಧರಿಸಬೇಕ ತಂಗೆಮ್ಮ ॥ ೨ ॥

ಛಿದ್ರ ಗುಣಗಳೆಲ್ಲ ರುದ್ರಾಕ್ಷಿ ಧರಿಸಿನ್ನ
ರುದ್ರದಾಗ ಪ್ರಾಣಲಿಂಗ ತಿಳಿಯಬೇಕ ತಂಗೆಮ್ಮ ॥ ೩ ॥

ನಾನು ನೀನು ಬೇರೇನೆ ನನಗ ನಿನಗ ಎರಡೇನೆ
ನಾನು ನೀನು ಎಂಬುವ ವಾದ ತಿಳಿಯಬೇಕ ತಂಗೆಮ್ಮ ॥ ೪ ॥

ಯೋಗ ಆಸನ ಬಲಸಿ ಪಂಚ ಮುದ್ರೆ ಬಲಸಿ
ಪಂಚೀಸ ಗುಣಗಳು ಅಳಿಯ ಬೇಕು ತಂಗೆವ್ವ ॥ ೫ ॥

ಇಪ್ಪತ್ವಂದು ಸಾವಿರ ತಪ್ಪಲದ್ಹಂಗೆ ಆರುನೂರು
ತಾನೆ ಜಪ ಆಗತಾವ ತಿಳಯಬೇಕ ತಂಗೆಮ್ಮ ॥ ೬ ॥

ಪ್ರಸಾದ ಮುಗಿವಾಗ ಬ್ಯಾಸರ ಬಂದ್ಹಂಗ ಮಾತಾಡಬೇಡ
ನಿರ್ಮಲ ಮನಸಿಲಿಂದ ಮುಗಿಯಬೇಕ ತಂಗೆಮ್ಮ ॥ ೭ ॥

ಕಲ್ಯಾಣ ಪುರವಾಸ ಹುಲಿಕಂತಿ ಸಿದ್ಧೇಶ
ಸಿದ್ಧಲಿಂಗನ ಪಾದಕ ಹೊಂದಿ ಮುಕ್ತನಾಗ ತಂಗೆಮ್ಮ ॥ ೮ ॥

ಜ್ಞಾನಿಯ ಗುಣ ಬ್ಯಾರೆ

ಜ್ಞಾನಿಯ ಗುಣ ಬ್ಯಾರೆ ಶಂಭೋ
ಅಜ್ಞಾನಿಯ ಗುಣ ಬ್ಯಾರೆ
ಜ್ಞಾನಿಯು ಹಾಲನ್ನು ಕರೆಯುತ್ತಲಿರುವ
ಅಜ್ಞಾನಿ ತನ್ನ ಸುಖವನ್ನು ಬಯಸಿರುವ ॥ ೧ ॥


ಕತ್ತೆ ಕುದುರೆ ಎರಡು ಶಂಭೋ
ಜತೆಯಲಿ ಮೈತಿತ್ತು
ಕತ್ತೆಯು ಮೈಲಿಗೆ ಹೊತ್ತೊತ್ತು ಸಾಯ್ತು
ಉತ್ತಮ ಕುದುರೆ ಒಡೆಯನ ಜ್ವಾಪಾನ ಮಾಡಿತು ॥ ೨ ॥
ಭ್ರಮರವೆ ಎರಡು ಶಂಭೋ
ಮರದೊಳಗೆ ಇರುತ್ತಿತ್ತು
ಭ್ರಮರವು ಮರವೆ ಕೊರೆದಿತ್ತು

ಜೇನು ಲಿಂಗಕ್ಕೆ ತುಪ್ಪವ ಎರದಿತ್ತು ॥ ೩ ॥


ಉಪ್ಪು ಮುತ್ತು ಎರಡು ಶಂಭೋ
ನೀರೊಳಗೆ ಇರುತ್ತಿತ್ತು
ಉಪ್ಪು ಕರಗಿ ಹೋಗಿತ್ತು ಮುತ್ತು ಉಳಿದಿತ್ತು
ಇದೇ ಗುರು ಸಿದ್ಧಲಿಂಗ ಹೇಳಿದ ಮಾತು ॥ ೪ ॥

(ಈ ವಿವರಗಳನ್ನು ನಾಗಲಿಂಗ ಕವಿ – ರೇವಪ್ಪಯ್ಯನವರ ವಂಶಸ್ಥರಾದ ಚಂದ್ರಶೇಖರ ಸ್ವಾಮಿ ಇವರು ನೀಡಿದ್ದಾರೆ.)


□




ರೇವಪ್ಪಯ್ಯನವರ ವಾಸ್ತವ್ಯದ ಮನೆ (ನಾವದಗಿ)



ರೇವಪ್ಪಯ್ಯನವರ ಮಂದಿರ (ನಾವದಗಿ).




ರೇವಪ್ಪಯ್ಯನವರ ಮಂದಿರದ ಎದುರು ನೋಟ (ನಾವದಗಿ).




ದೇವಾಲಯದ ಒಳಾಂಗಣದ ದೃಶ್ಯ




ರೇವಪ್ಪಯ್ಯನವರ ದರ್ಶನ ಪ್ರತಿಮೆ (ನಾವದಗಿ).



ರೇವಪ್ಪಯ್ಯನವರು ಪೂಜೆಗಾಗಿ ನೀರು ಉಪಯೋಗಿಸುತ್ತಿದ್ದ ಹಳೆಯದಾದ ಬಾವಿ





ರೇವಪ್ಪಯ್ಯನವರ ದೇವಾಲಯದ ಪರಿಸರದಲ್ಲಿರುವ ತೀರ್ಥಗುಂಡ (ನಾವದಗಿ).




ರೇವಪ್ಪಯ್ಯನವರು
ಅನುಷ್ಠಾನ ಮಾಡಿದ
ಗುಹೆ (ನಾವದಗಿ).

ರೇವಪ್ಪಯ್ಯನವರು
ನಿರ್ಮಿಸಿದ ಅಗ್ನಿಕುಂಡ
(ನಾವದಗಿ).







ಗುರುಗಳಾದ
ಸಿದ್ಧಲಿಂಗರು
ರೇವಪ್ಪಯ್ಯನವರಿಗೆ
ಉಪದೇಶ ನೀಡಿದ
ಸ್ಥಳ (ನಾವದಗಿ).




ಗುರು ಸಿದ್ಧಲಿಂಗರ
ದರ್ಶನ ಪ್ರತಿಮೆ.

ರೇವಪ್ಪಯ್ಯನವರು
ಕಾಶಿಯಿಂದ ತಂದು
ಸ್ಥಾಪಿಸಿದ ಲಿಂಗ
(ನಾವದಗಿ).







ರೇವಪ್ಪಯ್ಯನವರು
ಹರಿಜನರಿಗೆ
ಉಪದೇಶ
ನೀಡಿದ ಸ್ಥಳ
(ನಾವದಗಿ).



ನಾವದಗಿ ರೇವಪ್ಪಯ್ಯನವರು ದುಷ್ಟಶಕ್ತಿ (ಬೇತಾಳ)ಗಳನ್ನು ಬಂಧಿಸಿದ ಆಲದ ವೃಕ್ಷ



ನಾವದಗಿ ರೇವಪ್ಪಯ್ಯನವರ ರಥ




ನಾವದಗಿ
ರೇವಪ್ಪಯ್ಯನವರ
ಸಮಾಧಿ ಸ್ಥಳ
(ದೇವಾಲಯದ
ಗರ್ಭಗುಡಿಯಲ್ಲಿದೆ).



ನಾವದಗಿ ರೇವಪ್ಪಯ್ಯನವರ ಸಹಧರ್ಮಿಣಿ ರೇವಮ್ಮನವರ ಸಮಾಧಿ
(ದೇವಾಲಯದ ಗರ್ಭಗುಡಿಯಲ್ಲಿದೆ).




ರೇವಪ್ಪಯ್ಯನವರ
ಶಿಷ್ಯ ವಡವಾಳ
ಶಂಕರಲಿಂಗರ
ಪ್ರತಿಮೆ
(ನಾವದಗಿ).




ರೇವಪ್ಪಯ್ಯನವರ ಕೃಪೆಯಿಂದ ಇಮಾಮ ಸಾಬನು ಸದಾನಂದ
ಮಹಾರಾಜನಾಗಿ ಅವರ ಶಿಷ್ಯತ್ವವಹಿಸಿದುದು. ಅವರ ಸಮಾಧಿ (ಸಿದ್ಧೇಶ್ವರ ಗ್ರಾಮ).




ರೇವಪ್ಪಯ್ಯನವರ ಸ್ಮಾರಕ (ಮುಚಳಂಬಿ –ಬ.ಕ.ತಾ)




ರೇವಪ್ಪಯ್ಯನವರ ಸ್ಮಾರಕ (ಹುಣಸನಾಳ – ಹು. ತಾ)



ಸೋಮೇಶ್ವರ ಮಂದಿರದಲ್ಲಿ ರೇವಪ್ಪಯ್ಯನವರ ಸ್ಮಾರಕ (ಚಿಂತಾಕಿ –ಔ.ತಾ)




ರೇವಪ್ಪಯ್ಯನವರ
ಗದ್ದುಗೆ (ಚಿಂತಾಕಿ).




ರೇವಪ್ಪಯ್ಯನವರ ಸ್ಮಾರಕ (ಕಮಲನಗರ –ಔ.ತಾ)




ರೇವಪ್ಪಯ್ಯನವರ
ಪ್ರತಿಮೆ
(ಕಮಲನಗರ).



ಸೋಮೇಶ್ವರ ಮಂದಿರದಲ್ಲಿ ರೇವಪ್ಪಯ್ಯನವರ ಸ್ಮಾರಕ (ಖೇಡ –ಔ.ತಾ).




ಖೇಡ ಗ್ರಾಮದ ರೇವಪ್ಪಯ್ಯನವರ ದರ್ಶನ ಪ್ರತಿಮೆ.




ರೇವಪ್ಪಯ್ಯನವರ ಸ್ಮಾರಕ (ತೇಗಂಪುರ–ಔ.ತಾ).




ರೇವಪ್ಪಯ್ಯನವರೊಂದಿಗೆ ಇರುತ್ತಿದ್ದ ಗೋವಿನ ಸಮಾಧಿ (ತೇಗಂಪುರ).




ರೇವಪ್ಪಯ್ಯನವರ ಮಂದಿರ (ಖಿತಗಾಂವ- ಔ.ತಾ).



ರೇವಪ್ಪಯ್ಯನವರ ದರ್ಶನ ಮೂರ್ತಿ (ಖಿತಗಾಂವ).





ರೇವಪ್ಪಯ್ಯನವರ
ಸ್ಮಾರಕ
(ಜೀರಗಾ-ಬಿ-ಔ.ತಾ).




ನಾವದಗಿ ರೇವಪ್ಪಯ್ಯನವರ ಮಂಟಪ (ಭಲ್ಲೂರ - ಔ.ತಾ).

ನಾವದಗಿ
ರೇವಪ್ಪಯ್ಯನವರ
ದರ್ಶನ ಮೂರ್ತಿ
(ಭಲ್ಲೂರ).






ರೇವಪ್ಪಯ್ಯನವರ ಗುಡಿ ಜೋಜನಾ (ಔ.ತಾ).




ರೇವಪ್ಪಯ್ಯನವರ ಗುಡಿ (ಧುಮ್ಮನಸೂರು – ಹು.ತಾ).




ರೇವಪ್ಪಯ್ಯನವರು ವಾಸ ಮಾಡಿದ ಹರಿಜನಕೇರಿಯಲ್ಲಿ ಹರಿಜನರು ನಿರ್ಮಿಸಿದ ಮಂದಿರ (ಜಾಗೈ-ಭಾ.ತಾ).




ರೇವಪ್ಪಯ್ಯನವರ ದರ್ಶನ ಪ್ರತಿಮೆ (ಜಾಗೈ).



ಲಿಂಗಾಯತರು ನಿರ್ಮಿಸಿದ ರೇವಪ್ಪಯ್ಯನವರ ದೇವಾಲಯ (ಜಾಗೈ).




ರೇವಪ್ಪಯ್ಯನವರ ದರ್ಶನ ಪ್ರತಿಮೆ (ಜಾಗೈ)




ರೇವಪ್ಪಯ್ಯನವರ ಮಂದಿರ (ಶಿವನಳ್ಳಿ –ಭಾ.ತಾ).




ರೇವಪ್ಪಯ್ಯನವರ ದರ್ಶನ ಮೂರ್ತಿ (ಶಿವನಳ್ಳಿ).




ರೇವಪ್ಪಯ್ಯನವರ ಗುಂಪಾ (ಶಿದ್ಧೇಶ್ವರವಾಡಿ –ಭಾ.ತಾ).




ರೇವಪ್ಪಯ್ಯನವರ
ದರ್ಶನ ಮೂರ್ತಿ
(ಸಿದ್ಧೇಶ್ವರ ವಾಡಿ).




ರೇವಪ್ಪಯ್ಯನವರ ಸ್ಮಾರಕ (ಮೈನಳ್ಳಿ- ಭಾ.ತಾ).




ರೇವಪ್ಪಯ್ಯನವರ ಪ್ರತಿಮೆ (ಮೈನಳ್ಳಿ)




ರೇವಪ್ಪಯ್ಯನವರ ಸ್ಮಾರಕ ಸರಜೋಳಗಾ ಕ್ರಾಸ್ (ಭಾ.ತಾ).




ರೇವಪ್ಪಯ್ಯ ದಂಪತಿಗಳ ಪ್ರತಿಮೆಗಳು ದಾಡಗಿ (ಭಾ.ತಾ).




ರೇವಪ್ಪಯ್ಯನವರ ಮಂದಿರ ತೆರನಳ್ಳಿ (ಭಾ.ತಾ).




ರೇವಪ್ಪಯ್ಯನವರ ಗದ್ದುಗೆ ಬ್ಯಾಲಹಳ್ಳಿ . ಎಚ್ (ಭಾ.ತಾ).




ನಾವದಗಿ ರೇವಪ್ಪಯ್ಯನವರ ಮಂದಿರ (ಭಾಲ್ಕಿ).




ರೇವಪ್ಪಯ್ಯನವರ ಗದ್ದುಗೆ ಉಚ್ಚಾ (ಭಾ.ತಾ)



ರೇವಪ್ಪಯ್ಯನವರ ಮಂದಿರ ಕರಡ್ಯಾಳ (ಭಾ.ತಾ).





ರೇವಪ್ಪಯ್ಯನವರ ದರ್ಶನ ಪ್ರತಿಮೆ (ಕರಡ್ಯಾಳ)




ರೇವಪ್ಪಯ್ಯನವರ ಮಂದಿರ (ಖಟಕ್ ಚಿಂಚೋಳಿ).

ಭವಾನಿ ಮಂದಿರದಲ್ಲಿರುವ ರೇವಪ್ಪಯ್ಯನವರ ಸ್ಮಾರಕ (ಬೀದರ)







ರೇವಪ್ಪಯ್ಯನವರ ದರ್ಶನ ಪ್ರತಿಮೆ (ಬೀದರ).




ರೇವಪ್ಪಯ್ಯನವರ ತಾಯಿಯ ತವರು ಮನೆಯ ಒಳಾಂಗಣ ನೋಟ,
ಪೇಠಶಿರೂರ (ಚಿ.ತಾ).



ರೇವಪ್ಪಯ್ಯನವರ ಗದ್ದುಗೆ ಮಠಪತಿ ಅವರ ಮನೆ (ಪೇಠಶಿರೂರ)




ರೇವಪ್ಪಯ್ಯನವರ ದರ್ಶನ ಮೂರ್ತಿ, (ಪೇತಶಿರೂರ)




ರೇವಪ್ಪಯ್ಯನವರ ಮಾಸಿನ ಮಗಿ ಹೂಳಿದ ಸ್ಥಳದಲ್ಲಿ ಕಟ್ಟಿಸಿದ ಗದ್ದುಗೆ
ಮಠಪತಿ ಅವರ ಮನೆಯಲ್ಲಿ, (ಪೇತಶಿರೂರ)




ರೇವಪ್ಪಯ್ಯನವರ ತಾಯಿಯ ತವರು ಮನೆಯ ವಂಶಸ್ಥ ರೇವಯ್ಯ ಸ್ಥಾವರಮಠ (ಪೇಠಶಿರೂರ).




ರೇವಣಸಿದ್ಧೇಶ್ವರ ದೇವಾಲಯದ ಪರಿಸರದಲ್ಲಿರುವ ರೇವಪ್ಪಯ್ಯನ ಗುಡಿ (ರಟಕಲ್).



ರೇವಪ್ಪಯ್ಯನವರ ದರ್ಶನ ಮೂರ್ತಿ (ರಟಕಲ್).



ರೇವಪ್ಪಯ್ಯನವರ ಸ್ಮಾರಕ ಝುರ, (ತಾ. ದೇಗುಲೂರು; ಜಿ: ನಾಂದೇಡ).



ರೇವಪ್ಪಯ್ಯನವರು ಅನುಷ್ಠಾನ ಮಾಡಿದ ಸೋಮಲಿಂಗೇಶ್ವರ ದೇವಾಲಯ
(ಉದಗೀರ)

೩. ಅಪ್ಪಾರಾವ ಕುಲಕರ್ಣಿ (ಕ್ರಿ.ಶ.ಸು. ೧೮೬೦-೧೯೩೨)

ಮಲ್ಲಿಕಾರ್ಜುನ ಚಾಮರಡ್ಡಿ ಅವರ ಪರಮ ಶಿಷ್ಯರಾಗಿ ಅವರ ಬದುಕಿನ ಅವಿಭಾಜ್ಯ ಅಂಗದಂತೆ ಜೀವಿಸಿದ್ದ ಅಪ್ಪಾರಾವ ಕುಲಕರ್ಣಿ ಅವರು ಬೀದರ ಜಿಲ್ಲೆ, ಭಾಲ್ಕಿ ತಾಲ್ಲೂಕಿನ ಖಟಕ್ ಚಿಂಚೋಳಿಯ ನೆಲೆಯವರೆ ಆಗಿದ್ದಾರೆ. ವೈಷ್ಣವ ಬ್ರಾಹ್ಮಣಮನೆತನದ ಅಪ್ಪಾರಾವ ಅವರು ವೀರಶೈವ ಸಂಸ್ಕೃತಿಯ ಅನುಸಂಧಾನಕ್ಕೆ ಬಂದುದು ಗುರುಗಳಾದ ಮಲ್ಲಿಕಾರ್ಜುನ ಅವರಿಂದ.

ಅಪ್ಪಾರಾವ ಅವರ ಮನೆತನವು ನೈಜಾಮ ಪ್ರಭುತ್ವದ ವ್ಯವಸ್ಥೆಯಲ್ಲಿ ಕುಲಕರ್ಣಿಕೆಯ ಅಧಿಕಾರ ಚಲಾಯಿಸುತ್ತಿದ್ದಿತು. ಹೀಗಾಗಿ ಅವರ ಮನೆತನಕ್ಕೆ "ಕುಲಕರ್ಣಿ" ಎಂಬ ಹೆಸರು ಬಂದಿತು. ಅಪ್ಪಾರಾವ ಅವರ ತಂದೆ ಅಮೃತರಾವ ಅವರು 'ಕುಲಕರ್ಣಿ' ವೃತ್ತಿಯನ್ನೆ ಮಾಡುತ್ತಿದ್ದರು. ಸಮಾಜದಲ್ಲಿ ಅವರಿಗೆ ಅತ್ಯಂತ ಗೌರವವಿದ್ದಿತು. ಅಧಿಕಾರದ ದೃಷ್ಟಿಯಿಂದಲೂ ಹಳ್ಳಿಯಲ್ಲಿ 'ಕುಲಕರ್ಣಿ' ಯೆಂಬುದು ಮಹತ್ವದ ವೃತ್ತಿಯೇ ಆಗಿತ್ತು. ಅಮೃತರಾವ ಅವರ ಹೆಂಡತಿ ಕಾಶೀಬಾಯಿ. ಕಟ್ಟಾ ವೈಷ್ಣವ ಸಂಪ್ರದಾಯದ ಪರಿಪಾಲನೆ ಮನೆಯಲ್ಲಿದ್ದಿತು. ಈ ದಂಪತಿಗಳಿಗೆ ಮೂರು ಜನ ಮಕ್ಕಳಿದ್ದರು. ಅವರಲ್ಲಿ ಅಪ್ಪಾರಾಯರು ಕೊನೆಯವರು. ಗೋಪಾಲರಾವ, ನಾರಾಯಣರಾವ ಎಂಬ ಇಬ್ಬರು ಹಿರಿಯ ಮಕ್ಕಳು ಅಮೃತರಾವ ಅವರಿಗೆ ಇದ್ದರು. ಅವರು ಅಪ್ಪಾರಾಯರ ಅಣ್ಣಂದಿರು.

ಅಪ್ಪಾರಾವ ಅವರು ಓದಿದ್ದು ಮೋಡಿ ಶಿಕ್ಷಣ. ಮರಾಠಿ ಭಾಷೆ ಕಲಿತರು, ಹಿಂದಿ-ಉರ್ದು ಭಾಷೆಗಳಲ್ಲಿ ಪರಿಣತಿ ಸಾಧಿಸಿದರು. ಕನ್ನಡವಂತೂ ಮಾತೃಭಾಷೆಯೇ ಆಗಿದ್ದಿತು. ಸ್ವಪ್ರಯತ್ನದಿಂದ ಅವರು ಹಲವಾರು ಜ್ಞಾನ ಆಕರಗಳನ್ನು ತಿರುವಿ ಹಾಕಿದರು. ಶೈವ-ವೈಷ್ಣವ ಸಿದ್ಧಾಂತಗಳನ್ನು ಸರಿಯಾಗಿ ತಿಳಿದುಕೊಂಡವರಾಗಿದ್ದರು. ಚಾಮರಡ್ಡಿ ಅವರ ಸಂಪರ್ಕದಲ್ಲಿ ಅವರಿಗೆ ವೀರಶೈವ ತತ್ತ್ವಜ್ಞಾನದ ಪರಿಜ್ಞಾನವೂ ಆಯಿತು. ಇಪ್ಪತ್ತರ ಹರೆಯದ ಅಪ್ಪಾರಾವ "ಆಧ್ಯಾತ್ಮದ ಗುಂಗಿನಲ್ಲಿ ತೇಲಾಡುವ ಅಪ್ಪಾರಾಯ" ಆಗ ತೊಡಗಿದರು. ಗುರುವಿನ ಹಿಂಬಾಲಕನಾಗಿ ಅಪ್ಪಾರಾವ ಸಂಚರಿಸ ತೊಡಗಿದರು. ಭಜನೆಗಳಲ್ಲಿ ಗುರುವಿನೊಂದಿಗೆ ಭಾಗವಹಿಸಿ, ಹಾಡತೊಡಗಿದರು. ಗುರುವಿನ ಹಾಡಿಗೆ ಶಿಷ್ಯನ ಶ್ರುತಿ. ಗುರು ರಚಿಸಿದ ತತ್ತ್ವ ಪದಗಳಿಗೆ ಶಿಷ್ಯ ಅಪ್ಪಾರಾವ

ಅವರ ಇನಿದಾದ ದನಿ, ಹೀಗೆ ಉಭಯರ ಸಾಮರಸ್ಯವು ಜನತೆಗೆ ಅನುಕರಣೀಯವಾಗಿಯೇ ಕಂಡಿತು. ಹಲವಾರು ಆಧ್ಯಾತ್ಮ ಜಿಜ್ಞಾಸುಗಳಿಗೆ ಆಶ್ರಯದ ನೆಲೆಯೂ ಆಗಿ ತೋರಿತು. ಅಣ್ಣಗೋಪಾಲರಾಯರಿಗೆ ಅಪ್ಪಾರಾಯನ ಮೇಲೆ ಅಪ್ರತಿಮ ಪ್ರೀತಿ. ತಮ್ಮ ಕಿರಿಯ ಸಹೋದರ ಇಂತಹ ಗಾಢವಾದ ಆಧ್ಯಾತ್ಮದಲ್ಲಿ ಏಕಾಕಿಯಾಗಿ ಉಳಿಯುವುದು ಬೇಕಾಗಿರಲಿಲ್ಲ. ತಮ್ಮಂತೆ ತಮ್ಮನೂ ಸಂಸಾರಸ್ಥನಾಗಬೇಕೆಂಬ ಹಂಬಲವು ಅವರದಾಗಿತ್ತು. ಆದುದರಿಂದ ಅಪ್ಪಾರಾವ ಅವರಿಗೆ ಗೋಪಾಲರಾಯರು ಪ್ರೀತಿಯಿಂದ ಮದುವೆಗೆ ಮನ ಒಲಿಸಿದರು. ಅಣ್ಣನ ಪ್ರೀತಿಯ ಬಂಧನದಿಂದ ಬಿಡಿಸಿಕೊಳ್ಳುವುದಕ್ಕೆ ಸಾಧ್ಯವಾಗದೆ ಅಪ್ಪಾರಾಯರು ಮದುವೆಯಾದರು. ಅವರ ಹೆಂಡತಿ ವಿಠಾಬಾಯಿ.

ಕುಲಕರ್ಣಿಯವರ ಮನೆತನವು ಹೊಸದಾಗಿ ಬಂದ ಹೆಣ್ಣುಮಕ್ಕಳ ಕಾರಣದಿಂದ ಅಶಾಂತಿಯ ನೆಲೆಯಾಗ ತೊಡಗಿತು. ವಿಠಾಬಾಯಿಗೂ, ಉಳಿದ ಹೆಣ್ಣುಮಕ್ಕಳಿಗೂ ತಾಳಮೇಳ ಇಲ್ಲದೆ ಹೋಯಿತು. ಹೀಗಾಗಿ ಮನೆಯಲ್ಲಿ ಯಾವತ್ತು ಕಿರಿ ಕಿರಿ ಕೇಳುವಂತಾಯಿತು. ಈ ವರೆಗೂ ಶಾಂತಮನದಿಂದ ಆಧ್ಯಾತ್ಮ ಸಾಧನೆಯಲ್ಲಿ ತೊಡಗಿದ್ದ ಅಪ್ಪಾರಾವ ಅವರಿಗೆ ಮನೆಯ ವಾತಾವರಣವು ಅಸಹ್ಯವೆನಿಸಿತು. ಕಿರಿಕಿರಿಯಿಂದ ದೂರಾಗಿ ಶಾಂತಿಯ ಜೀವನ ಸಾಗಿಸಲೆಂದು ಅಪ್ಪಾರಾವ ಅವರು ಅಣ್ಣಂದಿರಿಂದ ಬೇರೆಯಾದರು.

ಒಂದೆರಡು ವರುಷ ಬದುಕು ನಡೆಯಿತು. ಒಂದು ಹೆಣ್ಣು ಮಗುವೂ ಜನಿಸಿತು. ಇವೇ ಸುಖದ ದಿನಗಳು ಬಹುಕಾಲ ಉಳಿಯಲಿಲ್ಲ. ಅಪ್ಪಾರಾವ ಅವರ ಪಾಲಿಗೆ ಬಂದ ಹೊಲವು ಸರಿಯಾಗಿ ಬೆಳೆಯದೆ ಹೋಯಿತು. ಮಾಡಿದ ಸಾಲವು ತೀರುವುದಕ್ಕೆ ಬದಲಾಗಿ ಹಿರಿದಾಗ ತೊಡಗಿತು. ಬದಕೊಂದು ಬವಣೆಯ ಕಂತೆಯಾಯಿತು. ತಮ್ಮನ ಬದುಕನ್ನು ನೋಡಿದ ಅಣ್ಣಂದಿರು ಸಹಾಯಕ್ಕೇನೊ ಬಂದರು. ಅವರು ತಮ್ಮ ಪಾಲಿನ ಹಕ್ಕಾಗಿದ್ದ ಕುಮಾರ ಚಿಂಚೋಳಿ ಗ್ರಾಮದ ಕುಲಕರ್ಣಿಕೆಯನ್ನು ಅಪ್ಪಾರಾವ ಅವರಿಗೆ ಒಪ್ಪಿಸಿದರು, ಆದರೂ ಅಪ್ಪಾರಾವ ಅವರಿಗೆ ನಿಜವಾದ ನೆಮ್ಮದಿ ಕನಸಾಯಿತು. ಇದೆ ಸಮಯದಲ್ಲಿ ಪತ್ನಿ–ಮಗಳು ಅಕಾಲ ಮರಣಕ್ಕೆ ಗುರಿಯಾದರು. ಅಪ್ಪಾರಾವ ಅವರಿಗೆ ಐಹಿಕವಾಗಿ ಬಿಡುಗಡೆ ದೊರಕಿದಂತಾಯಿತು. ಹಿರಿಯರು ಎರಡನೆಯ ಮದುವೆ ಪ್ರಸ್ತಾಪ ಮಾಡಿದರು. ಅಪ್ಪಾರಾವ ಅವರು ಅದಕ್ಕೆ ಒಪ್ಪದೆ, ವೈರಾಗ್ಯದ ಬದುಕಿನತ್ತ ಧಾಪುಗಾಲಿನಿಂದ ನಡೆದರು. ಜೀವನಪರ್ಯಂತರ ಅವರು ಮಲ್ಲಿಕಾರ್ಜುನ ಚಾಮರಡ್ಡಿ ಅವರ ನೆರಳಾಗಿ; ವಿರಕ್ತಿಯ ಬದುಕಿನಿಂದ ಸಾಧಕ ಬದುಕನ್ನು ನಡೆಯಿಸಿದರು.

ಗುರುಗಳ ಹಾಡುಗಳನ್ನು ಹಾಡುತ್ತಲಿದ್ದ ಅಪ್ಪಾರಾವ ಅವರಲ್ಲಿ ಗುರುವಿನ ಕರುಣೆಯಿಂದ ಕಾವ್ಯ ಶಕ್ತಿಯು ಜಾಗ್ರತವಾಯಿತು. ಸ್ವತ ಹಾಡುಗಳನ್ನು ಬರೆಯ ತೊಡಗಿದರು. ಅದಕ್ಕೆ ಗುರುವಿನ ಸಮ್ಮತಿಯೂ ದೊರಕಿತು. ಅಪ್ಪಾರಾವ ಅವರು ಹಲವಾರು ಅಭಂಗ ಮತ್ತು ತತ್ತ್ವಪದಗಳನ್ನು ಬರೆದಿದ್ದಾರೆ. ತಮ್ಮ ಎಲ್ಲ ಹಾಡುಗಳಿಗೆ ಅಪ್ಪಾರಾವ ಅವರು ತಮ್ಮ ಗುರುಗಳಾದ ಮಲ್ಲಿಕಾರ್ಜುನ ಅವರ ಹೆಸರನ್ನೇ ಅಂಕಿತವಾಗಿಟ್ಟುಕೊಂಡಿದ್ದಾರೆ. ಅವರ ಕೆಲವು ಪದ್ಯಗಳನ್ನು ಇಲ್ಲಿ ಕೊಡಲಾಗಿದೆ.

ನಾ ಮೂಢ

ನಾ ಮೂಢ ಎನಗೊಲಿಸಮ್ಮ । ಬ್ರಹ್ಮ
ಹರಿಹರಗೆ ಹಡೆದಂಥ ಜನನಿ ತಾಯಮ್ಮ ॥ ಪ ॥

ಆದಿ ಅನಾದಿಯ ಮುನ್ನ । ನಿಜ
ರೂಪಕ್ಕೆ ರೂಪಾಗಿ ತೋರಿದಿ ನೀನ ॥
ಪ್ರಥಮದಲ್ಲಿ ಪಂಚಗುಣ । ಇದ
ರಂತೆ ತ್ರಿಮೂರ್ತಿ ಬ್ರಹ್ಮವಿಷ್ಣುಶಿವನ ॥ ೧ ॥

ಆಕಾರ ಮಾಡಿದಿ ರಚನ । ಸ್ವರ್ಗ
ಮರ್ತ್ಯ ಪಾತಾಳ ಮೂರು ಜಗ ಚೌದಭುವನ ॥
ಇದರಂತೆ ಸೃಷ್ಟಿಯ ರಚನ । ಪಿಂಡ
ಬ್ರಹ್ಮಾಂಡ ಭುವನಕ್ಕೆ ಆದಿ ಸಂಪೂರ್ಣ ॥ ೨ ॥

ಎಷ್ಟಂತ ಮಾಡಲಿ ಸ್ತುತಿನಾ । ಎನ್ನ
ಬಾಲನ ಆಡುನುಡಿಗೆ ಆಗಿ ಪ್ರಸನ್ನ ॥
ಉನ್ಮನಿ ಗಿರಿವಾಸ ಸ್ಥಾನ । ನಮ್ಮ
ಧರೆಯೊಳು ಚಿಂಚೋಳಿ ಮಲ್ಲಿಕಾರ್ಜುನ ॥ ೩ ॥

(ಯೋಗ ಸಿದ್ಧಾಂತ–ಪು.೭೧)

ವ್ಯರ್ಥ ದಿನಗಳಿಬ್ಯಾಡ

ವ್ಯರ್ಥ ದಿನಗಳಿಬ್ಯಾಡ । ಸ–
ದ್ಗುರವಿನ ಚರಣ ಪಾದವ ಬಿಡುಬ್ಯಾಡ ॥
ನೀ ನೆನಿ ನೆನಿ ಮೂಢ.... ॥ ವ್ಯರ್ಥ ॥ಪಲ್ಲವಿ॥

ಪಾಪ ಕರ್ಮ ವಿಷಯ ಲುಬ್ದನಾದಿ । ಪರ–
ಸ್ತ್ರೀಯರ ಕಂಡು ಮೋಹಕೆ ಮರುಳಾದಿ ॥
ನೀ ಕಂಡ್ಯೊಯಮಬಾದಿ.... ॥ ೧ ॥

ಮೊದಲೆ ದುಷ್ಟ ಅಷ್ಟ ಗುಣ ಅಳಿದು । ಕಷ್ಟ–
ಬಿಟ್ಟು ಶ್ರೇಷ್ಠಾದಂಥ ಮೂಲವ ತಿಳಿದು ॥
ಸಂಕಲ್ಪವ ತೊಳೆದು .... ॥ ೨ ॥

ಮಾಡೊ ಸಾಧನ ನರ ಜನ್ಮಕ ಬಂದು । ಪರ–
ಬ್ರಹ್ಮ ಗೂಡಿದಾನೋ ನಿನ್ನಲ್ಲಿ ಬಂದು ॥
ನೀ ನೋಡೊ ಕಣ್ಣ ತೆರೆದು .... ॥ ೩ ॥

ಇಡಾ ಪಿಂಗಳ ಸ್ವರ ದಾರಿ ಹಿಡಿ । ಮುಂದೆ–
ಆನಂದ ಆದಿಯ ಬ್ರಹ್ಮದ್ವಾರ ನೋಡಿ ॥
ಮಹಾಲಿಂಗನ ಕೂಡಿ.... ॥ ೪ ॥

ಮುಂದೆ ಕಾಣ್ವಾದೊ ರವಿಚಂದ್ರ ಬಿಂಬ । ತೇಜ
ಪ್ರಕಾಶ ಬೆಳಕಿನೋಳು ಬ್ರಹ್ಮಾಂಡ ಶೋಭ ॥
ಗುರು ಮಲ್ಲೇಶ ಶಂಭ.... ॥ ೫ ॥

(ಅದೇ– ಪು.೭೨)

ಎಚ್ಚರಾಗಿರಿ

ಎಚ್ಚರ ಆಗಿರಿ ಇನ್ನಾ ತಿರುಗಿ ಬಾರದು ನರಜನ್ಮ ಕಠಿಣಾ ॥ ಪಲ್ಲವಿ ॥
ಲಕ್ಷ ಚೌರ‍್ಯಯಂಸಿಯ ಫಿರಕಿ ತಿರುಗುವದು ಗಿರಕಿ
ಮುಣಗದು ಭವ ನರಕಿ ತಿಳಿ ಮನಸಿನ ಹರಕಿ
ಗುರು ಚರಣದಲ್ಲಿ ಮನಸಿಕ್ಕಿ ನವ ಖಂಡದೇಹ ಹುಡಕಿ
ನೋಡ ಬೇಕೊ ಮನಸಿಕ್ಕಿ ದಶಖಂಡದ ಖಿಡಕಿ ॥ ೧ ॥

ಮೂರುವರಿ ಮಳಾ ತೋಟಾ ಬೇಲಿ ಜಿಗಿದು ನಾಲ್ಕು ಪಾಡಗಳಿಚಾ
ಮೂರು ಠಿಕಾಣಾ ಹಸನಿಟ್ಟು ಆರು ಹೊಡೆದು ಬಿಡದೊ ಕಷ್ಟ
ಮಧ್ಯ ಭಾವಿಯಲ್ಲಿ ತ್ರಿಕೂಟ, ಕಂಡೆನೋ ನಾ ಭ್ರುಕೂಟ
ಬಿತ್ತಿ ಬೆಳೆದು ಮಾಡಿಟ್ಟ ಸವಿ ಮಾಡಿರಿ ಊಟ ॥ ೨ ॥

ಬೈಲೊಳೊ ಬಾಗಶಾಯಿ ನಾನಾ ತರಹದ ಹೂ ಕಾಯಿ
ಬೇಕಾಗಿಲ್ಲೊ ನಿನ್ನ ಕೈ ಕಲ್ಪ ವೃಕ್ಷದ ಬಾವಿ
ಪಂಚ ಅಮೃತ ನೀ ಸವಿ ಯೋಗಿಗಳಗಿ ತೆರದ ಬಾಯಿ
ಗುರು ಮಲ್ಲಿಕಾರ್ಜುನ ಮಿಠಾಯಿ ಚಿಂಚೋಳಿಯಲ್ಲಿ ಸ್ಥಾಯಿ ॥ ೩ ॥

(ಅದೇ–ಪು.೭೮)

ಗುರುವಿನ ಗುರುತವ ತಿಳಿಯಬೇಕೆ

ಗುರುವಿನ ಗುರುತವ ತಿಳಿಯಬೇಕೆ ಗೆಳದಿ ।
ಬೀಸಾನು ಗೋದಿ ॥ ಪಲ್ಲವಿ ॥

ಬೀಸಾನು ಗೋದಿ ಹಸನಾಗಿ ಹಾದಿ ।
ಹಾದಿಯೊಳಗೆ ಮೂರು ಬೀದಿ ಕಲತಾವ ಗೆಳದಿ
ಬೀಸಾನು ಗೋದಿ ॥ ೧ ॥

ನೀರಿನೋಳು ಕೊಡ ತುಂಬಿ ಮಾಡಿ ಇಟ್ಟಾರ ಸಿಂಬಿ ।
ಕೊಡ ಬಿಟ್ಟು ಸಿಂಬೀನೆ ಒಯ್ದಾರೆ ಗೆಳದಿ ॥
ಬೀಸಾನು ಗೋದಿ ॥ ೨ ॥


ಸುತ್ತ ಮುತ್ತ ಆವಾರಗೋಡಿ ನಟ್ಟ ನಡುವೆ ದೇವರ ಗುಡಿ ।
ಗುಡಿಯ ಮುಂದ ದೇವರಗಿ ಕೊಯ್ದಾರ ಗೆಳದಿ ॥
ಬೀಸಾನು ಗೋದಿ ॥ ೩ ॥

ಕೊಯ್ದು ಮಾಡ್ಯಾರ ಅಡಗಿ ಅಡಗ್ಯಾಗ್ಹಾಕ್ಯಾರ ಗಡಗಿ ।
ಅಡಗಿ ಬಿಟ್ಟು ಗಡಗೀನೆ ಉಂಡಾರೆ ಗೆಳದಿ ॥
ಬೀಸಾನು ಗೋದಿ ॥ ೪ ॥

ಚಿಂಚೋಳಿ ಊರ ಚಂದ ಪಗಡಿ ಬಾಜಾರ ಮುಂದ ।
ಗುರುಮಲ್ಲಿಕಾರ್ಜುನಗ ನೆನಿಯ ಬೇಕೆ ಗೆಳದಿ ॥
ಬೀಸಾನು ಗೋದಿ ॥ ೫ ॥

(ಅದೇ- ಪು.೮೨)


□



ಅಪ್ಪಾರಾವ ಕುಲಕರ್ಣಿ ಅವರ ಮನೆ (ಖಟಕ್ ಚಿಂಚೋಳಿ).



ಅಪ್ಪಾರಾವ ಅವರು ಸಾಹಿತ್ಯ ಸಾಧನೆ ಮಾಡುತ್ತಿದ್ದ ನಿಸರ್ಗದ ಮಡಿಲು.



ಅಪ್ಪಾರಾವ ಅವರ ಸಮಾಧಿ.

೪. ನೀಲಕಂಠ ಮಹಾರಾಜ (ಕ್ರಿ.ಶ.ಸು. ೧೮೭೫-೧೯೫೫)

ನೀಲಕಂಠ ಮಹಾರಾಜರು ಬೀದರ ಜಿಲ್ಲೆಯ ಭಾಲ್ಕಿ ತಾಲ್ಲೂಕಿನಲ್ಲಿ ಬರುವ ಧನ್ನೂರ ಎಂಬ ಗ್ರಾಮದವರು. ಅವರನ್ನು ನೋಡಿದ ಯಾರೂ "ಅವನೊಬ್ಬ ಅಸಾಮಾನ್ಯ ವ್ಯಕ್ತಿಯೆಂದು" ತಿಳಿಯುತ್ತಿರಲಿಲ್ಲ. ಅವರ ಸಂಪರ್ಕಕ್ಕೆ ಹೋದಾಗ ಮಾತ್ರ ಅವರ ಅಂತರ್ ಶಕ್ತಿಯ ಅರಿವು ಉಂಟಾಗುತ್ತಿದ್ದಿತು. ಜನರು ಅವರನ್ನು 'ಮಹಾರಾಜ' ಎಂದು ಕರೆಯುತ್ತಿದ್ದದು ಅವರಲ್ಲಿರುವ ಆಧ್ಯಾತ್ಮಿಕ ಸಾಧನೆಯ ಸಿದ್ಧಿಯಿಂದಾಗಿ. ಅವರ ಬದುಕಿನಲ್ಲಿಯಾಗಲಿ, ಇರುವಿಕೆಯಲ್ಲಾಗಲಿ ಯಾವುದೇ ತೆರನಾದ ಠೀಕು-ಠಾಕುಗಳಿರಲಿಲ್ಲ. 'ಮಹಾರಾಜ'ರ ಯಾವುದೆ ಅಂಶಗಳು ಕಾಣುವುದಕ್ಕೆ ಸಾಧ್ಯವಿರಲಿಲ್ಲ. ಅವರು ಒಂದು ಗುಡಿಸಲಿನಲ್ಲಿ ವಾಸಿಸುವವರು. ಅವರಿಗೆ ಗುರುಮನೆಯೂ ಇರಲಿಲ್ಲ; ಅರಮನೆಯೂ ಇರಲಿಲ್ಲ. ಆದರೂ ಅವರು ಭಕ್ತರ ಬಾಯಲ್ಲಿ 'ಸಾಧು'ಗಳಾಗಿದ್ದರು; ಸಂತರಾಗಿದ್ದರು, ಸಾಧು ಮಹಾರಾಜರಾಗಿದ್ದರು.

ಇಂದು ಧನ್ನೂರು ಗ್ರಾಮಕ್ಕೆ ಹೋದರೆ ಅಲ್ಲಿ ಅವರ ಪುತ್ರ ಹಣಮಂತ ಸಾಧು ಅವರು ಕಾಣುತ್ತಾರೆ. ತಂದೆಯ ಪರಂಪರೆಯನ್ನು ಉಳಿಸಿದ್ದಾರೆ; ಬೆಳೆಯಿಸಿದ್ದಾರೆ. ನೀಲಕಂಠ ಅವರನ್ನು ಮರೆತಿಲ್ಲ, ಶಿಷ್ಯರು ಅವರ ಹಾಡುಗಳನ್ನು ಹಾಡುತ್ತಾರೆ.

ನೀಲಕಂಠ ಅವರು ಸಂಸಾರಿಗಳಾಗಿದ್ದರು. ಅವರ ಹೆಂಡತಿ ದ್ಯಾವಮ್ಮ. ಈ ದಂಪತಿಗಳು ಊರ ದೇವರುಗಳಾದ ಬಸವಣ್ಣ, ಹನುಮಂತ ದೇವರಿಗೆ ಹೆಚ್ಚಾಗಿ ನಡೆದುಕೊಳ್ಳುತ್ತಿದ್ದರು. ಊರ ಹಣಮಂತ ದೇವರಿಗೆ ಹರಕೆ ಹೊತ್ತಿದ್ದರಿಂದ ಮಗನೊಬ್ಬನ ಜನನವಾಯಿತು. ಅವನಿಗೆ 'ಹಣಮಂತ'ಯೆಂತಲೇ ಹೆಸರು ಇರಿಸಿದರು. ಹಣಮಂತ ಅವರು ಮುಂದೆ ತಂದೆಯಂತೆ ಸಾಧು ವ್ಯಕ್ತಿಗಳಾಗಿ ಬೆಳೆದರು.

ನೀಲಕಂಠ ಅವರು ಬದುಕಿನ ನಿರ್ವಹಣೆಗಾಗಿ ಕೃಷಿ ಕಾಯಕ ಮಾಡಲು ಹೋಗುತ್ತಿದ್ದರು. ಸಂಜೆ ಭಜನೆ ಕಾರ್ಯಕ್ರಮ ನಡೆಸುತ್ತಿದ್ದರು. ಅವರು ಮನೆಯಿಂದ ಸ್ವಲ್ಪ ದೂರದಲ್ಲಿ ಒಂದು ಗುಂಪಾ ಕಟ್ಟಿಕೊಂಡಿದ್ದರು. ಸಂಜೆ ಹಲವಾರು ಶಿಷ್ಯರೊಂದಿಗೆ ಕೂಡಿಕೊಂಡು ಸತ್ಸಂಗದ ಗೋಷ್ಠಿ ನಡೆಸುತ್ತಿದ್ದರು. ಅವರ ಶಿಷ್ಯ ಬಳಗವು ಹಿರಿದಾಗಿತ್ತು. ಆಗಾಗ ಅವರು ನೀಲಕಂಠ ಅವರನ್ನು ತಮ್ಮ ಮನೆಗಳಿಗೆ ಆಮಂತ್ರಿಸುತ್ತಿದ್ದರು. ಪ್ರಸಾದ ಮಾಡಿಸಿ, ಕಾಣಿಕೆ ಕೊಟ್ಟು ಕಳುಹಿಸುತ್ತಿದ್ದರು. ಕಾಲಕ್ರಮೇಣ ನೀಲಕಂಠ

ಕೂಲಿ ಮಾಡುವುದನ್ನು ಬಿಟ್ಟು ಸಂಪೂರ್ಣವಾಗಿ ತಮ್ಮನ್ನು ಭಜನೆ–ಆಧ್ಯಾತ್ಮ ಸಾಧನೆಗೆ ಅರ್ಪಿಸಿಕೊಂಡರು.

ನೀಲಕಂಠ ಅವರ ಗುರು ಸಿದ್ರಾಮಪ್ಪ ಬೆಳಕುಣಿ ಅವರು ತಮ್ಮ ಶಿಷ್ಯನಗಿಂತಲೂ ವಯಸ್ಸಿನಲ್ಲಿ ಒಂದೆರಡು ವರುಷಗಳ ಹಿರಿಯರು. ಆಧ್ಯಾತ್ಮದ ಶಕ್ತಿಯಲ್ಲಿ ಅವರದು ಮೇರು ವ್ಯಕ್ತಿತ್ವ. ಅವರಿಗೆ ನೋಡಿದರೆ ಅಂತಹ ಶಕ್ತಿ ಅವರಲ್ಲಿದೆಯೆಂದು ಯಾರೂ ತಿಳಿದುಕೊಳ್ಳುತ್ತಿರಲಿಲ್ಲ. ಅವರು ಅತ್ಯಂತ ಮೌನವಾಗಿರುತ್ತಿದ್ದರು. ವ್ಯರ್ಥವಾಗಿ ಮಾತಾಡುತ್ತಿರಲಿಲ್ಲ. ನೀಲಕಂಠ ಅವರು ಕಟ್ಟಿದ ಗುಂಪಾದಲ್ಲಿ ಹೆಚ್ಚಾಗಿ ವಾಸ್ತವ್ಯ ಮಾಡುತ್ತಿದ್ದರು. ನೀಲಕಂಠ ಅವರಿಗೆ ಹಾಡುಗಾರಿಕೆ ಮತ್ತು ಆಧ್ಯಾತ್ಮ ಸಾಧನೆಯ ಹಾದಿಯಲ್ಲಿ ಗುರುವಾಗಿ–ಮಾರ್ಗದರ್ಶಕರಾಗಿ ನಿಂತು ಹಾದಿ ತೋರಿದರು. ಮುಂದೆ ನೀಲಕಂಠ ಅವರ ಮಗ ಹಣಮಂತ ಅವರ ಬಾಳಿಗೂ ಬೆಳಕುಣಿ ಸಿದ್ರಾಮಪ್ಪ ಅವರು ಪ್ರಕಾಶದ ಆಕರವಾಗಿ ನಿಂತುಕೊಂಡರು.

ನೀಲಕಂಠ ಅವರು ಬೆಳಗಿನ ಜಾವ ನಾಲ್ಕು ಗಂಟೆಗೆ ಏಳುತ್ತಿದ್ದರು. ಪ್ರಾತಃರ್ವಿಧಿಗಳನ್ನು ಪೂರೈಸುತ್ತಿದ್ದರು. ತಣ್ಣೀರಿನ ಜಳಕ ಮಾಡುತ್ತಿದ್ದರು. ಮೈಗೆಲ್ಲ ವಿಭೂತಿ ಧಾರಣ ಮಾಡಿಕೊಂಡು, ಕೈಯಲ್ಲಿ ರುದ್ರಾಕ್ಷಿ ಜಪಮಾಲೆ ಹಿಡಿದು ಅರ್ಧಗಂಟೆಯವರೆಗೆ ಧ್ಯಾನ ಮಾಡುತ್ತಿದ್ದರು. ನಂತರ ಊರ ದೇವರುಗಳ ದರ್ಶನ ಮಾಡಿಕೊಂಡು ಬರುತ್ತಿದ್ದರು. ನಂತರ ತಮ್ಮ ಕೃಷಿ ಕಾರ್ಯಗಳಿಗೆ ಹೊರಡುತಿದ್ದರು.

ನೀಲಕಂಠ ಅವರ ಮಗ ಹಣಮಂತ ಅವರು ತಮ್ಮ ತಂದೆಯವರ ಬಗೆಗೆ ಹೇಳುವ ಮಾತುಗಳು ಅವರ ವ್ಯಕ್ತಿತ್ವದ ಮೇಲೆ ಬೆಳಕು ಹಾಕುತ್ತವೆ: "ನಮ್ಮ ತಂದೆ ಅವರು ಸರಳರು–ಸಾತ್ವಿಕರು. ಅವರಿಗೆ ಮನೆ–ಹೆಂಡತಿ–ಮಕ್ಕಳ ಚಿಂತೆ ಇರಲಿಲ್ಲ. ಹೀಗೆಂದ ಮಾತ್ರಕ್ಕೆ ಅವರು ನಮ್ಮನ್ನು ಕಡೆಗಣಿಸಿದರೆಂದು ಅರ್ಥವಲ್ಲ. ಅವರು ಒಂದು ವೇಳೆ ಹಾಗೆ ಮಾಡಿದ್ದರೆ, ನಾನು ಒಬ್ಬ ಸಾಧುವಾಗಿ ಬೆಳೆಯುವುದಕ್ಕೆ ಸಾಧ್ಯವೆ ಇರಲಿಲ್ಲ. ಅವರು ಅಹಿಕ–ಆಧ್ಯಾತ್ಮಿಕಗಳೆರಡೂ ಸಮನ್ವಯವಾಗಿಸಿಕೊಂಡು ಬದುಕಿದರು. ಅವರು ಹಗಲೆಲ್ಲ ಕೆಲಸ ಮಾಡುತ್ತಿದ್ದರು. ರಾತ್ರಿಯೆಲ್ಲ ಧ್ಯಾನ–ಹಾಡುಗಳ ರಚನೆಗೆ ತೊಡಗಿಸಿಕೊಳ್ಳುತ್ತಿದ್ದರು. ಭಕ್ತರುಗಳ ಮನೆಗೆ ಹೋದಾಗ ಅವರು ಅಲ್ಲಿ ಸುಮ್ಮನೆ ಕುಳಿತುಕೊಳ್ಳುತ್ತಿರಲಿಲ್ಲ. ಅವರಿಗೆ ಒಳ್ಳೆಯ ಮಾತುಗಳನ್ನು ಹೇಳುತ್ತಿದ್ದರು, ಪ್ರವಚನ ಮಾಡುತ್ತಿದ್ದರು, ಎಲ್ಲರ ಬದುಕು ಸುಖವಾಗಲಿ ಎಂಬುದು ಅವರ ಇಚ್ಛೆಯಾಗಿತ್ತು. ಅದಕ್ಕಾಗಿಯೇ ಅವರ ಮನಸ್ಸು ಹಂಬಲಿಸುತ್ತಿದ್ದಿತು. ನಮ್ಮ ತಂದೆ ಅವರು ಹಲವಾರು ಆಧ್ಯಾತ್ಮದ ಹಾಡುಗಳನ್ನು ಕಟ್ಟಿದರು. ಅವುಗಳಲ್ಲಿ ಕೆಲವು ನಾನು ಹಾಡುತ್ತೇನೆ, ನನ್ನ ತಂದೆಯ ಕೃಪೆಯಿಂದಲೇ ನಾನು ಹಾಡು ಬರೆಯುವ ಶಕ್ತಿಯನ್ನು ಪಡೆದುಕೊಂಡಿದ್ದೇನೆ".

ನೀಲಕಂಠ ಅವರು ಬದುಕಿನ ಪೂರ್ತಿ ಜೇನು ಹುಳದಂತೆ ಜೀವಿಸಿದರು. ಅವರು ಆಗಾಗ ಶಿಷ್ಯರುಗಳಿಗೆ ಹೇಳುತ್ತಿದ್ದರಂತೆ: "ನೋಡಿರಿ ಜೇನುಹುಳುಗಳು ಹೇಗೆ ಕೆಲಸ ಮಾಡುತ್ತಿರುತ್ತವೆ. ಅಡವಿಯಲ್ಲಿ ಗಿಡದ ಪೊಟರೆಗಳಲ್ಲಿ ಜೇನು ಕಟ್ಟಲು ಅವು ಎಷ್ಟು ಶ್ರಮ ಪಡುತ್ತವೆ. ಹೂವಿನಿಂದ-ಹೂವಿಗೆ ಹೋಗಿ, ಅವುಗಳ ಸುಗಂಧವನ್ನು ಸಂಗ್ರಹಿಸಿ ತರುವುದು ಸರಳವಾದ ಕೆಲಸವಲ್ಲ. ಅವು ನಿರಂತರವಾಗಿ ಕೆಲಸ ಮಾಡುವ ಕಾರಣದಿಂದಲೇ ನಮಗೆ ತಿನ್ನುವುದಕ್ಕೆ ಸವಿಯಾದ ಜೇನುತುಪ್ಪ ದೊರಕುತ್ತದೆ. ನಾವು ನಮಗಾಗಿ ದುಡಿಯಬಾರದು, ಜೇನುಹುಳುಗಳು ತಾವು ಕಟ್ಟಿದ ಜೇನು ತಾವೇ ತಿನ್ನುವುದಿಲ್ಲ, ಪರರಿಗಾಗಿ ಬಿಡುತ್ತವೆ. ಅದರಂತೆ ನಮ್ಮ ಬದುಕು ಎಂಬುದು ಬೇರೆಯವರ ಹಿತದ ಸಲುವಾಗಿ ಉಪಯೋಗವಾಗಬೇಕು. ಅಂದಾಗ ನಾವು ಈ ಭೂಮಿಯ ಮೇಲೆ ಹುಟ್ಟಿದಕ್ಕೂ ಸಾರ್ಥಕವಾಗುತ್ತದೆ. ಇಲ್ಲವಾದರೆ ನಾವು ಪ್ರಾಣಿಗಳಿಗಿಂತಲೂ ಕೀಳರಾಗುತ್ತೇವೆ".

ನೀಲಕಂಠ ಅವರು ಭಜನೆಯಲ್ಲಿ ಹಲವಾರು ಹಾಡುಗಳನ್ನು ಹಾಡುತ್ತಲೇ ತತ್ತ್ವಪದಗಳ ರಚನೆಯ ಶಕ್ತಿ ಪಡೆದುಕೊಂಡರು. ಅವರು ತಮ್ಮ ಹಾಡುಗಳಿಗೆ ಗುರುಸಿದ್ರಾಮಪ್ಪ, ಗ್ರಾಮದ ದೇವರಾದ ಬಸವಣ್ಣ ಮತ್ತು ಹಣಮಂತ ದೇವರ ಹೆಸರುಗಳನ್ನು ಅಂಕಿತವಾಗಿಟ್ಟುಕೊಂಡಿದ್ದಾರೆ.

ಪುಣ್ಯ ಮಾಡುವ ಕೆಲಸ ಹಿಡಿ

ಕಾಡುವದು ಬಿಡು ಮನುಜಾ
ಹಿಡಿ ಪುಣ್ಯ ಮಾಡುವ ಕೆಲಸವಾ ॥ ಪ ॥

ಯಾವದಕ್ಕಾಗಿ ಈ ಭೂಮಿ ಮ್ಯಾಲ ಬಂದಿ
ಕಾಯುವದಕ್ಕಾಗಿ ಆತ್ಮನ ಗುಂಪಾ ಅಂದಿ
ತಿರುಗ ಬೇಡಾ ಸಂದಿ ಗೊಂದಿ
ಮರುಗುತಿ ನೋಡು ದುಃಖದಾಗ ಚಿಂದಿ ॥ ೧ ॥

ಹಿರಿಯರಿಗಿ ಮರಿಯಾದಿ ಮಾಡು
ಕಿರಿಯರಿಗಿ ಪ್ರೀತಿ ಮಾಡು
ದೇವರ ಪೂಜೆ ಮಾಡು

ಸಾವದ ಬಾಗಿಲ ಎದುರಾದ ನೋಡು ॥ ೨ ॥

ಹಮ್ಮಿನ ಭಾವನೆ ಬಿಡುವಪ್ಪ
ಗುಮ್ಮನ ಗುಸಕನಂಗ ಕೂಡ ಬೇಡಪ್ಪ
ಸುಮ್ಮನ ಬಾಳ ಹಾಳ ಮಾಡ ಬ್ಯಾಡಪ್ಪ
ಒಮ್ಮೆರ ಒಳಗ ಇಚಾರ ಮಾಡಪ್ಪ ॥ ೩ ॥

ಕಳ್ಳಿಗೀ-ಕಳ್ಳ ಕೊಡಪ್ಪ
ಕಳ್ಳ-ಕಾಳಜಿಯ ಅನಾದು ಮಾಡಪ್ಪ
ಮುಳ್ಳಿಗೀ ಮುಳ್ಳ ಅನಬ್ಯಾಡಪ್ಪ
ಒಳ್ಳೇ ಹಾದಿಗಿ ನೀನು ನಡಿಯಪ್ಪ ॥ ೪ ॥

ಸುಳ್ಳ-ಗೊಳ್ಳು-ಪೊಳ್ಳ ಬಿಡುವಪ್ಪ
ನಿನ್ನ ನೆಳ್ಳಿಗಂಜಿ ನೀ ನಡಿಯಪ್ಪ
ಗುರುವಿನ ಪಾದವ ಹಿಡಿಯಪ್ಪ
ಜನರು ಮೆಚ್ಚುವಂಗ ನೀ ನಡಿಯಪ್ಪ ॥ ೫ ॥

ಯಾರೀಗಿ ಯಾರಿಲ್ಲ ಹಣಮಪ್ಪ
ದಾರೀಗಿ ಜೋಡಿಲ್ಲ ತಿಳಿಯಪ್ಪ
ಮಾರೀಗಿ ಮುಯ್ಯ ನೀಡಬ್ಯಾಡಪ್ಪ
ಯಾರೀಗಿ ಎಲ್ಲ ಬಿಟ್ಟು ಹೊಂಟೆಪ್ಪ ॥ ೬ ॥

ದೇಶಾದೊಳಗ ಮೆರೆವ ವಾಸುಳ್ಳ ಧನ್ನೂರ
ಈಶಾ ಬಸವಣ್ಣ ಕರಣಿಯ ಪೂರಾ
ಕೂಸಾಗಿ ಹೇಳೀನಿ ನೀತಿ ಸಾರ
ಪಾಸಾಗ ಬೇಕಪ್ಪ ಈ ಜಗದಾಗ ॥ ೭ ॥

ಪರಮೇಶಾನ ಧ್ಯಾನ ನೀ ಮಾಡೋ

ಪರಮೇಶಾನ ಧ್ಯಾನ ನೀ ಮಾಡೋ
ಸ್ಥಿರವಿಲ್ಲ ಈ ಸಂಸಾರ ನೋಡೋ ॥ ಪ ॥

ಅರುವೀನ ರೂಪದಿಂದ ಬಂದಿ
ಮರುವಿನೊಳಗ ಯಾಕ ಸಿಕ್ಕುಬಿದ್ದಿ
ನೆರವೀಗ ಯಾರು ಬರೊದಿಲ್ಲ
ಕರಕರದ ಬದುಕ ನಿನಗ ಬಿಡಾದಿಲ್ಲ ॥ ೧ ॥

ಹಗಲ ನೀನು ದುಡದು ಸತ್ತಿ
ರಾತ್ರಿಯೆಲ್ಲ ನಿದ್ದ್ಯಾಗೆ ಹೋತಿ
ಪರಮನ ಧ್ಯಾನ ಯಾವಾಗ ಮಾಡುತಿ
ಅಂತರಂಗದ ಕದಾ ಯಾವಾಗ ತೆರಿತಿ ॥ ೨ ॥

ಬದುಕೊಂದು ಭವದ ರೋಗಪ್ಪ
ಅದಕ ಪರಮೇಶನ ನಾಮ ಬೇಕಪ್ಪ
ಅದರಿಂದ ನಿನಗ ರೋಗ ವಾಸಿಯಪ್ಪ
ಮನದಿಂದ ಧ್ಯಾನವ ಮಾಡಪ್ಪ ॥ ೩ ॥


ತಿಳಿದು ತಿಳಿದು ನೀ ಉಳಿಯಪ್ಪ
ಕಳಿಯ ಬ್ಯಾಡ ಬೆಲೆಯುಳ್ಳ ಬದಕಪ್ಪ
ಅಳಿದು ಹೋಗುತಾದ ಆಯುಷಪ್ಪ
ಮರಳಿಬಾರದು ನೋಡು ಈ ಜಲ್ಮಪ್ಪ ॥ ೪ ॥

ಮೋಡಿನ ಪರಿ ಈ ಬದುಕಪ್ಪ
ಗಾಳಿ ಬೀಸಿದಾಗ ಹರಿದು ಹೋಗುವದಪ್ಪ
ಮಳಿ ಬಂದರ ಒಂದಿಷ್ಟು ಪಾಡಪ್ಪ
ಚಳಿ ಬರುತಾದ ಹೊಲದಾಗ ತಿಳಿಯಪ್ಪ ॥ ೫ ॥


ಕರುವಿನ ಗುರುತು ನೀ ಹಿಡಿಯೋ
ಅರುವಿನ ಹಾದಿ ಮ್ಯಾಲೆ ನಡಿಯೋ
ಗುರುವಿಗಿ ಶರಣಾಗಿ ದುಡಿಯೋ
ಮರವಿನ ಕತ್ತಲಿ ಹರಿಯೋ ॥ ೬ ॥

ದೇಶದೊಳಗ ಲೇಸ ಧನ್ನೂರಾ ಗ್ರಾಮ
ಈಶ ಹಣಮಂತನ ದಾಸಾ ನಾನು
ಲೇಸ ಮಾಡಿಕೊಂಡೇ ಈ ಜಗದ ಬದುಕ
ಸೋಸಿ ನೋಡುವೆನು ತತ್ತ್ವದ ಪದಕ ॥ ೭ ॥

(ಈ ವಿವರಗಳನ್ನು ಕವಿಯ ಮಗ ಹಣಮಂತ ಮಹಾರಾಜರು ನೀಡಿದ್ದಾರೆ.)



ನೀಲಕಂಠ ಮಹಾರಾಜರು ವಾಸಿಸುತ್ತಿದ್ದ ಮನೆ (ಧನ್ನೂರ, ಎಚ್).



ನೀಲಕಂಠ ಮಹಾರಾಜರ ಪತ್ನಿ ದ್ಯಾವಮ್ಮನವರ ಛಾಯಾಚಿತ್ರ.

೫. ಕರಿಬಸವೇಶ್ವರ ಲೇಂಗಟಿ (ಕ್ರಿ.ಶ.ಸು. ೧೮೮೫–೧೯೬೫)

ಸಾಧಕ ವ್ಯಕ್ತಿತ್ವದ ಕರಿಬಸವೇಶ್ವರ ಲೇಂಗಟಿ ಅವರು ಕಲಬುರ್ಗಿ ಜಿಲ್ಲೆ ಆಳಂದ ತಾಲ್ಲೂಕಿನ ಲೇಂಗಟಿ ಗ್ರಾಮದಲ್ಲಿ ಹುಟ್ಟಿ, ಬೀದರ ಜಿಲ್ಲೆ ಭಾಲ್ಕಿ ತಾಲ್ಲೂಕಿನ ಬ್ಯಾಲಹಳ್ಳಿಯಲ್ಲಿ ಬೆಳೆದವರು. ಹೀಗಾಗಿ ಅವರು ಉಭಯ ಜಿಲ್ಲೆಗಳ ಸಂಸ್ಕೃತಿ ಸಮನ್ವಯದ ಶಕ್ತಿಯಂತೆ ಕಾಣುತ್ತಾರೆ.

ಲೇಂಗಟಿ ಗ್ರಾಮದ ಶಿವಸಿಂಪಿ ಮನೆತನದ ಶಿವಬಸಪ್ಪನವರು ಸಾತ್ವಿಕರು; ಆಧ್ಯಾತ್ಮ ಜೀವಿಗಳು; ಹೊಲಿಗೆ ಕಾಯಕವನ್ನೇ ಅವಲಂಬಿಸಿ, ಸಂತೃಪ್ತ ಬದುಕು ಸಾಗಿಸುತ್ತಿದ್ದರು. ವೀರಶೈವ ಸಂಸ್ಕೃತಿಯ ಉಸಿರಾಟವು ಅವರ ಬದುಕಿನ ನಾಡಿಮಿಡಿತಕ್ಕೆ ಕಾರಣವಾಗಿದ್ದಿತು. ಈ ಬದುಕಿನ ಚಾಲನೆಗೆ ಇನ್ನೊಂದು ವಾಹಕ ಮಾಧ್ಯಮವಾಗಿದ್ದುದು ಶಿವಬಸಪ್ಪನವರ ಕೈಹಿಡಿದ ಫಾಳೆವ್ವನವರು. ಕ್ರಿ.ಶ. ೧೮೮೫ರಲ್ಲಿ ಈ ದಂಪತಿಗಳ ಮಗನಾಗಿ ಜನಸಿದವರು ಕರಿಬಸವೇಶ್ವರರು. ಇವರಿಗೆ ಈಗಾಗಲೇ ಒಬ್ಬ ಅಣ್ಣನಿದ್ದನು. ಅವರ ಹೆಸರು ಬಸವರಾಜ.

ಕರಿಬಸವೇಶ್ವರರಿಗೆ ಬಾಲ್ಯದಲ್ಲಿ ಪ್ರಾಪ್ತವಾದುದು ಮೋಡಿ ಶಿಕ್ಷಣ. ತಂದೆ–ಗುರು–ಹಿರಿಯರ ಸಂಪರ್ಕದಲ್ಲಿ ದೊರಕಿದುದು ಆಧ್ಯಾತ್ಮದ ಶಿಕ್ಷಣ. ಕರಿಬಸವೇಶ್ವರರು ಕ್ರಿ.ಶ. ೧೯೧೨ರಲ್ಲಿ ಮಹಾಲಿಂಗವ್ವನೆಂಬ ಕನ್ಯೆಯ ಕೈ ಹಿಡಿಯುವುದರ ಮೂಲಕ ಗೃಹಸ್ಥರಾದರು. ಮನೆತನದ ಕಾಯಕ ಬಟ್ಟೆ ಹೊಲಿಯುವುದನ್ನೆ ಅವಲಂಬಿಸಿಕೊಂಡು ಅಹಿಕ ಬದುಕಿನ ನಿರ್ವಹಣೆಯಲ್ಲಿ ತೊಡಗಿದರು.

ಕರಿಬಸವೇಶ್ವರರಿಗೆ ಅಹಿಕ ಬದುಕಿನಕ್ಕಿಂತ ಅಲೌಕಿಕ ಬದುಕಿನ ಹಂಬಲವು ಹಿರಿದಾಗಿತ್ತು. ಅದರ ವಿಕಾಸಕ್ಕೆಂಬಂತೆ ಬೇರೆ ಬೇರೆ ಕಡೆಗಳಿಂದ ಸಂತ–ಅನುಭಾವಿ–ಶರಣರು ಬಂದು ಮನೆಯಲ್ಲಿ ನೆರೆಯುತ್ತಿದ್ದರು. ಅವರಿಗೆಲ್ಲ ಪ್ರಸಾದದ ವ್ಯವಸ್ಥೆಯಾಗಬೇಕು. ಕರಿಬಸವೇಶ್ವರರ ಆರ್ಥಿಕ ಪರಿಸ್ಥಿತಿ ಅಷ್ಟಕಷ್ಟೆ. ಬಂದವರಿಗೆ ಪ್ರಸಾದ ಒದಗಿಸುವುದೇ ಕಷ್ಟ ಆಗುತ್ತಿತ್ತು. ಆದರೂ ಅವರು ಧೃತಿಗೆಡದೆ ಎಲ್ಲವನ್ನೂ ನಿಭಾಯಿಸುತ್ತಿದ್ದರು.

ಕರಿಬಸವೇಶ್ವರರು ಸ್ವಪ್ರಯತ್ನದಿಂದ ನಿಜಗುಣರ ಶಾಸ್ತ್ರಗಳ ಅಧ್ಯಯನ ಮಾಡಿದರು; ಬಸವಾದಿ ಶಿವಶರಣರ ವಚನಗಳನ್ನು ಅಭ್ಯಸಿಸಿದರು. ಸಂಸ್ಕೃತ ಸಾಹಿತ್ಯದಲ್ಲಿನ ತತ್ತ್ವಪರ

ಗ್ರಂಥಗಳನ್ನು ಅವಲೋಕಿಸಿದರು. ಆರೂಢ ಸಿದ್ಧಾಂತದ ಪೂರ್ವಾಪರಗಳ ಬಗೆಗೆ ಸರಿಯಾಗಿ ತಿಳಿದುಕೊಂಡರು. ಕಲಬುರ್ಗಿ ಜಿಲ್ಲೆಯ ಆಳಂದ ತಾಲ್ಲೂಕಿನ ಸ್ಥಳ. ಅಲ್ಲಿನ ಹತ್ತೆನವರ ಓಣಿಯಲ್ಲಿ ಗುರುಲಿಂಗ ಸ್ವಾಮಿಗಳ ಮಠ. ಗುರುಲಿಂಗ ಸ್ವಾಮಿಗಳು ಶಿವಯೋಗ ಸಾಧಕರು; ಆರೂಢಸಿದ್ಧರು. ಅವರ ಸಂಪರ್ಕವು ಕರಿಬಸವೇಶ್ವರರಿಗೆ ಯೋಗಾಯೋಗ ಎನ್ನುವಂತೆ ಪ್ರಾಪ್ತವಾಯಿತು. ಆದುದರಿಂದ ಕರಿಬಸವರು ವೀರಶೈವದ ಪ್ರಾಸಾದಿಕ ದೀಕ್ಷೆಯನ್ನು ಸ್ವೀಕರಿಸಿದರು. ಕಾಲಾನುಕ್ರಮದಲ್ಲಿ ಅವರು ಗುರುಲಿಂಗರಿಗೆ ಪ್ರಿಯ ಶಿಷ್ಯರಾದರು.

ಕರಿಬಸವೇಶ್ವರ–ಮಹಾಲಿಂಗವ್ವ ದಂಪತಿಗಳಿಗೆ ಒಟ್ಟು ಆರು ಜನ ಮಕ್ಕಳು. ಓಂಕಾರಪ್ಪ, ಎಂಕಮ್ಮ, ಶಿವಬಸವಪ್ಪ, ಶಾಂತಪ್ಪ, ಸೋಹಂಬಾಯಿ, ಸದಾಶಿವಪ್ಪ ಇವರೆ ಆ ಮಕ್ಕಳು. ಸಂಸಾರದ ಭಾರವು ಹೆಚ್ಚಾಯಿತು. ಗುರುಗಳ ಪ್ರೇರಣೆಯಿಂದ ಕರಿಬಸವರ ಬದುಕಿನಲ್ಲಿ ವೈರಾಗ್ಯದ ಗಾಳಿ ಬೀಸತೊಡಗಿತು; ಅಹಿಕ ಬದುಕಿನ ದೀಪವು ಹೊಯ್ದಾಡತೊಡಗಿತು. ಆಧ್ಯಾತ್ಮದ ಪ್ರಕಾಶವು ತನ್ನತ್ತ ಆಕರ್ಷಿಸತೊಡಗಿತು. ಒಂದು ದಿನ ಇದ್ದಕಿದ್ದಂತೆ ಕರಿಬಸವರು ಗುರುವಿನ ಅಪ್ಪಣೆಯಂತೆ ಲೇಂಗಟಿ ಗ್ರಾಮ ಬಿಟ್ಟು ಭಾಲ್ಕಿ ತಾಲ್ಲೂಕಿನ ಕಣಜಿಯಲ್ಲಿ ಬಂದು ನೆಲೆನಿಂತರು. ಅದು ಕ್ರಿ.ಶ. ೧೯೩೮ರ ವರ್ಷವಾಗಿತ್ತು. ಕಣಜಿ ಗ್ರಾಮದ ಗುರುಪಾದಪ್ಪ ಲಾಲಾ ಅವರ ಮನೆಯಲ್ಲಿ ಮೂರು ವರುಷಗಳ ಕಾಲ ಕಳೆದ ಕರಿಬಸವೇಶ್ವರರು ಭಾಲ್ಕಿ ತಾಲ್ಲೂಕಿನ ಬ್ಯಾಲಹಳ್ಳಿಯತ್ತ ಹೊರಟರು. ಅಲ್ಲಿ ನೆಲೆ ನಿಂತು ತಮ್ಮ ಕಾಯಕವನ್ನೂ ಆರಂಭಿಸಿದರು. ಕರಿಬಸವೇಶ್ವರರಿಗೆ ಅನುಭಾವ ಸಾಧನೆಗೆ ಹಲವಾರು ನೆಲೆಗಳು ಮೂಡಿದವು. ಅನುಭಾವದ ವ್ಯೋಮದಲ್ಲಿ ಲೀನರಾದ ಅವರಿಗೆ ಯಾವುದೇ ತಾರತಮ್ಯವು ಉಳಿಯಲಿಲ್ಲ. ಶಿಷ್ಯ ಘಾಳೆಪ್ಪನೊಂದಿಗೆ ಅವರು ಒಂದು ದಿನ ಹರಿಜನರ ಮನೆಯಲ್ಲಿ ಪ್ರಸಾದ ಸೇವಿಸಿದರು.

ಕರಿಬಸವೇಶ್ವರರಿಂದ ಹಲವಾರು ವ್ಯಕ್ತಿಗಳು ಆಧ್ಯಾತ್ಮದ ಶಕ್ತಿಗಳಾದರು. ತಮ್ಮ ಆತ್ಮ ಸಾಕ್ಷಾತ್ಕಾರದ ಹಾದಿಯನ್ನು ಕಂಡುಕೊಂಡರು.

ಕರಿಬಸವೇಶ್ವರರು ಬ್ಯಾಲಹಳ್ಳಿಯಲ್ಲಿ ಹಮ್ಮಿಕೊಂಡ ಸತ್ಸಂಗಕ್ಕೆ ಕುಹಕಿಗಳಿಂದ ಹಲವಾರು ಅಡ್ಡಿ–ಆತಂಕಗಳು ಬಂದವು. ಕುಹಕಿಗಳ ಕುತಂತ್ರದಿಂದಾಗಿ ಪರಮತೀಯ ಅಧಿಕಾರಿಗಳಿಂದ ಆಕ್ಷೇಪಣೆಗಳು ಎದುರಾದವು. ಕರಿಬಸವರು ಯಾವುದಕ್ಕೂ ಸೊಪ್ಪು ಹಾಕದೆ ತಮ್ಮ ಆಧ್ಯಾತ್ಮಹಾದಿ ಹಿಡಿದು ಹೊರಟೇ ಹೊರಟರು.

ಕರಿಬಸವರು ಎಂದೂ ಅಹಿಕ ಸಂಪತ್ತಿಗೆ ಆಸೆ ಪಡಲಿಲ್ಲ. ಶಿಷ್ಯರ ಬಿನ್ನಹಗಳಿಗೆ ಮಹತ್ವ ನೀಡಲಿಲ್ಲ. ಮೃಷ್ಟಾನ್ನ ಭೋಜನಕ್ಕೆ ನಾಲಗೆ ಸವೆಸಲಿಲ್ಲ. ಏನಿದ್ದರೂ ಅದನ್ನು ಪ್ರಸಾದ ಭಾವದಿಂದ ಹಿತ–ಮಿತವಾಗಿ ಸ್ವೀಕರಿಸಿದರು. ಪ್ರಸಾದಿಯಾಗಿ ಪರವಸ್ತುವಿನ ಪರಿಣಾಮದಲ್ಲಿ ಮುಳಗಿ ಆನಂದಗೊಂಡರು. ಕರಿಬಸವರು ಗುರುಮುಟ್ಟಿ ಗುರುವಾದರು:

ಗುರುಲಿಂಗರಿಗೆ ತಕ್ಕ ಶಿಷ್ಯರಾದರು. ಬ್ಯಾಲಹಳ್ಳಿಯ ಕೈಲಾಸ ಆಶ್ರಮದ ಬೆಳಕಾದರು. ಬಂದವರಿಗೆ ಮಾರ್ಗದರ್ಶನ ನೀಡುವ ಮಾರ್ಗದರ್ಶಿಯಾದರು.

ಕರಿಬಸವರ ಆಧ್ಯಾತ್ಮದ ವ್ಯಕ್ತಿತ್ವದಲ್ಲಿ ಕಲಾವಂತಿಕೆಯ ಥಳಕಿತ್ತು, ಅವರು ನಾಟಕರಚಯಿತೃಗಳಾಗಿ ನಾಟಕ ಬರೆದರು; ನಾಟಕ ಮಾಡಿಸಿದರು; ನಟರಾಗಿ ಅಭಿನಯ ಮಾಡಿದರು. ರಂಗದ ನಾಟಕದಷ್ಟೇ ಲೋಕ ರಂಗದ ನಾಟಕವನ್ನೂ ಸಾರ್ಥಕವಾಗಿಸಿದರು.

ಕರಿಬಸವೇಶ್ವರರು ಬ್ಯಾಲಹಳ್ಳಿಯಲ್ಲಿರುವಾಗ ಒಂದು ಕೊಲೆ ನಡೆಯಿತು. ಅದರ ಅಪರಾಧವನ್ನು ಸತ್ಸಂಗ ನಡೆಸುತ್ತಿದ್ದವರ ಮೇಲೆ ಹಾಕಲಾಯಿತು. ಕರಿಬಸವರ ಮನಸ್ಸು ನೊಂದಿತು. ಬೇಸರಗೊಂಡ ಅವರು ಬ್ಯಾಲಹಳ್ಳಿ ಬಿಟ್ಟು ಮರಳಿ ಸ್ವಗ್ರಾಮಕ್ಕೆ ಹೋದರು. ಜೀವನಾಂತ್ಯವನ್ನು ಅಲ್ಲಿಯೇ ಪೂರೈಸಿ ಕ್ರಿ.ಶ. ೧೯೬೫ರಲ್ಲಿ ಲಿಂಗದಲ್ಲಿ ಬೆರೆತು ಲಿಂಗಸ್ವರೂಪರಾದರು.

ಇಂದು ಲೇಂಗಟಿ ಗ್ರಾಮದಲ್ಲಿ ಅವರ ಸಮಾಧಿ, ಅವರ ಸ್ಮರಣೆಗಾಗಿ ಕಟ್ಟಿದ ಮಠದ ಸ್ಮಾರಕಗಳನ್ನು ಕಾಣಬಹುದಾಗಿದೆ. ಕರಿಬಸವರ ಗುರುಗಳಾದ ಶ್ರೀ ಗುರುಲಿಂಗ ಶಿವಾಚಾರ್ಯರು, ಕಲಬುರ್ಗಿ ಜಿಲ್ಲೆ ಆಳಂದ ತಾಲ್ಲೂಕಿನ ಕಡಗಂಚಿಯಲ್ಲಿ ಲಿಂಗೈಕ್ಯರಾದರು. ಅವರ ಸಮಾಧಿ ಭಕ್ತ ಶಾಂತಪ್ಪ ದ್ಯಾವಣಗಾಂವ ಅವರ ಹೊಲದಲ್ಲಿದೆ.

ಕರಿಬಸವೇಶ್ವರರಿಗೆ ತಾರುಣ್ಯ ವಯಸ್ಸಿನಿಂದಲೇ ತತ್ತ್ವಪದಗಳ ರಚನೆಯ ಬಗೆಗೆ ಆಸಕ್ತಿಯಿದ್ದಿತು. ಆಗಾಗ ಅವರು ಹಲವಾರು ತತ್ತ್ವಪದಗಳನ್ನು ಬರೆದರು. ತಮ್ಮ ಗುರುಗಳ ಹೆಸರನ್ನೆ ಅವುಗಳಿಗೆ ಮುದ್ರೆಯಾಗಿಟ್ಟುಕೊಂಡರು. ಅವರು ಬರೆದಿರುವ ಕೆಲವು ತತ್ತ್ವಪದಗಳನ್ನು ಇಲ್ಲಿ ಉದ್ಧರಿಸಲಾಗಿದೆ:

ಸೋಹಂ ಬ್ರಹ್ಮ ತಾನು

ನಿಜ ಹಿಡಿ ಗುರು ಮಂತ್ರವನು । ತಿಳಿದರ
ಸೋಹಂ ಬ್ರಹ್ಮ ತಾನು ॥ ಪ ॥

ಅರಿಯದೇ ಬೀದಿಗಾದವನು । ನೀ ಮಾಡೋ
ಗುರುಮನಿ ಶೋಧವನು ॥
ಅರಿತುಕೋ ಮಂತ್ರದ ಭೇದವನು

ಅರಿದು ನೀಗೊ ಭವದ ಬಾಧೆಯನು ॥ ೧ ॥
ನಿ: ಶೂನ್ಯದಿಂದ ಶೂನ್ಯ ಜನಿಸಿ । ಅದರಿಂದೆ
ನಿರಾಕಾರ ಎನಿಸಿ
ತ್ರಿಬಿಂದುಲಿಂದ ಓಂಕಾರವ ನುಡಿಸಿ
ಅದರಿಂದ ಷಡಕ್ಷರಿ ಎನಿಸಿ ॥ ೨ ॥

ಪಂಚ ಅಕ್ಷರದ ರಂಗ । ಶೋಧಿಸಿ
ದವನೇ ಗುರುಲಿಂಗ
ತಿಳಿಯದಿದ್ದರ ತಿಳಿಮಂಗ
ತಿಳಿದರ ಯಮಬಾಧೆ ನಿನಗ್ಯಾಂಗ ॥ ೩ ॥

ಖರೇ ಪರಬ್ರಹ್ಮ ನೀನಿದ್ದಿ । ಕಂಡ
ಬಂಡಿಗೆ ಕಾಲಬಿದ್ದಿ
ಭಂಡ ವಿಷಯಕ್ಕೆ ನೀ ಬಿದ್ದಿ
ಷಂಡ ಭವದಾಸೆ ನೀ ಹಿಡಿದಿ ॥ ೪ ॥

ಆಸೆ ಹಿಡಿದು ನೀ ನಡದೀ ಏಸೋ
ಜನ್ಮ ನೀ ಪಡದಿ
ಇರುವು ಮೊದಲು ಆನಿ ಕಡಿಯಾಗಿ
ಶ್ವಾನ ಸೂಕರನಂದದಿ ॥ ೫ ॥

ಬರುಬಾರದೆ ನೀ ಬಂದಿ । ಬಾರದೇ
ಎಲ್ಲಾ ನಂದಂದಿ
ತೊಳೆದುಕೊ ನಿನ್ನ ನಿಜಸಂದಿ
ಖಾಸ ಅಲ್ದಿ ಈಶನ ಹೊಂದಿ ॥ ೬ ॥

(ಶ್ರೀ ಲೇಂಗಟಿ ಕರಿಬಸವೇಶ್ವರರು. ಪು-೪೫-೪೬)

ತನ್ನ ಬಿಟ್ಟು ದೇವರಿಲ್ಲ

ತನ್ನ ಬಿಟ್ಟು ದೇವರೇ ಇಲ್ಲ । ಈ ಭೂಮಿಯ ಮ್ಯಾಲ
ತನ್ನ ಬಿಟ್ಟು ದೇವರೇ ಇಲ್ಲ ॥ ಪ ॥

ಬಂಡೆಗಲ್ಲಿಗಿ ಭಂಡಾರ ಬಡದು
ದೇವರಂತಿರಿ ಎಲ್ಲಕ ದೊಡ್ಡದು
ಟೆಂಗಿನಕಾಯಿ ತಂದು ಮುಂದೊಡೆದು
ಪರಟಿ ಒಗಿತಿರಿ ಒಳಗಿನು ತಿಂದು ॥ ೧ ॥

ಕಲಕುಟ್ಟಿಗ್ಯಾ ಕರಿಬಸವಣ್ಣಾ ಕಟಿದು
ನೋಡರಿ ಬಜಾರದಾಗ ಮಾರುವದು
ಲೋಬಾನ ಹಾಕಿ ಕಾಲ ಬೀಳುವದು
ಎತ್ತಿನ ಮ್ಯಾಲ ಕಲ್ಲೆತ್ತಿ ಹಾಕುವುದು ॥ ೨ ॥

ಕಬ್ಬಿಣ ಪಟ್ಟಿ ಕಂಬಾರ ಬಡದು
ಇಟ್ಟರ ಮಸೂದಿ ಒಳಗ ಒಯ್ದು
ಯಾರ ಮಾಡಿದರೆ ಏನಾಗುವದು
ಮುಲ್ಲ ಕೂಗಿದರ ಕಲ್ಲ ಒಡಿಬಹುದೆ ॥ ೩ ॥

ಊರ ದೇವತೆ ಮೀರ್‍ಯಾಳ ಎಂದು
ನಂದಾ ದೀವಿಗಿ ಇಡತೀರಿ ತಂದು
ಜೀವದ ದೇವರಗಿ ಕೊಯಿತೀರಿ ತಂದು
ವೀರಶೈವರ ಧರ್ಮ ಅಲ್ಲ ಇದು ॥ ೪ ॥

ಆಶೆ ರಹಿತನಾಗಿ ಅಲ್ಲಿಗೆ ಹೋಗಿ
ಹೇಸಿ ದೇಹದ ದೋಷವ ನೀಗಿ
ಗುರುಲಿಂಗಯ್ಯನ ಪಾದಕ ಎರಗಿ
ಮತ್ತೆ ನೀ ಬರಬ್ಯಾಡ ಮರ್ತ್ಯಕ ತಿರುಗಿ ॥ ೫ ॥

ನಿನ್ನ ನಿಜವು ನೀನೆ ನೋಡು

ನಿನ್ನ ನಿಜವು ನೀನೇ ನೋಡೋ
ಅನುಮಾನಿಸಲು ಬ್ಯಾಡೋ ॥ ಪ ॥

ತತ್ತ್ವ ಐದು ಐದಕ್ಕೈದು
ನಿತ್ಯ ನಿತ್ಯ ಭಾಗಿಸಿ ನೋಡೋ ॥ ಅನುಪಲ್ಲವಿ ॥


ಕಾಮ ಕ್ರೋಧ ಶೋಕ ಮೋಹ
ಭಯ ಆಕಾಶದ ಅಂಶಗಳು
ಚಲನವಲನ ಧಾವನ ಪ್ರಸರಣ
ಅಕುಂಚನ ವಾಯು ಅಂಶಗಳು ॥ ೧ ॥

ಹಸಿವು ತೃಷೆ ಆಲಸ್ಯ ನಿದ್ರಾ ಕಾಂತಿ ತೇಜದ ಅಂಶಗಳು
ಶುಕ್ಲ ಶೋಣಿತ ಮೂತ್ರ ಲಾಲಾರಸ
ವೇದ ಜಲದ ಅಂಶಗಳು ॥ ೨ ॥

ಅಸ್ತಿ ಮಾಂಸ ನಾಡಿ ತೂಕ
ಹೋಮ ಭೂಮಿಯ ಅಂಶಗಳು
ಅಳ್ಳಿಗೆ ಅಳ್ಳಿ ಪೂಜಿಗಿ ಪೂಜಿ
ಅಲ್ಲಿ ಈಶನ ಬೋಧವೆ ಸಹಜ ॥ ೩ ॥

(ಈ ವಿವರಗಳನ್ನು ಬ್ಯಾಲ್ಹಳ್ಳಿ, ಲೇಂಗಟಿ, ಕಡಗಂಚಿಯಲ್ಲಿದ್ದ ಭಕ್ತರಿಂದ ಸಂಗ್ರಹಿಸಲಾಗಿದೆ.)


□




ಕರಿಬಸವೇಶ್ವರರು ವಾಸಿಸುತ್ತಿದ್ದ ಓಂ ಶೆಟ್ಟಿ ಅವರ ಮನೆ
(ಬ್ಯಾಲಹಳ್ಳಿ).




ಕರಿಬಸವೇಶ್ವರರ ಛಾಯಾಚಿತ್ರ.



ಕರಿಬಸವೇಶ್ವರರ ಗುರುಗಳಾದ ಗುರುಲಿಂಗ ಸ್ವಾಮಿಗಳ ಛಾಯಾಚಿತ್ರ.




ಗುರುಲಿಂಗ ಸ್ವಾಮಿಗಳು ಧ್ಯಾನಸ್ಥ ಸ್ಥಿತಿಯಲ್ಲಿ




ಕರಿಬಸವೇಶ್ವರರು ಉಪಯೋಗಿಸುತ್ತಿದ್ದ ಏಕನಾದ




* ಕೈಲಾಸ ಆಶ್ರಮದ ಉಸ್ತುವಾರಿ ನೋಡಿಕೊಳ್ಳುತ್ತಿರುವ ಸಾಧಕವರೇಣ್ಯ
ಶಿವಾನಂದರು (ಬ್ಯಾಲಹಳ್ಳಿ)



ಕರಿಬಸವೇಶ್ವರರ ಜನ್ಮಸ್ಥಳದಲ್ಲಿರುವ ಮನೆ
ಲೇಂಗಟಿ (ಆಳಂದ ತಾಲ್ಲೂಕಾ)




ಕರಿಬಸವೇಶ್ವರರ ಛಾಯಾ ಚಿತ್ರದ ಇನ್ನೊಂದು ನೋಟ




ಕರಿಬಸವೇಶ್ವರರ ಮಗ ಶ್ರೀ ಓಂಕಾರ (ಲೇಂಗಟಿಯಲ್ಲಿ ವಾಸ್ತವ್ಯ)




ಕರಿಬಸವೇಶ್ವರರ ವಂಶಬಳ್ಳಿ (ಲೇಂಗಟಿ)




ಕರಿಬಸವೇಶ್ವರರ
ಸಮಾಧಿ ಮಂಟಪ
(ಲೇಂಗಟಿ).



ಕರಿಬಸವೇಶ್ವರರ
ಮಠದ ಮೇಲ್ವಿಚಾರಕ
ಶಿವಲಿಂಗಪ್ಪ
(ಲೇಂಗಟಿ).




ಕರಿಬಸವೇಶ್ವರರ
ಸಮಾಧಿ ಮಂಟಪದ
ಒಳಾಂಗಣ ದೃಶ್ಯ
(ಲೇಂಗಟಿ).



ಕರಿಬಸವೇಶ್ವರರ
ಮಠದಲ್ಲಿರುವ
ಪ್ರಭುಲಿಂಗಸ್ವಾಮಿ.

ಕರಿಬಸವೇಶ್ವರರ
ಸಮಾಧಿಯ
ಮೇಲಿರುವ
ದರ್ಶನ ಪ್ರತಿಮೆ.






ಕರಿಬಸವೇಶ್ವರರ
ಶಿಷ್ಯರಾದ ಶ್ರೀ ಶಾಂತಪ್ಪ
ದೇವಣಗಾಂವ ಅವರ
ಮನೆ (ಕಡಗಂಚಿ).

ಶಾಂತಪ್ಪ
ದಂಪತಿಗಳು



ಶಾಂತಪ್ಪನವರ
ಸಹೋದರ
ಗುರುಪ್ಪನವರು
(ಕಡಗಂಚಿ).







ಕರಿಬಸವೇಶ್ವರರ –
ಗುರುಲಿಂಗ
ಶಿವಾಚಾರ್ಯರ ಪರಮ
ಭಕ್ತೆ ಗಂಗಮ್ಮನವರ
ಛಾಯಾಚಿತ್ರ



ಗುರಪ್ಪನವರ ಹಿರಿಯ
ಮಗ ನಿರಂಜನ
ದಂಪತಿಗಳು




ಕರಿಬಸವೇಶ್ವರರ
ಗುರುಗಳಾಗಿದ್ದ
ಗುರುಲಿಂಗ
ಶಿವಾಚಾರ್ಯರ
ಸಮಾಧಿದೇವಾಲಯ
(ಕಡಗಂಚಿ).




ಸಮಾಧಿ ದೇವಾಲಯದ
ಒಳಾಂಗಣ ದೃಶ್ಯ.




ಗಂಗಮ್ಮನವರ
ಪ್ರತಿಮೆ.



ಗುರುಲಿಂಗ ಸ್ವಾಮಿಗಳ ಸಮಾಧಿ.



ಗುರುಲಿಂಗ ಸ್ವಾಮಿಗಳ ಮೂಲನೆಲೆ (ಆಳಂದ).



ಗುರುಲಿಂಗ ಸ್ವಾಮಿಗಳ ಮಗ ಶಿವಯ್ಯನವರು.

೬. ಶಿವಮೂರ್ತೆಪ್ಪ ಮೈನಳ್ಳಿ (ಕ್ರಿ.ಶ.ಸು. ೧೮೮೫-೧೯೪೦)

ಬೀದರ ಜಿಲ್ಲೆಯ ಭಾಲ್ಕಿ ತಾಲ್ಲೂಕಿನಲ್ಲಿ ಬರುವ ಮೈನಳ್ಳಿ ಗ್ರಾಮವು ಶಿಷ್ಟ ಭಾಷೆಯಲ್ಲಿ 'ಮಾವಿನ ಹಳ್ಳಿ'ಯೆಂದು ಹೇಳಲಾಗುತ್ತದೆ. ಇಲ್ಲಿನ ಶಿವಮೂರ್ತೆಪ್ಪನವರು ಲಿಂಗೈಕ್ಯರಾಗಿ ಏಳುದಶಕಗಳು ಕಳೆದುಹೋಗಿವೆ. ಆದರೂ ಅವರ ಹೆಸರು ಮಾತ್ರ ತತ್ತ್ವಪದಗಳ ಮೂಲಕ ಚಿರವಾಗಿ ಉಳಿದುಕೊಂಡಿದೆ. ಶಿವಮೂರ್ತೆಪ್ಪನವರು ಬಹಳ ಕಾಲ ಬದುಕಲಿಲ್ಲ. ಐವತ್ತೈದು ವರ್ಷಗಳ ಕಾಲ ಮಾತ್ರ ಬದುಕಿದರು. ಈಗ ಅವರ ಒಬ್ಬ ಮಗ ಮಲ್ಲಿಕಾರ್ಜುನ ಅವರು ಭಾಲ್ಕಿಯಲ್ಲಿ ವಾಸವಾಗಿದ್ದಾರೆ.

ಶಿವಮೂರ್ತೆಪ್ಪನವರ ತಂದೆ ಶಾಂತಪ್ಪನವರು, ಹೆಸರಿಗೆತಕ್ಕಂತೆ ಶಾಂತ ಸ್ವಭಾವಿ. ಕೃಷಿಕಾಯಕ ಅವರ ವೃತ್ತಿಯಾಗಿತ್ತು. ಸಂಸ್ಕಾರ ಮನದ ಶಾಂತಪ್ಪನವರು ಕುಟುಂಬದಲ್ಲಿ ಒಳ್ಳೆಯ ಸಂಸ್ಕಾರವನ್ನು ಬಿತ್ತಿದರು; ಊರಿನವರ ದೃಷ್ಟಿಯಲ್ಲಿ ಶಾಂತಪ್ಪನವರೆಂದರೆ "ಶರಣ ಜೀವ"ದಂತೆ ಕಾಣುತ್ತಿದ್ದರು.

ಕ್ರಿ.ಶ. ೧೮೮೫ರಲ್ಲಿ ಶಿವಮೂರ್ತೆಪ್ಪನವರ ಜನನವಾಯಿತು. ಶಿಕ್ಷಕ ವೃತ್ತಿಗೆ ಬೇಕಾಗುವಷ್ಟು ಅವರು ಶಿಕ್ಷಣ ಪಡೆದರು. ಕನ್ನಡ-ಮೋಡಿ-ಮರಾಠಿ, ಹಿಂದಿ ಭಾಷೆಗಳಲ್ಲಿ ಪಾಂಡಿತ್ಯವನ್ನು ಗಳಿಸಿದರು. ಶಿವಮೂರ್ತೆಪ್ಪನವರ ಮನಸ್ಸು ಈ ಕಾರಣದಿಂದ ಸಹಜವಾಗಿಯೇ ಜ್ಞಾನಗಳಿಕೆ ಮತ್ತು ವಿತರಣೆಯೆಡೆಗೆ ಹರಿಯಿತು. ಆರಂಭದಲ್ಲಿ ಅವರು ಒಕ್ಕಲುತನದ ಕೆಲಸಗಳನ್ನು ನೋಡಿಕೊಳ್ಳಲೆಂದು ಹೊಲಕ್ಕೆ ಹೋಗುತ್ತಿದ್ದರು. ಕೆಲಸದಲ್ಲಿ ಭಾಗಿಯಾಗುತ್ತಿದ್ದರು. ಆದರೆ ಅವರು ಪೂರ್ಣಪ್ರಮಾಣದಲ್ಲಿ ಅದನ್ನು ನಿರ್ವಹಿಸಲಿಲ್ಲ. ಅವರಿಗೆ ಹೊಲದ ಕೃಷಿಗಿಂತಲೂ, ಮನುಷ್ಯನ ಮನವನ್ನು ಕೃಷಿ ಮಾಡಬೇಕಾಗಿತ್ತು. ಅದಕ್ಕಾಗಿಯೇ ಅವರು ಹೆಚ್ಚು ಒಲವು ತೋರುತ್ತಿದ್ದರು.

ಶಿವಮೂರ್ತೆಪ್ಪನವರ ಮನೆಯ ಗುರುಗಳು ಗೋರಚಿಂಚೋಳಿ ಹಿರೇಮಠದ ಸ್ವಾಮಿಗಳು, ಮನೆಯ ದೇವರು ಗೋಕುಳದ ವೀರಭದ್ರದೇವರು. ಉಭಯರಲ್ಲೂ ಶಿವಮೂರ್ತೆಪ್ಪನವರಿಗೆ ಭಕ್ತಿಯಿದ್ದಿತು. ಆಗಾಗ ಮನೆದೇವರು, ಮನೆ ಗುರುಗಳ ದರ್ಶನಕ್ಕೆ ಹೋಗುತ್ತಿದ್ದರು.

ಶಿವಮೂರ್ತೆಪ್ಪನವರ ಹೆಂಡತಿ ನೀಲವ್ವ. ಈ ದಂಪತಿಗಳಿಗೆ ಒಬ್ಬ ಮಗ ಮತ್ತು ಇಬ್ಬರು ಹೆಣ್ಣು ಮಕ್ಕಳು ಇದ್ದಾರೆ. ಶಾಂತಪ್ಪನವರ ಅಣ್ಣನವರು ಖಾಸಗಿ ಶಾಲೆ

ತೆರೆದು ಅಲ್ಲಿ ಮಕ್ಕಳಿಗೆ ಮೋಡಿ-ಮರಾಠಿಯಲ್ಲಿ ಶಿಕ್ಷಣ ನೀಡುತ್ತಿದ್ದರು. ಈಗ ಶಿವಮೂರ್ತೆಪ್ಪನವರಿಗೆ ತಮ್ಮ ದೊಡ್ಡಪ್ಪನವರು ಮಾಡುತ್ತಿದ್ದ ಕಾಯಕವೇ ಮಾಡಬೇಕೆನಿಸಿತು. ಒಂದು ಸಲ ಗೋರಚಿಂಚೋಳಿಗೆ ಹೋದರು. ಗುರುಗಳ ದರ್ಶನ ಪಡೆದರು. ಶಿವಮೂರ್ತೆಪ್ಪನವರು ತಮಗಿದ್ದ ಆಶೆಯನ್ನು ಗುರುಗಳ ಸನ್ನಿಧಿಯಲ್ಲಿ ಅರಿಕೆ ಮಾಡಿಕೊಂಡರು. ಅದಕ್ಕೆ ಗುರುಗಳು "ತಮ್ಮಾ ಶಿವಮೂರ್ತಿ, ಒಕ್ಕಲುತನ ಯಾರು ಬೇಕಾದವರು ಮಾಡಬಹುದು. ಆದರೆ ಅನಕ್ಷರಸ್ಥರಿಗೆ ಅಕ್ಷರ ಕಲಿಸುವುದು ಕೆಲವರಿಗೆ ಮಾತ್ರ ಸೀಮಿತವಾದ ಕಾರ್ಯ. ಅಂತಹ ಕೆಲಸವನ್ನು ಮಾಡಲು ನೀನು ತಯ್ಯಾರಾಗಿದ್ದುದು ಒಳ್ಳೆಯದು. ನಿನ್ನಿಂದ ಹಲವಾರು ಬಡಮಕ್ಕಳು ಉದ್ಧಾರವಾಗುತ್ತವೆ. ಅವರಿಗೆ ಉಚಿತವಾಗಿ ಶಿಕ್ಷಣನೀಡು, ನಿನಗೂ ಒಳ್ಳೆಯದಾಗುತ್ತದೆ" ಎಂದು ಆಶೀರ್ವದಿಸಿದರು.

ಗುರುಗಳ ಮಾತು ಶಿವಮೂರ್ತೆಪ್ಪನವರಿಗೆ ವೇದ ವಾಕ್ಯವೆನಿಸಿತು. ಮೈನಳ್ಳಿಗೆ ಮರಳಿ ಬಂದು ಖಾಸಗಿ ಪಾಠ ಶಾಲೆಯನ್ನು ಆರಂಭಿಸಿಯೇ ಬಿಟ್ಟರು. ಆರಂಭದಲ್ಲಿ ಮಕ್ಕಳ ಸಂಖ್ಯೆ ಕಡಿಮೆಯಾಗಿಯೇ ಕಂಡಿತು. ಆಗ ಶಿವಮೂರ್ತೆಪ್ಪನವರು ಹಳ್ಳಿಗರ ಮನೆ-ಮನೆಗಳಿಗೆ ಹೋಗಿ ಅವರ ಮನವೊಲಿಸಿ ಮಕ್ಕಳನ್ನು ಕರೆ ತರುವ ಕಾರ್ಯ ಮಾಡಿದರು. ಬರು ಬರುತ್ತಾ ಶಾಲೆಯಲ್ಲಿ ಮಕ್ಕಳ ಸಂಖ್ಯೆ ವರ್ಧಿಸಿತು. ಶಿವಮೂರ್ತೆನಪ್ಪನರು ಪ್ರೀತಿಯಿಂದ ಮಕ್ಕಳಿಗೆ ಶಿಕ್ಷಣ ನೀಡುತ್ತಿದ್ದರು. ಯಾರಿಗೂ ಹೊಡೆಯುತ್ತಿರಲಿಲ್ಲ. ಸಿಟ್ಟಿಗೆ ಬರುತ್ತಿರಲಿಲ್ಲ. ಹೀಗಾಗಿ ಮೈನಳ್ಳಿ ಅವರ ಖಾಸಗಿ ಶಾಲೆಯು ಮಕ್ಕಳಿಗೆ ಪ್ರೀತಿಯ ತಾಣವಾಯಿತು.

ಶಿವಮೂರ್ತೆಪ್ಪನವರು ಶಿಕ್ಷಣ ನೀಡುವುದರೊಂದಿಗೆ ಸಾಹಿತ್ಯದ ಕೃಷಿಯನ್ನೂ ಮಾಡಿದರು. ಅವರು ಶಾಲೆಯಲ್ಲಿ ಮಕ್ಕಳಿಗೆ ಹಾಡುಗಳ ಮೂಲಕ ಬೋಧನೆ ಮಾಡುತ್ತಿದ್ದರು. ನೀತಿಯ ಹಾಡುಗಳನ್ನು ಕಟ್ಟಿ ಮಕ್ಕಳಿಗೆ ಹಾಡಿ ತೋರಿಸುತ್ತಿದ್ದರು. ಅವರಿಗೆ ಭಜನೆಯೂ ಪ್ರಿಯವಾದ ವೃತ್ತಿಯೇ ಆಗಿದ್ದಿತು. ಸಮಯ ಸಿಕ್ಕಾಗ ಭಜನೆಗೆ ಹೋಗುತ್ತಿದ್ದರು.

ಶಿವಮೂರ್ತೆಪ್ಪನವರು ಹಲವಾರು ಪದ್ಯಗಳನ್ನು ಬರೆದರು. ಮಕ್ಕಳಿಗಾಗಿಯೇ ಶಿಶು ಸಾಹಿತ್ಯವನ್ನು ಸೃಷ್ಟಿ ಮಾಡಿದರು. ಅವರು ಬರೆದ ತತ್ತ್ವಪದಗಳಿಗೆ ಮನೆಯ ದೇವರು ವೀರಭದ್ರನ ಹೆಸರನ್ನು ಮುದ್ರೆಯಾಗಿ ಇಟ್ಟುಕೊಂಡಿದ್ದಾರೆ. ಅವರ ಎರಡು ತತ್ತ್ವಪದಗಳನ್ನು ಇಲ್ಲಿ ಕೊಡಲಾಗಿದೆ:

ಬಾರಾ ಭಾಂದಗಾಡ ಮಾಡಬೇಡ

ಬಾರಾ ಭಾಂದಗಾಡ ಮಾಡ ಬೇಡ ತಮ್ಮ
ತೇರಾ ಭಾರಿಸಿದಾಗ ನಿನಗದಾಯ್ತು ಬೊಮ್ಮ
ವಂಕಾವಾಸಿ ಬಂದಿಯೇನು ತಮ್ಮ
ಸೀದಾ ಸಾಫ್ ಬಂದವನು
ಸೀದಾ ಸಾಫ್ ಇರಬೇಕು ಸುಮ್ಮ ॥ ೧ ॥

ಹೆಣ್ಣೀಗಿ ಬಾಯಿ ತೆರೀತಿ
ಮಣ್ಣಿಗಿ ಕೈ ಚಾಚುತಿ
ಹೊನ್ನೀಗಿ ಹೈರಣಾಗುತಿ
ಮನ್ನಣಿ ಪಡಿಲಿಲ್ಲ ತಮ್ಮ ॥ ೨ ॥

ಸಿಂದಿ ಕುಡದ ಕ್ವಾಡಗನಂಗ
ದುಂಧ ಏರಿ ಕುಣದ್ಯಾಡತಿ
ಛಂದ–ಛಂದ ನೋಡಿದ್ದೆಲ್ಲ
ನಂದೆ ಅಂತ ಹಾರ್‍ಯಾಡತಿ ॥ ೩ ॥

ತಿರುಗಿ–ಮುರಗಿ ಅವಕೆ ಬೆನ್ನಬಿದ್ದು
ಮರುಗಿ ಮರುಗಿ ಸತ್ತು ಹ್ವಾದಿ
ಕರಗಿ ಸೊರಗಿ ಗೊತ್ತು ಕಾಣದ್ದು ಹಾದಿ
ದುರಗಿ ಮುಂದ ಪೋತರಾಜ ಕುಣದಂಗ ಕುಣದಿ ॥ ೪ ॥

ಧರಿಯೊಳು ಮೆರವ ಮಾವಿನ ಹಳ್ಳಿ
ಪುರ ಗೋಕುಳದ ವೀರಭದ್ರನಲ್ಲಿ
ಶಿರವ ಬಾಗುತ ಕೈಯ್ಯ ಮುಗಿಯಲ್ಲಿ
ವರವ ದೊರಕುವದು ಮುಕ್ತಿ ರೂಪದಲ್ಲಿ ॥ ೫ ॥

ನಾನೇನೆಂದೆನೋ ಗುರುರಾಯ

ನಾನೇನೆಂದೆನೋ ಗುರುರಾಯ
ನೀನೆನಗೆ ಸಹಾಯ ॥ ಪ ॥
ನಿಗಮಾಗಮಗಳಿಗೆ ನಿಲುಕದವನೀನಂದೆ
ಅನುಮಾನ – ಸಂಶಯ ಸಿಲುಕಿದವನೆಂದೆ
ಕಾಮಕ್ಕೆ ಸಿಲುಕದವ
ನೇಮಕ್ಕೆ ನಿಲುಕದವನೆಂದೆ ॥ ೧ ॥

ಮಾಂಸದ ಪಿಂಡವ ಮಂತ್ರ ಪಿಂಡ ಮಾಡಿದವನೆಂದೆ
ಶಾಸ್ತ್ರದಲ್ಲಿ ಶಿವಮಂತ್ರ ನಿಲಿಸಿದವನೆಂದೆ
ಧ್ಯಾಸವಿಟ್ಟವಗೆ ಕರುಣೆ ತೋರಿದವನೆಂದೆ
ಲೇಸದಿ ಕರವ ಹಿಡಿದು ಉದ್ಧರಿಸಿದವನೆಂದೆ ॥ ೨ ॥


ಇಷ್ಟ ಲಿಂಗವ ಕರಕೆ ಕೊಟ್ಟವನು ಎಂದೆ
ಬ್ರಷ್ಟ ಗುಣವ ಕೆಡಿಸಿ ಕಳೆದವನು ಎಂದೆ
ನಷ್ಟ–ಕಷ್ಟಗಳ ದೂರ ಮಾಡಿದವನೆಂದೆ
ಶ್ರೇಷ್ಠ ಶ್ರೀ ಗುರುರಾಯ ನೀನೆ ಎಂದೆ ॥ ೩ ॥

ಕಾಲನ ಕತ್ತಲೆ ಕಳೆದು ಹಾಕಿದವನೆಂದೆ
ಶಿವನ ಬೆಳಕನ್ನು ಬೆಳಗಿದವನೆಂದೆ
ವ್ಯಾಳೆ ವ್ಯಾಳೆಕ ಗೊತ್ತ ತೋರಿದವನೆಂದೆ
ತಲಿಮ್ಯಾಲ ಕರವಿಟ್ಟು ಕರುಣಿಸಿದವನೆಂದೆ ॥ ೪ ॥


ವಸುಧಿಯೊಳಗ ನಮ್ಮ ಮೈನಳ್ಳಿ ಊರು
ಈಶ ಗೋಕುಳದ ವೀರಭದ್ರನ ತೇರು
ಕೂಸಾಗಿ ಎಳೆಯುತ ಗುರುವಿನ ಪಾದವ ಸೇರು
ಲೇಸಿನಿಂದಲಿ ಗುರು ಮುಟ್ಟಿ ಆಗು ಗುರು ॥ ೫ ॥

(ಈ ವಿವರಗಳನ್ನು ಕವಿಯ ದೊಡ್ಡಪ್ಪನವರ ಮಗಳು ಬಸಮ್ಮನವರು ಕೊಟ್ಟಿದ್ದಾರೆ.)

□



ಶಿವಮೂರ್ತೆಪ್ಪ ಮೈನಳ್ಳಿ ಅವರ ಮನೆ (ಮಾವಿನಹಳ್ಳಿ).



ಶಿವಮೂರ್ತೆಪ್ಪನವರು ಶಾಲೆ ಕಲಿಸುತ್ತಿದ್ದ ಸ್ಥಳ (ಮಾವಿನಹಳ್ಳಿ).

೭.ಚೆನ್ನಯ್ಯಸ್ವಾಮಿ ಮಠಪತಿ (ಕ್ರಿ.ಶ.ಸು. ೧೮೯೦–೧೯೫೦)

ಬೀದರ ಜಿಲ್ಲೆಯ ಭಾಲ್ಕಿ ತಾಲ್ಲೂಕಿನಲ್ಲಿ ಬರುವ ಉಚ್ಚಾ ಗ್ರಾಮದ ಚೆನ್ನಯ್ಯಸ್ವಾಮಿ ಮಠಪತಿ ಅವರು ಲಿಂಗೈಕ್ಯರಾಗಿ ಇಂದಿಗೆ ಸು. ಅರವತ್ತು ವರುಷಗಳು ಕಳೆದಿವೆ. ಇಂದು ಆ ಗ್ರಾಮದಲ್ಲಿ ಸ್ವಾಮಿಗಳ ಬಗೆಗೆ ಕೇಳಿದರೆ ಅವರ ಸಾಹಿತ್ಯಿಕ ವಿವರಗಳನ್ನು ಕುರಿತು ಹೇಳುತ್ತಾರೆ. ಅವರ ಹೇಳಿಕೆಯಲ್ಲಿ ಚೆನ್ನಯ್ಯನವರು ಚೇತನಾತ್ಮಕವಾಗಿ ಉಳಿದುಕೊಂಡಿದ್ದಾರೆನ್ನಬೇಕು.

ಚೆನ್ನಯ್ಯಸ್ವಾಮಿಗಳ ಮೂಲಸ್ಥಳ ಖೇಡ. ಅಲ್ಲಿಂದ ಸ್ವಾಮಿಗಳು ಮನೆಯ ಅಳಿಯನಾಗಿ ಉಚ್ಚಾ ಗ್ರಾಮಕ್ಕೆ ಬಂದರು. ಅದರ ಕೀರ್ತಿಯನ್ನು ಸಾಂಸ್ಕೃತಿಕ ನಕಾಶೆಯಲ್ಲಿ ಉಳಿಯುವಂತೆ ಮಾಡಿದರು.

ಚೆನ್ನಯ್ಯನವರ ತಂದೆ ಗುರುಪಾದಯ್ಯನವರು. ಮಠಪತಿ ಕಾಯಕದಿಂದ ಬದುಕು ನಡೆಸುತ್ತಿದ್ದರು. ಅವರು ಬಹು ಶ್ರದ್ಧಾವಂತ ಜಂಗಮರಾಗಿದ್ದರು. ದಿನ ನಿತ್ಯ ಎರಡು ಹೊತ್ತು ಪೂಜೆ ಮಾಡುತ್ತಿದ್ದರು. ಗುರುಪಾದಯ್ಯನವರ ಹೆಂಡತಿ ಸಿದ್ಧಮ್ಮನವರು. ಈ ದಂಪತಿಗಳಿಗೆ ಕ್ರಿ.ಶ. ೧೮೯೦ರಲ್ಲಿ ಚೆನ್ನಯ್ಯನವರು ಮಗನಾಗಿ ಹುಟ್ಟಿ ಬಂದರು.

ಚೆನ್ನಯ್ಯ ಸ್ವಾಮಿಗಳ ಶಿಕ್ಷಣವು ಮಠದಯ್ಯಗಳ ಶಾಲೆಯಲ್ಲಿಯೇ ನಡೆಯಿತು. ತಂದೆ ಗುರುಪಾದಯ್ಯನವರು ಪಂಡಿತರಾಗಿದ್ದರು; ಜ್ಯೋತಿಷ್ಯಶಾಸ್ತ್ರ ಪ್ರವೀಣರಾಗಿದ್ದರು. ಹೀಗಾಗಿ ಪಂಡಿತ ತಂದೆಯ ಗರಡಿಯಲ್ಲಿ ಪಳಗಿದ ಚೆನ್ನಯ್ಯನವರು ಪಾಂಡಿತ್ಯದ ವ್ಯಕ್ತಿತ್ವ ಹೊಂದಿ ಬೆಳೆದರು.

ಚೆನ್ನಯ್ಯ ಸ್ವಾಮಿಗಳಿಗೆ ಹಳಗನ್ನಡ, ಸಂಸ್ಕೃತ, ಮೋಡಿ, ಕನ್ನಡ, ಬಾಳಬದ್ಧ ಮುಂತಾದ ಭಾಷೆಗಳಲ್ಲಿ ಪಾಂಡಿತ್ಯವಿದ್ದಿತು. ಅವರು ಹಳಗನ್ನಡದಲ್ಲಿನ ವೀರಶೈವ ಕಾವ್ಯಗಳ ಹಸ್ತ ಪ್ರತಿಗಳನ್ನು ಸಂಗ್ರಹಿಸಿ ಇಟ್ಟಿದ್ದರು. ಮಧ್ಯಾಹ್ನದ ಹೊತ್ತಾದ ಮೇಲೆ ಮನೆಯಲ್ಲಿ ಅವರು ಕೆಲವು ಜನರನ್ನು ನೆರೆಯಿಸಿಕೊಂಡು ಕಾವ್ಯಗಳನ್ನು ಓದಿ ಹೇಳುತ್ತಿದ್ದರು. ಅವುಗಳಲ್ಲಿ ಬಸವಪುರಾಣ, ವೀರಶೈವಾಮೃತ ಪುರಾಣ, ಷಡಕ್ಷರ ಮಹಾಕವಿಯ ಕಾವ್ಯಗಳು ಇವು ಅತ್ಯಂತ ಮುಖ್ಯವಾದವುಗಳಾಗಿದ್ದವು. ಚೆನ್ನಯ್ಯ ಸ್ವಾಮಿಗಳು ಸಂಸ್ಕೃತ ಸಾಹಿತ್ಯವನ್ನು ಸರಿಯಾಗಿಯೇ ಎತ್ತಿ ಹಾಕಿದರು. ಸಂಸ್ಕೃತದಲ್ಲಿನ

ಕಾಳಿದಾಸ–ಶೂದ್ರಕಾದಿಗಳ ನಾಟಕಗಳನ್ನು ಅಧ್ಯಯನ ಮಾಡಿದರು. ಹೀಗಾಗಿ ಅವರಲ್ಲಿ ನಾಟಕಗಳ ಬಗೆಗೆ ಅತೀವ ಆಸಕ್ತಿ ಬೆಳೆಯಿತು. ಕನ್ನಡದಲ್ಲಿ ಅವರು ಹಲವು ನಾಟಕಗಳನ್ನು ಬರೆದು ಮಾಡಿಸಿದರು.

ಅವರ ನಾಟಕ ಪ್ರತಿಭೆ ಕುರಿತು ಇಂದು ಉಚ್ಚಾ ಗ್ರಾಮದ ಹಿರಿಯರು ಬಹು ಅಭಿಮಾನದಿಂದ ಮಾತಾಡುತ್ತಾರೆ. ಚೆನ್ನಯ್ಯನವರ ಅಳಿಯಂದಿರಾದ ಕಂಠಯ್ಯ ಸ್ವಾಮಿ ಅವರು ಅವರ ಬಗೆಗೆ ಕೊಟ್ಟ ವಿವರಗಳು ಅತ್ಯಂತ ಮಹತ್ವದ್ದವುಗಳಾಗಿವೆ. ಈಗ ಅವರಿಗೆ ಎಂಬತ್ತೆರಡರ ಪ್ರಾಯ, ಆಚಾರ ಶೀಲರು. ದಿನ ನಿತ್ಯ ಅವರು ರುದ್ರಾಭಿಷೇಕ ಸಹಿತವಾಗಿ ಎರಡು ಸಲ ಇಷ್ಟಲಿಂಗಾರ್ಚನೆ ಮಾಡುತ್ತಾರೆ. ಇಂದು ಭಾಲ್ಕಿ ಹಿರೇಮಠದಲ್ಲಿದ್ದಾರೆ. ಅವರು ಹೇಳುವ ಮಾತುಗಳು ಹೀಗಿವೆ: "ಚೆನ್ನಯ್ಯ ಸ್ವಾಮಿಗಳು ನಮ್ಮ ಮಾವನವರು. ಅಂದರೆ ನಮ್ಮ ತಾಯಿಯ ಅಣ್ಣಂದಿರು. ಅವರದು ಬಹು ಗಂಭೀರ ವ್ಯಕ್ತಿತ್ವ. ಅವರ ಆಚಾರಶೀಲತೆಯ ಎದುರಿನಲ್ಲಿ ಮಠದ ಸ್ವಾಮಿಗಳ ಆಚಾರವೂ ಕಡಿಮೆ ಎನಿಸುತ್ತಿದ್ದಿತು. ಪ್ರಕಾಂಡ ಪಂಡಿತರು; ಯೋಗದಲ್ಲಿ ನುರಿತವರು. ಯೋಗ ಶಾಸ್ತ್ರದ ಆಳವಾದ ಅಧ್ಯಯನದಿಂದ ಅವರು "ಯೋಗಾಚಾರ್ಯ"ಯೆನಿಸಿದರು. ಅವರ ಯೋಗ ಸಿದ್ಧಿಯಲ್ಲಿ ಒಂದಿಷ್ಟು ನನಗೂ ದೊರಕಿದೆ. ಅವರು ಆಶುಕವಿತ್ವ ಶಕ್ತಿ ಹೊಂದಿದ್ದರು. ಕುಂತಲ್ಲೆ ಪದ್ಯಗಳನ್ನು ರಚಿಸಿ ಹಾಡುತ್ತಿದ್ದರು. ಹಳಗನ್ನಡ ಕಾವ್ಯದ ಹಲವು ಭಾಗಗಳು ಅವರಿಗೆ ಮುಖದ್ಗತವಾಗಿದ್ದವು. ನಾಟಕ ಕಲಿಸುವುದರಲ್ಲಿ ಅವರದು ಎತ್ತಿದ ಕೈ. ಬೀದರ ಜಿಲ್ಲೆಯಲ್ಲಿಯೆ ಅವರಂತಹ ನಾಟಕ ಮಾಸ್ತರರು ಇರಲಿಲ್ಲವೆಂದು ಜನರು ಮಾತಾಡುತ್ತಿದ್ದರು. ಅವರು ಪರಮ ಪ್ರಸಾದಿಕರು. ಎಲ್ಲೆ ಹೋಗಲಿ, ಎಲ್ಲೇ ಇರಲಿ ಎರಡು ಹೊತ್ತಿನ ಪೂಜೆ ತಪ್ಪುತ್ತಿರಲಿಲ್ಲ".

ಚೆನ್ನಯ್ಯ ಸ್ವಾಮಿಗಳ ಸಂಸಾರಿಕ ಜೀವನವು ಸಾರಯುತವಾದುದ್ದಾಗಿತ್ತು. ಅವರ ಹೆಂಡತಿ ರತ್ನಮ್ಮನವರು. ಅವರಿಗೆ ಇಬ್ಬರು ಹೆಣ್ಣು ಮಕ್ಕಳಿದ್ದರು.

ಚೆನ್ನಯ್ಯ ಸ್ವಾಮಿಗಳ ಮನೆತನದ ಗುರುಗಳು ರಾಜೇಶ್ವರ ಗ್ರಾಮದ ಹಿರೇಮಠದ ಸ್ವಾಮಿಗಳು. ಮನೆಯ ದೇವರು ಹೊನ್ನಿಕೇರಿ ಸಿದ್ಧೇಶ್ವರ.

ಚೆನ್ನಯ್ಯ ಸ್ವಾಮಿಗಳು ರಚಿಸಿದ ತತ್ತ್ವಪದಗಳು ಅವರ ಅಳಿಯ ಶ್ರೀಕಂಠಯ್ಯ ಸ್ವಾಮಿಗಳೂ ಹಾಡುತ್ತಾರೆ. ಅವು ಹೆಚ್ಚಾಗಿ ಅವರ ನೆನಪಿನಲ್ಲಿ ಉಳಿದಿಲ್ಲ. ಹಾಗೆಯೇ ಅವರು ಬರೆದ ಎಲ್ಲ ಸಾಹಿತ್ಯವು ಹಾಳಾಗಿ ಹೋಗಿದೆ. ಜನರ ಬಾಯಲ್ಲಿಯೇ ಅವರ ಸಾಧನೆಯ ವಿವರಗಳು ಉಳಿದುಕೊಂಡಿವೆ. ಅಂದು ಚೆನ್ನಯ್ಯನವರು ಕಲಿಸಿದ 'ಲೋಕಸುಂದರಿ', 'ದಮಯಂತಿ', 'ಬಡ ಬಸವಂತರಾಯ' ನಾಟಕಗಳ ಬಗೆಗೆ ಜನರು ಇಂದಿಗೂ ನೆನಪಿಟ್ಟಿದ್ದಾರೆ. ಅವುಗಳಲ್ಲಿನ ಕೆಲವು ಹಾಡುಗಳೂ ಸ್ವತಃ ಚೆನ್ನಯ್ಯನವರು ಬರೆದವುಗಳೆಂದು ಹೇಳುತ್ತಾರೆ.

ಆಚಾರ ನಿಷ್ಠರಾಗಿ, ನಾಟಕಕಾರರಾಗಿ, ತತ್ತ್ವವೇತ್ತರಾಗಿ, ತತ್ತ್ವಪದಕಾರರಾಗಿ ಚೆನ್ನಯ್ಯನವರು ಕ್ರಿ.ಶ. ೧೯೫೦ರಲ್ಲಿ ಲಿಂಗೈಕ್ಯರಾದರು. ಅವರ ಸಮಾಧಿಯು ಉಚ್ಚಾ ಗ್ರಾಮದಲ್ಲಿದೆ. ಇಂದು ಅವರ ವಂಶಸ್ಥರು ಉಚ್ಚಾದಲ್ಲಿ ಇದ್ದಾರೆ. ಅವರು ಕಂತಯ್ಯ ಸ್ವಾಮಿಗಳ ಮಕ್ಕಳು, ಮೊಮ್ಮಕ್ಕಳೇ ಆಗಿದ್ದಾರೆ.

ಚೆನ್ನಯ್ಯ ಸ್ವಾಮಿಗಳಿಂದ ರಚಿತವಾದ ಎರಡು ಪದ್ಯಗಳನ್ನು ಇಲ್ಲಿ ನಿದರ್ಶನಕ್ಕಾಗಿ ಕೊಡಲಾಗಿದೆ. ಸ್ವನಾಮ ಅಂಕಿತದಲ್ಲಿ ಅವರ ಪದ್ಯಗಳಿವೆ.

ಚಾರು ಚರಣದ ರೇಣು ನಾನು

ಚಾರು ಚರಣದ ರೇಣು ನಾನು
ಪಾರು ಮಾಡಯ್ಯ ಗುರುವೆ ಈ ಭವದ ಕಾನು ॥ ಪ ॥

ಜವನ ಬಾಗಿಲ ಬಂದು ಮಾಡು
ತಮದ ಭಯವ ದೂರ ಮಾಡು
ಹೇಮ ಕರಂಡವ ಮುರಿದು ಬಿಡು
ಸಾಟಿ ಇಲ್ಲದ ವರ ನೀಡು ॥ ೧ ॥

ಏನು ಹೇಳಲಿ ಲೀಲಾ ಗುರುರಾಯ ?
ನಾನು ಬೆಳಕ ಕಂಡೆನು ನಿನ್ನ ಅಭಯ
ಸ್ವಾನ ಜನ್ಮವು ಕಡಿದು ಹೋಯಿತು
ಮಾನದಂಗವು ಪುನೀತವಾಯಿತು ॥ ೨ ॥

ಕೇಡ ಕೇಡಿಗೆ ಜಾಗವಿಲ್ಲದಾಯ್ತು
ನೋಡ-ನೋಡದರೊಳಗ ನಾಡಗೊಂದಲ ಸದ್ದು ನಿಂತ್ಹೋಯ್ತು
ಬಡತನದಡವಿಯ ಗೋಳು ಇಲ್ಲದಾಯ್ತು
ಮೃಡ ನಿನ್ನ ದಯದಲಿ ॥ ೩ ॥

ಎಂಥ ದಯಾವಂತ ಗುರುದೇವ
ಪಂಥ ಗೆಲಸಿದ ಪರಮ ಶಿವದೇವ

ಭ್ರಾಂತಿ ಬಿಡಿಸಿದೆ ನೀನೆ ಗುರುದೇವ
ನಿಶ್ಚಿಂತನಾಗಿಸಿ ಅಂತಃಪುರದೊಳಗ ನೀನಿರುವ ॥ ೪ ॥

ಕಾಳ-ಗೋಳ ದನಿಯ ನಿಂತಿತು
ಮೇಳ-ಗಾಳದ ತಳವ ಇಲ್ಲದಾಯ್ತು
ಚೇಳ ಕೊಂಡಿಯ ಮುಳ್ಳು ಕಡಿದ್ಹೋಯ್ತು
ಹೇಳನೆಂದರದು ಬಾಯಿಗೆ ಬರದಾತು ॥ ೫ ॥

ಧರೆಯೊಳಗೆ ಮೆರವ ಉಚ್ಚಾಪುರದಲಿ
ಚೆನ್ನಯ ಹೇಳಿದ ಶೂನ್ಯ ವಚನದಲಿ
ಇನ್ನು ನಿನ್ನೆ ಅನಲು ಬಾರದು ಕೇಳಿ
ಚಿನ್ಮಯ ರೂಪ ನೀನಾಗುತಿ ತಿಳಿ ॥ ೬ ॥

ಮನದೊಳಗೊಂದಾಡುತಿ

ಮನದೊಳಗೊಂದಾಡುತಿ ನಿಂಗವ್ವ
ನಿನ್ನ ತನವಿನೊಳಗೊಂದು ತೋರುತಿ ಮ್ಯಾಲವ್ವ ॥ ಪ ॥

ತಿಳಿ ಭಾಳ ಇರಬೇಕಾ ಜೋಕೆವ್ವ
ನಿನ್ನ ತನುವಿನ ನೆಲಿ ತಿಳಿಬೇಕವ್ವ
ನಾಕು ಮಂದಿ ಗೆಳತೆರವ್ವ ?
ಕಾಕುತನದಿ ಕೇಡು ಮಾಡುವರೆವ್ವಾ ॥ ೧ ॥

ಪರಮನ ಗುಣ ನೀನು ತಿಳಿಯವ್ವಾ
ಅನುವೀನ ಮನೀಗಿ ನೀ ನಡೆಯವ್ವಾ
ಜನನದ ಹಂಗು ನೀ ಹರಿಯವ್ವಾ
ಮರಣಕೆ ಹೆದರದೆ ಬದುಕವ್ವಾ ॥ ೨ ॥


ಬರುವಾಗ ಅಳುತಲಿ ಬಂದೆವ್ವಾ
ನೆರೆಯವರು ಹಲಬುತಾರ ಈಗವ್ವ

ಸಿರಿಲಿಂದ ಬದುಕ ನೀ ಮಾಡಿದೆವ್ವ
ಗುರುದೇವನ ಪಾದಕ ಸಂದೆವ್ವ ॥ ೩ ॥


ಚೆನ್ನಯ್ಯ ಸ್ವಾಮಿಯ ನುಡಿಯವ್ವ
ಉಚ್ಚಾ ಭಕ್ತರು ಕೇಳುತಾರವ್ವ
ನಿತ್ಯದ ಪದ ಅವರು ಪಡಿತಾರವ್ವ
ತತ್ತ್ವದ ಮಾತುಗಳು ಆಡುತಾರವ್ವ ॥ ೪ ॥

(ಈ ವಿವರಗಳನ್ನು ನೀಡಿದವರು ಕವಿಗಳ ಅಳಿಯಂದಿರಾದ ಶ್ರೀ ಕಂಠಯ್ಯ ಸ್ವಾಮಿಗಳು.)


▯




ಚೆನ್ನಯ್ಯ ಸ್ವಾಮಿಗಳು ವಾಸಿಸುತ್ತಿದ್ದ ಮನೆ (ಉಚ್ಚಾ).




ಚೆನ್ನಯ್ಯ ಸ್ವಾಮಿಗಳ ಸಂಬಂಧಿಗಳಾದ ಶಂಕರಯ್ಯ ಸ್ವಾಮಿ




ಚೆನ್ನಯ್ಯ ಸ್ವಾಮಿಗಳ ಮನೆತನದ ಗುರುಗಳಾದ ರಾಜೋಟೇಶ್ವರ ಶಿವಾಚಾರ್ಯರು (ಹಿರೇಮಠ- ರಾಜೇಶ್ವರ)




ಚೆನ್ನಯ್ಯ ಸ್ವಾಮಿಗಳ ಸಂಬಂಧಿ ವರ್ಗ



ಚೆನ್ನಯ್ಯ ಸ್ವಾಮಿಗಳ ಹಸ್ತಾಕ್ಷರ



ಚೆನ್ನಯ್ಯ ಸ್ವಾಮಿಗಳ ಸಮಾಧಿ




ಚೆನ್ನಯ್ಯ ಸ್ವಾಮಿಗಳಿಗೆ ಸುಸಂಸ್ಕಾರದ ನೆಲೆ ಕರುಣಿಸಿದ ಹಿರೇಮಠ (ಭಾಲ್ಕಿ)




ಚೆನ್ನಯ್ಯ ಸ್ವಾಮಿಗಳ
ಅಳಿಯಂದಿರಾದ
ಕಂಠಯ್ಯ ಸ್ವಾಮಿಗಳು.

* ಭಾಲ್ಕಿ
ಹಿರೇಮಠದ
ಒಳಾಂಗಣ ನೋಟ







* ಹಿರೇಮಠದ
ಬಸವ ಮಂಟಪ.



* ಚೆನ್ನಯ್ಯ ಸ್ವಾಮಿಗಳ
ಮನೆ
ಗುರುಗಳಾದ
ರಾಚೋಟೇಶ್ವರ
ಹಿರೇಮಠ (ರಾಜೇಶ್ವರ).



* ರಾಜೇಶ್ವರ
ಹಿರೇಮಠದ
ಒಳಾಂಗಣ
ನೋಟ



* ರಾಜೇಶ್ವರ
ಹಿರೇಮಠದಲ್ಲಿರುವ
ಮೂಲ
ಪುರುಷರ ಕರ್ತೃಗದ್ದುಗೆ

೮. ಸಿದ್ಧಯ್ಯ ಮಠಪತಿ (ಕ್ರಿ.ಶ.ಸು. ೧೯೦೨–೧೯೮೨)

ಬೀದರ ಜಿಲ್ಲೆಯ ಭಾಲ್ಕಿ ತಾಲ್ಲೂಕಿನಲ್ಲಿ ಬರುವ ಚಂದಾಪುರ ಗ್ರಾಮವು ಸಿದ್ಧಯ್ಯ ಸ್ವಾಮಿ ಮಠಪತಿ ಅವರ ಸ್ವಗ್ರಾಮವಾಗಿದೆ. ಸು. ೭೫ ವರ್ಷ ವಯಸ್ಸಿನ ಅವರ ಹಿರಿಯ ಮಗ ಮಲ್ಲಯ್ಯ ಸ್ವಾಮಿ ಅವರು ತಮ್ಮ ಮಗ–ಸೊಸೆಯೊಂದಿಗೆ ವಾಸವಾಗಿದ್ದಾರೆ.

ಸಿದ್ಧಯ್ಯ ಸ್ವಾಮಿಗಳು ಲಿಂಗೈಕ್ಯರಾಗಿ ಇಂದಿಗೆ ಸು. ೨೮ವರ್ಷಗಳು ಕಳೆದು ಹೋಗಿವೆ. ಅವರು ಹೆಸರಿಗೆ ತಕ್ಕಂತೆ ಸಿದ್ಧ ವ್ಯಕ್ತಿತ್ವದ ವ್ಯಕ್ತಿಗಳೇ ಆಗಿದ್ದರು. ಹಲವಾರು ವಿದ್ಯೆಗಳಲ್ಲಿ ಅವರದು ಎತ್ತಿದ ಕೈ. ಹೀಗಾಗಿ ದಿನ ನಿತ್ಯವೂ ಸಿದ್ಧಯ್ಯ ಸ್ವಾಮಿಗಳಿಂದ ಮಾರ್ಗದರ್ಶನ ಹೊಂದಲೆಂದು ಹಲವಾರು ಭಕ್ತರು ಬರುತ್ತಿದ್ದರು. ಅವರಿಗೆಲ್ಲ ಪ್ರಸಾದ ವ್ಯವಸ್ಥೆಯಿದ್ದಿತು. ಸಿದ್ಧಯ್ಯ ಸ್ವಾಮಿ ಅವರ ಮನೆ ಒಂದು ದಾಸೋಹದ ಮಠದಂತೆ ಇದ್ದಿತು.

ಸಿದ್ಧಯ್ಯ ಸ್ವಾಮಿಗಳು ಜಂಗಮ ವೃತ್ತಿ ಮತ್ತು ವೈದಿಕ ವೃತ್ತಿಗಳಿಂದ ಸಂಸಾರವನ್ನು ನಿಭಾಯಿಸುತ್ತಿದ್ದರು. ಅವರು ಎಂದೂ ಅಹಿಕ ಸಂಸಾರದ ಆರ್ಥಿಕ ಮುಗ್ಗಟ್ಟಿನ ಬಗೆಗೆ ಚಿಂತಿಸಿದವರಲ್ಲ. ಎಲ್ಲ ಭಾರವೂ ದೇವರ ಮೇಲೆ ಹಾಕಿ ಏನೆಲ್ಲ ಮಾಡುತ್ತಿದ್ದರು. ಅವರನ್ನು ಭಕ್ತರು ಶರಣ – ಸಂತ ಪುರುಷರೆಂದೇ ಭಾವಿಸಿ, ಗೌರವಿಸುತ್ತಿದ್ದರು.

ಸಿದ್ಧಯ್ಯ ಸ್ವಾಮಿಗಳ ತಂದೆ ಬಸಯ್ಯ ಸ್ವಾಮಿಗಳು, ತಾಯಿ ಬಸಮ್ಮನವರು. ಕ್ರಿ.ಶ.ಸು. ೧೯೦೨ರಲ್ಲಿ ಸಿದ್ಧಯ್ಯನವರು ಹುಟ್ಟಿದರು. ಬಸಯ್ಯ ಸ್ವಾಮಿಗಳು ಹುಟ್ಟಿದ ತಮ್ಮ ಮಗನಿಗೆ ಮನೆಯ ದೇವರಾದ ಹೊನ್ನಿಕೇರಿ ಸಿದ್ಧೇಶ್ವರನ ಹೆಸರನ್ನು ಇರಿಸಿದರು. ಕೇತಕಿ ಸಂಗಮೇಶ್ವರ ಅವರ ಇನ್ನೊಬ್ಬ ಆರಾಧ್ಯ ದೇವರಾಗಿದ್ದರು. ಸಿದ್ಧಯ್ಯ ಸ್ವಾಮಿಗಳಾಗಿರಬಹುದು, ಅವರ ಮಗ ಮಲ್ಲಯ್ಯನವರಾಗಿರಬಹುದು ಉಭಯರೂ ಮೇಲೆ ಹೆಸರಿಸಿದ ದೇವರುಗಳಲ್ಲಿ ಅನನ್ಯ ಭಕ್ತಿಯುಳ್ಳವರೆ ಆಗಿದ್ದರು.

ಸಿದ್ಧಯ್ಯ ಸ್ವಾಮಿಗಳಿಗೆ ಬಸಯ್ಯ ಸ್ವಾಮಿಗಳು ಪ್ರಥಮ ಗುರುಗಳಾಗಿ ನಿಂತುಕೊಂಡು ಮನೆಯಲ್ಲಿ ವೀರಶೈವ ಸಿದ್ಧಾಂತಪರವಾದ ಕಟ್ಟುನಿಟ್ಟಾದ ಆಚರಣೆ ಕಲಿಸಿದರು. ಗುರುಗಳ ಸನ್ನಿಧಾನದಲ್ಲಿ ಸಿದ್ಧಯ್ಯನವರಿಗೆ ಅಕ್ಷರಾಭ್ಯಾಸವಾಯಿತು. ಅವರ ಮನೆತನದ

ಗುರುಗಳು ಬೀದರ ಜಿಲ್ಲೆಯ ಯದಲಾಪೂರ ಗ್ರಾಮದ ಹಿರೇಮಠದ ಶಂಕರಲಿಂಗ ಶಿವಾಚಾರ್ಯರು. ಅವರು ಮಹಾತ್ಮರು, ಪವಾಡಪುರುಷರು, ಶಿವಯೋಗ ಸಾಧಕರು ಆಗಿದ್ದರು. ಜೀವಂತಸಮಾಧಿ ಹೊಂದಿದ ಅವರು ತಮ್ಮ ಪುಣ್ಯತಿಥಿಯನ್ನಾಗಲಿ; ಸ್ಮರಣೋತ್ಸವವನ್ನಾಗಲಿ ಮಾಡದಂತೆ ಶಿಷ್ಯರುಗಳಿಗೆ ಎಚ್ಚರಿಕೆ ನೀಡಿದ್ದರು.

ಸಿದ್ಧಯ್ಯನವರು ಕಲಿತದ್ದು ಎರಡನೆಯ ವರ್ಗದವರೆಗೆ. ಅದು ಮೋಡಿ ಭಾಷೆಯಲ್ಲಿ. ಆದರೆ ಸ್ವಾನುಭವದ ದುಡಿಮೆಯೇ ಅವರನ್ನು ಜ್ಞಾನದ ಪರ್ವತವನ್ನಾಗಿಸಿತು. ಅವರು ಕನ್ನಡ, ಮರಾಠಿ, ಹಿಂದಿ; ಅರಬ್ಬಿ, ಪಾರ್ಸಿ, ಉರ್ದು ಈ ಭಾಷೆಗಳಲ್ಲಿ ಪಾರಂಗತತೆಯನ್ನು ಗಳಿಸಿದರು.

ಸಿದ್ಧಯ್ಯ ಸ್ವಾಮಿಗಳಿಗೆ ಶಂಕರಲಿಂಗ ಶಿವಾಚಾರ್ಯರಿಂದಲೇ ಶಿವದೀಕ್ಷೆ ದೊರಕಿತು. ಉಮಾದೇವಿ ಎಂಬ ಕನ್ಯೆಯ ಕೈ ಹಿಡಿದು ಅವರು ಸಂಸಾರಸ್ಥರಾದರು. ಈ ದಂಪತಿಗಳಿಗೆ ಇಬ್ಬರು ಗಂಡು ಮಕ್ಕಳು, ಇಬ್ಬರು ಹೆಣ್ಣು ಮಕ್ಕಳು ಜನಿಸಿದರು.

ಸಿದ್ಧಯ್ಯ ಮಠಪತಿ ಅವರು ಪೂಜೆಯಾದಿಗಳನ್ನು ಶಾಸ್ತ್ರೀಯವಾಗಿ ಮಾಡಿಸುತ್ತಿದ್ದರು. ಆದರೆ ಅವರ ವೃತ್ತಿಯ ಹಿನ್ನೆಲೆಯಲ್ಲಿ ಮೌಢ್ಯತೆಯಿರಲಿಲ್ಲ. ಅವರು ಸತ್ತ ಬಳಿಕ ಪುಣ್ಯತಿಥಿ ಮಾಡುವವರನ್ನು ಸೇರುತ್ತಿರಲಿಲ್ಲ. ಗುರು ಶಂಕರಲಿಂಗ ಶಿವಾಚಾರ್ಯರ ತತ್ತ್ವವೇ ಅವರದಾಗಿತ್ತು. ಅವರು ಹೀಗೆ ಹೇಳುತ್ತಿದ್ದರು: "ನಮ್ಮ ಹಿರಿಯರನ್ನು ಜೀವಂತ ಇರುವಾಗಲೇ ಸರಿಯಾಗಿ ನೋಡಿಕೊಳ್ಳಬೇಕು. ಅವರ ಬೇಕು – ಬೇಡಗಳನ್ನು ಅರಿತುಕೊಂಡು ಪೂರೈಸಬೇಕು. ಅವರ ಮನಕ್ಕೆ ನೋವನ್ನುಂಟು ಮಾಡಬಾರದು. ನಮಗೆ ಅವರ ಬಗೆಗೆ ನಿಜವಾದ ಕಳಕಳಿ–ಗೌರವದ ಭಾವಗಳಿರಬೇಕು. ಇದುವೆ ನಾವು ನಮ್ಮ ತಂದೆ – ತಾಯಿ, ಹಿರಿಯರಿಗೆ ಅರ್ಪಿಸುವ ಸೇವೆ. ಬದುಕಿರುವಾಗ ಅವರಿಗೆ ಒಂದು ತುತ್ತು ಅನ್ನ ಹಾಕದೆ ಉಪೇಕ್ಷೆ ಮಾಡಿ, ಮನೆಯಲ್ಲಿ ಇಟ್ಟುಕೊಳ್ಳದೆ ಹೊರದಬ್ಬಿ; ಸತ್ತಾಗ ಅವರ ಹೆಸರಿನಲ್ಲಿ ಪುಣ್ಯತಿಥಿಯೆಂದು ಆಚರಿಸುತ್ತ, ಬೇರೆಯವರಿಗೆ ಒಂದು ದಿನ ಅನ್ನ ಹಾಕುವುದು ಮಹಾ ಹೇಯದ ಕೆಲಸವಾಗುತ್ತದೆ. ಅಂತಹದ್ದನ್ನು ಮಾಡಲೇ ಬಾರದು". ಸಿದ್ಧಯ್ಯನವರು ಪುಣ್ಯತಿಥಿಯ ಕಾರ್ಯದಲ್ಲಿ ಊಟಕ್ಕೆ ಕರೆದರೆ, ಕರೆಯಲು ಬಂದವರಿಗೆಲ್ಲ ನಿಷ್ಠುರವಾಗಿ ಬೈದು ಕಳುಹಿಸುತ್ತಿದ್ದರು. ಹಾಗೆಯೇ ತಮ್ಮ ಮಗ ಮಲ್ಲಯ್ಯನವರಿಗೆ ತಮ್ಮ ಪುಣ್ಯತಿಥಿ ಮಾಡದಿರುವಂತೆ ಅಪ್ಪಣೆ ಮಾಡಿದರು. ಸಮಾಧಿ ಕಟ್ಟದಿರುವಂತೆ ಎಚ್ಚರಿಸಿದರು. ಅದೇ ಪ್ರಕಾರ ಮಲ್ಲಯ್ಯನವರು ತಂದೆಯ ವಚನ ಪರಿಪಾಲಿಸಿದ್ದಾರೆ. ಅವರು ತಮ್ಮ ತಂದೆಯ ಪುಣ್ಯತಿಥಿಯಂದು ಜಂಗಮರಿಗೆ, ಉಳ್ಳವರಿಗೆ ಪ್ರಸಾದಕ್ಕೆ ಕರೆಯದೆ; ಕಡು ಬಡವರಿಗೆ, ನಿರ್ಗತಿಕರಿಗೆ ತಮ್ಮ ಕೈಲಾದಷ್ಟು ಪ್ರಸಾದ ವಿತರಣೆ ಮಾಡುತ್ತಾರೆ.

ಸಿದ್ಧಯ್ಯ ಸ್ವಾಮಿಗಳು ಸಿದ್ಧಪುರುಷರಾಗಿ ಹಲವಾರು ತತ್ತ್ವಪದಗಳನ್ನು ಬರೆದಿದ್ದಾರೆ. ಅವರ ತತ್ತ್ವಪದಗಳನ್ನು ಮಗ ಮಲ್ಲಯ್ಯನವರು ಸೊಗಸಾಗಿ ಹಾಡುತ್ತಾರೆ. ತಾರುಣ್ಯದಲ್ಲಿ ಮಲ್ಲಯ್ಯನವರು ಕೆಲವು ತತ್ತ್ವಪದಗಳನ್ನು ಬರೆದರು. ಒಂದು ಸಲ ತಾವು ಬರೆದವುಗಳನ್ನು ತಂದೆ ಸಿದ್ಧಯ್ಯನವರಿಗೆ ತೋರಿಸಿದರಂತೆ. ಅದನ್ನು ನೋಡಿದ ಅವರು "ಮಗಾ ನೀನು ಪದ್ಯ ಬರೆಯಬೇಡ" ಎಂದರಂತೆ. ಅಂದಿನಿಂದ ಮಲ್ಲಯ್ಯನವರು ಬರೆಯುವುದನ್ನು ಬಿಟ್ಟು ಬಿಟ್ಟುದಾಗಿ ಹೇಳುತ್ತಾರೆ. ಸಿದ್ಧಯ್ಯನವರು ಕ್ರಿ.ಶ. ೧೯೮೨ ರಲ್ಲಿ ಲಿಂಗೈಕ್ಯರಾದರು. ಅವರ ಸಿದ್ಧಿಯ ಜೀವನದ ವಿವರಗಳು ಅವರು ರಚಿಸಿದ ತತ್ತ್ವಪದಗಳ ಕಾರಣದಿಂದಾಗಿ ಸ್ಮರಣೆಗೆ ಬರುವಂತಾಗಿವೆ. ಸಿದ್ಧಯ್ಯನವರು ತಮ್ಮ ಸ್ವನಾಮ "ಸಿದ್ಧಲಿಂಗ" ಎಂಬ ಅಂಕಿತದಲ್ಲಿ ಪದ್ಯಗಳನ್ನು ಬರೆದಿದ್ದಾರೆ. ಅವರ ಎರಡು ಪದ್ಯಗಳನ್ನು ಇಲ್ಲಿ ಕೊಡಲಾಗಿದೆ.

ಒಗಿಲಿಕ್ಕ ಹೋಗಾನು ನಡೀರಿ

ಒಗಿಲಿಕ್ಕ ಹೋಗಾನು ನಡೀರಿ
ಮೂರು ನದಿ ದಾಟಿ ಗುರುಜ್ಞಾನ ಸಮುದ್ರದಾಗ ಸೇರೀರಿ ॥ ಪ ॥

ಮೊದಲುಟ್ಟ ಧೋತರ ಕಳೀರಿ
ನಿಮ್ಮ ಮನಸಿನ ಲಂಗೋಟಿ ಮಜಭೂತ ಬಿಗಿರಿ
ನೆತ್ತಿ ಮ್ಯಾಲಿನ ಸೆರಗ ತೆಗಿರಿ
ಸುತ್ತುಕೊಳ್ಳರಿ ನೂರಮಳದ ಮುಂಡಾಸ ಬಿಗಿರಿ ॥ ೧ ॥

ಜ್ಞಾನದ ತುದಿಯನು ತಿಳಿದು
ಸಹಸ್ರ ಟಿಗಳಿನ ಅಂಗಿಯ ಕಳೆದು
ಸೀರಿ ಕುಪಸ ಉಟ್ಟುಕೊಳ್ಳರಿ ॥ ೨ ॥

ನಾಲ್ಕು ಆರು ಮೂರ್ಹಾದಿಗಳ ದಾರಿ
ಹಿಂದಿನ ಹಿತ್ತಲ ದಾಟಿ ಮುಂದಕ ನಡಿರಿ
ಕುಪ್ಪಸ ಕಳದೀತು ನೋಡಿರಿ ॥ ೩ ॥

ಗಂಗಾ ಸಾಗರ ದಾರಿ ಹಿಡಿರಿ
ಏನು ಅನುಮಾನ ವಿಲ್ಲದ ಜಳಕವ ಮಾಡಿರಿ
ಕಾಮನೆಂಬ ಕಲ್ಲಿನ ಮ್ಯಾಲ ಬಡಿರಿ ॥ ೪ ॥

ದೇಹದ ಬಟ್ಟೀಯ ಒಗಿರಿ
ಅದ ತಿಕ್ಕಿ ತಿಕ್ಕಿ ಹಸನವ ಮಾಡಿರಿ
ಭಾನುವಿಲ್ಲದ ಬಿಸಿಲಿಗೆ ಹಾಕಿರಿ ॥ ೫ ॥

ಅನುಮಾನವಿಲ್ಲದ ಜಳಕ ಮಾಡಿರಿ
ಮಡಿವುಟ್ಟು ಗುಡಿಯೊಳಗ ನಡೀರಿ
ಬಾರಾ ಜ್ಯೋತಿರ್ಲಿಂಗದ ದರ್ಶನ ಪಡಿರಿ ॥ ೬ ॥

ಅಂಗ-ಲಿಂಗ ಒಂದು ಮಾಡಿರಿ
ಲಿಂಗದ ಸಂಗವ ಹಿಡಿರಿ
ಸಿದ್ಧಲಿಂಗನ ವಚನವ ಬಿಡದಂತೆ ನಡಿರಿ ॥ ೭ ॥

ಕರುಣಾಕರ ಶಿವ

ಶಿವನೆ ; ಅಭವನೆ; ಕರುಣಾಕರನೆ
ಭವ ಹರನೆ; ಭಕ್ತ ವತ್ಸಲನೆ ॥ ಪ ॥

ಮೃಡನೆ; ಮಡಿವಂತನೆ
ತ್ರಿಕಾಲ ಜ್ಞಾನಿಯೆ ತ್ರಿಮಲದೂರನೆ
ತ್ರಿನೇತ್ರ ಶಿವನೆ ನಮೋ ನಮೋ ॥ ೧ ॥

ಜಗದುತ್ಪತ್ತಿ ಮಾಡಿದವನೆ
ನರ ಜಲ್ಮವೆನೆಗೆ ನೀಡಿದವನೆ
ಕರಣೆ ದೋರಿ ಕಾಯುವ ಭಾರ ಹೊತ್ತವನೆ ॥ ೨ ॥

ಕಾಳಕತ್ತಲೆ ಕಳೆದವನೆ
ಓಂಕಾರದ ನಾದವ ಕೇಳಿಸಿದವನೆ
ಭಾಳಲೋಚನ ಶಿವಭಕ್ತ ವತ್ಸಲನೆ ॥ ೩ ॥


ಮೂರು ಲೋಕ ಸುಟ್ಟಿದವನೆ
ಮೂರು ಅರಿಗಳ ಕುಟ್ಟಿದವನೆ
ಆರಾರು ಅರಿಯರು ನಿನ್ನ ಶಿವನೆ ॥ ೪ ॥

ಹರಿ–ಬ್ರಹ್ಮ ಸುರ ವಂದಿತನೆ
ಪರಮ ಪಾವನ ಚಂದ್ರ ಧರನೆ
ವ್ಯೋಮಕೇಶ ರೂಪನೆ ॥ ೫ ॥


ಶಿವನೆ ಅಭವನೆ, ಅಭಯನೆ
ಸಿದ್ಧಲಿಂಗಗೆ ಒಲಿದವನೆ
ಸಿದ್ಧಲಿಂಗನ ಗೆಲಿದವನೆ
ಸಕಲ ಜಗದುದ್ಧಾರಕನೆ ॥ ೬ ॥

(ಈ ವಿವರಗಳನ್ನು ಕೊಟ್ಟವರು ಕವಿಗಳ ಹಿರಿಯ ಮಗ ಮಲ್ಲಯ್ಯ ಮಠಪತಿ ಅವರು.)


▯



* ಸಿದ್ಧಯ್ಯ ಮಠಪತಿ ಅವರ ಮನೆ (ಚಂದಾಪುರ).



* ಸಿದ್ಧಯ್ಯ ಮಠಪತಿ ಅವರ ಮಗ ಮಲ್ಲಯ್ಯನವರು.





* ಮಲ್ಲಯ್ಯನವರು ತಮ್ಮ ಮಗ-ಸೊಸೆಯೊಂದಿಗೆ



* ಸಿದ್ಧಯ್ಯ ಮಠಪತಿ ಅವರ ಗುರುಗಳ ಮಠ (ಚಂದಾಪುರ).


* ಸಿದ್ಧಯ್ಯ ಮಠಪತಿ ಅವರ ಗುರುಗಳಾದ ಶ್ರೀಶಂಕರಲಿಂಗರ ಸಮಾಧಿ ದೇವಾಲಯ (ಚಂದಾಪುರ).





* ಶಂಕರ ಲಿಂಗರ ಸಮಾಧಿ


* ಸಿದ್ಧಯ್ಯನವರು
ಕಟ್ಟಿಸಿದ ಹಾವಗಿ
ಸ್ವಾಮಿ ಮಠ.
(ಚಂದಾಪುರ).






* ಮಲ್ಲಯ್ಯ ದಂಪತಿಗಳು
ತಮ್ಮ ಮಗನೊಂದಿಗೆ

* ಹಾವಗಿ ಸ್ವಾಮಿ ಮಠದ
ಒಳಾಂಗಣ ನೋಟ.





* ಮಲ್ಲಯ್ಯನವರ ಆರಾಧ್ಯ ದೇವರು ಮಹಾದೇವರ ಮಂದಿರ (ಚಂದಾಪುರ).



* ಮಹಾದೇವ ಮಂದಿರದ ಒಳಾಂಗಣ ನೋಟ.

೯. ಸಿದ್ಧರಾಮಪ್ಪ ಮ್ಯಾಕ್ರೆ (ಕ್ರಿ.ಶ.ಸು. ೧೯೧೦-೨೦೦೫)

ಬೀದರ ಜಿಲ್ಲೆ ಭಾಲ್ಕಿ ತಾಲ್ಲೂಕಿನಲ್ಲಿ ಬರುವ ಡೊಂಗರಗಿ ಗ್ರಾಮವು ಸಿದ್ಧರಾಮಪ್ಪನವರ ಜನ್ಮ ಸ್ಥಳವಾಗಿದೆ. ವೀರಶೈವ ಸಂಸ್ಕೃತಿಯ ಮನೆತನದ ಈ ಹಿರಿಯ ಜೀವ ತತ್ತ್ವಪದಕಾರರಾಗಿದ್ದಂತೆ, ಆಧ್ಯಾತ್ಮ ಸಾಧಕರೂ ಆಗಿದ್ದರು.

ಡೊಂಗರಗಿ ಮ್ಯಾಕ್ರೆ ಮನೆತನದ ನಾಗಶೆಟ್ಟಿ ಅವರು ಸುಸಂಸ್ಕೃತರು, ಸಮಾಜ ಹಿತಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡವರು ಆಗಿದ್ದರು. ಊರಿನ ದೇವಾಲಯಾದಿಗಳ ಜೀರ್ಣೋದ್ಧಾರ ಕಾರ್ಯಗಳಿಗೆ ಅವರು ಉದಾರ ಮನದಿಂದ ದಾನ ನೀಡುತ್ತಿದ್ದರು. ತಂದೆಯವರ ಈ ದಾನ-ಧರ್ಮದ ಗುಣಗಳೇ ಸಿದ್ಧರಾಮಪ್ಪನವರಲ್ಲಿ ಮೈಗೊಂಡು ಬಂದವು.

ನಾಗಶೆಟ್ಟಿ - ಈರಮ್ಮ ದಂಪತಿಗಳ ಮಡಿಲಿನಿಂದ ಕ್ರಿ.ಶ. ೧೯೧೦ರಂದು ಸಿದ್ಧರಾಮಪ್ಪನವರು ಹುಟ್ಟಿದರು. ಸಿದ್ಧರಾಮಪ್ಪನವರು ಖಾಸಗಿ ಶಾಲೆಯಲ್ಲಿ ಶಿಕ್ಷಣ ಹೊಂದಿದರು. ಅವರಿಗೆ ಕನ್ನಡದೊಂದಿಗೆ ಮರಾಠಿ, ಹಿಂದಿ ಭಾಷೆಗಳು ಬರುತ್ತಿದ್ದವು. ಮೋಡಿಯಲ್ಲಿ ಅವರು ಬರೆಯುತ್ತಿದ್ದರು.

ಸಿದ್ಧರಾಮಪ್ಪನವರು ಸಂಸಾರಿಗಳಾಗಿದ್ದರು. ಅವರ ಹೆಂಡತಿ ರತ್ನಮ್ಮ. ಈ ದಂಪತಿಗಳಿಗೆ ಒಟ್ಟು ಹತ್ತು ಜನ ಮಕ್ಕಳಿದ್ದರು. ಅವರಲ್ಲಿ ಅಣ್ಣೆಪ್ಪ, ವಿಶ್ವನಾಥ, ಬಸವರಾಜ ಮೂವರು ಗಂಡು ಮಕ್ಕಳು, ಉಳಿದ ಏಳು ಜನ ಹೆಣ್ಣು ಮಕ್ಕಳು.

ಸಿದ್ಧರಾಮಪ್ಪನವರು ತಮ್ಮ ಬದುಕಿನ ನಿರ್ವಹಣೆಗಾಗಿ ಗವಟಿ ಶಾಲೆಯೊಂದನ್ನು ತೆಗೆದು ಅದರಲ್ಲಿ ಶಿಕ್ಷಕರಾದರು. ಮಕ್ಕಳಿಗೆ ಶಿಕ್ಷಣದೊಂದಿಗೆ ನೈತಿಕ ಶಿಕ್ಷಣವನ್ನು ನೀಡುತ್ತಿದ್ದರು. ಶರಣಜೀವಿಗಳಾದ ಸಿದ್ಧರಾಮಪ್ಪನವರ ಶಾಲೆಗೆ ತಮ್ಮ ಮಕ್ಕಳನ್ನು ಕಳುಹಿಸಿಕೊಡುವುದಕ್ಕಾಗಿ ಪಾಲಕರು ಹಾತೊರೆಯುತ್ತಿದ್ದರು. ಶಾಲೆಗೆ ಬಂದ ಮಕ್ಕಳನ್ನು ಅವರು ತಮ್ಮ ಹೊಟ್ಟೆಯ ಮಕ್ಕಳಂತೆ ನೋಡಿಕೊಳ್ಳುತ್ತಿದ್ದರು. ಅತ್ಯಂತ ಸಮಾಧಾನ - ಪ್ರೀತಿಯಿಂದ ಮಕ್ಕಳಿಗೆ ಶಿಕ್ಷಣವನ್ನು ನೀಡುತ್ತಿದ್ದರು.

ಸಿದ್ಧರಾಮಪ್ಪನವರ ಮನೆತನದ ಗುರುಗಳು ಭಾಲ್ಕಿ ತಾಲ್ಲೂಕಿನಲ್ಲಿ ಬರುವ ಮೆಹಕರಿನ ಹಿರೇಮಠದ ರಾಚೋಟಿ ಶಿವಾಚಾರ್ಯರು. ಮನೆತನದ ದೇವರು ಕೇತಕಿ ಸಂಗಮೇಶ್ವರ ಮತ್ತು ಸಿದ್ಧೇಶ್ವರರು.

ಒಂದುಸಲ ಊರಿಗೆ ನವನಾಥ ಪರಂಪರೆಯ ಸಾಧುವೊಬ್ಬರು ಬಂದರು. ಸಿದ್ಧರಾಮಪ್ಪನವರಿಗೆ ಆಧ್ಯಾತ್ಮದ ಹಂಬಲವು ಹಿರಿದಾಗಿತ್ತು. ಬಂದ ಸಾಧುಗಳನ್ನು ಅವರು ಬೇಟಿ ಮಾಡಿ; ಊರಲ್ಲಿ ಒಂದು ಆಶ್ರಮವನ್ನು ನಿರ್ಮಿಸಿಕೊಟ್ಟರು. ದಿನನಿತ್ಯವೂ ಅವರೊಡನೆ ಸತ್ಸಂಗದಲ್ಲಿ ತೊಡಗುತ್ತಿದ್ದರು.

ಅವರ ಸತ್ಸಂಗಕ್ಕೆ ಊರಿನ ಹಲವಾರು ಜನರು ಬಂದು ಸೇರತೊಡಗಿದರು. ಹೀಗೆ ಸಿದ್ಧರಾಮಪ್ಪನವರು ಒಟ್ಟು ಊರಿನ ಪರಿಸರವು ಆಧ್ಯಾತ್ಮಿಕ ಪರಿವೇಷವಾಗುವಂತೆ ಮಾಡಿದರು. ಮುಂದೆ ಅವರು ನವನಾಥನ ಮಂದಿರವೊಂದನ್ನು ನಿರ್ಮಿಸಿದರು. ಪ್ರತಿವರ್ಷ ಅವರೇ ಸ್ವತಃ ನವನಾಥ ಪುರಾಣವನ್ನು ಹೇಳುತ್ತಿದ್ದರು. ಸಿದ್ಧರಾಮಪ್ಪನವರು ನಾಥಸಂಪ್ರದಾಯಕ್ಕೆ ಬಲಿಯಾಗಿ ಆರೂಢ ಸಾಧುಗಳ ಸಂಗದಲ್ಲಿ ಬಿದ್ದರೂ, ತಮ್ಮ ಮೂಲವಾದ ವೀರಶೈವ ಸಂಸ್ಕೃತಿಯನ್ನು ಬಿಟ್ಟಿರಲಿಲ್ಲ. ದಿನ ನಿತ್ಯ ಅವರು ತಪ್ಪದೆ ಇಷ್ಟಲಿಂಗ ಪೂಜೆ ಮಾಡಿ, ಗುರುವಿನ ಪಾದೋದಕವನ್ನು ಸ್ವೀಕರಿಸುತ್ತಿದ್ದರು. ಬರು-ಬರುತ್ತ ಅವರ ಅಂತರಂಗವು ಅಹಿಕತೆಯ ಕಡೆಗೆ ವಿಮುಖವಾಗತೊಡಗಿತು. ಆಧ್ಯಾತ್ಮದೆಡೆಗೆ ಹೆಚ್ಚು ಹೆಚ್ಚಾಗಿ ಹೊರಳ ತೊಡಗಿತು. ಅವರನ್ನು ನೋಡಿದ ಜನರು "ಶರಣ ಸಿದ್ಧರಾಮಪ್ಪ" ನೆಂದೇ ಹೇಳುತ್ತಿದ್ದರು. ಅವರ ಅಂತರಂಗವು ಆಧ್ಯಾತ್ಮಿಕತೆಯಿಂದ ತುಂಬಿಕೊಂಡಿತ್ತು. ಸಿದ್ಧರಾಮಪ್ಪನವರು ಆಧ್ಯಾತ್ಮ ಸಾಧಕರಾಗಿ ಹಲವಾರು ತತ್ತ್ವಪದಗಳನ್ನು ಬರೆದರು. ಅವುಗಳನ್ನು ತಾವೇ ಸ್ವತಃ ಹಾಡಿದರು. ಸಾಧಕ ವ್ಯಕ್ತಿತ್ವದ ಸಿದ್ಧರಾಮಪ್ಪನವರು ಇಚ್ಛಾ ಮರಣಿಗಳಾಗಿದ್ದರು. ಅವರು ತಾವು ಲಿಂಗೈಕ್ಯರಾಗುವ ದಿನವನ್ನು ಮೊದಲೇ ಹೇಳಿದ್ದರು. ದಿನನಿತ್ಯ ಅವರು ಊರಿನ ಜಂಗಮರೊಬ್ಬರ ಪಾದೋದಕ ಸ್ವೀಕರಿಸುತ್ತಿದ್ದರು. ಒಂದು ಸಲ ಕಾರ್ಯ ನಿಮಿತ್ತ ಜಂಗಮನು ಊರಿಗೆ ಹೋಗಬೇಕಾಗಿ ಬಂದಿತು. ಅವನು ಸಿದ್ಧರಾಮಪ್ಪನವರಲ್ಲಿ ಬಂದು "ತಾನು ಊರಿಗೆ ಹೋಗಿಬರುತ್ತೇನೆ" ಎಂದು ತಿಳಿಸಿದನು. ಆಗ ಸಿದ್ಧರಾಮಪ್ಪನವರು "ನಾಳೆ ನಾನು ಒಂಬತ್ತು ಗಂಟೆ-ಮೂವತ್ತು ನಿಮಿಷಕ್ಕೆ ನಿಶ್ಚಿತವಾಗಿ ಶಿವಲೋಕಕ್ಕೆ ಹೋಗಲಿದ್ದೇನೆ. ನೀನು ಆ ಸಮಯದಲ್ಲಿ ಇರಬೇಕು. ಪಾದೋದಕ-ಪ್ರಸಾದ ಕ್ರಿಯೆ ಮುಗಿಸಿಕೊಂಡು ನಾನು ಹೋಗಬೇಕಾಗಿದೆ. ಅದನ್ನು ನೀನು ತಪ್ಪಿಸಬಾರದು" ಎಂದು ಹೇಳಿದರು. ಜಂಗಮನಿಗೆ ಸಿದ್ಧರಾಮಪ್ಪನವರ ಮಾತುಗಳು ವಿಚಿತ್ರವಾಗಿ ಕಂಡವು. ಆದರೂ ಪರೀಕ್ಷಿಸಿ ನೋಡಬೇಕೆಂದು ಬಯಸಿದ ಜಂಗಮನು, ಊರಿಗೆ ಹೋಗುವುದನ್ನು ಬಿಟ್ಟು ಬಿಟ್ಟನು. ಸಿದ್ಧರಾಮಪ್ಪನವರು ಹೇಳಿದ ಸಮಯಕ್ಕೆ ಸರಿಯಾಗಿ ಲಿಂಗದಲ್ಲಿ ಐಕ್ಯರಾದರು. ಅವರು ಲಿಂಗ ಪೂಜೆ ಪೂರೈಸಿ; ಪಾದೋದಕ ಪಡೆದುಕೊಂಡರು. ಅದನ್ನು ಮುಗಿದು ಮಲಗಲೆಂದು ಮಡಿಯ ಧೋತರದ ಹಾಸಿಗೆ ಹಾಕಿಕೊಂಡು ಮಲಗಿದರು.

ಕೆಲವು ಕ್ಷಣಗಳಲ್ಲಿಯೇ ಅವರ ಪ್ರಾಣ ಪಕ್ಷಿಯು ಹಾರಿ ಹೋಯಿತು. ಸಿದ್ಧರಾಮಪ್ಪನವರ ಸಮಾಧಿ ಊರಿನ ಹೊರಗಡೆ ಇರುವ ಹೊಲದಲ್ಲಿಯೇ ಮಾಡಲಾಗಿದೆ.

ಸಿದ್ಧರಾಮಪ್ಪ ಮ್ಯಾಕ್ರೆ ಅವರು ತಮ್ಮ ತತ್ತ್ವಪದಗಳಿಗೆ ಸ್ವನಾಮ ಅಂಕಿತವನ್ನು ಇರಿಸಿಕೊಂಡಿದ್ದಾರೆ. ಅವರ ಎರಡು ತತ್ತ್ವಪದಗಳನ್ನು ಇಲ್ಲಿ ಕೊಡಲಾಗಿದೆ:

ಗುರುಪಾದ ನಂಬಿ ಭಜಿಸೊ

ಗುರುಪಾದದಕ್ಕಿಂತ ಅಧಿಕವಿನ್ನೊಂದಿಲ್ಲ
ಗುರುಪಾದವ ಭಜಿಸೋ ॥ ಪ ॥

ಶಿವಪದದಕ್ಕಿಂತ ಅಧಿಕವು ಗುರುಪಾದ
ಬ್ರಹ್ಮ ಪಾದದಕ್ಕಿಂತ ಅಧಿಕವು ಗುರುಪಾದ
ವಿಷ್ಣು ಪಾದದಕ್ಕಿಂತ ಅಧಿಕವು ಗುರುಪಾದ
ಇಂದ್ರ ಪಾದದಕ್ಕಿಂತ ಅಧಿಕವು ಗುರುಪಾದ ॥ ೧ ॥

ತೀರ್ಥ ಪ್ರಸಾದಕ್ಕೆ ಮೂಲವು ಗುರುಪಾದ
ವ್ಯರ್ಥ ಬದುಕಿನ ಶುಚಿಗೆ ಕಾರಣವು ಗುರುಪಾದ
ಮರ್ತ್ಯದ ಮಾನವರಿಗೆ ಮೋಕ್ಷ ನೀಡುವ ಪಾದ
ಅರ್ತಿಯಿಂದಲಿ ಭಜಿಸುವ ಗುರುಪಾದ ॥ ೨ ॥

ಆದಿಗೆ ಆದಿಯಾದುದು ಗುರುಪಾದ
ವೇದಕ್ಕೆ ಮೂಲವದು ಈ ಗುರುಪಾದ
ನಾದಬ್ರಹ್ಮಕ್ಕೆ ಒಲಯದೀ ಗುರುಪಾದ
ಸಾಧ್ಯರ ಸಾಧನವಿ ಶ್ರೇಷ್ಠ ಗುರುಪಾದ ॥ ೩ ॥

ಅರಿವಿಗೆ ಅರುವಾಗಿ ಇರುವುದು ಗುರುಪಾದ
ಸಿರದ ಮೇಲೆ ಕಂಗೊಳಿಸುವ ಗುರುಪಾದ
ಧರೆಗೆ ಮಿಗಿಲಾದುದೀ ಗುರುಪಾದ
ಮನ – ಮುನಿಗಳೆಲ್ಲ ಪೂಜಿಸುವ ಗುರುಪಾದ ॥ ೪ ॥

ಕಾಮಿತಾರ್ಥಗಳೆಲ್ಲವ ನೀಡುವ ಗುರುಪಾದ
ನೇಮದಿಂದಲಿ ಭಜಿಸಲು ಬೇಕಾದ ಗುರುಪಾದ
ವ್ಯೋಮ ಕೇಶನ ಮಹಿಮೆಗೆ ಅಧಿಕವೀ ಗುರುಪಾದ
ನಾಮ – ಸೀಮೆ ಮೆಟ್ಟಿ ನಿಂತಿರುವ ಗುರುಪಾದ ॥ ೫ ॥

ಕಾಯದ ಕರ್ಮವ ಹರಿವದು ಗುರುಪಾದ
ಆಯದ ನೆಲೆಯನು ತಿಳಿಸುವುದು ಗುರುಪಾದ
ದಾಯಾದಿಗಳ ಗರ್ವ ಬಿಡಿಸುವುದು ಗುರುಪಾದ
ಮಾರಹರನ ಒಲಿಸುವುದು ಗುರುಪಾದ ॥ ೬ ॥

ಧರಿಯೊಳು ಮೆರೆಯುವ ಪುರವು ಡೊಂಗರಗಿ
ಬರೆದನು ಸಿದ್ಧರಾಮಪ್ಪ ಶಿಶುವಾಗಿ ಎಲ್ಲರಗಿ.
ಮೆರೆದನು ಗುರುಪಾದ ಪೂಜಿಸಿ ಭವ ನೀಗಿ
ಅರಿದು ಪೂಜಿಸಿರಿ ಗುರುಪಾದ ಸಮಾನರಾಗಿ ॥ ೭ ॥

ಮಾಯದ ಮರಗಿ

ಮಾಯದ ಮರಗಿ ಬಂದಿತ್ತ ಯಪ್ಪಾ
ಊರಿಗೆಲ್ಲ ಮಾಯದ ಮರಗಿ ಬಂದಿತ್ತಾ ॥ ಪ ॥

ಮರಗಿ ಬಂದು ಮರುಗಿಸಿತ್ತಾ
ಮರಗಿ ಬಂದು ಕರಗಿಸಿತ್ತಾ
ಮರಗಿ ಬಂದು ವರಗಿಸಿತ್ತಾ
ಮರುಗಿ ಬಂದು ಮಲಗಿಸಿತ್ತಾ ॥ ೧ ॥

ಮರಗಿ ಬಂದು ತಿರುಗಿಸಿತ್ತು
ಮರಗಿ ಬಂದು ಕಾರಿಸಿತ್ತು
ಮರುಗಿ ಬಂದು ಹೇಲಿಸಿತ್ತು
ಮರುಗಿ ಬಂದು ಕಾಡಿಸಿತ್ತು ॥ ೨ ॥

ಮರುಗಿ ಬಂದು ಕಣ್ಣ ಕುಡ್ಡಾಗಿಸಿತಾ
ಮರುಗಿ ಬಂದು ತಲಿ ದಡ್ಡಾಗಿಸಿತಾ
ಮರುಗಿ ಬಂದು ದೇಹ ಜಿಡ್ಡಾಗಿಸಿತಾ
ಮರುಗಿ ಬಂದು ಮದ ಹೆಚ್ಚು ಮಾಡಿಸಿತಾ ॥ ೩ ॥

ಮರುಗಿ ಬಂದು ಒದ್ದಿತ್ತೆಯಪ್ಪಾ
ಮರುಗಿ ಬಂದು ಹೊಡದಿತ್ತೆಯಪ್ಪಾ
ಮರುಗಿ ಬಂದು ಕುತಗಿ ಒತ್ತಿತ್ತಯಪ್ಪಾ
ಮರುಗಿ ಬಂದು ಗಂಟಲ ಗಾಣಾ ಹಾಕಿತ್ತಯಪ್ಪಾ ॥ ೪ ॥


ಮರುಗಿ ಬಂದು ಕುಣಿದಿತ್ತು ಮನ್ಯಾಗ
ಮರುಗಿ ಬಂದು ಉಂಡಿತ್ತು ಮನ್ಯಾಗ
ಮರುಗಿ ಬಂದು ಕುಡಿಯಿತ್ತು ಮನ್ಯಾಗ
ಮರುಗಿ ಬಂದು ತಿಂದಿತ್ತು ಮನ್ಯಾಗ ॥ ೫ ॥

ಮಾಯದ ಮರುಗಿ ಬಂದಿತ್ತಯಪ್ಪಾ
ಊರೀಗಿ ಊರ ಸಾಫಾನ ಸೂಫ
ಹುಡಕಿದರ ಸಿಗಲಿಲ್ಲ ಜೀವಾ
ಇಡಕಿರಿದು ಬಿದ್ದಾವು ಶವಾ ॥ ೬ ॥

ಧರೆಯೊಳಗ ಮೆರವ ಡೊಂಗರಗಿ ಪುರವು
ಮರುಗಿ ಮಾಯೆಗೆ ಗುರು ಹಾಕಿದ ಮರವು
ಸಿದ್ಧರಾಮಪ್ಪನ ಸಂಗತಿಗೆ ಬರಲಿಲ್ಲ ಪುಣ್ಯವು
ಮರಗಿ ಹೋಯ್ತು ತನ್ನ ತಾನೆ ಮರಗುತ್ತ ಹೊರಗು ॥ ೭ ॥

(ಈ ವಿವರಗಳನ್ನು ಕೊಟ್ಟವರು ಅವರ ಮಕ್ಕಳಾದ ಅಣೆಪ್ಪ, ವಿಶ್ವನಾಥ ಅವರು.)


□



* ಸಿದ್ಧರಾಮಪ್ಪ ಮ್ಯಾಕ್ರೆ ಅವರ ಮನೆ (ಡೊಂಗರಗಿ).



* ಸಿದ್ಧರಾಮಪ್ಪ ಮ್ಯಾಕ್ರೆ ಅವರ ಛಾಯಾ ಚಿತ್ರ.




* ಸಿದ್ಧರಾಮಪ್ಪ ಮ್ಯಾಕ್ರೆ ಅವರ ಹಿರಿಯ ಮಗ ಅಣ್ಣೆಪ್ಪ




* ಸಿದ್ಧರಾಮಪ್ಪ ಮ್ಯಾಕ್ರೆ ಅವರ ಎರಡನೆಯ ಮಗ ವಿಶ್ವನಾಥ,
ಪತ್ನಿ- ಮಗಳೊಂದಿಗೆ




* ನವನಾಥನ ದರ್ಶನ ಮೂರ್ತಿ



* ಸಿದ್ಧರಾಮಪ್ಪ ಮ್ಯಾಕ್ರೆ ಅವರು ಕಟ್ಟಿಸಿದ ನವನಾಥ ದೇವಾಲಯ
(ಡೊಂಗರಗಿ)



* ದೇವಾಲಯದ ಎದುರಿನಲ್ಲಿರುವ ಧುನಿ



* ಸಿದ್ಧರಾಮಪ್ಪ ಮ್ಯಾಕ್ರೆ ಅವರ ಸಮಾಧಿ



* ಸಿದ್ಧರಾಮಪ್ಪನವರು ಸ್ಥಾಪಿಸಿದ ಶಿವಲಿಂಗ

೧೦. ಹುಲೆಪ್ಪ ಕೆಳದೊಡ್ಡಿ (ಕ್ರಿ.ಶ.ಸು. ೧೯೧೫-೧೯೮೫)

ಬೀದರ ಜಿಲ್ಲೆಯ ಭಾಲ್ಕಿ ತಾಲ್ಲೂಕಿನಲ್ಲಿ ಬರುವ ಕೋಸಮ್ ಗ್ರಾಮದಲ್ಲಿ ಕಲ್ಲಪ್ಪ ಮ್ಯಾಲದೊಡ್ಡಿಯನ್ನು ಬೆಳೆಯಿಸಿದ ಗುರು ಹುಲೆಪ್ಪ ಕೆಳದೊಡ್ಡಿ. ದಲಿತ ಕುಟುಂಬದಲ್ಲಿ ಹುಟ್ಟಿದ ಹುಲೆಪ್ಪ ಕೆಳದೊಡ್ಡಿ ಅವರು ಮೂಲತಃ ಆಧ್ಯಾತ್ಮಿಕ ಸ್ವಭಾವದವರು. ಸಾಧುವಿನಂತೆ ಇದ್ದವರು. ಭೌತಿಕವಾದ ಯಾವುದೇ ಅತಿಯಾದ ಆಸೆ ಇಟ್ಟುಕೊಳ್ಳದೆ ಇದ್ದುದರಲ್ಲಿ ಬದುಕನ್ನು ನಿಭಾಯಿಸುತ್ತಿದ್ದರು. ಸುತ್ತ-ಮುತ್ತೆಲ್ಲ ಹೆಚ್ಚಾಗಿ ಮರಾಠಿ ವಾತಾವರಣವಿದ್ದರೂ, ಅವರು ಗುಡಸಲಿನ ನೆಲೆಯಿಂದ ಕನ್ನಡದ ಧ್ವನಿಯನ್ನು ಕೇಳಿಸಿದವರು. ಹುಲೆಪ್ಪನವರು ನಸುಕಿನಲ್ಲಿಯೆದ್ದು; ಪ್ರಾತಃರ್ವಿಧಿಗಳನ್ನು ಪೂರೈಸಿಕೊಂಡು ಒಂದು ಗಂಟೆಯ ಅವಧಿಯವರೆಗೆ ಏಕತಾರಿ ಮೀಟುತ್ತಾ ದೇವರ ಧ್ಯಾನವನ್ನು ಮಾಡುತ್ತಿದ್ದರು. ಗಟ್ಟಿ ಮತ್ತು ಮಧುರ ಕಂಠದ ಹುಲೆಪ್ಪನವರು ಬೆಳಗಿನ ಜಾವ ಶಾಂತವಾತಾವರಣದಲ್ಲಿ ಹಾಡುತ್ತಿದ್ದರೆ, ಆ ಹಾಡಿನ ತರಂಗಗಳು ಊರಿನಲ್ಲಿ ಹರಡಿ; ಜನತೆಯನ್ನು ಎಚ್ಚರವಾಗಿಸುತ್ತಿದ್ದುವಂತೆ.

ಹುಲೆಪ್ಪನವರ ಆರ್ಥಿಕ ಸ್ಥಿತಿಯೇನೂ ಉತ್ತಮವಾಗಿರಲಿಲ್ಲ. ಅನ್ಯರ ಹೊಲದಲ್ಲಿ ಕೆಲಸ ಮಾಡದೆ ಹೊಟ್ಟೆ ತುಂಬುತ್ತಿರಲಿಲ್ಲ. ಆದರೂ ಅದರ ಬಗೆಗೆ ಅವರು ಅಷ್ಟಾಗಿ ತಲೆ ಕೆಡಸಿಕೊಳ್ಳುತ್ತಿರಲಿಲ್ಲ. ಕಾಯಕ ಮಾಡಬೇಕೆಂಬ ಭಾವದಿಂದ ದುಡಿಯಲು ಹೋಗುತ್ತಿದ್ದರು. ಶ್ರಮವಹಿಸಿ ದುಡಿಯುತ್ತಿದ್ದರು. ಬಂದ ಕೂಲಿಯ ಫಲವನ್ನು ಸಂತಸ ಮನದಿಂದ ವಿನಿಯೋಗಿಸುತ್ತಿದ್ದರು.

ಹುಲೆಪ್ಪನವರ ತಂದೆ ಮಾದಪ್ಪ. ಅತ್ಯಂತ ಮುಗ್ಧಜೀವಿ; ಶ್ರಮಜೀವಿ. ಮಾದಪ್ಪನವರು ಮಗ ಹುಲೆಪ್ಪನಿಗೆ ಕೊಟ್ಟದ್ದು ಕೇವಲ ಶ್ರಮ ಸಂಸ್ಕೃತಿಯಷ್ಟೆ. ಮಾದಪ್ಪನ ಹೆಂಡತಿ ಪೀರವ್ವ ಏನೂ ಅರಿಯದ, ದುಡಿಮೆಯೊಂದೇ ಗೊತ್ತಿದ್ದ ಮಹಿಳೆ. ಈ ದಂಪತಿಗಳಿಂದ ಹುಲೆಪ್ಪನವರು ಕ್ರಿ.ಶ. ೧೯೧೫ರಂದು ಜನ್ಮ ತಾಳಿದರು.

ಹುಲೆಪ್ಪನವರು ನಿರಕ್ಷರಿಗಳು. ಯಾವುದೇ ಪಾಠಶಾಲೆ ಅಥವಾ ಗುರು ಶಾಲೆಗಳ ಬಾಗಿಲು ಅವರಿಗೆ ತೆರದಿರಲಿಲ್ಲ. ತೆರೆದರೂ ಮಾದಪ್ಪನವರಿಗೆ ಶಿಕ್ಷಣ ಕೊಡಿಸಬೇಕೆಂಬ ತಿಳಿಕೆಯಿರಲಿಲ್ಲ. ತಮ್ಮಂತೆ ಅವರು ಮಗನನ್ನು ಬೆಳೆಯಿಸಲು ಹೊರಟರು. ಆದರೆ ಹುಲೆಪ್ಪನವರಲ್ಲಿ ತಂದೆಗಿಂತಲು ವಿಶಿಷ್ಟವಾದ ಶಕ್ತಿಯೊಂದು ಆವಿರ್ಭವಿಸಿದುದು

ದೈವೀ ಕೃಪೆಯೇ ಎಂದು ಹೇಳಬೇಕು. ಅವರು ಶರಣ ಪರಂಪರೆಯನ್ನು ನಂಬಿದರು. ದೇವರಲ್ಲಿ ವಿಶ್ವಾಸವಿರಿಸಿದರು. ಶರಣ ನುಲಿಯ ಚಂದಯ್ಯನನ್ನು ಗುರುವಾಗಿ ಸ್ವೀಕರಿಸಿದರು. ಚಂದಯ್ಯನ ಕಾಯಕ ತತ್ತ್ವವನ್ನು ಬಿಡದಂತೆ ಅನುಸರಿಸಿದರು. ಜೀವನ ನಿರ್ವಹಣೆಗಾಗಿ ಕೂಲಿ ಕೆಲಸವನ್ನೇ ಮಾಡತೊಡಗಿದರು.

ಭಜನೆ–ಹಾಡುವುದು–ತತ್ತ್ವಪದ ರಚನೆಯಂತಹ ಹವ್ಯಾಸಗಳು ಮನಸ್ಸಿನ ಸಂತೋಷ–ಸಮಾಧಾನಕ್ಕಾಗಿ ಬೆಳೆಯಿಸಿಕೊಂಡು ಬಂದರು.

ಹುಲೆಪ್ಪನವರ ಹೆಂಡತಿ ಸಿದ್ಧಮ್ಮ. ಈ ದಂಪತಿಗಳಿಗೆ ಮೂವರು ಹೆಣ್ಣುಮಕ್ಕಳು, ಇಬ್ಬರು ಗಂಡು ಮಕ್ಕಳು. ಗಂಡುಮಕ್ಕಳು ಈಗ ಪೋಲೀಸ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದಾರೆ. ಅವರ ಭೌತಿಕ ಬದುಕಿನ ಪರಿಸ್ಥಿತಿಯೇನೋ ಸುಧಾರಿಸಿದೆ. ಅದನ್ನು ಅನುಭವಿಸಲು ಈಗ ಹುಲೆಪ್ಪನವರು ಜೀವಂತವಿಲ್ಲ. ಆದರೆ ತಾತ್ವಿಕವಾಗಿ ಅವರು ಬದುಕಿದ್ದಾರೆ: ತತ್ತ್ವಪದವಾಗಿ ಬದುಕಿದ್ದಾರೆ. ಹಾಡುಗಾರರ ಹೃದಯದಲ್ಲಿ ಬದುಕಿದ್ದಾರೆ. ಅವರ ಶಿಷ್ಯರಾದಂತಹ ಮ್ಯಾಲದೊಡ್ಡಿ ಕಲ್ಲಪ್ಪನವರಂತಹ ಮನಸ್ಸುಗಳಲ್ಲಿ ಅವರು ಬದುಕಿದ್ದಾರೆ.

ಕಲ್ಲಪ್ಪ ಮ್ಯಾಲದೊಡ್ಡಿ ಅವರು ತಮ್ಮ ಗುರುಗಳಾದ ಹುಲ್ಲೆಪ್ಪನವರ ಬಗೆಗೆ ಅತ್ಯಂತ ಮೆಚ್ಚುಗೆಯಿಂದ ಮಾತನಾಡುತ್ತಾರೆ. ಅವರ ಮಾತುಗಳಲ್ಲಿಯ ಗುರುಗಳ ಬಗೆಗೆ ಇರುವ ಮೆಚ್ಚುಗೆಯನ್ನು ಮನಗಾಣಬೇಕು: "ಹುಲ್ಲೆಪ್ಪನವರು ಬಹಳ ದೊಡ್ಡ ಕಲಾವಿದರಾಗಿದ್ದರು. ಆದರೆ ಅವರು ಎಂದೂ ತಾವೊಬ್ಬ ದೊಡ್ಡ ಕವಿ–ಹಾಡುಗಾರರೆಂದು ಹೇಳಿಕೊಳ್ಳಲಿಲ್ಲ. ಯಾರಾದರೂ ಹಾಗೆ ಹೇಳಿದರೆ "ನನಗೇನು ಬರ್ತಾದ ಮಣ್ಣ" ಎನ್ನುತ್ತಿದ್ದರು. ಅವರಿಗೆ ನನ್ನ ಮೇಲೆ ಬಹಳ ಪ್ರೀತಿಯಿದ್ದಿತು. ನನ್ನನ್ನು ಹೆಚ್ಚಾಗಿ ತಮ್ಮ ಸಂಗಡವೆ ಕರೆದುಕೊಂಡು ಇರುತ್ತಿದ್ದರು. ನನಗೂ ಹಾಡುವ ಹುಚ್ಚು ಬಹುಕಾಲದಿಂದಲೇ ಹತ್ತಿಕೊಂಡು ಬಂದಿತ್ತು. ನಾನು ನಮ್ಮ ಗುರುಗಳ ಎದುರಿನಲ್ಲಿ ಹಾಡುತ್ತಿದ್ದೆ, ಅವರೊಡನೆ ಭಜನೆ ಮಾಡಲು ಹೋಗುತ್ತಿದ್ದೆ. ನನ್ನ ಉತ್ಸಾಹ ಕಂಡು ಅವರು ಹಿಗ್ಗುತ್ತಿದ್ದರು. ನನಗೆ ಹೇಗೆ ಹಾಡಬೇಕೆಂದು ಕಲಿಸಿದವರು ಅವರು, ಹಾಡು ಕಟ್ಟಲು ಆಶೀರ್ವಾದ ಮಾಡಿದವರು ಅವರು. ಆದರೆ ಅವರಿಗೆ ಯಾರೂ ಗುರುಗಳು ಎಂಬುವರು ಇರಲಿಲ್ಲ. ಅವರಿಗೆ ನುಲಿಯ ಚಂದಯ್ಯನಲ್ಲಿ ಬಹಳ ಭಕ್ತಿ ಇದ್ದಿತು. ಅವನಂತೆ ಕೆಲಸ ಮಾಡಬೇಕೆಂದು ಹೇಳುತ್ತಿದ್ದರು. ತಮ್ಮ ತಾವೇ ಹಾಡು ಕಟ್ಟುವುದಕ್ಕೆ ಅವರು ಆರಂಭಿಸಿದರು. ಹಲವಾರು ಹಾಡುಗಳನ್ನು ಅವರು ಬರೆದರು. ನನಗೆ ಕೆಲವು ಅವರ ಹಾಡುಗಳನ್ನು ಕಲಿಸಿದರು. ನಾನು ಇಂದು ಅವರ ಕೆಲವು ಹಾಡುಗಳನ್ನು ಹಾಡುತ್ತೇನೆ. ಅದರೊಂದಿಗೆ ನನ್ನ ಕೆಲವು ಹಾಡುಗಳನ್ನೂ ಹಾಡುತ್ತಿದ್ದೇನೆ. ನಮ್ಮೂರಿನ ಹಲವಾರು ಹಾಡುಗಾರರಲ್ಲಿ ಅವರು ಒಬ್ಬ ಒಳ್ಳೆಯ ಹಾಡುಗಾರರೇ ಆಗಿದ್ದರು. ಅವರ ಹೆಸರು ಇಂದಿಗೂ ಉಳಿದಿದೆ, ಮುಂದೆಯೂ ಉಳಿಯುತ್ತದೆ".

ಹುಲೆಪ್ಪನವರು ಶರಣ ಚಂದಯ್ಯನ ಹೆಸರಿನಲ್ಲಿ ಕೆಲವು ಹಾಡುಗಳನ್ನು ಬರೆದಿದ್ದಾರೆ. ಹಾಗೆಯೇ ಕೆಲವು ಹಾಡುಗಳಿಗೆ ತಮ್ಮ ಹೆಸರನ್ನೇ ಅಂಕಿತವಾಗಿ ಇರಿಸಿಕೊಂಡಿದ್ದಾರೆ. ಅವರು ಕಟ್ಟಿರುವ ಎರಡು ಹಾಡುಗಳನ್ನು ಇಲ್ಲಿ ಕೊಡಲಾಗಿದೆ:

ಪಾರ ಮಾಡು ಗುರುವೆ

ಯಪ್ಪಾ ಪಾರು ಮಾಡು ಗುರುವೆ
ನಮ್ಮಪ್ಪಾ ಹೊಂದಲಿಲ್ಲ ಅರುವೆ ॥ ಪ ॥

ಸಂಸಾರ ಹಳ್ಳಾ ಭಾಳ ಕೊಳ್ಳಾ
ವಳಗಡಿ ತುಂಬ್ಯಾವ ಏಡಿ–ಮೊಸಳಾ
ಕುಶಲದಿ ಪಾರು ಮಾಡು ಗುರುವೆ
ಕರುಣಾದಿ ಕಾಯೋ ಶಿವನೆ ॥ ೧ ॥

ಗರಗರಾ ತಿರುಗಿದೆ ಭವ ಚಕ್ರದೊಳಗ
ಕಣ್ಣೀಗಿ ಚಕ್ರ ಬಂದು ಬಿದ್ದೆನು ನಿನ್ನ ಪದರಾಗ
ಮಣ್ಣೀಗಿ ಹೋಗಾ ದೇಹವಿದು
ಹಣ್ಣಾಗಿ ಸಾಯ್ತಿನಿ ಏನು ಮಾಡಲಿ ? ॥ ೨ ॥

ಹ್ಯಾಂಗರೆ ಮಾಡು ಪಾರು ಮಾಡೋ
ಮುಳುಗುತಿನಿ ಕೈ ಹಿಡಿದು ಎತ್ತೊ
ಮಳ್ಳ ನಾ ಮನುಷ್ಯ ತಿಳಿಲಿಲ್ಲ ಮಹಿಮಾ
ಪಾದಕ್ಕೆ ಹೊಂದೀನಿ ಪಾಮರನೊ ॥ ೩ ॥

ಕಾಡುದು ಬ್ಯಾಡ ಕರುಣಿದು ಪಾಡು
ಗೂಢ ಸಂಸಾರಿದು ಏನಿದು ಘೋರ
ಓಡಬೇಕೆಂದು ಕಾಲ ಸೋತನಿಂತ
ಕೂಡಿಸು ದೇವ ನಿನ್ನಯ ಪಾದ ॥ ೪ ॥

ಭೂಮಿವಳಗ ಚಂದ ಊರಾ ಕೋಸಮ್
ಹಾನ ಚಂದಯ್ಯ ಸತ್ತುಳ್ಳ ಶರಣ
ಅವನ ಪಾದಕ ಮಾಡುವೆ ನಮನ
ಕೈ ಬಿಡದೆ ಅವ ಕಾಯತಾನ ॥ ೫ ॥

ಎಂಟು ಜನ ಭಂಟರು ಭಾಳ ಬೆರಕಿ

ಎಂಟು ಜನ ಭಂಟರು ಭಾಳ ಬೆರಕ್ಹಾರ
ತಂಟಿ ಮಾಡುತಾರ, ತಗಾದಿ ತಗಿತಾರ ॥ ಪ ॥

ತುಂಟ್ಹಾರ: ತುಡಗ್ಹಾರ: ಗಂಟುಗಳ್ಹಾರ
ವಂಟ್ಯಾರ, ಹೊಂಟಾರ, ಮೈಮ್ಯಾಲ ಬೀಳುತಾರ
ಕುಂಟ್ಹಾರ, ಕುರುಡ್ಹಾರ ನಮಗ ಗಂಟ ಬೀಳುತಾರ
ತಂಟೆ ಮಾಡಿ, ಅವರು ಜಗಳ ತಗಿತಾರ ॥ ೧ ॥


ಕೆಟ್ಟ ಗಿಡಗಂಟಿ ಹರಾ
ಸುಂಟು ಸುಡಗಾಡ ಹರಾ
ವಂಟ್ಯಾಗಿ ಸಿಕ್ಕಾರ ನುಗ್ಗ ನುಸಿ ಮಾಡತಾರ
ಗಂಟ್ಹಾಕಿ ನಿಮಗ ಹೆಡಮುರಗಿ ಕಟ್ಟುತಾರ ॥ ೨ ॥

ಮಾತೀಗಿ ಮಾತ ಬಳಸತಾರ ಸುಮ್ಮಸುಮ್ಮ
ಪ್ರೀತಿ ಮಾಡಿದಂಗ ಮಾಡುತಾರ ಒಮ್ಮ ಒಮ್ಮ
ತಿಳಿದಿಲ್ಲ ಅವರಲ್ಲಿ ಕೆಟ್ಟಗುಮ್ಮ
ಹೇಳದಿಲ್ಲ ಯಾರಿಗೂ ಅವರ ಮರ್ಮ ॥ ೩ ॥


ಹೆಣ್ಣೀಗಿ ಗಂಟ ಬೀಳಸತಾರ
ಮಣ್ಣೀಗಿ ಗಂಟ ಬೀಳಸತಾರ
ಕಣ್ಣಾಗ ಮಣ್ಣ ಹಾಕತಾರ
ಸುಣ್ಣಾ-ಸುಣ್ಣಾ ಮಾಡಿ ಅರಿತಾರ ॥ ೪ ॥

ಹುಣ್ಣ ಇದ್ದಾಂಗ ಹರಾ ಮನುಷ್ಯ ಅವರು
ಬಣ್ಣದ ಮಾತು ಆಡುತಾರ
ಶರಣ ಚಂದಯ್ಯನ ಮಳ್ಳ ಮಾಡಬೇಕಂದು
ಕರುಣದಲ್ಲಿ ಸಿಕ್ಕು ಅವರು ನಾಶವಾಗಿ ಹೋಗ್ಯಾರ॥ ೫ ॥

(ಈ ವಿವರಗಳನ್ನು ಕಲ್ಲಪ್ಪ ಮ್ಯಾಲದೊಡ್ಡಿ ಅವರು ನೀಡಿದ್ದಾರೆ.)



* ಹುಲ್ಲೆಪ್ಪ ಕೆಳದೊಡ್ಡಿ ಅವರ ಮನೆಯ ಸ್ಥಳ (ಕೋಸಮ್).



* ಹುಲ್ಲೆಪ್ಪ ಕೆಳದೊಡ್ಡಿ ಅವರ ಆರಾಧ್ಯ ದೇವತೆ ಭವಾನಿ ಮಂದಿರ (ಕಪಲಾಪುರ)

೧೧. ಕಲ್ಲಪ್ಪ ಗೋರಚಿಂಚೋಳಿ (ಕ್ರಿ.ಶ.ಸು. ೧೯೧೮–೧೯೯೮)

ಬೀದರ ಜಿಲ್ಲೆ ಭಾಲ್ಕಿ ತಾಲ್ಲೂಕಿನಲ್ಲಿ ಬರುವ ಸಿಕಿಂದ್ರಬಾದ ವಾಡಿಯು ಕಲ್ಲಪ್ಪನವರ ಸ್ವ ಗ್ರಾಮವಾಗಿದೆ. ಈ ವಾಡಿಗೆ "ಕಳ್ಳವಾಡಿ" ಯೆಂತಲೂ ಕರೆಯುತ್ತಾರೆ. ಇದೊಂದು ತೀರಾ ಚಿಕ್ಕ ಹಳ್ಳಿ. ದಲಿತ (ಮಾದಿಗ) ಜನಾಂಗಕ್ಕೆ ಸೇರಿದ ನರಸಪ್ಪ ಬಡವ ಕೃಷಿಕ, ಈತನ ಪೂರ್ವಜರು ಭಾಲ್ಕಿ ತಾಲ್ಲೂಕಿನಲ್ಲಿರುವ ಗೋರ ಚಿಂಚೋಳಿ ಗ್ರಾಮದಿಂದ ಹೊಟ್ಟೆ ಉಪ ಜೀವನಕ್ಕಾಗಿ ಸಿಕಿಂದ್ರಬಾದ ವಾಡಿಗೆ ಬಂದು ನೆಲೆಸಿದಂತೆ ತಿಳಿದು ಬರುತ್ತದೆ. ಮೊದಲಿನ ಊರ ಹೆಸರೆ ನಂತರದಲ್ಲಿ ಕಲ್ಲಪ್ಪನ ಮನೆತನದ ಹೆಸರಾಯಿತು.

ಕಲ್ಲಪ್ಪನು ನರಸಪ್ಪ–ಮಲ್ಲವ್ವ ದಂಪತಿಗಳ ಮಗ. ಕ್ರಿ.ಶ.ಸು. ೧೯೧೮ರಲ್ಲಿ ಕವಿ ಕಲ್ಲಪ್ಪನವರ ಜನನವಾಯಿತು. ಹುಟ್ಟಿದ ಮಗುವು ಕಣ್ಣು ಬಿಡುತ್ತಲೇ ಕಂಡದ್ದು ಸುತ್ತೆಲ್ಲ ಬಡತನದ ಕತ್ತಲೆ. ಹೀಗಾಗಿ ಬಾಲ್ಯವನ್ನು ದನ ಕಾಯುತ್ತಲೇ ಕಳೆಯಬೇಕಾಯಿತು. ಅಡವಿಕೆಲಸಗಳಿಗೆ ಹೋಗಿ ಪಾಲಕರೊಡನೆ ಕೈಗೂಡಿಸುವುದು ಕಲ್ಲಪ್ಪನವರಿಗೆ ತಾರುಣ್ಯದಲ್ಲಿಯೇ ಅನಿವಾರ್ಯವಾಯಿತು.

ಹೀಗಾಗಿ ಯಾವುದೇ ತೆರನಾದ ಓದು–ಬರಹ ಕಲಿಯಲಾಗಲಿಲ್ಲ. ಅವರು ನಿರಕ್ಷರಿಯಾಗಿ ಬೆಳೆದರು. ನಿಸರ್ಗದ ಹೊಟ್ಟೆಯಲ್ಲಿ ಬೆಳೆಯುತ್ತಾ ಕಲ್ಪನೆಯ ಶ್ರೀಮಂತಿಕೆಯನ್ನು ಮಾತ್ರ ಯಥೇಚ್ಛವಾಗಿ ಕಲ್ಲಪ್ಪ ಬೆಳೆಸಿಕೊಂಡರು. ಹೀಗಾಗಿಯೇ ಅವರಿಗೆ ಆಶುಕವಿತ್ವದ ಶಕ್ತಿ ಪಡೆಯುವುದಕ್ಕೆ ಸಾಧ್ಯವಾಯಿತು.

ಕಲ್ಲಪ್ಪನ ಹೆಂಡತಿ ದ್ರೌಪದಿಬಾಯಿ. ಸಧ್ಯ ಅವರಿಗೆ ಎಂಬತ್ತೈದರ ವಯಸ್ಸು. ಈ ದಂಪತಿಗಳಿಗೆ ಎಂಟು ಜನ ಗಂಡು ಮತ್ತು ನಾಲ್ಕು ಜನ ಹೆಣ್ಣುಮಕ್ಕಳು. ಬಹು ದೊಡ್ಡ ಕುಟುಂಬ. ವಿಠ್ಠಲ, ನರಸಿಂಹ, ರಾಮ, ಶಿವಾಜಿ, ತಾನಾಜಿ, ಬಾಬು, ಮಲ್ಲಪ್ಪ, ಲಕ್ಷ್ಮಣ, ಪರೇಗಬಾಯಿ, ಮಹಾದೇವಿ, ಸರೂಬಾಯಿ, ನೀಲಮ್ಮ ಇವರೆ ಕಲ್ಲಪ್ಪನವರ ಸಂತಾನ.

ಕಲ್ಲಪ್ಪನು ಕೂಲಿ ಕೆಲಸ ಮಾಡಿ ಉಪಜೀವನ ನಡೆಸುತ್ತಿದ್ದರು. ಅವರೊಂದಿಗೆ ಹೆಂಡತಿ ದ್ರೌಪದಿಬಾಯಿ; ಹಿರಿಯರಾದ ಗಂಡುಮಕ್ಕಳು ಕೆಲಸಕ್ಕೆ ಹೋಗುತ್ತಿದ್ದರು. ಹೀಗಾಗಿ ಎಲ್ಲ ತುತ್ತಿನ ಚೀಲಗಳು ತಕ್ಕ ಮಟ್ಟಿಗೆ ತುಂಬುವುದಕ್ಕೆ ಸಾಧ್ಯವಾಗುತ್ತಿದ್ದಿತು. ಈಗ ಹೆಣ್ಣುಮಕ್ಕಳು ಮದುವೆ ಮಾಡಿಕೊಂಡು ಹೋಗಿದ್ದಾರೆ; ಎಲ್ಲ ಗಂಡುಮಕ್ಕಳು

ಮದುವೆಯಾಗಿ ಬೇರೆ ಬೇರೆ ಮನೆ ಮಾಡಿಕೊಂಡು ದುಡಿದು ಉಣ್ಣುತ್ತಿದ್ದಾರೆ. ಆದರೆ ಕಲ್ಲಪ್ಪನ ಹೆಂಡತಿ ದ್ರೌಪದಿಬಾಯಿ ಮಾತ್ರ ಯಾರದೂ ಆಶ್ರಯವಿಲ್ಲದೆ ಏಕಾಂಗಿಯಾಗಿ ಪತಿಯ ನೆನಪಿನಲ್ಲಿ ಜೀವಿಸುತ್ತಿದ್ದಾಳೆ.

ಕಲ್ಲಪ್ಪ ಪರಮ ದೇವಿಭಕ್ತರಾಗಿದ್ದರು. ಗ್ರಾಮದ ಮಲ್ಲಿಕಾರ್ಜುನ ತನ್ನ ಮನೆತನದ ಆರಾಧ್ಯ ದೇವರೆಂದು ತಿಳಿದರು. ಹಾಗೆಯೇ ಹನ್ನೆರಡನೆಯ ಶತಮಾನದ ಶರಣ ನುಲಿಯ ಚಂದಯ್ಯನಲ್ಲಿ ಭಕ್ತಿ ಇಟ್ಟು ಶರಣ ಜೀವನ ಸಾಗಿಸುತ್ತಿದ್ದರು. ಖಟಕ್ ಚಿಂಚೋಳಿಯ ಶಾಂತಪ್ಪನವರಿಂದ ವೀರಶೈವ ದೀಕ್ಷೆ ಪಡೆದು ವೀರಶೈವ ಸಂಸ್ಕೃತಿಯ ಆಚಾರವನ್ನು ಕಲ್ಲಪ್ಪನವರು ಅನುಸರಿಸುತ್ತಿದ್ದರು. ಅವರ ಗುರು ಶಾಂತಪ್ಪನವರೇ ಆಗಿದ್ದಾರೆ.

ಕಲ್ಲಪ್ಪನವರು ಜೀವಿಸಿದ್ದಾಗ ಪ್ರತಿವರುಷವೂ ದಸರೆಯ ಹಬ್ಬದ ಸಂದರ್ಭದಲ್ಲಿ ತುಳಜಾಪೂರಕ್ಕೆ ಹೋಗಿ ಅಂಬಾಭವಾನಿಯ ದರ್ಶನ ಮಾಡಿಕೊಂಡು ಬರುತ್ತಿದ್ದರಂತೆ. ಅವರಿಗೆ ಭವಾನಿಯಲ್ಲಿ ಅಪ್ರತಿಮ ಭಕ್ತಿಯಿದ್ದಿತು.

ಕಲ್ಲಪ್ಪನವರು ವೀರಶೈವ ದೀಕ್ಷೆ ಹೊಂದಿದ ನಂತರ ಎಂದೂ ಸ್ನಾನ ಮಾಡದೆ ಊಟ ಮಾಡಲಿಲ್ಲ. ಹಣೆಯ ಮೇಲೆ ವಿಭೂತಿ, ಕೊರಳೊಳಗೆ ಲಿಂಗ – ರುದ್ರಾಕ್ಷಿ ಧಾರಣಮಾಡುತ್ತಿದ್ದರು. ಮುಂಜಾನೆ ಜಳಕ ಮಾಡಿಕೊಂಡು ಪಂಚಾಕ್ಷರ ಮಂತ್ರ ಜಪ ಮಾಡುತ್ತಿದ್ದರು.

ಕಲ್ಲಪ್ಪನವರ ತಂದೆ ನರಸಪ್ಪನವರು ಬಹುದೊಡ್ಡ ಆಶುಕವಿಗಳಾಗಿದ್ದರು. ಅವರು ಹಲವಾರು ಮೋಹರಮ್ ಹಾಡುಗಳನ್ನು ರಚಿಸಿದ್ದಾರೆಂದು ಹೇಳುತ್ತಾರೆ. ನರಸಪ್ಪನವರ ಕಾವ್ಯದ ಗುಣವೇ ಕಲ್ಲಪ್ಪನವರಲ್ಲಿ ಮೈಗೊಂಡು ಬಂದಿತು. ನರಸಪ್ಪನವರು ಬಹು ಬೇಗನೆ ಅಂದರೆ ಕಲ್ಲಪ್ಪನವರು ಇನ್ನೂ ಹಸುಗೂಸಿರುವಾಗಲೇ ತೀರಿ ಕೊಂಡಿದ್ದು ಅವರಿಗೆ ಬಹುದೊಡ್ಡ ನಷ್ಟವಾದಂತಾಯಿತು. ತಾಯಿಯ ಆಶ್ರಯದಲ್ಲಿ ಬೆಳೆದ ಕಲ್ಲಪ್ಪನವರು ತಮ್ಮಲ್ಲಿ ಕಾವ್ಯದ ಶಕ್ತಿಯನ್ನು ರಕ್ಷಿಸಿಕೊಂಡು ಬಂದರು.

ಸಿಕಿಂದ್ರಬಾದವಾಡಿಯಲ್ಲಿ ಭೀಮಶಾ ಎನ್ನುವ ಬಹು ಪ್ರಸಿದ್ಧ ಹಾಡುಗಾರನೊಬ್ಬನಿದ್ದನು. ಅವನ ಪ್ರಭಾವಕ್ಕೆ ಒಳಗಾದ ಕಲ್ಲಪ್ಪನವರು ಮೊದಲಿಗೆ ಹಾಡುವುದನ್ನು ಕಲಿತುಕೊಂಡರು. ಭೀಮಶಾ ಧುಮ್ಮನಸೂರಿನ ಸಿದ್ಧಪ್ರಭುಗಳು ರಚಿಸಿದ ಹಾಡುಗಳನ್ನು ಹಾಡುತ್ತಿದ್ದನು. ಅವನು ಕಲ್ಲಪ್ಪನವರಿಗೆ ಕೆಲವು ಹಾಡುಗಳನ್ನು ಕಲಿಸಿ ಕೊಟ್ಟನು. ಧುಮ್ಮನಸೂರ ಸಿದ್ಧ ಪ್ರಭುಗಳ ಹಾಡು ಹಾಡುತ್ತಲೇ ಕಲ್ಲಪ್ಪನವರು ತಮ್ಮ ಮೂವತ್ತನೆಯ ವಯಸ್ಸಿನಿಂದ ಸ್ವತ: ಹಾಡುಗಳನ್ನು ಕಟ್ಟುವುದಕ್ಕೆ ಆರಂಭ ಮಾಡಿದರು.

ಕಲ್ಲಪ್ಪನವರು ತಮ್ಮ ಆರಾಧ್ಯದೇವರು ಮಲ್ಲಿಕಾರ್ಜುನ ಮತ್ತು ಗುರು ಶಾಂತಪ್ಪನವರ ಮುದ್ರಿಕೆಯನ್ನು ಇರಿಸಿಕೊಂಡು ತತ್ತ್ವ ಪದಗಳನ್ನು ಕಟ್ಟಿದ್ದಾರೆ. ಅವರ ಎರಡು ತತ್ತ್ವ ಪದಗಳನ್ನು ಇಲ್ಲಿ ಕೊಡಲಾಗಿದೆ:

ಗುರುದಯ ಬೇಕೊ

ತಿಳಿಕೋ ತಿಳಿದಳಿದುಳಿಕೊ
ತಿಳಿಯ ಬೇಕಾದರೆ ಗುರುದಯ ಬೇಕೊ ॥ ಪ ॥

ಗುರುಭೋದವ ನೀ ಪಡಿಕೊ
ನಿಜ ಮಾರ್ಗವ ನೀ ಹಿಡಿಕೊ
ತನು–ಮನ–ಧನ ಗುರುವಿಗಿ
ಮೊದಲೇ ನೀ ಅರ್ಪಣ ಮಾಡಿಕೊ ॥ ೧ ॥

ನಾನೇ ನಾನು ಮಾಡುತೀನಿ ಅಂತಿದಿ
ಏನೇನೂ ಮಾಡಲಾರದೆ ಕುಂತಿದಿ
ನೀನೆ ಅನುತ ಗುರುವಿನ ನಂಬು
ತಾನೆ ಕಾಣುತಾದ ಮೋಕ್ಷದ ಇಂಬು ॥ ೨ ॥

ಸುಮ್ಮಲ್ಲ ತಮ್ಮ ಗುರುವಿನ ಭೋದ
ಒಮ್ಮನಸ್ಸಿನಿಂದ ಮಾಡಿ ನೋಡು ಸೋಧ
ಗಮ್ಮ–ಗಂತರದಾಗ ಇಲ್ಲ ಭೇದ
ಹೊಮ್ಮತಾದ ಓಂಕಾರದ ನಾದ ॥ ೩ ॥

ಹಮ್ಮಿನಿಂದ ದೂರವಾಗು ನೀ
ಬಿಮ್ಮ ಬಿಡಕ ಬಿಟ್ಟು ಬಿಡು
ಸುಮ್ಮ–ಸೆಡವ ಮಾಡದು ಬಿಟ್ಟು
ನಮ್ಮ ಗುರು ಪಾದಕ ಮುಟ್ಟು ॥ ೪ ॥

ಸೃಷ್ಟಿಯೊಳಗ ಸಣ್ಣವಾಡಿ
ಮಲ್ಲಿಕಾರ್ಜುನ ದೇವರ ಭಕ್ತಿಯ ಮಾಡಿ
ಸದ್ಗುರು ಶಾಂತಲಿಂಗನ ಭೋದ
ತಿಳಿದು ನೋಡು ಅದರ ಸ್ವಾದ ॥ ೫ ॥

ಪಕ್ಷಿಯ ಕಂಡೆನು

ಕಂಡೇನೊ ಪಕ್ಷಿ ಕಂಡೇನೊ
ಇದು ಪಕ್ಕನಿಲ್ಲದ ಪಕ್ಷಿ ॥ ಪ ॥


ಧಂಡ ರುಂಡ ಇಲ್ಲದೇ ತಮ್ಮ
ಇದು ಅಖಂಡ ಕಾಣುತ್ತಾದಮ್ಮ
ಯೋಗ ಮುದ್ರದವರೀಗಿ ಬೇಗದಿ ಕಂಡಿತು
ನಮ್ಮ ಎದುರೀಗೆ ಹಾರುತಾದಣ್ಣ ॥ ೧ ॥

ವರ್ಣ-ರೂಪ ಇಲ್ಲದ್ದೊ
ಹಮ್ಮ-ಬಿಮ್ಮಿಗೆ ಸಿಲುಕದ್ದೊ
ಹೊರಗಣ್ಣಿಗೆ ಕಾಣಲಾರದ್ದೊ
ಒಳಗ ನೋಡಿದರ ಕಾಣುವಂತಾದೊ ॥ ೨ ॥

ಉನ್ಮನಿಯಗೂಡು ಕಟ್ಯಾದೊ
ಇಡಾ-ಪಿಂಗಳದ ನಡುವೆ ಕಾಣುತಾದೊ
ಪಶ್ಚಿಮ ದಿಕ್ಕಿಗೆ ಹಾರ್ಯಾದೋ
ಸಾವಿರದಳದ ಹೂವಿನಾಗ ಹುದಗ್ಯಾದೋ ॥ ೩ ॥

ಅನುಭಾವದ ಅರ್ಥ ತಿಳಿದವಗ ಕಾಣುತಾದ
ನರ ಹೋಗಿ ಗುರು ಆಗಿ ನಿಂತವಗ ತೋರುತಾದ
ಗುರುಶಾಂತನಿಗೆ ಅದು ಎದುರಾದ
ಮಲ್ಲಿಕಾರ್ಜುನನ ರೂಪವೇ ಆಗ್ಯಾದ ॥ ೪ ॥


(ಈ ವಿವರಗಳನ್ನು ಕೊಟ್ಟವರು ಕವಿಗಳ ಹೆಂಡತಿ ದ್ರೌಪದಿಬಾಯಿ ಮತ್ತು ನನ್ನ ವಿದ್ಯಾರ್ಥಿನಿ ಡಾ. ಐಶ್ವರ್ಯ)




* ಕಲ್ಲಪ್ಪ ಗೋರ ಚಿಂಚೋಳಿ ಅವರ ಮನೆ (ಸಿಕಿಂದ್ರಾಬಾದವಾಡಿ.)

* ಕಲ್ಲಪ್ಪ ಗೋರ
ಚಿಂಚೋಳಿ ಅವರ
ಹೆಂಡತಿ ದ್ರೌಪದಿ
ತನ್ನ ಮೊಮ್ಮಗಳೊಂದಿಗೆ





* ಕಲ್ಲಪ್ಪನವರ ಆರಾಧ್ಯ ದೇವರು ಮಲ್ಲಯ್ಯನ ಮಂದಿರ (ಸಿಕಿಂದ್ರಾಬಾದವಾಡಿ)



* ಮಲ್ಲಯ್ಯನ ದೇವಸ್ಥಾನದ ಒಳಾಂಗಣ ನೋಟ

೧೨. ಸಂಗಪ್ಪ ಬಿರಾದಾರ (ಕ್ರಿ.ಶ.ಸು. ೧೯೨೩–೨೦೦೬)

ಬೀದರ ಜಿಲ್ಲೆಯ ಭಾಲ್ಕಿ ತಾಲ್ಲೂಕಿನಲ್ಲಿ ಬರುವ ಕರಡ್ಯಾಳ ಗ್ರಾಮವು ತಾಲ್ಲೂಕಾ ಕೇಂದ್ರಕ್ಕೆ ಸಮೀಪದ ನೆಲೆ. ಇದನ್ನು ಜನರು 'ಕಡ್ಯಾಳ' ಎಂತಲೂ ಉಚ್ಚರಿಸುತ್ತಾರೆ. ಈ ಗ್ರಾಮಕ್ಕೆ ಬಿರಾದಾರ ಮನೆತನವು ವೀರಶೈವ ಸಂಸ್ಕೃತಿಯ ಅನುಸಂಧಾನದ ನೆಲೆಯಾಗಿದೆ. ಚೆನ್ನಮಲ್ಲಪ್ಪ ಬಿರಾದಾರ ಮನೆತನದ ಯಜಮಾನ, ಸುಸಂಸ್ಕೃತ ಮನದ ವ್ಯಕ್ತಿ, ಕೃಷಿ ಕಾಯಕದಿಂದ ಬದುಕನ್ನು ನಿಭಾಯಿಸುತ್ತಿದ್ದವರು. ಒಕ್ಕಲುತನವು ಸುವ್ಯವಸ್ಥಿತ ಸ್ಥಿತಿಯಲ್ಲಿ ಇದ್ದಿತು. ರತ್ನಮ್ಮ ಎಂಬವರು ಚೆನ್ನಮಲ್ಲಪ್ಪನವರ ಪತ್ನಿ. ಹಿತಮಿತವಾಗಿ ಸಂಸಾರ ನಡೆಯಿಸಿಕೊಂಡು ಹೋಗುತ್ತಿದ್ದ ಜಾಣೆಯಾಗಿದ್ದರು. ಈ ದಂಪತಿಗಳ ಮಗನೆ ಸಂಗಪ್ಪ ಬಿರಾದಾರ. ಕ್ರಿ.ಶ.ಸು ೧೯೨೩ ಅವರ ಜನನದ ವರ್ಷವೆಂದು ದಾಖಲಿಸಲಾಗಿದೆ.

ಸಂಗಪ್ಪನವರಿಗೆ ಸೋದರರಾಗಿ ಜನಿಸಿದ ರೇವಣಸಿದ್ಧಪ್ಪ, ಅಣ್ಣೆಪ್ಪ ಮತ್ತು ಸೋದರಿ ಗುಂಡವ್ವ ಇವರು ಚೆನ್ನಮಲ್ಲಪ್ಪನವರ ಇತರ ಸಂತತಿಗಳು.

ಸಂಗಪ್ಪನವರಿಗೆ ವ್ಯವಸ್ಥಿತ ಶಿಕ್ಷಣವು ದೊರಕದಿದ್ದರೂ, ಸ್ವ ಪ್ರಯತ್ನದಿಂದ ಅವರು ಕನ್ನಡ ಓದುವುದು; ಬರೆಯುವುದನ್ನು ಕಲಿತುಕೊಂಡರು. ಮೋಡಿ ಭಾಷೆಯನ್ನೂ ಅವರು ಬಲ್ಲವರಾಗಿದ್ದರು.

ಸಂಗಪ್ಪನವರು ಕೃಷಿ ಕಾಯಕವನ್ನು ಮುಂದುವರೆಸಿಕೊಂಡು ಬಂದವರು. ಹೆಂಡತಿ ಪಾರಮ್ಮನವರು. ಸಂಗಪ್ಪನವರಿಗೆ ಒಬ್ಬ ಮಗ, ಅವನ ಹೆಸರು ಶರಣಪ್ಪ, ಸೊಸೆ ಮಂಗಲಾ, ಅವರು ಸಧ್ಯ ಕರಡ್ಯಾಳದಲ್ಲಿ ಇದ್ದಾರೆ.

ಸಂಗಪ್ಪನವರ ಮನೆತನದ ಗುರುಗಳು ಬಸವಕಲ್ಯಾಣದ ಗುರುಸ್ಥಲ ಮಠದ ಇಂಗಳೆಪ್ಪ ಸ್ವಾಮಿಗಳು. ಮನೆತನದ ದೇವರು ವೀರಭದ್ರ ಮತ್ತು ಹೊನ್ನಿಕೇರಿ ಸಿದ್ಧೇಶ್ವರ. ಸಂಗಪ್ಪನವರು ಪ್ರಸಾದಿಕರಾಗಿದ್ದರು. ಸ್ನಾನವಿಲ್ಲದೆ ಊಟಮಾಡುತ್ತಿರಲಿಲ್ಲ, ತಾಟಿನಲ್ಲಿ ನೀಡಿದ ಪ್ರಸಾದವನ್ನು ಪೂರ್ಣವಾಗಿ ಸೇವಿಸಿ, ತಾಟನ್ನು ತೊಳೆದುಕೊಂಡು ಕುಡಿಯುತ್ತಿದ್ದರು. ನಾವದಗಿ ರೇವಪ್ಪಯ್ಯನವರಲ್ಲಿ ಸಂಗಪ್ಪನವರಿಗೆ ಅನುಪಮ ಭಕ್ತಿಭಾವವಿದ್ದಿತು.

ಸಂಗಪ್ಪನವರು ದಿನನಿತ್ಯ ಹೊಲಕ್ಕೆ ಹೋಗುತ್ತಿದ್ದರು. ಹೊಲದ ಕೆಲಸಗಳನ್ನು ಸ್ವತಃ ಮಾಡುತ್ತಿದ್ದರು. ಹೊಲದಲ್ಲಿ ಬಂದ ಜೋಗಿ, ಜಂಗಮ, ಬಡವರಿಗೆ ದಾನಮಾಡುತ್ತಿದ್ದರು. ಕಾಲಕ್ರಮೇಣ ಸಂಗಪ್ಪನವರ ಕೃಷಿಕಾಯಕ ಸರಿಯಾಗಿ ನಡೆಯದಂತಾಯಿತು. ಸಮಸ್ಯೆಗಳ ಮೇಲೆ ಸಮಸ್ಯೆಗಳು ಎದುರಾಗ ತೊಡಗಿದವು. ಆರ್ಥಿಕ ಮುಗ್ಗಟ್ಟು ಕಾಣಿಸಿಕೊಳ್ಳತೊಡಗಿತು. ಹೀಗಾಗಿ ಅವರು ಕ್ರಿ.ಶ.ಸು. ೧೯೫೩ರ ಹೊತ್ತಿಗೆ ಕೃಷಿಕಾಯಕವನ್ನು ಸ್ವತಃ ಮಾಡುವುದು ನಿಲ್ಲಿಸಿದರು. ಹೊಲವನ್ನು ಪಾಲಿಗೆ ಕೊಟ್ಟರು. ಬೀದರಿಗೆ ಹೋಗಿ ಅಲ್ಲಿ ಖಾನಾವಳಿಯೊಂದನ್ನು ತೆರೆದರು. ಆರಂಭದಲ್ಲಿ ಅದು ಸರಿಯಾಗಿ ನಡೆಯಿತು. ಸಂಗಪ್ಪನವರಿಗೆ ಖಾನಾವಳಿಯೆಂಬುದು ವ್ಯಾಪಾರದ ಮಾಧ್ಯಮವಾಗಲಿಲ್ಲ. ಅದಕ್ಕೆ ಬದಲಾಗಿ ಅದು ಪ್ರಸಾದದಾಸೋಹ ಕ್ರಿಯೆಗೆ ಮಾಧ್ಯಮವಾಗತೊಡಗಿತು. ಹೀಗಾಗಿ ಆರ್ಥಿಕ ದೃಷ್ಟಿಯಿಂದ ಅದು ಹಾನಿಯೇ ಉಂಟುಮಾಡಿತು. ಕ್ರಿ.ಶ.ಸು. ೧೯೬೦ರಲ್ಲಿ ಅದು ಮುಚ್ಚಿ ಬಿಟ್ಟರು. ಸಂಗಪ್ಪನವರಿಗೆ ಅದೇಕೋ ಬದುಕಿನಲ್ಲಿ ಬೇಸರ ಉಂಟಾಯಿತು.

ಆರ್ಥಿಕ ಮುಗ್ಗಟ್ಟುವೊಂದು ಕಾರಣವಾದರೆ; ಅವರಲ್ಲಿನ ಆಧ್ಯಾತ್ಮಿಕ ಹಂಬಲ ಇನ್ನೊಂದು ಕಾರಣವಾಯಿತು. ಅವರು ಸ್ವಸ್ಥಳವನ್ನು ಬಿಟ್ಟು ದೇಶಸಂಚಾರಕ್ಕೆ ಹೊರಟರು. ಊರೂರು ತಿರುಗಿದರು. ಪುರಾಣ–ಪ್ರವಚನ ಮಾಡಿದರು. ಭಜನೆಯಲ್ಲಿ ಭಾಗವಹಿಸಿ ಹಾಡಿದರು. ಹೀಗಾಗಿ ಸಂಗಪ್ಪನವರು ಧಾರ್ಮಿಕ ಕಾರ್ಯಕ್ರಮಗಳಲ್ಲಿ ಬಿಡದೆ ಭಾಗವಹಿಸತೊಡಗಿದರು. ಪುರಾಣ–ಭಜನೆ ಪ್ರವಚನದಂತಹ ಕಾರ್ಯಕ್ರಮಗಳು ಎಲ್ಲೇ ನಡೆಯಲಿ, ಸುದ್ದಿ ತಿಳಿದರೆ ಸಾಕು ಅಲ್ಲಿಗೆ ಧಾವಿಸಿ ಹೋಗುತ್ತಿದ್ದರು.

ಹೀಗೆ ಸಂಚಾರದಲ್ಲಿ ಸಂಗಪ್ಪನವರಿಗೆ ದುಬಲಗುಂಡಿಯ ಸಿದ್ಧರಾಮಯ್ಯ ಸ್ವಾಮಿಗಳ ಪರಿಚಯವಾಯಿತು. ಅವರು ಬಹುದೊಡ್ಡ ಶಾಸ್ತ್ರಿಗಳು, ಸಂಗೀತಗಾರರೂ, ಹಾಡುಗಾರರೂ ಆಗಿದ್ದರು. ಸಂಗಪ್ಪನವರ ಆಸಕ್ತಿಯನ್ನು ಗುರುತಿಸಿ, ಅದಕ್ಕೊಂದು ಸರಿಯಾದ ಆಕಾರ ಕೊಡಲು ಬಯಸಿದರು. ಸಂಗಪ್ಪನವರನ್ನು ತಮ್ಮ ಶಿಷ್ಯನನ್ನಾಗಿ ಮಾಡಿಕೊಂಡರು. ಹಾಡುಗಾರಿಕೆ ಮತ್ತು ಸಂಗೀತವನ್ನು ಕಲಿಸಿದರು. ಸಂಗಪ್ಪನವರಿಗೆ ಈ ಎರಡು ಕಲೆಗಳು ಪುರಾಣ –ಪ್ರವಚನ ಕಾರ್ಯದಲ್ಲಿ ಅತ್ಯಂತ ಸಹಕಾರಿಯೆನಿಸಿದವು. ಸಂಗಪ್ಪನವರು ಹಾಡ ತೊಡಗಿದರು, ಅವರ ಕಂಠ ಸಂಪತ್ತು ಹೆಚ್ಚ ತೊಡಗಿತು. ಶರಣರ ವಚನ; ದಾಸರ ಹಾಡು, ನಿಜಗುಣಾದಿಗಳ ತತ್ತ್ವಪದಗಳು ಅವರ ಕಂಠದ ಬಲವನ್ನು ಪಡೆದುಕೊಂಡವು.

ಸಂಗಪ್ಪನವರಲ್ಲಿ ಅವರ ವಯಸ್ಸಿನ ಐವತ್ತರ ಅವಧಿಗೆ ಕಾವ್ಯ ಶಕ್ತಿ ಆವಿರ್ಭವಿಸಿದಂತಾಯಿತು, ಸ್ವತಃ ಹಾಡುಗಳನ್ನು ಕಟ್ಟತೊಡಗಿದರು. ಹಲವಾರು

ಪ್ರಕಾರದ ಹಾಡುಗಳು ಅವರ ರಚನೆಯಲ್ಲಿ ಮೂಡಿಬಂದವು. ತತ್ತ್ವಪದಗಳು, ಗೀಗಿ-ಲಾವಣಿ, ಕೋಲಾಟದ ಹಾಡುಗಳು, ಮೋಹರಮ್ ಹಾಡುಗಳು, ಹೆಣ್ಣುಮಕ್ಕಳ ಪದಗಳು ಹೀಗೆ ಹಲವು-ಹತ್ತು ಪ್ರಕಾರದ ಹಾಡುಗಳು ಅಕ್ಷರರೂಪ ಪಡೆದುಕೊಂಡವು. ಗುಲ್ಬರ್ಗ-ಬೀದರ ಜಿಲ್ಲೆಗಳ ವ್ಯಾಪ್ತಿಯಲ್ಲಿ ಸಂಗಪ್ಪ ಬಿರಾದಾರ ಅವರ ಹಾಡುಗಳು ಪ್ರತಿಧ್ವನಿಸ ತೊಡಗಿದವು. ಕಲಬುರ್ಗಿ ಆಕಾಶವಾಣಿ ಕೇಂದ್ರವು ಸಂಗಪ್ಪ ಬಿರಾದಾರ ಅವರು ಹಾಡಿದ ಮತ್ತು ರಚಿಸಿದ ಹಲವಾರು ಹಾಡುಗಳನ್ನು ಪ್ರಸಾರಗೊಳಿಸಿತು. ಹಲವಾರು ಮಠ-ಮಾನ್ಯಗಳು ಸಂಗಪ್ಪನವರನ್ನು ಸನ್ಮಾನ ಮಾಡಿದವು.

ಕರ್ನಾಟಕ ಸರಕಾರವು ಅವರಿಗೆ ಕ್ರಿ.ಶ.೧೯೯೫ರಲ್ಲಿ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಶಸ್ತಿ ನೀಡಿ ಸತ್ಕರಿಸಿತು. ಹಾಗೆಯೇ ಮಾಶಾಸನವೂ ಮಂಜೂರು ಮಾಡಿತು.

ಸಂಗಪ್ಪನವರು ಏನೆಲ್ಲ ಮುಗ್ಗಟ್ಟುಗಳ ನಡುವೆಯೂ ಸಾಹಿತ್ಯ ಕೃಷಿಕರಾಗಿ, ತತ್ತ್ವಪದಕಾರರಾಗಿ ಬದುಕಿ, ಕ್ರಿ.ಶ.೨೦೦೬ ರಂದು ಭೌತಿಕ ದೇಹದಿಂದ ಬಿಡುಗಡೆಗೊಂಡರು. ಸಂಗಪ್ಪನವರ ತತ್ತ್ವಪದಗಳಲ್ಲಿ 'ಸಿದ್ಧಲಿಂಗ', 'ಗುರುಸಿದ್ಧ' ಎಂಬ ಅಂಕಿತಗಳು ಕಂಡುಬರುತ್ತವೆ. ಅವರ ಎರಡು ತತ್ತ್ವಪದಗಳನ್ನು ಇಲ್ಲಿ ಕೊಡಲಾಗಿದೆ:

ಸಂಸಾರವೆಂಬುದು ಸಾಗರ

ಸಂಸಾರ ಸಾಗರ ನೋಡಣ್ಣ
ನೀ ಮುಚ್ಚಿದಿ ಕಣ್ಣ, ಸಂಸಾರದ ಸುಖವ ಇಲ್ಲಣ್ಣ ॥ ಪ ॥

ಸಾಸುವೆ ಕಾಳಟ್ಟು ಸುಖಯಿಲ್ಲೋ ಅಣ್ಣ
ಹೆಂಡರು - ಮಕ್ಕಳು ಆಗ್ಯಾವೋ ಹುಣ್ಣ
ಯವ್ವನಯೆಂಬುದು ಮ್ಯಾಲಿನ ಬಣ್ಣ
ಅಳಿಸಿ ಹೋಗುತಾದ ಗ್ವಾಡಿ ಮೇಲಿನ ಸುಣ್ಣ ॥ ೧ ॥

ರೊಕ್ಕದ ಆಸೀಗಿ ಬಿಕ್ಕಿತು ಬಾಯಿ
ಲೆಕ್ಕವಿಲ್ಲದಟ್ಟು ದುಃಖದ ರೂಪಾಯಿ
ಸೊಕ್ಕಿನ ದೇಹಕ ಮುತ್ತಿತು ಬಾಯಿ
ಕಕ್ಕಸದಾಗ ಬಿದ್ದೆನು ತಾಯಿ ॥ ೨ ॥

ಹಿಡಿದೇನಂದರ ಅದು ಸಿಗಲಿಲ್ಲ
ಸಿಕ್ಕಿತೆಂದರ ಅದು ಇರುದಿಲ್ಲ
ಡಂಬಿನ ಸಂಸಾರ ನೇಟಿಲ್ಲ
ಸಂಸಾರ ಸಾಗರ ದೊಳಗ ಧಾಟಲ್ಲ ॥ ೩ ॥

ಸಾಗರ ಮ್ಯಾಲ ಕಾಣಲ್ಲ
ಗಾಗರದಂಗ ಅದು ಮ್ಯಾಲಲ್ಲ
ಮಗರ – ಮಚ್ಚಗಳೂ ಸಾದಲ್ಲ
ಸಂಸಾರ ಸಾಗರದಾಗ ಬಿದ್ದರ ತಿನದೆ ಬಿಡಲ್ಲ ॥ ೪ ॥

ದೇಶದೊಳಗ ನಮ್ಮ ಕರಡ್ಯಾಳ ಊರಾ
ಈಶ ಗುರುಸಿದ್ಧರಾಮ ಹೇಳಿದ ಸಾರಾ
ಕೂಸನಾಗಿ ತಿಳಕೋ ಸಂಸಾರ ಸಾಗರಾ
ವಾಸಿಯಾಗುತಾದ ಸಂಸಾರದ ಜ್ವರಾ ॥ ೫ ॥

ಸ್ವಯರೂಪ ಕಂಡು ಸುಖಿಯಾಗೋ

ಸ್ವಯರೂಪ ಕಂಡು ಸುಖಿಯಾಗೋ ಮನುಜಾ
ಮಾಯದ ರೂಪಿಗಿ ಮರುಳಾಗದಿರು ॥ ಪ ॥

ಆ ರೂಪ ಈ ರೂಪ ನಿರೂಪ ಕುರೂಪ
ಸುರೂಪ ಸ್ವರೂಪ ಇಲ್ಲ ಅಪರೂಪ
ಅನುತಾಪ ಪ್ರತಾಪ ಪರಿತಾಪ
ಏನೇ ಆದರೂ ಇದು ಪಾಪದ ಕೂಪ ॥ ೧ ॥

ತಾಪ–ಕೋಪ–ಪಾಪ, ಧಾಪ
ನೆಪ, ಸಾಫ ಇಲ್ಲ ಝೂಪ
ಯಪ್ಪಾ ಕಾಣುತಾದ ಬೇರೊಂದು ರೂಪ
ನೆಪ್ಪಿಟ್ಟು ನೋಡಿಕೊ ಅದರಾಗ ನಿನ್ನ ಸ್ವರೂಪ ॥ ೨ ॥

ಹಗ್ಗ ಹಾವಲ್ಲ: ಕಂಬ ಕಳ್ಳಲ್ಲ
ಮರಿಚಿಕೆ ನೀರಲ್ಲ: ಗುರುಸಿದ್ಧಬಲ್ಲ
ಮನುಷ್ಯ ಮಾಯವಲ್ಲ: ತಿಳಿಯಲಿಲ್ಲ
ಸ್ವಯರೂಪು ಕಂಡು ಸುಖಿಯಾಗಬಲ್ಲ ॥ ೩ ॥

(ಈ ವಿವರಗಳನ್ನು ಕವಿಗಳ ಮಗ ಶರಣಪ್ಪ ಬಿರಾದಾರ ಅವರು ನೀಡಿದ್ದಾರೆ).



* ಸಂಗಪ್ಪ ಬಿರಾದಾರ ಅವರ ಮನೆ (ಕರಡ್ಯಾಳ).




* ಸಂಗಪ್ಪ ಬಿರಾದಾರ ಅವರ ಛಾಯಾಚಿತ್ರ




* ಸಂಗಪ್ಪ ಬಿರಾದಾರ
ಅವರ ಪತ್ನಿ ವೀರಮ್ಮನವರ
ಛಾಯಾಚಿತ್ರ.



* ಸಂಗಪ್ಪ
ಬಿರಾದಾರ
ಅವರ
ಮಗ ಶರಣಪ್ಪ
ಸೊಸೆ
ಮಂಗಲಾ



* ಸಂಗಪ್ಪ
ಬಿರಾದಾರ ಅವರ
ಆರಾಧ್ಯ ದೇವರು
ಬಸವಣ್ಣ ದೇವಾಲಯ
(ಕರಡ್ಯಾಳ).





* ಸಂಗಪ್ಪ
ಬಿರಾದಾರ ಅವರ
ಆರಾಧ್ಯ ದೇವರು
ಮಹಾದೇವ ದೇವಾಲಯ
(ಕರಡ್ಯಾಳ).



* ಸಂಗಪ್ಪ ಬಿರಾದಾರ ಅವರ ಮನೆಯ ದೇವರು ಶ್ರೀ ಹೊನ್ನಿಕೇರಿ ಸಿದ್ಧೇಶ್ವರ

* ಸಿದ್ಧೇಶ್ವರರ ದರ್ಶನ ಪ್ರತಿಮೆ





* ಹೊನ್ನಿಕೇರಿ ಸಿದ್ಧೇಶ್ವರ ದೇವಾಲಯ ಪರಿಸರದ ನಿಸರ್ಗ ಸೌಂದರ್ಯ.

೧೩. ಭೀಮಾಶಂಕರ ವಳಸಂಗೆ (ಕ್ರಿ.ಶ.ಸು. ೧೯೨೩)

ಎಂಬತ್ತೇಳು ವರ್ಷಗಳ ವಯಸ್ಸಿನಲ್ಲಿರುವ ಭೀಮಾಶಂಕರ ವಳಸಂಗೆ ಹಾಲುಮತಕ್ಕೆ ಸೇರಿದ ತತ್ತ್ವಪದಕಾರರಾಗಿದ್ದಾರೆ. ಬೀದರ ಜಿಲ್ಲೆಯ ಭಾಲ್ಕಿ ತಾಲ್ಲೂಕಿನಲ್ಲಿ ಬರುವ ದಾಡಗಿ ಗ್ರಾಮವು ಭೀಮಾಶಂಕರ ಅವರ ಸ್ವಗ್ರಾಮವಾಗಿದೆ.

'ವಳಸಂಗೆ' ಎಂಬುದು ಅವರ ಮನೆತನದ ಹೆಸರು. ಹಿಂದೆ ಈ ಮನೆತನದ ಪೂರ್ವಜರು ವಳಸಂಗ (ಮಹಾರಾಷ್ಟ್ರ) ಗ್ರಾಮದಿಂದ ಬಂದವರಾಗಿರಬೇಕು. ಆದರೆ ಇದರ ಬಗೆಗೆ ಖಚಿತವಾದ ಮಾಹಿತಿ ಯಾರಲ್ಲೂ ಇಲ್ಲ.

ವಳಸಂಗೆ ಮನೆತನದ ಮಲ್ಲಪ್ಪ ಕೃಷಿಕ ಮತ್ತು ಡೊಳ್ಳಿನ ಹಾಡುಗಳ ಅತ್ಯುತ್ತಮ ಹಾಡುಗಾರನಾಗಿದ್ದನು. ಮೈಲಾರ ಮಲ್ಲಯ್ಯನ ಜಾತ್ರೆಗೆ ಪ್ರತಿ ವರುಷ ಹೋಗುವ ಹರಕೆ ಹೊಂದಿದ್ದ ಮಲ್ಲಪ್ಪ ಜಾತ್ರೆಯಲ್ಲಿ ಡೊಳ್ಳು ಬಾರಿಸಿ; ಡೊಳ್ಳಿನ ಹಾಡುಗಳನ್ನು ಹಾಡಿ ಮಲ್ಲಯ್ಯನಿಗೆ ತನ್ನ ಭಕ್ತಿಯ ಸೇವೆಯನ್ನು ಸಲ್ಲಿಸುತ್ತಿದ್ದನು.ಮಲ್ಲಪ್ಪನ ಹೆಂಡತಿ ದ್ರೌಪತಬಾಯಿ. ಅವಳು ದೈವೀ ಭಕ್ತಳೇ ಆಗಿದ್ದಳು. ಈ ದಂಪತಿಗಳ ಮಡಿಲಿನಿಂದ ಕ್ರಿ.ಶ. ೧೯೨೩ರ ವರ್ಷದಲ್ಲಿ ಭೀಮಾಶಂಕರ ಅವರು ಹುಟ್ಟಿ ಬಂದರು. ಮಲ್ಲಪ್ಪನವರಿಗೆ ಒಟ್ಟು ಐದು ಜನ ಮಕ್ಕಳು. ಅವರಲ್ಲಿ ಕೃಷ್ಣಪ್ಪ, ದಾನಪ್ಪ, ಭೀಮಾಶಂಕರ ಎಂಬುವರು ಮೂವರು ಗಂಡು, ವಿಠಾಬಾಯಿ, ಮಹಾದೇವಿ ಇಬ್ಬರು ಹೆಣ್ಣು ಮಕ್ಕಳು.

ಭೀಮಾಶಂಕರ ಕಲಿತದ್ದು ಮರಾಠಿ ಶಾಲೆಯಲ್ಲಿ. ಮರಾಠಿ-ಮೋಡಿ ಅಕ್ಷರಗಳನ್ನು ತೀಡಿದರು. ಭಾಷೆಯ ಪರಿಚಯ ಮಾಡಿಕೊಂಡರು. ಸ್ವಾನುಭಾವದಿಂದ ಕನ್ನಡದ ಪರಿಸರ ಮೈಗೂಡಿಸಿಕೊಂಡರು. ಭೀಮಾಶಂಕರ ಓದಿದ್ದು ನಾಲ್ಕನೆಯ ತರಗತಿಯವರೆಗೆ.

ಭೀಮಾಶಂಕರ ಅವರ ಹೆಂಡತಿ ರತ್ನಮ್ಮನವರು; ಸುಶಿಕ್ಷಿತರು. ಅವರು ಮೂರನೆಯ ತರಗತಿಯ ವರೆಗೆ ಮೋಡಿ ಶಿಕ್ಷಣ ಪಡೆದುಕೊಂಡಿರುವುದು ವಿಶೇಷದ ಸಂಗತಿ. ಈ ದಂಪತಿಗಳಿಗೆ ಒಬ್ಬ ಮಗ ಮತ್ತು ಇಬ್ಬರು ಹೆಣ್ಣುಮಕ್ಕಳಿದ್ದಾರೆ. ಮಗ ದಶರಥ ಬಿ.ಎ. ಪದವೀಧರ.

ನಿರ್ಮಲಾ; ಚಂದ್ರಕಲಾ ಅವರು ಸುಶಿಕ್ಷಿತರು. ಈಗ ದಶರಥ ಅವರ ವಯಸ್ಸು ಐವತ್ತೆಂಟು. ಭೀಮಾಶಂಕರ ಅವರು ಮೊದಲಿಗೆ ಜೀವನ ನಿರ್ವಹಣೆಗಾಗಿ ಅವಲಂಬಿಸಿದ್ದು ಕೃಷಿಯನ್ನೆ.

ಭೀಮಾಶಂಕರ ವಳಸಂಗೆ ಅವರು ಯಾನಾಗುಂದಿ ಮಾಣಿಕಮ್ಮನವರಲ್ಲಿ ಭಕ್ತಿವುಳ್ಳವರಾಗಿದ್ದು; ಮೈಲಾರ ಮಲ್ಲಯ್ಯನ ಪರಮ ಭಕ್ತರೂ ಆಗಿದ್ದಾರೆ. ಅವರಿಗೆ ಯೋಗ ಸಾಧನೆಯ ಹವ್ಯಾಸವಿದ್ದಿತು. ಬೀದರ ಜಿಲ್ಲೆ ಬಸವಕಲ್ಯಾಣ ತಾಲ್ಲೂಕಿನ ಮುಚಳಂಬಿ ಗ್ರಾಮದ ನಾಗಭೂಷಣ ಶಿವಯೋಗಿ ಅವರ ಯೋಗದ ಗುರುವಾಗಿದ್ದಾರೆ. ಭೀಮಾಶಂಕರ ಅವರು ಹಲವು ಪ್ರಕಾರದ ಯೋಗಗಳಲ್ಲಿ ಪಳಗಿದವರಾಗಿದ್ದಾರೆ. ದಿನ ನಿತ್ಯ ಬೆಳಿಗ್ಗೆ ಎದ್ದು ಹಲವಾರು ಆಸನಗಳನ್ನು ಹಾಕುತ್ತಾರೆ.

ಭೀಮಾಶಂಕರ ಒಳ್ಳೆಯ ಕುಸ್ತಿಪಟುಗಳೂ ಹೌದು. ಅವರು ತಾರುಣ್ಯದಲ್ಲಿ ಪೈಲ್ವಾನನಿಗೆ ಬೇಕಾದ ದೇಹಸಂಪತ್ತನ್ನು ಹೊಂದಲು ಸಾಕಷ್ಟು ಕಸರತ್ತು ಮಾಡಿದರು. ಹಲವಾರು ಕುಸ್ತಿ ಆಖಾಡಾಗಳಲ್ಲಿ ಅವರು ಭಾಗವಹಿಸಿದ್ದುಂಟು.

ಯೋಗಗುರು ನಾಗಭೂಷಣ ಶಿವಯೋಗಿಗಳ ಸತ್ಸಂಗದಲ್ಲಿ ಭೀಮಾಶಂಕರ ಅವರು ಕೆಲವು ಆಯುರ್ವೇದಿಕ ಔಷಧಿಗಳ ಪರಿಚಯ ಮಾಡಿಕೊಂಡರು. ಹೀಗಾಗಿ ಅವರಿಗೆ ಜನರು "ಆಯುರ್ವೇದಿಕ ಡಾಕ್ಟರ್" ಎಂತಲೂ ಕರೆವುದಕ್ಕೆ ಆರಂಭಿಸಿದರು. ಅರೆತಲೆನೋವು, ಬಿಳಿಸೆರಗು, ಕಾಮಣಿ, ಕೈಕಾಲು ಹರಿತ, ಶೀತವಾತ ಇಂತಹ ಹಲವಾರು ರೋಗಗಳಿಗೆ ಅವರು ಔಷಧ ಕೊಡುತ್ತಾರೆ. ಭೀಮಾಶಂಕರ ಅವರಿಂದ ಔಷಧ ಪಡೆದ ಹಲವಾರು ಜನರು ಗುಣಮುಖರಾಗಿದ್ದಾರೆ.

ಭೀಮಾಶಂಕರ ಅವರಿಗೆ ಇಸ್ಪೇಟು ಆಟ ಆಡುವ ಚಟವು ಅಂಟಿಕೊಂಡಿತ್ತು. ಅದನ್ನು ಅವರು ಹಲವಾರು ವರ್ಷಗಳ ಕಾಲ ಜೀವಂತವಾಗಿಟ್ಟುಕೊಂಡೇ ಬಂದರು. ಅದರಿಂದ ಬಂದ ಹಣದಲ್ಲಿ ಅವರು ಆಸ್ತಿಯನ್ನು ಖರೀದಿಸಿದರಂತೆ. ಈಗ ಇಸ್ಪೇಟು ಆಡುವುದು ಬಿಟ್ಟಿದ್ದಾರೆ. ತಮಗೆ ಆಸ್ತಿ ದೊರಕಿಸಿ ಕೊಟ್ಟ ಇಸ್ಪೇಟ ಎಲೆಗಳನ್ನು ಅವರು ಪೂಜ್ಯದೇವತೆಯೆಂದು ತಿಳಿಯುತ್ತಾರೆ. ದೀಪಾವಳಿ ಹಬ್ಬದಂದು ಅವುಗಳಿಗೆ ಪೂಜೆ ಸಲ್ಲಿಸುತ್ತಾರೆ.

ಭೀಮಾಶಂಕರ ಅವರ ಅತ್ಯುತ್ತಮ ಹವ್ಯಾಸ ಭಜನೆ ಮಾಡುವುದು ಮತ್ತು ಹಾಡುವುದು. ಅವರು ತಮ್ಮ ಎಂಟನೆಯ ವಯಸ್ಸಿನಿಂದ ಈ ಚಟವನ್ನು ಬೆಳೆಯಿಸಿಕೊಂಡು ಬಂದಿದ್ದಾರೆ. ಏಕತಾರಿ ನುಡಿಸುವುದು, ತಾಳ ಬಾರಿಸುವುದು ಇವರ ಇತರ ಆಸಕ್ತಿಗಳಾಗಿವೆ. ಇವರು ಮೊದಲು ಬೇರೆ ತತ್ತ್ವಪದಕಾರರ ಹಾಡುಗಳನ್ನು ಭಜನೆಯಲ್ಲಿ ಹಾಡುತ್ತಿದ್ದರು. ನಂತರ ಭೀಮಾಶಂಕರ ಸ್ವತಃ ಹಾಡು ರಚಿಸುವುದಕ್ಕೆ ಆರಂಭಿಸಿದರು. ಅವರು ಹಲವಾರು ತತ್ತ್ವಪದಗಳು ಮತ್ತು ಕೋಲಾಟದ ಪದಗಳನ್ನು ರಚಿಸಿದ್ದಾರೆ.

ಭೀಮಾಶಂಕರ ಅವರ ಹಾಡುಗಳ ಮೇಲೆ ವೀರಶೈವ ಸಂಸ್ಕೃತಿಯ ದಟ್ಟ

ಪ್ರಭಾವವಿದೆ. ಅದಕ್ಕೆ ಕಾರಣ ಅವರು ಬದುಕುತ್ತಿರುವ ಜೀವನದ ಪದ್ಧತಿ. ಭೀಮಾಶಂಕರ ಅವರು ಕಪ್ಪಡಿಸಂಗಮದ ಸಿದ್ಧಯ್ಯ ಸ್ವಾಮಿಗಳಿಂದ ಇಷ್ಟಲಿಂಗ ಧಾರಣ ಮಾಡಿಸಿಕೊಂಡರು. ಅಂದಿನಿಂದ ಅವರು ದಿನನಿತ್ಯ ಸ್ನಾನ ಮಾಡಿಕೊಂಡು ಇಷ್ಟಲಿಂಗಪೂಜೆ ಮಾಡತೊಡಗಿದರು. ಸಿದ್ಧಯ್ಯ ಸ್ವಾಮಿಗಳು ಭೀಮಾಶಂಕರ ಅವರಿಗೆ ಧರ್ಮ ಗುರುಗಳಾದರು. ಭೀಮಾಶಂಕರ ಅವರು ತಾವು ರಚಿಸಿದ ಪದ್ಯಗಳಿಗೆ ತಮ್ಮ ಹೆಸರನ್ನೆ ಅಂಕಿತವಾಗಿಟ್ಟು ಕೊಂಡಿದ್ದಾರೆ. ಇಲ್ಲಿ ಅವರ ಎರಡು ಪದ್ಯಗಳನ್ನು ಕೊಡಲಾಗಿದೆ:

ಎಂಥ ಕಂಬಳಿ ಹೊಚ್ಚಗೊಂಡ ಬಂದೆ

ಎಂಥ ಕಂಬಳಿ ಹೊಚ್ಚಗೊಂಡು ಬಂದೇನೆ ಯವ್ವಾ
ಎಂಥ ಕಂಬಳಿ ಹೊಚ್ಚಗೊಂಡ ಬಂದೇನೆ ॥ ಪ ॥

ಕಂತು ಮಲ್ಲಯ್ಯನ ಧ್ಯಾನ ಮಾಡು
ಅದರೊಳಗಿಂದ ಹಣಿಕಿ ಹಾಕಿ ನೋಡು
ಧೂಳ–ಧುಮಸ ಜಾಡಿಸಿ ನೋಡು
ಎಂಥ ಕಂಬಳಿ ಹೊಚ್ಚಗೊಂಡು ಬಂದೇನೆ ॥ ೧ ॥

ಕೆಟ್ಟ ಉಣ್ಣಿ ಕುರಿಯ ಕೂದಲ
ದಟ್ಟವಾಗಿ ಹಾಕಿ ಹೆಣೆದ
ದಪ್ಪ ಕಂಬಳಿ ಮಡಿಚಿ ನಾನು
ತಲೆಯ ಮ್ಯಾಲ ಹೊಚ್ಚಗೊಂಡು ಬಂದೇನೆ ॥ ೨ ।

ಜಿಡ್ಡ ಜಿಡ್ಡ ನಾರತಾದ
ನಡತಾದ ಒಂದ ಸವನ
ಹಿಡಿದ ನೀರ ಬಿಡುವಂಗಿಲ್ಲ
ಪಡಕೊಂಡೆ ಬಂದಾಂಗಾಯ್ತು ॥ ೩ ॥

ಝಾಡಿಸೊಗಿರಿ ಕಂಬಳಿ ದೂರ
ಓಡಿಸಿ ಬಿಡಿರಿ ಹೇನ–ತೊಗಣಿಯ ಘೋರ
ಕಡಿತಾವ ಬಿಡದ ಜೋರಾ
ಅಡರಿ ಹೋಗ್ಯಾದ ಮೈಯಲ್ಲ ಪೂರಾ ॥ ೪ ॥

ಕೆಟ್ಟ ಕಪ್ಪಕರಿಯ ಕಂಬಳಿ
ಕೊಟ್ಟನಪ್ಪ ಯಾವನೊ ಉಂಬಳಿ
ಬಿಟ್ಟು ಆಗು ಬಯಲಿಗಿ ಬಯಲ
ಹೊಟ್ಟಿನ ಕಂಬಳಿ ಕಳಿತಾದ ಕಾಲ ॥ ೫ ॥

ದೇಶಕ ಅಧಿಕವಾದ ದಾಡಗಿ ಗ್ರಾಮದಲ್ಲಿ
ಕೂಸು ಭೀಮಾಶಂಕರ ಕವಿ ಹಾನ ಅಲ್ಲಿ
ಏಸು ದಿನಾ ಕಂಬಳ್ಯಾಗಿರುತೀರಿ ಅಂತಾನಲ್ಲ
ಲೇಸಾಗಿ ಹೊರಗ ಬರ್ರೀ ಅಂತಾ ಕರಿತಾನಲ್ಲ ॥ ೬ ॥

ಕುಲಗೇಡಿ ನಾಯಿ

ಕುಲಗೇಡಿ ನಾಯಿದು ಭಾಳ ಬೆರಿಕಿ
ನೆಲದ ಮ್ಯಾಲ ನಿಲ್ಲೋದಿಲ್ಲ ಎಂತ ಹಡಕಿ ॥ ಪ ॥

ಕಂಡ ಕಂಡವರೀಗಿ ಬೊಗಳತಾದಲ್ಲ
ಪಿಂಡಾಂಡದ ಗುರುತು ಅದಕೆ ತಿಳಿದಿಲ್ಲ
ಮಂಡಲದ ಅಂತ ಅದಕ ಹತ್ತಿಲ್ಲ
ಕೆಂಡದೊಳಗೆ ಬಿದ್ದು ಮೈಸುಟ್ಟಿತ್ತಲ್ಲ ॥ ೧ ॥


ಒಣಗಿದ ಎಲುಬ ರುಚಿ ಅಂತ ಕಡಿತಾದಲ್ಲ
ತನ್ನ ಜೊಲ್ಲಾ ತಾನೆ ರುಚಿ ಅಂತ ನೆಕ್ಕತಾದಲ್ಲ
ದವಡಿಯ ರಕುತದ ಸವಿಯ ಹತ್ಯಾದಲ್ಲ
ಹುಚ್ಚಗೊಟ್ಟಿ ನಾಯಿ ಅದಕೆ ಗೋತ್ತೆ ಇಲ್ಲ ॥ ೨ ॥

ಹೊಲ್ಲವರ ಗೆಳತನ ಮಾಡತಾದಲ್ಲ
ಹೇಲ ತಿನ್ನುವುದಕ್ಕೆ ಹಾರಿ ಹೊರಗ ಹೋಗತಾದಲ್ಲ
ಬಲ್ಲವರ ಮಾತು ಅದು ಕೇಳಾದಿಲ್ಲ
ಖಿಲ್ಲ ತನದ ಗುಣಗಳು ಅದು ಬಿಡುವದಿಲ್ಲ ॥ ೩ ॥

ಕಳ್ಳ ಬಂದರ ಬಾಲ ಆಡಿಸಿ ನೆಕ್ಕುವದಲ್ಲ
ಕಳ್ಳನ ಸಂಗತಿ ಅದಕೆ ಬಿಡುವುದಿಲ್ಲ
ಒಳ್ಳೆಯವರ ಕಾಲ ಹಿಡಿದು ಕಚ್ಚುವದಲ್ಲ
ಕುಳ್ಳ ಕ್ವಾಡಗ ನಾಯಿ ಇದು ಭಾಳ ಭಂಡಾದಲ್ಲ ॥ ೪ ॥

ದೇಶದೊಳಗ ನಮ್ಮ ಲೇಸುಳ್ಳ ದಾಡಗಿ
ವಾಸಮಾಡಲಕ್ಕ ತಕುದಾಯ್ತು ನಾಯೀಗಿ
ಭೀಮಾಶಂಕರ ಬಂದು ಹೊಡದಾನ ನಾಯೀಗಿ
ಕಾಮವಾಸನಿ ಬಿಟ್ಟು ಹೋಯ್ತು ಆ ಒಂದು ಗಳಿಗೀಗಿ ॥ ೫ ॥

(ಈ ವಿವರಗಳನ್ನು ಸ್ವತಃ ಕವಿಗಳೇ ನೀಡಿದ್ದಾರೆ.)




* ಭೀಮಾಶಂಕರ ವಳಸಂಗೆ ಅವರ ಮನೆ (ದಾಡಗಿ)



* ಭೀಮಾಶಂಕರ
ವಳಸಂಗೆ



* ಭೀಮಾಶಂಕರವಳಸಂಗೆ ಅವರ
ಪತ್ನಿಯ ಛಾಯಾಚಿತ್ರ (ಪತ್ನಿ: ರತ್ನಮ್ಮ)



* ಭೀಮಾಶಂಕರ ಅವರ ಮಗ
ದಶರಥ

೧೪.ಹಣಮಂತ ಬಿರಾದಾರ (ಕ್ರಿ.ಶ.ಸು. ೧೯೨೪)

ಬೀದರ ಜಿಲ್ಲೆಯ ಭಾಲ್ಕಿ ತಾಲ್ಲೂಕಿನ ಕೋಸಮ್ ಗ್ರಾಮದಲ್ಲಿ ಇಂದು ವಾಸಿಸುತ್ತಿರುವ ಸು. ಎಂಬತ್ತೈದು ವರ್ಷಗಳ ವಯಸ್ಸಿನ ಹಣಮಂತ ಬಿರಾದಾರ ಅವರು ಒಬ್ಬ ಆಧ್ಯಾತ್ಮ ಸಾಧಕರಾಗಿ ಬದುಕುತ್ತಿದ್ದಾರೆ. ಅವರು ಮೊದಲು ವಾಸಿಸುತ್ತಿದ್ದ ಮನೆಯನ್ನು ಬಿಟ್ಟು ಒಂದು ಚಿಕ್ಕ ಕೋಣೆಯಲ್ಲಿ ಏಕಾಂತದ ಬದುಕು ಬದುಕುತ್ತಿದ್ದಾರೆ. ಅವರಿಗೆ ಸಂಸಾರ ಜಂಜಾಟ ಸಾಕಾಗಿದೆ. ಸಂಸಾರವು ಬೇಕಾದವರಿಗೆ ಹಣಮಂತ ಬಿರಾದಾರ ಅವರ ತಾತ್ವಿಕ ಬದಕು ಬೇಡವಾಗಿದೆ. ಹೀಗಾಗಿ ಅವರು ಇಂದು ಏಕಾಂತದಲ್ಲಿ ಲೋಕಾಂತದ ಬವಣೆಗಳನ್ನು ಮರೆಯುತ್ತ ಬದುಕುತ್ತಲಿದ್ದಾರೆ. ನಾವು ಹೋದಾಗ ಅವರು ಇಷ್ಟಲಿಂಗಪೂಜೆಯಲ್ಲಿ ನಿರತರಾಗಿದ್ದರು. ಮೈ ಮೇಲೆ ವಿಭೂತಿ ಧಾರಣ ಮಾಡಿ ಕೊರಳೊಳಗೆ ರುದ್ರಾಕ್ಷಿ ಹಾಕಿಕೊಂಡು ಕರದಲ್ಲಿ ಇಷ್ಟಲಿಂಗ ಹಿಡಿದು ಕುಳಿತ ಅವರ ಭಂಗಿ 'ಶಿವಯೋಗಿ'ಯೊಬ್ಬನ ನಿಲುವಿನಂತೆ ನಮಗೆ ಕಂಡಿತು.

ಕೋಸಮ್ ಗ್ರಾಮದ ಬಿರಾದಾರ ಮನೆತನವು ಆರ್ಥಿಕ ಸ್ಥಿತಿವಂತಿಕೆಯಿಂದ ಕೂಡಿದ ಮನೆತನ. ಒಳ್ಳೆಯ ಕೃಷಿಯ ಉತ್ಪನ್ನವಿದೆ. ಹೊಲ-ತೋಟಗಳಿವೆ. ಈ ಮನೆತನದ ಮಾದಪ್ಪನವರು ಹಣಮಂತಪ್ಪನವರ ತಂದೆ. ತಾಯಿ ಗಂಗಮ್ಮನವರು. ಈ ದಂಪತಿಗಳಿಗೆ ಹಣಮಂತ ಅವರು ಮಗನಾಗಿ ಜನಿಸಿದರು. ಅವರ ಜನ್ಮದ ವರ್ಷ ಕ್ರಿ.ಶ.ಸು. ೧೯೨೪.

ಬಿರಾದಾರ ಅವರು ತಮ್ಮ ಕಾಲದಲ್ಲಿ ಮೋಡಿ ಕಲಿಸುತ್ತಿದ್ದ ಶಾಲೆಗೆ ಹೋದರು, ಮೋಡಿ-ಮರಾಠಿಗಳನ್ನು ಕಲಿತು ಕೊಂಡರು. ಸ್ವಪ್ರಯತ್ನದಿಂದ ಕನ್ನಡವನ್ನು ಜೀರ್ಣಿಸಿಕೊಂಡರು. ಬಾಲ್ಯದಿಂದಲೂ ಆಧ್ಯಾತ್ಮದ ಹಂಬಲವನ್ನು ಹಚ್ಚಿಕೊಂಡೇ ಬೆಳೆದರು. ತಾರುಣ್ಯಕ್ಕೆ ಬರುತ್ತಿದ್ದಂತೆ ಮದುವೆ ಮಾಡಲಾಯಿತು. ಅವರ ಹೆಂಡತಿ ಮಹಾದೇವಿ. ಹಣಮಂತ ಬಿರಾದಾರ ದಂಪತಿಗಳಿಗೆ ಒಟ್ಟು ಐದು ಜನ ಮಕ್ಕಳು. ನಾಲ್ಕು ಹೆಣ್ಣು, ಒಬ್ಬ ಮಗ. ಹಣಮಂತ ಬಿರಾದಾರ ಅವರು ಮನೆತನದ ಉದ್ಯೋಗವಾಗಿದ್ದ ಕೃಷಿ ಕಾಯಕವನ್ನು ಉತ್ತಮಗೊಳಿಸಿದರು. ಹೊಲ-ತೋಟಗಳಿಗೆ ಹೋಗಿ ಆಳುಗಳ ಮೇಲೆ ಮೇಲ್ವಿಚಾರಣೆ ಮಾಡುತ್ತ ಕೃಷಿಯನ್ನು ಅಭಿವೃದ್ಧಿ ಪಡಿಸಿದರು. ಸ್ವತ: ಸಮಯ ಬಂದಾಗ ತಾವೂ ಕೃಷಿ ಕೆಲಸಗಳನ್ನು ಮಾಡುತ್ತಿದ್ದರು. ಈಗಲೂ

ಹೊಲ-ಗದ್ದೆಗಳಿಗೆ ಹೋಗುತ್ತಾರೆ. ಶಾಂತರಾಗಿ ನಿಸರ್ಗದ ಮಡಿಲಿನಲ್ಲಿ ಕುಳಿತು ಕೊಳ್ಳುತ್ತಾರೆ. ಹಸಿರನ್ನು ನೋಡುತ್ತಾರೆ. ಹಳೆಯ ನೆನಪುಗಳನ್ನು ಸ್ಮರಿಸುತ್ತಾ, ಮುಂದಿನ ದಿನಗಳನ್ನು ಎದುರು ನೋಡುತ್ತಾರೆ. ಬಿರಾದಾರ ಅವರ ಮನೆತನದ ಆರಾಧ್ಯ ದೇವರು ಹೊನ್ನಿಕೇರಿ ಸಿದ್ಧೇಶ್ವರರು. ಆರಾಧ್ಯದೇವರಲ್ಲಿ ಬಿರಾದಾರ ಅವರಿಗೆ ಅನುಪಮ ಭಕ್ತಿಯಿದೆ.

ಹಣಮಂತ ಬಿರಾದಾರ ಅವರು ಆಧ್ಯಾತ್ಮದೊಂದಿಗೆ, ಕಲೆಯನ್ನೂ ಅನುಸಂಧಾನ ಮಾಡಿಕೊಂಡು ಬಂದವರು. ಅವರಲ್ಲಿ ಹಾಡುಗಾರಿಕೆಯ ಕಲೆಯಿದೆ; ಭಜನೆಯಲ್ಲಿ ಭಾಗವಹಿಸಿ ಮಧುರವಾಗಿ ಹಾಡುತ್ತಾರೆ. ಸ್ವತ: ಹಾಡುಗಳನ್ನು ಕಟ್ಟುತ್ತಾರೆ. ಕಟ್ಟಿದ ಹಾಡುಗಳನ್ನು ಕೆಲ-ಕೆಲವು ಬರೆದು ಇಡುತ್ತಾರೆ. ಬೇಡಿದವರಿಗೆ ಕೊಡುತ್ತಾರೆ. ಅವರಿಂದ ಹಾಡಿಸಿ ಕೇಳುತ್ತಾರೆ.

ಹಣಮಂತ ಬಿರಾದಾರ ಅವರಿಗೆ ಎಲ್ಲ ರೀತಿಯಿಂದಲೂ ಸಂಸ್ಕಾರ ನೀಡಿದವರು ಬನಹಟ್ಟಿಯ ಶಾಸ್ತ್ರಿಗಳು. ಆದುದರಿಂದ ಬಿರಾದಾರ ಅವರು ಬನಹಟ್ಟಿ ಶಾಸ್ತ್ರಿಗಳನ್ನು ತಮ್ಮ ಗುರುಗಳೆಂದು ನಂಬಿದ್ದಾರೆ. ಬನಹಟ್ಟಿ ಶಾಸ್ತ್ರಿಗಳು ಸಂಗೀತ-ನಾಟಕ ಕಲಿಸುವುದು ಮಾಡುತ್ತಿದ್ದರು. ಅವರು ಸ್ವತ: ಪದ್ಯಗಳನ್ನು ಮಾಡುತ್ತಿದ್ದರು. ಹಣಮಂತ ಬಿರಾದಾರ ಅವರು ಕೆಲವು ಕಾಲ ಬನಹಟ್ಟಿ ಶಾಸ್ತ್ರಿಗಳವರಿಂದ ಸಂಗೀತ-ನಾಟಕದ ಕಲೆಯನ್ನು ಕಲಿತುಕೊಂಡರು. ಜಂಗಮ ಮನೆತನದ ಶಾಸ್ತ್ರಿಗಳು ತತ್ತ್ವಜ್ಞಾನ ಪಾರಂಗತರೂ ಆಗಿದ್ದರು. ಶಿವಯೋಗ ಸಾಧಕರೂ ಆಗಿದ್ದರು.

ಹಣಮಂತ ಬಿರಾದಾರ ಅವರು ಶಾಸ್ತ್ರಿಗಳ ಸನ್ನಿಧಿಯಲ್ಲಿ ತಮ್ಮ ವ್ಯಕ್ತಿತ್ವದ ವಿಕಾಸ ಮಾಡಿಕೊಂಡರು. ಬಿರಾದಾರ ಅವರು ಒಳ್ಳೆಯ ನಾಟಕಕಾರರಾಗಿದ್ದರು. ಅವರು ಹಲವಾರು ನಾಟಕಗಳನ್ನು ಕಲಿಸಿದರು. ಸ್ವತ: ನಟರಾಗಿ ನಾಟಕಗಳಲ್ಲಿ ಅಭಿನಯ ಮಾಡಿದರು. ಇಂದಿಗೂ ಕೋಸಮ್‌ನ ಜನರು ಬಿರಾದಾರರ ನಾಟಕಗಳನ್ನು ಕೊಂಡಾಡುತ್ತಾರೆ.

ಹಣಮಂತ ಬಿರಾದಾರ ಅವರು ಗ್ರಾಮದ ಬಸವನ ಹೆಸರಿನಲ್ಲಿ ತತ್ತ್ವಪದಗಳನ್ನು ಬರೆದಿದ್ದಾರೆ. ಅವರು ತಮ್ಮ ಕಲೆ-ಸಾಹಿತ್ಯದ ಬಗೆಗೆ ಹೇಳುವ ನುಡಿಗಳನ್ನು ಕೇಳಬೇಕು:

"ನನಗೆ ಮೊದಲಿನಿಂದಲೂ ಭಜನೆ-ಆಧ್ಯಾತ್ಮ ಸಾಧನೆಗಳು ಅತ್ಯಂತ ಪ್ರಿಯ ಸಾಧನೆಗಳಾಗಿದ್ದವು. ಹೀಗಾಗಿ ಅವುಗಳನ್ನು ನಾನು ಆಸಕ್ತಿಯಿಂದ ಬೆಳೆಯಿಸಿಕೊಂಡಿದ್ದೇನೆ. ಉಳಿಸಿಕೊಂಡಿದ್ದೇನೆ. ಅದರಲ್ಲೂ ನನಗೆ ಬನಹಟ್ಟಿ ಶಾಸ್ತ್ರಿಗಳು ದೊರಕಿದರು. ಅದು ನನಗೆ ಬಹು ದೊಡ್ಡ ಸಂಪತ್ತೆ ದೊರಕಿದಂತಾಯಿತು. ಅವರು ಶರಣರು; ಬಹು ದೊಡ್ಡ ವಿದ್ವಾಂಸರು, ಪಂಡಿತರು ಆಗಿದ್ದರು. ಅವರು ನನ್ನನ್ನು ತಮ್ಮ ಮಗನಂತೆ

ತಿಳಿದುಕೊಂಡು ನನ್ನ ಆಸಕ್ತಿಯ ವಿಷಯಗಳನ್ನು ಕಲಿಸಿಕೊಟ್ಟರು. ಹೀಗಾಗಿ ನನಗೆ ಬಹು ಉಪಯುಕ್ತವಾಯಿತು. ಈಗ ನಾನು ಏಕಾಂಗಿಯಾಗಿದ್ದೇನೆ. ನನಗೆ ಲೋಕದ ಸಂಪರ್ಕವು ಬೇಡವಾಗಿದೆ. ಆದುದರಿಂದ ತಪಸ್ಸು ಮಾಡುತ್ತ ಇಲ್ಲಿ ಕಾಲ ಕಳೆಯುತ್ತಿದ್ದೇನೆ. ಈಗಲೂ ನಾನು ಪದ್ಯಗಳನ್ನು ಬರೆಯುತ್ತೇನೆ. ನಾನು ಹಿಂದೆ ನಾಟಕಗಳನ್ನು ಮಾಡಿಸಿದ್ದೆ. ಅವುಗಳ ಕೆಲವು ಫೋಟೊಗಳು ನನ್ನಲ್ಲಿವೆ. ಅವುಗಳನ್ನು ತೆಗೆದು ಆಗಾಗ ನೋಡುತ್ತಿರುತ್ತೇನೆ".

ಹಣಮಂತ ಬಿರಾದಾರ ಅವರಿಗೆ ಕರ್ನಾಟಕ ಸರಕಾರವು ಕಲಾವಿದರಿಗೆ ಕೊಡುವ ಮಾಶಾಸನ ಮಂಜೂರು ಮಾಡಿದೆ. ಸಾಹಿತ್ಯ ಕೃಷಿಯಲ್ಲಿ ಆನಂದ ಕಾಣುತ್ತ ಬದುಕಿದ್ದಾರೆ. ಅವರು ರಚಿಸಿದ ಎರಡು ಪದ್ಯಗಳನ್ನು ಇಲ್ಲಿ ಕೊಡಲಾಗಿದೆ:

ಹಾಲು ಕುಡಿಬೇಕು

ಹಾಲು ಕುಡಿಬೇಕು ಮಗನೆ
ಹಾಲು ಕುಡಿಬೇಕೋ ॥ ಪಲ್ಲವಿ ॥

ಬಸವಾದಿ ಶರಣರು ನೀಡಿದ
ಶಿವಾನುಭವದ ಹಾಲು
ಒಸೆದು ಕುಡಿಬೇಕೋ ಮಗನೆ
ಬಸೆದು ಕುಡಿಬೇಕೋ ॥ ೧ ॥

ಶಕ್ತಿ ಬರುತಾದೋ ಮಗನೆ
ಯುಕ್ತಿ ಬರತಾದೋ
ಹಾಲು ಕುಡಿದು ಸಾಮ ಮಾಡು
ಕೀಲ ಅರಿದು ನೇಮ ಮಾಡು ॥ ೨ ॥

ಬಸವನು ನೀಡಿದ ಭಕ್ತಿಯ ಹಾಲು
ಅಕ್ಕನು ನೀಡಿದ ಅನುಭವದ ಹಾಲು
ಚೆನ್ನಬಸವ ನೀಡಿದ ಚಿನ್ಮಯದ ಹಾಲು
ಸಿದ್ದನು ನೀಡಿದ ಶುದ್ದದ ಹಾಲು ॥ ೩ ॥

ಜ್ವಾಕ್ಯಾಗಿ ತರಬೇಕೋ ಮಗನೆ
ಮೀಸಲು ಇಡಬೇಕೊ ॥
ಸರಿಯಾಗಿ ಕಾಸಬೇಕೊ ಮಗನೆ
ಭಕ್ತಿಯ ಸಕ್ಕರಿ ಹಾಕೋ ॥ ೪ ॥
ಶಿವಾನುಭವದ ಹಾಲು ಕುಡಿದರ
ಭವದ ಜಾಡ್ಯವು ಹೋಗುವುದು ಹರಿದ
ಅನುಭವದ ಶಕ್ತಿ ಕೈಗೂಡುವುದು ನಿನಗ
ಹಾಲು ಕುಡಿಬೇಕೋ ಮಗನೆ ॥ ೫ ॥

ಧರಿಯೊಳು ಮೆರೆಯುವ ಕೋಸಮ್ ಊರಾ
ಮೆರೆಯುತಿರುವನು ಬಸವಣ್ಣಾದೇವರಾ
ಅರಿಯಬೇಕು ಮಗನಾ ಭಕ್ತಿಯ ಬೇರಾ
ಸವಿಯ ಬೇಕು ತಮ್ಮ ಹಾಲಿನ ಸಾರಾ ॥ ೬ ॥

ಮೃಡಭಕ್ತಿ ಮಾಡು

ಮನದೊಳಗ ಮೃಡ ಭಕ್ತಿ
ಘನವಾಗಿ ಮಾಡೋ ॥ ಪಲ್ಲವಿ ॥

ದೃಢಭಕ್ತಿ ಇಲ್ಲದೆ ಎಡವುತ ಕಾಶೀಗಿ ಹೋದಿ
ಮೃಡ ನಿನ್ನ ಹ್ಯಾಂಗ ಒಲಿತಾನ ಮನವೆ
ಮೃಡನನ್ನು ನಂಬದೆ ಶ್ರೀಶೈಲಕ ನೀ ಹೋದಿ
ಮಲ್ಲಿಕಾರ್ಜುನ ಲಿಂಗ ಒಲಿಯುವನೆ ಮನವೇ? ॥ ೧ ॥

ಭಕ್ತಿಯಿಂದ ನೀನು ಬಿನ್ನಹ ಮಾಡಿದರ
ಅನ್ಯವಿಲ್ಲದೆ ಶಿವನು ಒಲಿವನು ಮನವೆ
ದೃಢ ಭಕ್ತಿ ಮಾಡುತ ಒಡೆಯನ ನೆನೆ ಮನವೆ
ನಿನ್ನೊಳು ಶಿವ ಒಡಗೂಡುತಾನ ॥ ೨ ॥

ಅಳಿಮನದ ಭಕ್ತಿಯಲ್ಲಿ ಗಳಿಸುವುದು ಇಲ್ಲಣ್ಣ

ಕಳೆದುಕೊಂಡಿ ನಿನ್ನ ಜನ್ಮ ವ್ಯರ್ಥ
ಗಾಳೀಗಿ ಇಟ್ಟಿದ ದೀಪಿದು ಸಂಸಾರ
ಶಿವಭಕ್ತಿ ರಕ್ಷಾಣಿ ಅದಕ ಆಸರ ॥ ೩ ॥


ಒಲಿವನು ಪರಶಿವನು
ಗೆಲವ ಕೊಡುವನು ಅವನು
ನಲಿವನು ನಿನ್ನಯ ನಿಜ ಭಕ್ತಿಲಿಂದ
ಸಲೆ ಮೋಕ್ಷಾ ಕೊಡುವನು ಪ್ರೀತಿಯಿಂದ ॥ ೪ ॥

ವಸುಧಿಯೊಳಗ ಇರುವ ಲೇಸಾದ ಕೋಸಮ್
ಬಸವನ ಭಕ್ತೀಗಿ ನೀನಾದಿ ಶಿವೋಹಂ
ಶಿಶುವಾಗಿ ಹೇಳುತೀನಿ ಕೇಳಣ್ಣ ಈ ಮಾತು
ಪಶುವಿನಂತಾಗಲು ಬ್ಯಾಡ ನೀತಿಯನು ಮರೆತು ॥ ೫ ॥


(ಈ ವಿವರಗಳನ್ನು ಸ್ವತ: ಕವಿಗಳೇ ನೀಡಿದ್ದಾರೆ.)




* ಹಣಮಂತ ಬಿರಾದಾರ ಅವರ ಮನೆ (ಕೋಸಮ್).




* ಹಣಮಂತ ಬಿರಾದಾರ



* ಹಣಮಂತ
ಬಿರಾದಾರ ಅವರ
ಪೂರ್ವದ ಮನೆ
(ಕೋಸಮ್)



* ಹಣಮಂತ ಬಿರಾದಾರ ಅವರ ಸಾಧನೆಯ ಸ್ಥಳ.



* ಹಣಮಂತ ಬಿರಾದಾರ ಅವರ ಆರಾಧ್ಯ ದೇವರು ಬಸವಣ್ಣನವರ ಮಂದಿರ (ಕೋಸಮ್)

೧೫. ಕಲ್ಲಪ್ಪ ಮ್ಯಾಲದೊಡ್ಡಿ (ಕ್ರಿ.ಶ.ಸು. ೧೯೨೫)

ಬೀದರ ಜಿಲ್ಲೆಯ ಭಾಲ್ಕಿ ತಾಲ್ಲೂಕಿನಲ್ಲಿ ಬರುವ ಗ್ರಾಮ ಕೋಸಮ್. ಇದರ ಹೆಸರು ಮರಾಠಿ ಪರವಾದದು. ಇದೊಂದು ಚಿಕ್ಕ ಹಳ್ಳಿ, ಇಲ್ಲಿ ಮರಾಠಿ ಮಾತನಾಡುವ ಕನ್ನಡಿಗರು ಬಹಳ ಜನರಿದ್ದಾರೆ. ಇಂಥವರ ನಡುವೆ ದಲಿತ (ಮಾದರ) ಜನಾಂಗದಲ್ಲಿ ಜನಿಸಿದ ಕಲ್ಲಪ್ಪ ಮ್ಯಾಲದೊಡ್ಡಿ ಅವರು ಕನ್ನಡವನ್ನು ಉಸಿರಾಡುತ್ತ, ಕನ್ನಡದಲ್ಲಿ ಹಾಡು ಕಟ್ಟಿ ಹಾಡುತ್ತಿದ್ದಾರೆ. ಈಗ ಕಲ್ಲಪ್ಪನವರಿಗೆ ಸು. ಎಪ್ಪತ್ತೈದು ವರ್ಷಗಳ ವಯಸ್ಸು.

ಕಲ್ಲಪ್ಪನವರ ತಂದೆ ಹಣಮಂತ ಮ್ಯಾಲದೊಡ್ಡಿ ಅವರು ಆಧ್ಯಾತ್ಮ ಜೀವಿಗಳಾಗಿದ್ದರು. ಶರಣರ ಸತ್ಸಂಗವೆಂದರೆ ಅವರಿಗೆ ಪಂಚಪ್ರಾಣವಾಗಿತ್ತು. ಊರಿಗೆ ಯಾರೇ ಸಾಧು-ಸಂತರು ಬಂದಾಗ ಅವರಲ್ಲಿಗೆ ಹೋಗಿ ದರ್ಶನ ಪಡೆದುಕೊಂಡು; ಅವರು ಹೇಳುತ್ತಿದ್ದ ಅನುಭಾವದ ನುಡಿಗಳನ್ನು ಮನಗೊಂಡು ಬರುತ್ತಿದ್ದರು.

ಬಸವಣ್ಣನವರ ಅನುಯಾಯಿಯಂತೆ ಅವರು ಇದ್ದರು. ಹಣೆಯ ಮೇಲೆ ವಿಭೂತಿ ಧರಿಸುತ್ತಿದ್ದರು. ಕೊರಳಲ್ಲಿ ಲಿಂಗ ಹಾಕುತ್ತಿದ್ದರು. ಹೆಂಡತಿ ಶಿವಬಾಯಿ, ಪತಿಯ ಆಚಾರದಂತೆ ನಡೆದುಕೊಳ್ಳುತ್ತಿದ್ದ ಗೃಹಿಣಿ. ಹಣಮಂತ ಅವರು ಬದುಕಿನ ನಿರ್ವಹಣೆಗಾಗಿ ಕೃಷಿ ಕಾಯಕ ಮಾಡುತ್ತಿದ್ದರು. ಬೇರೆಯವರ ಹೊಲದಲ್ಲಿ ಏನಾದರೂ ಕೃಷಿಯ ಕೆಲಸಗಳಿದ್ದರೆ ಹೋಗಿ ಮಾಡುತ್ತಿದ್ದರು. ಅವರು ಎಂದೂ ಸೋಮಾರಿಗಳಾಗಿ ಕೈ ಕಟ್ಟಿ ಕುಳಿತವರಲ್ಲ. ನಿರಂತರವಾದ ದುಡಿಮೆ ಅವರ ಉಸಿರಾಗಿತ್ತು. ಇಂತಹ ತಂದೆಯ ಹೊಟ್ಟೆಯಲ್ಲಿ ಕಲ್ಲಪ್ಪನವರು ಕ್ರಿ.ಶ. ೧೯೨೫ರ ವರ್ಷದಲ್ಲಿ ಹುಟ್ಟಿದರು.

ಕಲ್ಲಪ್ಪನವರು ಶಾಲೆಗೆ ಹೋದವರಲ್ಲ; ಹಲಗೆ-ಬಳಪ ಹಿಡಿದವರಲ್ಲ. ಬರಹದ ಪುಸ್ತಕಗಳು ಓದುವುದಕ್ಕೆ ಬರುವುದಿಲ್ಲ. ನಿರಕ್ಷರಿಗಳಾದರೂ ಸಂಸ್ಕಾರವುಳ್ಳ ಮನದವರಾಗಿದ್ದಾರೆ. ಸ್ವಾನುಭವದ ಸಿದ್ಧಿಯಿಂದ ಆಧ್ಯಾತ್ಮ ಜ್ಞಾನವನ್ನು ಹೊಂದಿದವರಾಗಿದ್ದಾರೆ. ದೇವರನ್ನು ಅದರಲ್ಲೂ ಬಸವಣ್ಣನವರನ್ನು ಸ್ಮರಿಸದೆ ಅವರು ಯಾವುದೇ ಹೊಸ ಕಾರ್ಯವನ್ನು ಮಾಡುವುದೇ ಇಲ್ಲ. ಶ್ರದ್ಧಾವಂತ ಬಸವ ತತ್ತ್ವಾನುಯಾಯಿಗಳು. ಕಲ್ಲಪ್ಪನವರ ಹೆಂಡತಿ ಬಂಡೆಮ್ಮ. ಕಲ್ಲಪ್ಪನವರ ಐಹಿಕ ಬದುಕು ಅತ್ಯಂತ ಹಿತ-ಮಿತವಾದದ್ದು. ಅವರಿಗೆ ಒಬ್ಬನೆ ಮಗ, ಹೆಸರು ಜಗನ್ನಾಥ. ಈಗ ಅವನ ವಯಸ್ಸು ೪೫ರ ಸುತ್ತಮುತ್ತಲಿದೆ.

ಕಲ್ಲಪ್ಪನವರು ಉತ್ತಮ ಹಾಡುಗಾರರು, ಶಿವಭಜನೆ, ತುಕಾರಾಮ ಭಜನೆ, ಬಸವ ಭಜನೆಗಳನ್ನು ಅವರು ಅತ್ಯಂತ ಸೊಗಸಾಗಿ ಮಾಡುತ್ತಾರೆ. ಅವರದೆ ಒಂದು ಸಮೂಹವಿದೆ. ಬೇರೆ ಬೇರೆ ಸ್ಥಳಗಳಿಂದ ಅವರಿಗೆ ಭಜನೆ ಮಾಡುವುದಕ್ಕಾಗಿ ಕರೆಗಳು ಬರುತ್ತವೆ. ಕರೆಯ ಮೇರೆಗೆ ಕಲ್ಲಪ್ಪನವರು ತಮ್ಮ ಸಹಚರರೊಂದಿಗೆ ಹೋಗಿ ಭಜನೆ ಕಾರ್ಯಕ್ರಮ ನಡೆಸಿ ಕೊಡುತ್ತಾರೆ.

ಕಲ್ಲಪ್ಪನವರು ತಮ್ಮ ಇಪ್ಪತ್ತನೆಯ ವರ್ಷದಿಂದಲೇ ಹಾಡುವುದಕ್ಕೆ ಆರಂಭ ಮಾಡಿದ್ದಾರೆ. ಅವರು ತಮ್ಮ ಹಾಡಿಗೆ ಒದಗಿ ಬಂದ ಪ್ರೇರಣೆಯನ್ನು ಕುರಿತು ಹೀಗೆ ಹೇಳುತ್ತಾರೆ: "ನಮ್ಮ ತಂದೆ ಅವರು ದೈವ ಭಕ್ತರು, ಆದುದರಿಂದ ಅವರು ದೇವರಿಗೆ ಭಕ್ತಿಯ ಸೇವೆ ಮಾಡುವುದಕ್ಕಾಗಿ ಹಾಡುಗಳನ್ನು ಹಾಡುತ್ತಿದ್ದರು. ನನಗೆ ಹಾಡುಗಳನ್ನು ಹಾಡಲು ಹೇಳುತ್ತಿದ್ದರು. ನಾನು ಚಿಕ್ಕವನಿದ್ದಾಗಲೇ ನನ್ನ ತೊದಲು ನುಡಿಯಲ್ಲೆ ಹಾಡುತ್ತಿದ್ದೆ. ವಯಸ್ಸಿಗೆ ಬಂದಾಗ ನನ್ನಲ್ಲಿ ಭಜನೆ ಮಾಡುವ ಆಸಕ್ತಿ ಬೆಳೆಯಿತು. ತಾಳಿನ–ಏಕತಾರಿಯ ಸಪ್ಪಳ ಕೇಳಿಬಂದರೆ ಸಾಕು, ನಾನು ಕೈಯಲ್ಲಿರುವ ಕೆಲಸ ಬಿಟ್ಟು ಭಜನೆ ಮಾಡಲು ಧಾವಿಸಿ ಓಡಿ ಹೋಗುತ್ತಿದ್ದೆನು. ಒಂದು ಸಲ ನಾನು ಹಾಡುವುದನ್ನು ನಮ್ಮ ಊರಿನ ಹುಲೆಪ್ಪ ಮುತ್ತ್ಯಾ ಅವರು ಕೇಳಿದರು. ಬಹಳ ಸಂತೋಷ ಪಟ್ಟರು. ಹಾಡು ಕಲಿಸುವುದಾಗಿ ಹೇಳಿದರು. ನಾನು ಸಮಯ ಸಿಕ್ಕಾಗ ಹುಲೆಪ್ಪ ಮುತ್ತ್ಯಾ ಅವರಲ್ಲಿಗೆ ಹೋಗುತ್ತಿದ್ದೆನು. ನನ್ನಂತೆ ಅಲ್ಲಿ ಹಲವಾರು ಶಿಷ್ಯರು ಬರುತ್ತಿದ್ದರು. ಅವರಿಗೆಲ್ಲ ಕೂಡಿಸಿಕೊಂಡು ಮುತ್ತ್ಯಾ ಅವರು ಹೇಗೆ ಹಾಡಬೇಕೆನ್ನುವುದನ್ನು ಕಲಿಸುತ್ತಿದ್ದರು. ಭಜನೆ ಮಾಡುವ ಪದ್ಧತಿಯನ್ನು ಹೇಳಿಕೊಡುತ್ತಿದ್ದರು. ಸಂಗೀತ ವಾದ್ಯಗಳನ್ನು ನುಡಿಸಲು ಕಲಿಸುತ್ತಿದ್ದರು. ಅವರು ಏಕತಾರಿ ಅತ್ಯಂತ ಮನೋಹರವಾಗಿ ನುಡಿಸುತ್ತಿದ್ದರು. ಅವರು ಏಕತಾರಿ ವಾದ್ಯ ಬಾರಿಸುತ್ತಿದ್ದರೆ ಕುಳಿತವರು ಆ ನಾದದಲ್ಲಿ ಮುಳಗಿ ಮೌನರಾಗಿ ಬಿಡುತ್ತಿದ್ದರು. ಅಂತಹ ಸಾಧು ವ್ಯಕ್ತಿಗಳ ಸಾನ್ನಿಧ್ಯವು ನನಗೆ ದೊರೆತ ಕಾರಣದಿಂದ ನಾನು ಹಾಡುಗಾರ ಆದೆ. ಒಬ್ಬ ತತ್ತ್ವಪದಕಾರನೂ ಆದೆನು".

ಕಲ್ಲಪ್ಪನವರು ಪ್ರತಿವರುಷ ತಮ್ಮ ಕೇರಿಯಲ್ಲಿ ಬಸವ ಜಯಂತಿ ಆಚರಿಸುತ್ತಾರೆ. ಬಸವಣ್ಣನವರ ಬಗೆಗೆ ತಾವು ಕಟ್ಟಿದ ಹಾಡುಗಳನ್ನು ಹಾಡುತ್ತಾರೆ. ಅವರ ಆಶುಕವಿತ್ವ ಶಕ್ತಿಯು ಅದ್ಭುತವಾಗಿದೆ. ಅವರಿಗೆ ಯಾವುದೇ ವಿಷಯ ಕೊಟ್ಟರೂ ಅದನ್ನು ಅವರು ಕಾವ್ಯವಾಗಿ ಪರಿವರ್ತಿಸಿ ಬಿಡುತ್ತಾರೆ.

ಇಲ್ಲಿಯವರೆಗಿನ ಅವಧಿಯಲ್ಲಿ ಕಲ್ಲಪ್ಪನವರು ಹಲವಾರು ತತ್ತ್ವಪದಗಳನ್ನು ಬರೆದಿದ್ದಾರೆ. ಅವುಗಳೊಂದಿಗೆ ಕಲ್ಲಪ್ಪನವರು ಮೋಹರಮ್ ಹಾಡು, ಕೋಲಾಟದ ಪದ, ಗೀಗೀ ಹಾಡುಗಳನ್ನು ಬರೆದಿದ್ದಾರೆ. ಅವು ಒಂದೆಡೆಗೆ ಸಂಗ್ರಹಿಸಿಲ್ಲ. ಹಾಡುಗಳನ್ನು

ಕಟ್ಟುತ್ತಾರೆ, ಹಾಡುತ್ತಾರೆ, ಅವುಗಳೆಲ್ಲ ಗಾಳಿಯಲ್ಲಿ ತೇಲಿ ಹೋಗುತ್ತವೆ; ಕಾಲಗರ್ಭ ಸೇರಿ ಬಿಡುತ್ತವೆ.

ಕಲ್ಲಪ್ಪನವರು ತಮ್ಮ ತತ್ತ್ವಪದಗಳಿಗೆ ಬಸವಣ್ಣನವರ ಮುದ್ರೆ; ಕೂಡಲ ಸಂಗಮ ದೇವರ ಹೆಸರುಗಳನ್ನು ಮುದ್ರಿಕೆಯಾಗಿ ಬಳಕೆ ಮಾಡಿದ್ದಾರೆ. ಅವರ ಎರಡು ಹಾಡುಗಳನ್ನು ಇಲ್ಲಿ ಕೊಡಲಾಗಿದೆ:

ಘೋರ ಸಂಸಾರದ ಪರಿ

ಗುಡಿಸಲಲ್ಲಿ ಹಕ್ಕಿ ಬಂತು
ಗೂಡು ಕಟ್ಟಿ ಮನೆ ತಂದೆ ಅಂತು
ಎಂಥ ಕಾಲ ಬಂತು ನೋಡಣ್ಣ ॥ ಪ ॥

ಯಾರ ಜಾಗೋ ಯಾರ ಮನೆಯೋ
ದೂರ – ದೂರ ಬಂದು ಹೋಗಿ
ಯಾರ – ಯಾರಿಗೆ ಹೊಂದಿಕೆಯಿಲ್ಲ
ಎಂಥ ಕಾಲ ಬಂತು ನೋಡಣ್ಣ ॥ ೧ ॥

ಯಾರ ಗಂಟು ಯಾರೋ ಹೊಡೆದರು
ಯಾರ ಗದ್ದಿಗೆ ಯಾರೋ ಹಿಡಿದರು
ಯಾರ ತಂದೀಗೆ ಯಾರ ಮಕ್ಕಳೊ ಅಣ್ಣ
ಘೋರ ಸಂಸಾರದ ಪರಿಯ ನೋಡಣ್ಣ ॥ ೨ ॥

ಹೊಂದಿಕ್ಕಿಲ್ಲ: ಸಂದಿಕ್ಕಿಲ್ಲ
ಮುಂದೆ ಯಾರು ದಿಕ್ಕೆಯಿಲ್ಲ
ಅಂದ – ಅಂದಿನ ಸ್ಥಿತಿಯೆ ಇಲ್ಲ
ಧುಂದಿನಲ್ಲಿ ಮುಳುಗಿ ಹೋಯಿತಣ್ಣ ॥ ೩ ॥

ಯಾರ ರೊಕ್ಕಾ ಯಾರ ಲೆಕ್ಕಾ
ಯಾರ ತುಪ್ಪಾ ಯಾರ ರೊಟ್ಟಿ
ಯಾರು ಉಂಡರು; ಯಾರು ಬಿಟ್ಟರು
ಏನು ಧಂದೆ, ಏನು ಧುಂಧಣ್ಣ ॥ ೪ ॥

ದೇವರ ದಿಂಡರ ಅರಿವೇ ಇಲ್ಲ
ದೇವ ಭಕ್ತಿ ಬರಲೇ ಇಲ್ಲ
ಮುಕ್ತಿ ಆಸೆ ಯಾರಿಗಿಲ್ಲಣ್ಣ
ಈ ಲೋಕದೊಳಗ ಧನದವಲತ ಮೇಲಾಯಿತಣ್ಣ ॥ ೫ ॥

ವಸುಧಿಯೊಳಗ ಕೋಸಮ್ ಊರಾ
ಬಸವರಾಜ ಭಕ್ತಿ ಪೂರ
ಸೋಮನಾಥನ ಧ್ಯಾನ ಮಾಡೋ
ಲೋಕ ಪದವಿ ಹೊಂದಿನೋಡೊ ॥ ೬ ॥

ಮನವ ಮೈಲಗಿ ಮಾಡಬ್ಯಾಡ

ಹೀನ ಗುಣಗಳು ತುಂಬಿ ತುಂಬಿ
ಮನವ ಮೈಲಗಿ ಮಾಡಬ್ಯಾಡ ॥ ಪ ॥

ಘನವ ತುಂಬು ಮನದ ಚೀಲ
ಸನುಮತ ಭಾವದ ಕಾಳು ತುಂಬು
ಅನುದಿನ ಗುರು ಧ್ಯಾನ ತುಂಬು
ಮನನ ಶಕ್ತಿ ಅದಕ ತುಂಬು ॥ ೧ ॥

ಶಿವವು ತುಂಬು ಬಸವ ತುಂಬು
ಕೂಡಲ ಸಂಗಮನಾಥನ ತುಂಬು
ಸತ್ಯ – ಶುದ್ಧ ಶೀಲ ತುಂಬು
ನಿತ್ಯ – ನೇಮ ನಿಧಿಯ ತುಂಬು ॥ ೨ ॥

ಸತ್ತು – ಚಿತ್ತು ಹರುಷ ತುಂಬು
ಮುತ್ತಿನಂತ ಗುಣಗಳ ತುಂಬು
ನಿತ್ಯ – ನಿತ್ಯ ಅನುಭಾವ ತುಂಬು
ಒತ್ತಿ ಹಣ್ಣ ಮಾಡ ಬ್ಯಾಡಣ್ಣ ॥ ೩ ॥

ಶರಣರ ತುಂಬು ಸಂತರ ತುಂಬು
ಚರಣ ಕಮಲದ ಧ್ಯಾನ ತುಂಬು
ಸಾಧು ಪುರುಷರ ವಚನ ತುಂಬು
ಅವರಿಗಾಗಿ ನಂಬಿಗಿ ತುಂಬು ॥ ೪ ॥

ಬಸವನ ಭಕ್ತಿಯನು ತುಂಬು
ಸಂತನ ಶಕ್ತಿಯನು ತುಂಬು
ಕೋಸಮ್ ಊರಿನ ನೆನವು ತುಂಬು
ಗುರುಧ್ಯಾನದ ಘನವು ತುಂಬಣ್ಣ ॥ ೫ ॥

(ಈ ವಿವರಗಳನ್ನು ಸ್ವತಃ ಕವಿಗಳೇ ನೀಡಿದ್ದಾರೆ.)




ಕಲ್ಲಪ್ಪ ಮ್ಯಾಲದೊಡ್ಡಿ ಅವರ ಮನೆ (ಕೋಸಮ್).



ಕಲ್ಲಪ್ಪ ಮ್ಯಾಲದೊಡ್ಡಿ



ಕಲ್ಲಪ್ಪ ಮ್ಯಾಲದೊಡ್ಡಿ ಅವರ
ಪತ್ನಿ ಬಂಡೆಮ್ಮ



ಕಲ್ಲಪ್ಪ ಮ್ಯಾಲದೊಡ್ಡಿ ಅವರು ಸೊಸೆಯಂದಿರು–ಮೊಮ್ಮಕ್ಕಳೊಂದಿಗೆ



ಕಲ್ಲಪ್ಪ ಮ್ಯಾಲದೊಡ್ಡಿ ಅವರ ಆರಾಧ್ಯ ದೇವರು ಪಾಂಡುರಂಗನ
ದೇವಾಲಯ (ಕೋಸಮ್)

೧೬. ಹಣಮಂತ ನಿಟ್ಟೂರೆ (ಕ್ರಿ.ಶ.ಸು. ೧೯೨೭)

ಬೀದರ ಜಿಲ್ಲೆಯ ಭಾಲ್ಕಿ ತಾಲ್ಲೂಕಿನ ಕೋಸಮ್‌ನಲ್ಲಿ ಹಣಮಂತ ನಿಟ್ಟೂರೆ ಅವರು ವಾಸವಾಗಿದ್ದಾರೆ. ಅವರು ಜಾತಿಯಲ್ಲಿ ಮರಾಠರು. ಮನೆಯಲ್ಲಿ ಮಾತನಾಡುವುದು ಮರಾಠಿ. ಆದರೆ ಹಣಮಂತ ನಿಟ್ಟೂರೆ ಅವರು ಮಾತ್ರ ಕುಟುಂಬದವರ ನಡುವೆ ಅಚ್ಚ ಕನ್ನಡಿಗರಾಗಿರುವುದು ಆಶ್ಚರ್ಯದ ಸಂಗತಿ. ಬಹುಶ: ಹಣಮಂತನ ಪೂರ್ವಜರು ನಿಟ್ಟೂರು ಗ್ರಾಮದಿಂದ ಕೋಸಮ್ ಗ್ರಾಮಕ್ಕೆ ಬಂದು ನೆಲೆನಿಂತಿರುವ ಸಾಧ್ಯತೆಯಿದೆ. ಈ ಬಗೆಗೆ ಹಣಮಂತ ಅವರು ಇದೇ ಮಾತನ್ನು ಹೇಳುತ್ತಾರೆ. ಆದರೆ ಅವರು ಯಾವ ಕಾಲದಲ್ಲಿ ಇಲ್ಲಿಗೆ ಬಂದು ನೆಲೆಸಿದರೆಂಬುದು ಖಚಿತವಾಗಿ ತಿಳಿಯುವುದಿಲ್ಲ. ಹಣಮಂತ ನಿಟ್ಟೂರೆ ಅವರು ತಾವು ಮೂಲತಃ ಕನ್ನಡಿಗರೆಂದೇ ವಾದಿಸುತ್ತಾರೆ. ಆದರೆ ಊರಿನ ಜನತೆ ಅವರಿಗೆ ಮರಾಠ ಜನಾಂಗದವರೆಂದು ಕರೆಯುತ್ತಾರೆ. ಅವರ ಮನೆಯಲ್ಲಿನ ಹೆಚ್ಚು ಜನರು ಮರಾಠಿ ಮಾತನಾಡುವುದೇ ಅದಕ್ಕೆ ಮುಖ್ಯ ಕಾರಣವಾಗಿದೆ. ಏನೇ ಆದರೂ ಹಣಮಂತ ಅವರು ಕನ್ನಡ ತತ್ತ್ವಪದಕಾರರಾಗಿರುವು ಮಾತ್ರ ಸಮಾಧಾನದ ಸಂಗತಿ.

ಹಣಮಂತ ನಿಟ್ಟೂರೆ ಅವರು ಹುಟ್ಟಿದ್ದು ಕ್ರಿ.ಶ. ೧೯೨೭ ರ ಸುಮಾರಿಗೆ. ಅವರ ತಂದೆ ಶಾಮರಾವ ನಿಟ್ಟೂರೆ; ತಾಯಿ ರಾಧಿಕಾಬಾಯಿ. ಈ ಹೆಸರುಗಳನ್ನು ನೋಡಿದರೆ ಅವರ ಕುಟುಂಬವು ಮರಾಠಾಯೆಂದೇ ಹೆಚ್ಚು ಖಚಿತವಾಗುತ್ತದೆ. ಶಾಮರಾವ ದಂಪತಿಗಳು ಮನೆಯ ದೇವರನ್ನಾಗಿ ಪಾಂಡುರಂಗನನ್ನು ಆರಾಧಿಸುತ್ತಿದ್ದರು. ಪಾಂಡುರಂಗ ದೇವರು ಇಂದು ಮಹಾರಾಷ್ಟ್ರದ ಭಕ್ತರು ಹೆಚ್ಚಾಗಿ ಆರಾಧಿಸುವ ಅಥವಾ ನಡೆದುಕೊಳ್ಳುವ ದೇವರಾಗಿದ್ದಾನೆ.

ಹಣಮಂತ ನಿಟ್ಟೂರೆ ಅವರು ಮರಾಠಿ ಶಾಲೆಗೆ ಹೋದರು; ಮೋಡಿ ಲಿಪಿಯನ್ನು ಕಲಿತು ಕೊಂಡರು. ಮರಾಠಿ ಸಂತರೊಡನೆ ಹಣಮಂತ ಅವರು ಕನ್ನಡದ ಶರಣರನ್ನೂ ಪರಿಚಯ ಮಾಡಿಕೊಂಡರು. ಹೀಗೆ ಆಗುವುದಕ್ಕೆ ಅವರಿಗೆ ಒದಗಿದ ಪ್ರೇರಣೆಯೆಂದರೆ ಅದೇ ಊರಿನ ಖ್ಯಾತ ತತ್ತ್ವಪದಕಾರ; ಆಧ್ಯಾತ್ಮ ಸಾಧಕ; ಕಲಾವಂತರಾದ ಹಣಮಂತ ಬಿರಾದಾರ.

ಹಣಮಂತ ನಿಟ್ಟೂರ ಅವರಿಗೆ ಒಟ್ಟು ನಾಲ್ಕು ಜನ ಮಕ್ಕಳು. ಅವರಲ್ಲಿ ಇಬ್ಬರು ಗಂಡು, ಇಬ್ಬರು ಹೆಣ್ಣು ಮಕ್ಕಳು. ಅವರ ಹೆಂಡತಿ ಸುಶೀಲಾಬಾಯಿ. ಹಣಮಂತ ಅವರು ಜೀವನ ನಿರ್ವಹಣೆಗೆ ಹೆಚ್ಚಾಗಿ ನಂಬಿದುದು ಕೃಷಿಕಾಯಕವನ್ನು. ಆಗಾಗ ಅವರು ಭಜನೆ ಮಾಡುವುದು; ಕೀರ್ತನೆ ಹೇಳುವುದು ಮಾಡುತ್ತಾರೆ. ನಡು ನಡುವೆ ಕೃಷಿ ಕಾಯಕಕ್ಕೆ ಬಿಡುವು ಮಾಡಿಕೊಂಡು ಅಂತಹ ಕಾರ್ಯಗಳನ್ನು ನಿರ್ವಹಿಸಲು ಹೋಗುತ್ತಾರೆ. ಹಣಮಂತ ಅವರಿಗೆ ಕೃಷಿ ಕಾಯಕವು ಉಪಜೀವನದ ಸಾಧನವಾದರೆ ಭಜನೆ ಮತ್ತು ಕೀರ್ತನೆ ಇವು ಆಸಕ್ತಿಯ ಮತ್ತು ಪ್ರವೃತ್ತಿಯ ಕಾರ್ಯಗಳಾಗಿವೆ. ಕೃಷಿ ಕಾರ್ಯಕ್ಕೆ ಅವರು ಅನಿವಾರ್ಯವಾಗಿ ಹೋದರೆ, ಭಜನೆ-ಕೀರ್ತನೆಗಳಿಗೆ ಉಲ್ಲಾಸ ಮನದಿಂದ ಹೋಗುತ್ತಾರೆ.

ಹಣಮಂತ ನಿಟ್ಟೂರೆ ಅವರು ಸಂಗೀತ ಕಲೆಯಲ್ಲಿ ಪ್ರಾವೀಣ್ಯ ಹೊಂದಿದವರಾಗಿದ್ದಾರೆ. ಅವರು ಭಜನೆ-ಸಂಗೀತಾದಿ ಕಲೆಯನ್ನು ಜವಳಗಾದ ಮುತ್ತ್ಯಾ ಗಣೇಶ ಸ್ವಾಮಿ ಅವರಿಂದ ಕಲಿತು ಕೊಂಡರು. ಜವಳಗಿಯ ಗಣೇಶ ಮುತ್ತ್ಯಾ ಅವರು ಆಧ್ಯಾತ್ಮ ಸಾಧಕರು. ಅವರು ಪಾಂಡುರಂಗನ ಭಜನೆ ಸೊಗಸಾಗಿ ಮಾಡುತ್ತಿದ್ದರು. ಅದಕ್ಕೆ ಮಾಧ್ಯಮವಾಗಿ ಸಂಗೀತವನ್ನು ಬಳಕೆ ಮಾಡಿಕೊಳ್ಳುತ್ತಿದ್ದರು. ತಮ್ಮ ಶಿಷ್ಯನಾದ ನಿಟ್ಟೂರೆ ಅವರಿಗೂ ಸಂಗೀತವನ್ನು ಭಜನೆಯ ಮಾಧ್ಯಮವಾಗಿ ಬಳಕೆ ಮಾಡಿಕೊಳ್ಳಲು ಕಲಿಸಿ ಕೊಟ್ಟರು. ಹಣಮಂತ ನಿಟ್ಟೂರೆ ಅವರು ಈ ಕಾರಣದಿಂದಲೇ ಗಣೇಶ ಮುತ್ತ್ಯಾ ಅವರನ್ನು 'ಗುರುಗಳು' ಎಂದು ಮನ್ನಿಸುತ್ತಾರೆ.

ನಿಟ್ಟೂರೆ ಅವರು ಹಣಮಂತ ಬಿರಾದಾರ ಅವರ ಸತ್ಸಂಗದಲ್ಲಿ ಕಾಲಕಳೆಯುತ್ತ ಬಂದವರು. ಹೀಗಾಗಿ ಅವರ ಪ್ರಭಾವ ನಿಟ್ಟೂರೆ ಅವರ ಮೇಲೆ ಆಗಿದೆ. ವೀರಶೈವ ಸಂಸ್ಕೃತಿಯ ಪ್ರಭಾವವೂ ಆಗಿದೆ. ಆದುದರಿಂದಲೇ ಅವರು ಕನ್ನಡದಲ್ಲಿ ತತ್ತ್ವಪದಗಳನ್ನು ಬರೆದಿರುವರು. ಬಸವಾದಿ ಶರಣರನ್ನು ಕುರಿತು ಹಾಡಿದ್ದಾರೆ. ಈ ಬಗೆಗೆ ಅವರು ಹೀಗೆ ಹೇಳುತ್ತಾರೆ:

"ನಮ್ಮ ಮನೆಯಲ್ಲಿ ಮರಾಠಿ ವಾತಾವರಣವಿದ್ದುದರಿಂದ ಬಹುಶ: ನನಗೆ ಬಿರಾದಾರ ಅವರು ಸಿಗದೇ ಹೋಗಿದ್ದರೆ ಮರಾಠಿ ಕವಿಯಾಗಿ ಬಿಡುತ್ತಿದ್ದೆನು. ನನ್ನನ್ನು ಹಣಮಂತರಾವ ಅವರು ಕನ್ನಡಕ್ಕೆ ತಂದಿದ್ದಾರೆ. ಉಭಯ ಭಾಷಾ ಕವಿಯಾಗಿ ಮಾಡಿದ್ದಾರೆ. ನಾನು ಹೆಚ್ಚು ಹಾಡುಗಳನ್ನು ಕನ್ನಡದಲ್ಲಿಯೇ ಬರೆದಿರುವೆನು. ಕೆಲವು ಅಭಂಗಗಳು ಮರಾಠಿಯಲ್ಲಿ ಬರೆದಿರುವೆನು. ಏಕೆಂದರೆ ಜನರು ನನಗೆ ವಿಠ್ಠಲನ ಭಜನೆಗಾಗಿಯೂ ಕರೆಯುತ್ತಾರೆ. ಅಲ್ಲಿ ಅಭಂಗಗಳನ್ನು ಹಾಡುವಂತೆ ಕೇಳುತ್ತಾರೆ. ಮರಾಠಿ ಅಭಂಗಗಳನ್ನು ನಾನು ಹಾಡುತ್ತೇನೆ. ಹೀಗೆ ಅಭಂಗಗಳನ್ನು ಹಾಡುತ್ತಲೇ ಮರಾಠಿ ಅಭಂಗಗಳ ರಚನೆಯ ರಹಸ್ಯವು ಕೈವಶವಾಯಿತು. ನಾನು ಹೆಚ್ಚಾಗಿ

ಹಣಮಂತರಾವ ಬಿರಾದಾರ ಅವರೊಂದಿಗೆ ಇರುವುದರಿಂದ ಅವರು ನನಗೆ ಕೂಡಿಸಿಕೊಂಡು ಹಲವಾರು ಶರಣರ ಚರಿತ್ರೆಗಳನ್ನು ಹೇಳಿದ್ದಾರೆ. ಈಗಲೂ ಆಗಾಗ ಹೇಳುತ್ತಲಿರುತ್ತಾರೆ. ಅವರು ನನಗೆ ಹಿರಿಯ ಸಹೋದರನಂತಿದ್ದಾರೆ. ಅವರು ಆಡಿಸಿದ ನಾಟಕಗಳಲ್ಲಿ ನಾನು ಪಾತ್ರ ಮಾಡಿದ್ದುಂಟು. ಅವರು ಬರೆದ ಹಾಡುಗಳನ್ನು ಈಗಲೂ ಭಜನೆಯಲ್ಲಿ ಹಾಡುತ್ತೇನೆ. ಹೀಗೆ ನನಗೆ ಕನ್ನಡತನವಾಗಲಿ; ಕನ್ನಡ ಸಂಸ್ಕೃತಿಯಾಗಲಿ ಮೈಗೂಡುವುದಕ್ಕೆ ಸಾಧ್ಯವಾಯಿತು. ನನಗೆ ಮರಾಠಿಗಿಂತಲೂ ಕನ್ನಡ ಹೆಚ್ಚು ಪ್ರಿಯವಾಗಿದೆ. ನಾನು ಏನಿದ್ದರೂ ಕನ್ನಡದ ತತ್ತ್ವಪದಕಾರ."

ಹಣಮಂತ ನಿಟ್ಟೂರೆ ಅವರಿಗೆ ಎಂಬತ್ತರ ವಯಸ್ಸು. ಇಂದಿಗೂ ತರುಣರಂತೆ ಚಟುವಟಿಕೆಯಿಂದ ಓಡಾಡುತ್ತಾರೆ. ಹೊಲಕ್ಕೆ ಹೋಗುತ್ತಾರೆ; ಹೊಲದ ಕೆಲಸ ಮಾಡುತ್ತಾರೆ. ಭಜನೆಗಳನ್ನು ಅವರು ಎಂದೂ ತಪ್ಪಿಸುವುದಿಲ್ಲ. ಆಗಾಗ ತತ್ತ್ವಪದಗಳನ್ನು ಬರೆಯುತ್ತಾರೆ. ಹಣಮಂತ ಅವರು ತಮ್ಮ ಹಾಡುಗಳಿಗೆ "ಬಸವಣ್ಣ"ನವರ ಹೆಸರು ಅಂಕಿತವಾಗಿಟ್ಟುಕೊಂಡಿರುವುದು ಹೆಚ್ಚು ಅರ್ಥಪೂರ್ಣವಾಗಿದೆ. ಅವರ ಎರಡು ಹಾಡುಗಳನ್ನು ಇಲ್ಲಿ ಉದ್ಧರಿಸಲಾಗಿದೆ:

ದೇವರು ಎಲ್ಲಿರುವನು?

ದೇವರು ಎಲ್ಲಿರುವನೆಂದು
ಎಲ್ಲ ಕಡೆಗೆ ಹುಡುಕಿ-ತಡಕಿ
ನೋಡಿದೇನು ಸಿಗಲಿಲ್ಲ ಒಡೆದ ಮಡಕಿ
ನಾನು ಗಂಡ ಬಿಟ್ಟ ಗಯ್ಯಾಳಿ ಬಿಡಕಿ ॥ ಪ ॥

ಮರವ ದೇವರೆಂದು ಪೂಜೆ ಮಾಡಿದೆ
ಮಣ್ಣ ದೇವರೆಂದು ಪೂಜಿಸಿ ದಾರಿ ಕಾಣದಾದೆ
ಹೆಣ್ಣು ದೇವರೆಂದು ಪೂಜಿಸಿ ಮಾಯೆಗೆ ಒಳಗಾದೆ
ಬಣ್ಣ ದೇವರೆಂದು ಪೂಜಿಸಿ ಭ್ರಷ್ಟನಾದೆ ॥ ೧ ॥

ಕಲ್ಲ ದೇವರೆಂದು ಪೂಜಿಸಿ ಖುಲ್ಲನಾದೆ
ಬಿಲ್ಲ ದೇವರೆಂದು ಪೂಜಿಸಿ ಗೆಲ್ಲದೆ ಹೋದೆ
ಎಲ್ಲ ದೇವರೆಂದು ಪೂಜಿಸಿ ಏನೂ ಕಾಣದಾದೆ
ಬಲ್ಲವರ ದಾರಿ ನಾನು ಅರಿಯದೆ ಹೋದೆ ॥ ೨ ॥

ಮನೆಯ ಗಂಡ ಮನ್ಯಾಗ ಇರುವ
ಮನ ಒಳಗೆ ಇಂಬಾಗಿ ಕುಂತಿರುವ
ತಿಳಿಯದೆ ಗೈಯ್ಯಾಳಿ ಬಿಡುಕಿ
ಹೊರಗ ಕೇರಿಯಲ್ಲಿ ಬಂದು ಹುಡುಕಿ ॥ ೩ ॥

ಜೀವದಲ್ಲೊಬ್ಬ ದೇವರೆಂದರಿಲ್ಲ
ಭಾವದಲ್ಲೊಬ್ಬ ದೇವರೆಂದರಿಲ್ಲ
ದೇಹದೊಳಗೊಬ್ಬ ದೇವರೆಂದರಿಲ್ಲ
ಮನದೊಳಗೊಬ್ಬ ದೇವರೆಂದರೆಯಿಲ್ಲ ॥ ೪ ॥

ಅಲ್ಲಿ ಇಲ್ಲಿ ಹುಡಕದು ಯಾಕ ?
ನನ್ನೊಳಗ ನಾನು ನೋಡಬೇಕ
ಆತ್ಮದೊಳಗಿನ ಪರಮಾತ್ಮನ
ಸಾತ್ಮ ಸ್ವರೂಪ ಹೊಂದಿದವನ ॥ ೫ ॥

ವಸುಧಿಯೊಳಗ ಲೇಸಾದ ಕೋಸಮ್ ಪುರವಾ
ಈಶ ನೆಲಸಿರುವನು ಇಲ್ಲಿಯೇ ಕಲ್ಯಾಣ ಬಸವಾ
ಅವನ ಪಾದಕ್ಕೆ ಹೊಂದಿ ನೀ ನೇಮ ಮಾಡು
ಶಿವನಿನ್ನೊಳಗ ಹಾನ ಅರಸಿ ನೋಡು ॥ ೬ ॥

ಒಂದೇ ಒಂದಿತ್ತು

ಒಂದೇ ಒಂದಾದ
ಒಂದು ಎರಡಾಗುತಾದ ॥ ಪ ॥

ಒಂದೇ ಒಂದು ಅಂದಿ
ಅದೆಂದು ಎರಡಾದಿ
ಎರಡು ಮೂರಾದಿ
ಮೂರು ಆರಾದಿ ॥ ೧ ॥

ಆರು ಆರು ಗುಣಿಸಿ
ಮೂವತ್ತಾರು ನೀನಾದಿ
ಮೂವತ್ತಾರರ ಮ್ಯಾಲ ಏರುತ
ಎರಡ ನೂರರ ಮ್ಯಾಲ ಆದಿ ॥ ೨ ॥

ಇದು ಲೆಕ್ಕದ ಜನ್ಮ ಅಲ್ಲಪ್ಪ
ಪದ-ಪದವೀಗಿ ಗಂಟ್ಯಾಕಪ್ಪ?
ಪದವಿ ಬ್ಯಾಡ, ಪದವೂ ಬ್ಯಾಡ
ಒಂದು ಎರಡಾದುದು ಮತ್ತ್ಯಾಂಗ ? ॥ ೩ ॥


ಎಲ್ಲಿಂದ ನೀ ಬಂದಿ
ಅಲ್ಲಿಗೆ ಹೋಗಬೇಕು ತಿಳಿದಿ
ಎರಡು ಒಂದಾಗುತಾದಿ
ಕುರುಹ ಅರುವಾಗುತಾದ ॥ ೪ ॥

ಧರಿಯೊಳಗ ಮೆರಿತಾದ ಕೋಸಮ್ ಗ್ರಾಮ
ಅದರ ಮ್ಯಾಲದ ಕಲ್ಯಾಣ ಬಸವನ ಪ್ರೇಮ
ಬಸವನ ಪಾದಕ್ಕೆ ಹೊಂದು
ಪಾದ ಪರುಷದಲ್ಲಿ ನೀನು ಒಂದಾಗು ಸಂದು ॥ ೫ ॥


(ಸ್ವತಃ ಕವಿಗಳೆ ಈ ವಿವರಗಳನ್ನು ನೀಡಿದ್ದಾರೆ.)



ಹಣಮಂತ ನಿಟ್ಟೂರೆ
ಅವರ ಮನೆ
(ಕೋಸಮ್)



ಹಣಮಂತ ನಿಟ್ಟೂರೆ



ಹಣಮಂತ ನಿಟ್ಟೂರೆ ಅವರು ತಮ್ಮ ಪತ್ನಿ ಸುಶೀಲಾಬಾಯಿ ಹಾಗು ಮಗನೊಂದಿಗೆ

೧೭. ಪಂಚಯ್ಯ ಸ್ವಾಮಿ (ಕ್ರಿ.ಶ.ಸು. ೧೯೩೪–೨೦೦೬)

ಬೀದರ ಜಿಲ್ಲೆಯ ಭಾಲ್ಕಿ ತಾಲ್ಲೂಕಿನಲ್ಲಿ ಬರುವ ಹಜನಾಳ ಗ್ರಾಮದ ಅತ್ಯಂತ ಹಿರಿಯ ತತ್ತ್ವಪದಕಾರರು ಈ ಪಂಚಯ್ಯ ಸ್ವಾಮಿಗಳು. ಇವರೊಂದು ಆಲದ ಮರದಂತೆ. ತಮ್ಮ ಶಿಷ್ಯರೆಂಬ ಬೀಳಲುಗಳನ್ನು ಬಿಡುವುದರ ಮೂಲಕ ತತ್ತ್ವಪದ ಸಾಹಿತ್ಯವಲಯವನ್ನು ವಿಸ್ತರಿಸಿದರು. ಪಂಚಯ್ಯ ಸ್ವಾಮಿಗಳು ತಾವು ಒಬ್ಬರೆ ತತ್ತ್ವಪದಗಳನ್ನು ಬರೆಯಲಿಲ್ಲ, ತಮ್ಮಲ್ಲಿಗೆ ಹಾಡು ಕಲಿಯಲು ಬಂದ ಹೆಚ್ಚಿನ ಶಿಷ್ಯರುಗಳಿಗೆ ಹಾಡುವುದಕ್ಕೆ ಕಲಿಸಿದರು. ಅವರಲ್ಲಿ ಕಾವ್ಯ ಶಕ್ತಿಯೂ ಉದ್ದೀಪನಗೊಳ್ಳುವಂತೆ ಮಾಡಿದರು.

ಎಪ್ಪತ್ತೆರಡು ವರ್ಷಗಳ ತುಂಬು ಬದುಕನ್ನು ಜೀವಿಸಿದ್ದ ಪಂಚಯ್ಯ ಸ್ವಾಮಿಗಳ ಮನೆತನವು ಸುಸಂಸ್ಕೃತ ಜಂಗಮರ ಮನೆತನ. ಭಕ್ತರುಗಳಿಗೆ ಸಂಸ್ಕಾರ ವಿಶೇಷವನ್ನು ಕರುಣಿಸುವ ನೆಲೆಯದು. ಈ ಮನೆತನದ ಒಡೆಯ ಬಸವ ತೀರ್ಥಯ್ಯನವರು. ವೀರಶೈವ ಸಂಸ್ಕೃತಿಯ ಅನುಸಂಧಾನಿಗಳೂ, ಶರಣ ಜನ ಪ್ರೇಮಿಗಳೂ, ಭಕ್ತೋದ್ಧಾರಕರೂ ಆಗಿದ್ದರು. ಬಸವ ತೀರ್ಥಯ್ಯನವರು ಸಂಸ್ಕೃತ–ಹಳಗನ್ನಡದ ಪಂಡಿತರಾಗಿದ್ದರು.

ಪುರಾಣಗಳನ್ನು ಓದುತ್ತಿದ್ದರು. ಬೇರೆ ಬೇರೆ ಸ್ಥಳಗಳಿಗೆ ಪುರಾಣ ಪ್ರವಚನ ಮಾಡಲು ಹೋಗುತ್ತಿದ್ದರು. ಹಜನಾಳ ಗ್ರಾಮದ ಹಿರೇಮಠವು ಪಂಚಯ್ಯ ಸ್ವಾಮಿಗಳ ಮನೆತನವಾಗಿದ್ದರಿಂದ, ಮಠಕ್ಕೆ ಸಲ್ಲಬೇಕಾದ ಎಲ್ಲ ಗೌರವಗಳು ಭಕ್ತರು ಸಲ್ಲಿಸುತ್ತಿದ್ದರು. ಆ ಗೌರವಗಳಿಗೆ ಪಾತ್ರರಾಗುವಂತೆ ಬದುಕಿದವರು ಬಸವ ತೀರ್ಥಯ್ಯನವರು ಮತ್ತು ಅವರ ಮಗ ಪಂಚಯ್ಯ ಸ್ವಾಮಿಗಳು. ಬಸವ ತೀರ್ಥಯ್ಯನವರ ಹೆಂಡತಿ ಶರಣಮ್ಮ. ಅವರು ಹೆಸರಿಗೆ ತಕ್ಕಂತೆ ಶರಣ ಜೀವಿಯೇ ಆಗಿದ್ದರು. ಮಠಕ್ಕೆ ಬರುವ ಹೋಗುವ ಭಕ್ತರುಗಳ ಆಗು–ಹೋಗುಗಳನ್ನು ನೋಡಿಕೊಳ್ಳುತ್ತಿದ್ದರು. ಮಠದಲ್ಲಿ ಯಾವಾಗಲೂ ಧಾರ್ಮಿಕ ವಾತಾವರಣವು ಇರುವಂತೆ ಆ ತಾಯಿ ಆಗಾಗ ಹಲವಾರು ಪೂಜೆ ಪುನಸ್ಕಾರಗಳನ್ನು ನಡೆಸುತ್ತಿದ್ದರು.

ಇಂತಹ ಸುಸಂಸ್ಕೃತ ಹಿರೇಮಠದಲ್ಲಿ ಹುಟ್ಟಿದ ಪಂಚಯ್ಯ ಸ್ವಾಮಿಗಳಿಗೆ ಅವರ ಸಂಸ್ಕಾರವು ರಕ್ತವಾಯಿತು; ಉಸಿರಾಟವಾಯಿತು. ಮೂರನೆಯ ತರಗತಿಯವರೆಗೆ

ಪಂಚಯ್ಯನವರು ಶಾಲೆಗೆ ಹೋದರು. ಅಲ್ಲಿಂದ ಅವರಿಗೆ ಮಠವೇ ಮಹಾವಿದ್ಯಾಲಯವಾಯಿತು. ಭಕ್ತರಂಗವೇ ವಿಶ್ವವಿದ್ಯಾಲಯವೆನಿಸಿತು. ಅವರು ಕನ್ನಡದ ಮೇಲೆ ಪ್ರಭುತ್ವ ಸಾಧಿಸಿದರು. ಅದರಂತೆ ಹಳಗನ್ನಡ-ಸಂಸ್ಕೃತ ಭಾಷೆಗಳನ್ನೂ ಕಲಿತುಕೊಂಡರು. ಮರಾಠಿ-ಹಿಂದಿ ಭಾಷೆಗಳನ್ನು ಅವರು ಓದುತ್ತಿದ್ದರು. ಬರೆಯುತ್ತಿದ್ದರು. ಪಂಚಯ್ಯ ಸ್ವಾಮಿಗಳ ದಾಂಪತ್ಯ ಬದುಕನ್ನು ಸುಖವಾಗಿಸಲು ಬಂದವರು ತೇಜಮ್ಮನವರು. ಹಿತ-ಮಿತದ ಸಂಸಾರವು ಅವರದಾಗಿತ್ತು. ಇಬ್ಬರು ಗಂಡು-ನಾಲ್ಕು ಜನ ಹೆಣ್ಣು ಮಕ್ಕಳು ಅವರಿಗಿದ್ದರು.

ಪಂಚಯ್ಯ ಸ್ವಾಮಿಗಳು ಹಿರೇಮಠದವರ ಕಾಯಕಗಳನ್ನು ಪೂರೈಸುತ್ತಲೇ ಕಲಾಸೇವೆಯೆಡೆಗೆ ತಮ್ಮ ಗಮನ ಕೀಲಿಸಿದವರು. ಅವರು ಸಂಗೀತದಲ್ಲಿ ಪರಿಣತಿಯನ್ನು ಹೊಂದಿದ್ದರು. ಹಾರ್ಮೋನಿಯಂ ವಾದ್ಯವನ್ನು ನುಡಿಸುತ್ತಿದ್ದರು. ಅವರಿಗೆ ನಾಟಕ ಕಲಿಸುವ ಕಲೆ ಕರಗತವಾಗಿದ್ದಿತು. ಪಂಚಯ್ಯ ಸ್ವಾಮಿ ಅವರು ಹಲವಾರು ನಾಟಕಗಳನ್ನು ಕಲಿಸಿದರು.

ನಾಟಕಗಳಿಗೆ ಬೇಕಾದ ಹಾಡುಗಳನ್ನು ರಚಿಸಿಕೊಟ್ಟರು. ಹಾಗೆಯೇ ಅವರು ನಾಟಕಗಳನ್ನು ಸ್ವತಃ ರಚಿಸುತ್ತಿದ್ದರು, ಹೀಗಾಗಿ ಹಲವಾರು ನಾಟಕಗಳು ಅವರ ಲೇಖನಿಯಿಂದ ಹೊರಬಂದಿವೆ. ಆದರೆ ಇಂದು ಅವು ಯಾವವೂ ದೊರಕುವುದಿಲ್ಲ. ಪಂಚಯ್ಯ ಸ್ವಾಮಿಗಳು ಸುಮಾರು ಒಂದು ಸಾವಿರ ಪ್ರದರ್ಶನಗಳಿಗೆ ಹಾರ್ಮೋನಿಯಂ ಬಾರಿಸಿರುವರು. ಅವರಿಗೆ ಹಲವಾರು ಜನ ಶಿಷ್ಯರಿದ್ದರು. ದೇವೇಂದ್ರಪ್ಪ ಹಜನಾಳ ಅವರು ಆ ಶಿಷ್ಯರಲ್ಲಿ ಒಬ್ಬರು. ತಮ್ಮ ಗುರುಗಳನ್ನು ಕುರಿತು ಅವರು ಹೀಗೆ ಪ್ರತಿಕ್ರಿಯಿಸುತ್ತಾರೆ:

"ನಮ್ಮ ಗುರುಗಳಾದ ಪಂಚಯ್ಯ ಸ್ವಾಮಿಗಳಲ್ಲಿ ಪಂಚ ವಿದ್ಯೆಗಳಿದ್ದವು. ಅವುಗಳೆಂದರೆ ಹಾಡುಗಳನ್ನು ಕಟ್ಟುವುದು; ಸಂಗೀತ ಕಲೆ, ಹಾಡುವುದು, ನಾಟಕವಾಡಿಸುವುದು, ಅಭಿನಯ ಮಾಡುವುದು ಇವೆ ಪಂಚ ವಿದ್ಯೆಗಳಾಗಿವೆ. ಅವರು ಹಾರ್ಮೋನಿಯಂ ಮೇಲೆ ಕೈ ಇಟ್ಟರೆ ಸಾಕು, ಅದು ತನ್ನ ತಾನೇ ವೈವಿಧ್ಯಮಯವಾಗಿ ಶೃತಿಗೊಡುವುದಕ್ಕೆ ಆರಂಭಿಸುತ್ತಿತ್ತು. ಅವರಂತೆ ಹಾರ್ಮೋನಿಯಂ ಬಾರಿಸುವುದರಲ್ಲಿ ಯಾರೂ ಪ್ರವೀಣರಿರಲಿಲ್ಲ . ಅವರು ಊರೂರಿಗೆ ನಾಟಕಗಳನ್ನು ಕಲಿಸುವುದಕ್ಕೆ ಹೋಗುತ್ತಿದ್ದರು. ಸ್ವತಃ ನಾಟಕಗಳನ್ನು ರಚಿಸಿ, ಅವರು ಆಡಿಸುತ್ತಿದ್ದರು. ಇಂದೂ ಅವರ ನಾಟಕಗಳಲ್ಲಿ ಪಾತ್ರ ಮಾಡಿದ ಹಿರಿಯರಿದ್ದಾರೆ. ಅವರು ತಮ್ಮ ಅನುಭವಗಳನ್ನು ಹೇಳಬಲ್ಲರು".

ಪಂಚಯ್ಯ ಸ್ವಾಮಿಗಳು ವೈದಿಕ ವೃತ್ತಿಯನ್ನು ನೆರವೇರಿಸುತ್ತಿದ್ದರು. ಶಿವಭಜನೆ, ಅಕ್ಕ ಮಹಾದೇವಿ ಭಜನೆಗಳನ್ನು ನಡೆಯಿಸಿಕೊಡುತ್ತಿದ್ದರು. ಅವರಿಗೆ ಭಜನೆಯ ಕಾರ್ಯಕ್ರಮವೂ ಪ್ರಿಯವಾದುದೆ ಆಗಿತ್ತು. ಪಂಚಯ್ಯ ಸ್ವಾಮಿಗಳು ಮೊದಲಿಗೆ

ಬೇರೆಯವರ ಹಾಡುಗಳನ್ನು ಹಾಡುತ್ತಿದ್ದರು. ನಂತರದಲ್ಲಿ ತಾವು ರಚಿಸಿದ ಹಾಡುಗಳನ್ನು ಹಾಡತೊಡಗಿದರು.

ಪಂಚಯ್ಯ ಸ್ವಾಮಿಗಳು ಇಂದು ಕಣ್ಣಿನಿಂದ ಮರೆಯಾಗಿ ಹೋಗಿದ್ದಾರೆ. ಆದರೆ ಅವರು ರಚಿಸಿ ಬಿಟ್ಟು ಹೋಗಿರುವ ತತ್ತ್ವಪದಗಳು ಅವರ ಸ್ಮರಣೆಯನ್ನು ಜನತೆಯ ನೆನಪಿನಲ್ಲಿ ಉಳಿಸಿವೆ. ಸ್ವನಾಮ ಅಂಕಿತದಲ್ಲಿಯೇ ಅವರ ಎಲ್ಲ ಹಾಡುಗಳು ದೊರಕುತ್ತವೆ. ಇಲ್ಲಿ ಎರಡು ಹಾಡುಗಳನ್ನು ನಿದರ್ಶನಕ್ಕಾಗಿ ಕೊಡಲಾಗಿದೆ:

ಕಾಳರಕ್ಕಸಿ

ಕಾಳರಕ್ಕಸಿ ನಿನಗ ಬಾಯಿದೆರೆದು ನುಂಗುತಾಳ
ಲೊಳ ಲೊಟ್ಟಿ ಸಂಸಾರದಾಗ ಮುಳಗಬ್ಯಾಡೋ ಮೂಳಾ ॥ ಪ ॥

ಹೆಂಡತಿ ಮಕ್ಕಳು ಅಂತ್ಹೇಳಿ ಬಡಕೋತಿ
ಪಿಂಡದ ನೆಲೆಯನು ತಿಳಿಯದೆ ನೀ ಕುಂತಿ
ಬಂಡ ಸಂಸಾರಕ ಬೆನ್ನ ಹತ್ತಿ ನೀ ಹೊಂಟಿ
ಕಾಳರಕ್ಕಸಿ ನಿನಗ ಬಾಯಿ ತೆರೆದು ನುಂಗತಾಳ ಜೋಕಿ ॥ ೧ ॥

ತಿಜೂರಿಯ ಒಳಗಿನ ರೊಕ್ಕ ಲೆಕ್ಕಾ ಮಾಡುತಿ
ಘುಜಲ ಸಂಸಾರದಾಗ ಸಿಕ್ಕು ನೀ ಸಾಯತಿ
ಮಜಲಿಗೆ ಏರದೆ ಕೆಳಗ್ಯಾಕ ನಿಂತಿ
ಸುಜನ, ಸುಜ್ಞಾನಕ್ಕ ವ್ಯಾಳೆಯಿಲ್ಲಂತಿ ॥ ೨ ॥

ಒಳಗಾ ತುಂಬ್ಯಾದಲ್ಲೋ ಹುಳುಗಳ ಸಂತಿ
ಗೊಳ ಗೊಳಾ ರೊಕ್ಕಾ ಎಣಿಸಿ ಮಾಡೀದಿ ಜಾತ್ರಿ
ಕಾಳರಕ್ಕಸಿ ಬಾಯಿ ತೆರದೈತ್ರಿ
ವ್ಯಾಳೆ ತಿಳಿದಿಲ್ಲ ಅದು ಯಾವಾಗ ನುಂಗುದೈತ್ರಿ ॥ ೩ ॥

ಅನುವಿನ ಅನುಭವ ತಿಳಿಬೇಕಪ್ಪ
ಮನದಲ್ಲಿ ಶಿವಧ್ಯಾನ ನಡಿಯಲಿ ಬೇಕಪ್ಪ
ಮಾನವ ಜನ್ಮದ ಸಾರ್ಥಕ ಮಾಡಪ್ಪ
ಹೀನ ಗುಣದ ಬುದ್ಧಿ ನೀ ನೀಗಪ್ಪ ॥ ೪ ॥

ಧರಿಯೊಳು ಮೆರೆಯುವ ಹಜನಾಳ ಪುರವ
ಇರುವನು ಪಂಚಯ್ಯ ಕವಿ ಸ್ವಾಮಿ ಗುರುವ
ಮರೆಯದೆ ಮಾಡು ಅವನ ಪಾದದ ಸೇವಾ
ಪರಮನ ಒಳಕೊಂಡು ಸುಖಿಯಾಗು ಮಾನವಾ ॥ ೫ ॥

ಭಕ್ತಿಯೆಂಬ ಹಡಗ ಭವ ಸಾಗರದಲಿ

ಭಕ್ತಿಯೆಂಬ ಹಡಗ ಭವ ಸಾಗರದಲಿ
ಶಕ್ತಿಯಿಂದಲಿ ತೇಲಿಸುತ ದಾಟೊ ॥ ಪ ॥

ಬಡಿವಾರ ಮಾಡದಿರು ನೀನು
ಕಡೆಯಲಿ ಇರಬೇಕು ಭಕ್ತಿಯ ಮಾನು
ಬುಡಹೋದ ಗಡಿಗೆಯಂತೆ ನೀನು
ಉಡುವಲ್ಲಿ ಉಂಬಲ್ಲಿ ಭಕ್ತಿಯ ಜೇನು ॥ ೧ ॥

ಹಳ ಹಳಿ ಪಟ್ಟು ಬರಿ ದಣಿಯ ಬೇಡ
ತಿಳಿಬೇಕು ಮೊದಲ ನೀನು ಭಕ್ತಿಯ ಜಾಡ
ಕಳವಳದಿಂದಲಿ ಕಾಲ ಕೊನಿಗಾಣಿಸಲು ಬ್ಯಾಡ
ಮಳ್ಳನಂಗ ಮನದಲ್ಲಿ ಮರುಗುವದೇನು ಪಾಡ ? ॥ ೨ ॥

ಭ್ರಾಂತಿವಳಿದು ಭಕ್ತಿಯ ಮಾಡೋ
ಮಂತ್ರ ಮೂಲವ ತಿಳಿದು ಭಕ್ತನ ಕೂಡೋ
ಅಂತರಂಗದಲ್ಲಿ ನಿಂತು ನೀ ನೋಡೋ
ಕಂತುಹರನ ಭಕ್ತಿ ಮಾಡುವುದು ಪಾಡೋ ॥ ೪ ॥

ಧರಿಯೊಳಗ ಹಜನಾಳ ಪುರವ
ಗುರು ಪಂಚಯ್ಯ ಹೇಳಿದನು ಭಕ್ತಿಯ ಕುಳವ
ಅರಿತುಕೊಂಡು ನೀನು ನಡೆಯೋ
ತ್ವರಿತದಿಂದಲಿ ಭವ ಸಾಗರವ ಗೆದಿಯೋ ॥ ೫ ॥


(ಈ ವಿವರಗಳನ್ನು ದೇವೇಂದ್ರಪ್ಪ ಹಜನಾಳ ಅವರು ನೀಡಿದ್ದಾರೆ.)
▯



ಪಂಚಯ್ಯ
ಸ್ವಾಮಿ
ಅವರ ಮನೆ



ಪಂಚಯ್ಯ
ಸ್ವಾಮಿ
ದಂಪತಿಗಳು
(ಪತ್ನಿ :
ತೇಜಮ್ಮ).



ಪಂಚಯ್ಯ
ಸ್ವಾಮಿ
ಅವರ ಸಮಾಧಿ

೧೮. ಶಂಕರದಾಸ (ಕ್ರಿ.ಶ. ೧೯೩೫)

ನೂರಾರು ಶಿಷ್ಯರನ್ನು ಹೊಂದಿರುವ ಶಂಕರದಾಸ ಅವರು ಇಂದು ಸಂಸಾರವನ್ನು ಬಿಟ್ಟು ಸಂಪೂರ್ಣವಾಗಿ ಆಧ್ಯಾತ್ಮದತ್ತ ಹೊರಳಿ ಬದುಕುತ್ತಿದ್ದಾರೆ. ಇಂದು ಅವರಿಗೆ ಎಪ್ಪತ್ತೈದು ವರ್ಷಗಳು ಮುಗಿದಿವೆ. ಅವರ ಮನೆಯೊಂದು ಸಂಸಾರ–ಆಧ್ಯಾತ್ಮಗಳ ಸಂಗಮದಂತೆ ಕಂಡು ಬರುತ್ತಿದೆ. ಶಂಕರದಾಸರು ಬದುಕಿನಲ್ಲಿ ವಿರಕ್ತಿಯನ್ನು ತಾಳಿ; ಅಥವಾ ದೇವರ ಸನ್ನಿಧಿಗೆ ದಾಸ್ಯಭಾವದಿಂದ ಶರಣರಾಗಿ ಏಕಾಂತಕ್ಕೆ ಹೋಗಿಲ್ಲ. ತಮ್ಮ ಮಕ್ಕಳು–ಸೊಸೆ–ಮೊಮ್ಮಕ್ಕಳೊಂದಿಗೆ ವಾಸವಾಗಿದ್ದಾರೆ. ಆದರೂ ಅವರು ಇಂದು "ನೀರಿನಲ್ಲಿರುವ ಕಮಲಪತ್ರ" ದಂತೆ ಅಹಿಕ ಬದುಕಿನಲ್ಲಿ ಇದ್ದಾರೆ. ಅಹಿಕ ಬದುಕಿನವರಿಗೆ ಆಧ್ಯಾತ್ಮಿಕ ಬದುಕಿನ ಸಂಸ್ಕಾರವನ್ನು ನೀಡುತ್ತಲಿದ್ದಾರೆ.

ಶಂಕರದಾಸ ಅವರ ತಂದೆ ಗುಂಡಪ್ಪದಾಸ ಅವರು. ಅವರೂ ಆಧ್ಯಾತ್ಮ ಪ್ರವೃತ್ತಿವುಳ್ಳವರೆ ಆಗಿದ್ದರು. ದ್ವೈತಸಿದ್ಧಾಂತಕ್ಕೆ ತಮ್ಮನ್ನು ತೊಡಗಿಸಿಕೊಂಡ ಅವರು 'ಹರಿದಾಸರ' ಹಾಡುಗಳನ್ನು ಹಾಡುತ್ತಿದ್ದರು. ಆದರೆ ಶಂಕರದಾಸ ಅವರು ಹರಿ–ಹರರ ಸಮನ್ವಯತೆಯನ್ನು ಕಾದುಕೊಂಡು ಬರುತ್ತಲಿದ್ದಾರೆ. ಅವರು ವಿಭೂತಿಯೊಂದಿಗೆ ಹಣೆಯ ಮೇಲೆ ದಾಸರಂತೆ 'ನಾಮ'ವೂ ಹಚ್ಚುತ್ತಾರೆ.

ಶಂಕರ ದಾಸರ ತಾಯಿ ನಾಗಮ್ಮ. ಗಂಡನ ಸಾಧನೆಯಲ್ಲಿ ಸಹವರ್ತಿಯಾಗಿದ್ದ ಗೃಹಿಣಿ.

ಶಂಕರದಾಸರು ಹತ್ತನೆಯ ತರಗತಿಯವರೆಗೆ ಓದಿಕೊಂಡವರಾಗಿದ್ದಾರೆ. ಅವರಿಗೆ ಕನ್ನಡ, ಹಿಂದಿ, ಮರಾಠಿ, ಮೋಡಿ ಭಾಷೆಗಳು ಬರುತ್ತವೆ. ಅವರು ಹೆಚ್ಚಾಗಿ ಶಿಷ್ಯರ ಮನೆಗಳಿಗೆ ಪ್ರವಾಸ ಮಾಡುತ್ತಲೇ ಇರುತ್ತಾರೆ. ಅವರ ಗುರುಗಳು ಔರಾದ ಗ್ರಾಮದ ಚಂದನದಾಸರು. ಅವರು ಶಿಷ್ಯರಾದ ಶಂಕರದಾಸರ ಮೇಲೆ ಅಪಾರ ಪ್ರೀತಿವುಳ್ಳವರಾಗಿದ್ದರು. ಹೀಗಾಗಿ ಆಗಾಗ ಶಂಕರದಾಸರ ಮನೆಗೆ ಬರುತ್ತಿದ್ದರು. ಸತ್ಸಂಗ ನಡೆಸುತ್ತಿದ್ದರು.

ಚಂದನದಾಸರು ತಮ್ಮ ಅಂತಿಮ ಬದುಕನ್ನು ಶಂಕರದಾಸ ಅವರ ಮನೆಯಲ್ಲಿಯೇ ಪೂರೈಸಿದರು. ಹೀಗಾಗಿಯೇ ಅವರ ಸಮಾಧಿಯು ಶಂಕರದಾಸ ಅವರ ಮನೆಯಲ್ಲಿಯೇ ಕಾಣುವಂತಾಗಿದೆ.

ಶಂಕರದಾಸ ಅವರ ಪತ್ನಿ ಅಂಬವ್ವ. ಈ ದಂಪತಿಗಳಿಗೆ ಸ್ವಂತ ಮಕ್ಕಳಿಲ್ಲ. ಅವರು ಬೇರೆಯ ಮಕ್ಕಳನ್ನು ಸಾಕಿಕೊಂಡಿದ್ದಾರೆ. ಈ ವಿಷಯದಲ್ಲಿ ಶಂಕರದಾಸರು ಹೇಳುವ ಮಾತುಗಳು ಅರ್ಥ ಪೂರ್ಣವೆನಿಸುತ್ತವೆ:

"ನಮ್ಮ ಹೊಟ್ಟೆಯಿಂದ ಯಾವುದೇ ಮಕ್ಕಳು ಹುಟ್ಟಲಿಲ್ಲ; ನಮಗೆ ಸ್ವ ಸಂತತಿಯ ಬಗೆಗೆ ಅಂತಹ ಆಶೆಯೆ ಇರಲಿಲ್ಲ. ಇಲ್ಲ ಎನ್ನುವ ಕೊರಗೂ ಇಂದಿಲ್ಲ. ಹೊಟ್ಟೆಯಿಂದ ಹುಟ್ಟಿದ ಮಕ್ಕಳು ಕರ್ಮದ ಮಕ್ಕಳು. ನಾವು ಇಂದು ನಮ್ಮ ಮನೆಯಲ್ಲಿ ಸಾಕಿಕೊಂಡು ಪೋಷಿಸುತ್ತಿರುವುದು ಧರ್ಮದ ಮಕ್ಕಳನ್ನು".

ಶಂಕರದಾಸರ ಕಾಯಕವು ಶಿಷ್ಯರಿಗೆ ಉಪದೇಶ ಮಾಡುವುದು; ಅದಕ್ಕಾಗಿ ಪರಸ್ಥಳಗಳಿಗೆ ಸಂಚಾರಕೈಗೊಳ್ಳುವುದು; ಜ್ಯೋತಿಷ್ಯ ಹೇಳುವುದು, ಸತ್ಯನಾರಾಯಣ, ವರದಾಶಂಕರ, ರುದ್ರಾಭಿಷೇಕದಂತಹ ಪೂಜೆಗಳನ್ನು ಮಾಡಿಸುವುದು. ಶಂಕರದಾಸರು ಮೂಲತಃ ದಲಿತ ಸಮಾಜದವರು. ಆದರೆ ಅವರಲ್ಲಿಗೆ ಎಲ್ಲ ವರ್ಗದ ಜನರು ಬರುತ್ತಾರೆ. ಅವರ ಭಕ್ತಿಯ ಪ್ರವಚನಗಳನ್ನು ಕೇಳುತ್ತಾರೆ. ಅವರ ಶಿಷ್ಯ ಸಮೂಹದಲ್ಲಿ ಎಲ್ಲ ವರ್ಗದ ಜನರೂ ಇದ್ದಾರೆ.

ಶಂಕರದಾಸರು ತತ್ತ್ವಪದಗಳನ್ನು ಬರೆಯುತ್ತಾರೆ. ಬರವಣಿಗೆಯ ವೃತ್ತಿ ಕುರಿತು ಹೇಳುವ ಅವರ ಮಾತುಗಳು ಹೀಗಿವೆ: "ನಾನು ಮೊದಲಿಗೆ ಬರೀ ಹಾಡುಗಳನ್ನು ಹಾಡುತ್ತಿದ್ದೆನು. ಏಕತಾರಿಯ ವಾದ್ಯದ ಮೇಲೆ ಹಾಡುಗಳನ್ನು ಹಾಡುವುದೆಂದರೆ ನನಗೆ ಎಲ್ಲಿಲ್ಲದ ಹುರುಪು ಬರುತ್ತಿದ್ದಿತು. ಹೀಗಾಗಿ ಏಕತಾರಿಯೊಂದಿಗೆ ಭಜನೆ ಹಾಡುಗಳನ್ನು ಹಾಡುತ್ತ ಭಜನೆ ಮಾಡುತ್ತಿದ್ದೆನು. ಒಂದು ದಿನ ನನ್ನ ಗುರುಗಳಾದ ಚಂದನದಾಸ ಅವರು ನನಗೆ ಹಾಡು ರಚಿಸಲು ಅಪ್ಪಣೆ ಕೊಟ್ಟರು. ಅವರು ನೂರಾ ಏಳು ವರ್ಷಗಳ ಕಾಲ ಜೀವಿಸಿದ್ದರು, ಇಚ್ಛಾ ಮರಣಿಗಳಾಗಿದ್ದರು; ಪವಾಡ ಪುರುಷರಾಗಿದ್ದರು. ಅವರು ನನಗೆ ಅಧಿಕಾರ ಕೊಟ್ಟಮೇಲೆ ನಾನು ಪದ್ಯ ಬರೆಯುವುದಕ್ಕೆ ಆರಂಭ ಮಾಡಿದೆನು. ಇಂದು ನಾನು ಹಲವಾರು ತತ್ತ್ವಪದಗಳನ್ನು ರಚಿಸಿರುವುದಕ್ಕೆ ಚಂದನದಾಸ ಗುರುಗಳ ಉತ್ತೇಜನವೇ ಕಾರಣವಾಗಿದೆ".

ಶಂಕರದಾಸರು ಶಾಂತಸ್ವಭಾವಿ. ಹೆಚ್ಚು ಮೌನವಾಗಿಯೇ ಇರುತ್ತಾರೆ. ಅವರ ಮನೆಯಲ್ಲಿನ ಪೂಜಾಗೃಹದಲ್ಲಿ ಅವರು ಕಣ್ಣು ಮುಚ್ಚಿಕೊಂಡು ಕುಳಿತು ಬಿಡುತ್ತಾರೆ. ಹೊರಗಿನ ಯಾವ ಗದ್ದಲಗಳಿಗೂ ಅವರು ಕಿವಿಗೊಡವುದಿಲ್ಲ, ತಾವಾಯಿತು ತಮ್ಮ ಧ್ಯಾನವಾಯಿತು.

ನೂರಾರು ತತ್ತ್ವಪದಗಳನ್ನು ರಚಿಸಿದ ಶಂಕರದಾಸ ಅವರಿಗೆ ವಚನ ಪರಂಪರೆಯ ಬಗೆಗೂ ಆಸಕ್ತಿಯಿದೆ. ಅವರು ಹಲವಾರು ವಚನಗಳನ್ನು ಓದಿಕೊಂಡಿದ್ದಾರೆ. ಕನ್ನಡ,

ಮರಾಠಿ, ಹಿಂದಿ ಸಾಹಿತ್ಯದ ತಕ್ಕ ಮಟ್ಟಿನ ಪರಿಚಯವೂ ಅವರಿಗಿದೆ. ಶಂಕರದಾಸರು ರಚಿಸಿದ ತತ್ತ್ವಪದಗಳಿಗೆ ಎರಡು ಪ್ರಕಾರದ ಮುದ್ರಿಕೆಗಳಿರುವುದನ್ನು ಕಾಣುತ್ತೇವೆ. ಒಂದು ಅವರ ಸ್ವ ನಾಮದ ಮುದ್ರಿಕೆ, ಇನ್ನೊಂದು ತಮ್ಮ ಗುರುಗಳ ಹೆಸರಿನ ಮುದ್ರಿಕೆ. ಇಲ್ಲಿ ಅವರ ಎರಡು ಪದ್ಯಗಳನ್ನು ನಿದರ್ಶನಕ್ಕಾಗಿ ಕೊಡಲಾಗಿದೆ:

ದೇವರ ದಾಸನಿಗೆ ಯಾರ ಹಂಗಿಲ್ಲ


ದಾಸನು ನಾನು ದಾಸನೋ
ದೇವರ ದಾಸನಿಗೆ ಯಾರ ಹಂಗಿಲ್ಲ ॥ ಪ ॥

ಹಣಕ್ಕೆ ದಾಸನು ನಾನಲ್ಲ
ಹೆಣ್ಣಿಗೆ ದಾಸನು ನಾನಲ್ಲ
ಮಣ್ಣಿಗೆ ದಾಸನು ನಾನಲ್ಲ
ದೇವರಿಗೆ ದಾಸನಾದವನಿಗೆ ಹಂಗಿಲ್ಲ ॥ ೧ ॥

ಅಧಿಕಾರಿಗೆ ದಾಸನು ನಾನಲ್ಲ
ಸಿರಿವಂತಿಕೆಗೆ ದಾಸನು ನಾನಲ್ಲ
ರಾಜಕಿಗೆ ದಾಸನು ನಾನಲ್ಲ
ರಾಜ ರಾಜ ಪರಮಾತ್ಮಗೆ ದಾಸ ನಾನು ॥ ೨ ॥
ವೇಷವ ಹಾಕಿದವನು ದಾಸಲ್ಲ
ಘಾಷಿಯ ಮಾಡುವವನು ದಾಸಲ್ಲ
ಮೋಸವ ಮಾಡುವವನು ದಾಸಲ್ಲ
ಕೂಸಾಗಿ ನಡೆಯುವವನು ದಾಸನು ॥ ೩ ॥


ರೋಷವ ಬಿಟ್ಟವ ದಾಸನು
ಭಾಷೆಯ ಕೊಟ್ಟವ ದಾಸನು
ಲೇಸಿಲೆ ನಡೆದವ ದಾಸನು
ವಾಸಿನ ಮನೆಯವನು ದಾಸನು ॥ ೪ ॥

ಮಮಕಾರ ಬಿಟ್ಟವ ದಾಸನು
ಅಹಂಕಾರ ಅಳಿದವ ದಾಸನು



ಶಂಕರದಾಸ ಅವರ ಮನೆ
(ಬಾಳೂರು).

ಶಂಕರದಾಸ.





ಏಕನಾದದೊಂದಿಗೆ ಶಂಕರದಾಸರು.

ಬಡಿವಾರ ಬಿಟ್ಟವನು ದಾಸನು
ಒಡಲಿಗಿ ಮೈಯಾಂತವ ಯಾತರ ದಾಸನು ? ॥ ೫ ॥

ಪೊಡವಿಯೊಳಗ ನಮ ಬಾಳೂರ ಈಶಾ
ಹಾನಪ್ಪ ಅಲ್ಲಿ ಚಂದನದಾಸ
ಹೇಳ್ಯಾರ ಶಂಕರ ದಾಸಾಗಿ ಕೋಶಾ
ಎಲ್ಲರಿಗೂ ಮಾಡ್ಯಾರ ಅದೇ ಉಪದೇಶಾ ॥ ೬ ॥

ಹೀನ ಗುಣದ ಶ್ವಾನ ಮನುಶಾ

ಹೀನ ಗುಣದ ಶ್ವಾನ ಮನುಶ್ಯಾಗ ಬುದ್ಧಿಯಿಲ್ಲ
ಅವನು ಶುದ್ಧ ಗುರುವಿನ ಮಾತಾ ಒಂದು ಕೇಳಲಿಲ್ಲ ॥ ಪ ॥


ನಾ ನಾ ಅಂತ ಬಡಿವಾರ ಮಾಡಿ ಹಾರ್‍ಯಾಡ್ಯಾನಲ್ಲ
ಅವನ ಅಂತರಂಗವಂತೂ ಮೊದಲೆ ಶುದ್ಧಿಯಿಲ್ಲ
ದೇವರ ಖೂನಾ ಅವನಿಗೆ ಗೊತ್ತೆಯಿಲ್ಲ
ಶ್ವಾನಾಗಿ ಬೊಗಳೊದು ತಪ್ಪಾದಿತಲ್ಲ ॥ ೧ ॥

ಮಾನವಂತರಿಗಿದು ಕಾಲವಲ್ಲ
ಹೀನವಂತರಿಗಿದು ಮ್ಯಾಲೆ ಮ್ಯಾಲ
ನೀಚ ಬುದ್ಧಿವಂತರೀಗಿ ಭಾರಿ ಮಾನ
ನೀತಿಲಿಂದ ನಡ್ಯಾವರೀಗಿ ದೊಡ್ಡ ಅವಮಾನ ॥ ೨ ॥


ಬಾಳೂರ ಗ್ರಾಮದ ಶಂಕರದಾಸ ಹೆಳ್ಯಾನಲ್ಲ
ಏಳೂರಿಗೆ ಮ್ಯಾಲ ಚಂದನದಾಸನ ಶಿಷ್ಯನಲ್ಲ
ಹಾಳಾಗ ಬ್ಯಾಡರಿ ಹೀನ ಗುಣ ಬಿಡಿರಿ
ಬಾಳುವೆ ಮಾಡಿರಿ ಸುಖವ ಪಡಿರಿ ॥ ೩ ॥

(ಈ ವಿವರಗಳನ್ನು ಸ್ವತಃ ಕವಿಗಳೇ ನೀಡಿದ್ದಾರೆ.)


▯




ಚಂದನದಾಸರ ಸಮಾಧಿ (ಬಾಳೂರು)



ಶಂಕ ದಾಸರ ಆಧ್ಯಾತ್ಮ ಸಾಧನೆಯ ಸ್ಥಳ.



ಶಂಕರದಾಸರು ಧರ್ಮಸಂತತಿಗಳೊಂದಿಗೆ



ಶಂಕರದಾಸರ ಗುರುಗಳಾದ ಚಂದನದಾಸರ ಛಾಯಾಚಿತ್ರ

ಮಸ್ತಾನಲಿ ಸಾಹೇಬರ ಹೆಂಡತಿ ಅಬ್ಬಲ್‌ಬಿ. ಈ ದಂಪತಿಗಳಿಗೆ ಒಟ್ಟು ಆರು ಜನ ಮಕ್ಕಳು. ಅವರಲ್ಲಿ ಐದು ಜನ ಗಂಡು ಮಕ್ಕಳು, ಒಬ್ಬಳು ಹೆಣ್ಣು ಮಗಳು. ಗಂಡು ಮಕ್ಕಳಾದ ಸಯ್ಯದ್, ಶೌಕತ್, ಮಕ್ಸದ್, ತುರಾಬಲಿ, ಇಸುಫಅಲಿ ಇವರು ಇಂದು ಸ್ವತಂತ್ರವಾಗಿ ಉದ್ಯೋಗ ಮಾಡಿಕೊಂಡು ಬದುಕುತ್ತಿದ್ದಾರೆ.

ಮಸ್ತಾನಲಿ ಅವರು ಪರಮ ದೈವೀ ಭಕ್ತರಾಗಿದ್ದರು. ಆರಾಧ್ಯ ದೇವರಾದ ಹಜರತ್ ಮೌಲಾಲಿಯಲ್ಲಿ ಅವರದು ಅಪ್ರತಿಮ ಭಕ್ತಿ. ತಂದೆಯಂತೆ ಅವರಿಗೆ ಸರ್ವಧರ್ಮಗಳಲ್ಲಿ ಸಮನ್ವಯದ ಭಾವನೆಯಿದ್ದಿತು. ಮಸ್ತಾನಲಿ ಅವರು ಕನ್ನಡದಲ್ಲಿ ಹಲವಾರು ತಾತ್ವಿಕ ಗ್ರಂಥಗಳ ಅಭ್ಯಾಸ ಮಾಡಿದವರಾಗಿದ್ದಾರೆ. ಅವರಿಗೆ ಬಸವಾದಿ ಶರಣರ ವಚನಗಳ ಪರಿಚಯವಿದ್ದಿತು. ಅದರಲ್ಲೂ ಬಸವಣ್ಣನವರ ಬಗೆಗೆ ಅಪಾರ ಭಕ್ತಿಯಿದ್ದಿತು. ಆದುದರಿಂದಲೇ ಅವರು ಬಸವಣ್ಣನವರ ಜೀವನ–ಸಾಧನೆಗಳನ್ನಾಧರಿಸಿದಂತೆ ಹಲವಾರು ತತ್ತ್ವಪದಗಳನ್ನು ಬರೆದರು, ಹಾಡಿದರು. ಮಸ್ತಾನಲಿಯೆಂಬ ಹೆಸರಿನ ಅವರ ಮೊಮ್ಮಗ ಈಗ ಇದ್ದಾನೆ. ಅವನಿಗೆ ತನ್ನ ಅಜ್ಜನ ಬಗೆಗೆ ಬಹಳ ಗೌರವವಿದೆ. "ನೀನು ಏನಾಗುತ್ತಿ?" ಎಂದು ಕೇಳಿದರೆ "ನಾನು ನನ್ನ ಅಜ್ಜನ ಹಾಗೆ ಕವಿ ಆಗಬೇಕೆನ್ನುತ್ತೇನೆ" ಎಂದು ಹೇಳುತ್ತಾನೆ. ಅವನು ಮಸ್ತಾನಲಿ ಅವರ ಹಾಡುಗಳನ್ನು ಹಾಡುತ್ತಾನೆ.

ಮಸ್ತಾನಲಿ ಅವರ ಮಗನಾದ ಸಯ್ಯದ್ ಶೌಕತಲಿ ಅವರು ತಮ್ಮ ತಂದೆ ಅವರನ್ನು ಕುರಿತು ಹೀಗೆ ಹೇಳುತ್ತಾರೆ: "ನಮ್ಮ ತಂದೆ ಅವರು ಶ್ರದ್ಧಾವಂತ ಮುಸಲ್ಮಾನರಾಗಿದ್ದಂತೆ, ಶ್ರದ್ಧಾವಂತ ಹಿಂದೂಗಳು ಆಗಿದ್ದರು. ಅವರಿಗೆ ಇಸ್ಲಾಂ ದೇವರಲ್ಲಿ ಭಕ್ತಿಯಿದ್ದಂತೆ, ಬಸವಣ್ಣನಲ್ಲೂ ಭಕ್ತಿಯಿದ್ದಿತು. ಈ ಊರಿನಲ್ಲಿ ಅವರು ಮೊಟ್ಟ ಮೊದಲಿಗೆ ಬಸವಣ್ಣನವರ ಬಗೆಗೆ ಹಾಡುಕಟ್ಟಿ ಸಭೆಯಲ್ಲಿ ಹಾಡಿದರು.

ಅವರು ಮೋಹರಂ ಹಾಡುಗಳನ್ನು ಬರೆದಿದ್ದಾರೆ. ಆ ಹಾಡುಗಳಲ್ಲಿಯೂ ಅವರು ಬಸವಣ್ಣನವರನ್ನು ಸ್ಮರಿಸಿದ್ದಾರೆ. ಅವರದು ಅಸದೃಶವಾದ ಭಾವೈಕ್ಯ ಸಾಧನೆ. ಮೋಡಿ, ಮರಾಠಿ, ಉರ್ದುಗಳ ಭಾಷಾ ಪ್ರಾಭಲ್ಯವಿದ್ದ ಈ ಭಾಗದಲ್ಲಿ ನಮ್ಮ ತಂದೆಯವರು ಮುಸಲ್ಮಾನರಾಗಿಯೂ ಕನ್ನಡವನ್ನು ತಮ್ಮ ನಾಲಗೆಯ ನುಡಿಯಾಗಿಸಿಕೊಂಡರು. ಕನ್ನಡದಲ್ಲಿ ಹಾಡುಗಳನ್ನು ಕಟ್ಟಿದರು. ಕನ್ನಡ ಹಾಡುಗಳನ್ನು ಸಭೆ– ಸಮಾರಂಭಗಳಲ್ಲಿ ಹಾಡಿದರು. 'ಕನ್ನಡದ ಕಂದ' ಎಂಬ ಬಿರುದು ಪಡೆದರು. ಕೆಲವು ಸಂಪ್ರದಾಯ ಮನದ ಮುಸಲ್ಮಾನರು ನಮ್ಮ ತಂದೆಯವರಿಗೆ ಜಾತಿಯಿಂದ ಬಹಿಷ್ಕಾರ ಹಾಕಬೇಕೆಂದು ಒಳಗೊಳಗೆ ಸಂಚು ಮಾಡಿದರು. ಅದರ ಸುದ್ದಿ ತಂದೆಯವರಿಗೆ ಹತ್ತಿತು. ಆದರೆ ಅವರು ಧೈರ್ಯಗೆಡಲಿಲ್ಲ, ಅವರ ಬಗೆಗೆ ಕೆಟ್ಟ ಮಾತುಗಳನ್ನು ಆಡಲಿಲ್ಲ. ಸಮಾಧಾನದಿಂದಲೇ ಇದ್ದರು. ತಮ್ಮ ಕಾರ್ಯವನ್ನು ಯಥಾವತ್ತಾಗಿ ಮಾಡುತ್ತಲೇ

೧೯. ಮಸ್ತಾನಲಿ ಇಸ್ಮಾಯಿಲ್ ಸಾಹೇಬ ಮಚಕುರಿ
(ಕ್ರಿ.ಶ.ಸು. ೧೯೩೬-೧೯೯೬)

ಬೀದರ ಜಿಲ್ಲೆಯ ಭಾಲ್ಕಿ ತಾಲ್ಲೂಕಿನಲ್ಲಿ ಬರುವ ಕಣಜಿ ಗ್ರಾಮವು ಹಲವಾರು ತತ್ತ್ವಪದಕಾರರನ್ನು ಹೊಂದಿದ ಚಿಕ್ಕ ಗ್ರಾಮವಾಗಿದೆ. ಭೌಗೋಳಿಕವಾಗಿ ಅದರ ವ್ಯಾಪ್ತಿ ಚಿಕ್ಕದ್ದೆ. ಆದರೆ ಸಾಂಸ್ಕೃತಿಕ ಸತ್ವದ ದೃಷ್ಟಿಯಿಂದ ವಾಙ್ಮಯ ಚರಿತ್ರೆಯಲ್ಲಿ ಉಳಿಯುವ ಗ್ರಾಮವಾಗಿದೆ. ಈ ಗ್ರಾಮದ ಮುಸ್ಲೀಮ ತತ್ತ್ವಪದಕಾರರೊಬ್ಬರು ನಿಜಾಮ ರಾಜ್ಯದಲ್ಲಿ ಕನ್ನಡದ ಮಹತ್ವ ಎತ್ತಿ ಹಿಡಿದುದು ಅಂದಿನ ಕಾಲ ಸಂದರ್ಭದ ದೃಷ್ಟಿಯಿಂದ ಅತ್ಯಂತ ಮಹತ್ವದ ಸಂಗತಿಯಾಗಿ ನಿಂತುಕೊಳ್ಳುತ್ತದೆ. ಈ ಮಹತ್ವದ ಘಟನೆಗೆ ಕಾರಣರಾದವರು ಮಸ್ತಾನಲಿ ಇಸ್ಮಾಯಿಲ್ ಸಾಹೇಬ ಮಚಕುರಿ.

ಮಸ್ತಾನಲಿ ಇಸ್ಮಾಯಿಲ್ ಸಾಹೇಬರು ದಿ:೨೫-೧-೧೯೯೬ರಂದು ಪೈಗಂಬರ ವಾಸಿಗಳಾಗಿ ಹೋಗಿದ್ದಾರೆ. ಆದರೆ ಅವರು ರಚನೆ ಮಾಡಿದ ತತ್ತ್ವಪದಗಳು ಕಣಜಿ ಗ್ರಾಮ ಮತ್ತು ಅದರ ಸುತ್ತ ಮುತ್ತಲಿನ ಪ್ರದೇಶದಲ್ಲಿ ಝೇಂಕರಿಸುತ್ತಲಿವೆ. ತನ್ಮೂಲಕ ಮಸ್ತಾನಲಿ ಅವರ ಹೆಸರು ಚಿರವಾಗಿ ಉಳಿಯುವಂತಾಗಿದೆ.

ಮಸ್ತಾನಲಿ ಅವರ ತಂದೆ ಇಸ್ಮಾಯಿಲ್ ಸಾಹೇಬರು; ಶ್ರದ್ಧಾವಂತ ಮುಸ್ಲೀಮರು. ದಿನಾಲು ದರ್ಗಾಕ್ಕೆ ಹೋಗಿ ಐದು ಸಲ ನಮಾಜು ಮಾಡುತ್ತಿದ್ದರು. ಅವರಲ್ಲಿ ಸಮಾನಧರ್ಮ-ಸಮಾನತ್ವದ ದೃಷ್ಟಿಯಿದ್ದಿತು. ಊರಿನ ಹಜರತ್ ಮೌಲಾಲಿ ಅವರನ್ನು ಭಕ್ತಿಯಿಂದ ನಡೆದುಕೊಳ್ಳುತ್ತಿದ್ದಂತೆ ಅವರು ಹನ್ನೆರಡನೆಯ ಶತಮಾನದ ಬಸವಣ್ಣನವರಲ್ಲಿಯೂ ಭಕ್ತಿ ಭಾವವುಳ್ಳವರಾಗಿದ್ದರು. ಇಸ್ಮಾಯಿಲ್ ಸಾಹೇಬರ ಹೆಂಡತಿ ಮಮತಾಜ ಬೇಗಂ. ಈ ದಂಪತಿಗಳ ಉದರದಿಂದ ಮಸ್ತಾನಲಿ ಅವರು ಕ್ರಿ.ಶ ೧೯೩೬ನೇ ವರ್ಷದಲ್ಲಿ ಜನಿಸಿದರು. ಅವರ ಮನೆತನದ ಹೆಸರು "ಮಚಕುರಿ" ಎಂಬುದಾಗಿತ್ತು. ಇಸ್ಮಾಯಿಲ್ ಸಾಹೇಬರು ಕೃಷಿಕಾಯಕ ಮಾಡುತ್ತಿದ್ದರು.

ಮಸ್ತಾನಲಿ ಅವರು ಏಳನೆಯ ತರಗತಿಯವರೆಗೆ ಶಿಕ್ಷಣ ಹೊಂದಿದರು. ಅವರಿಗೆ ಕನ್ನಡ, ಮರಾಠಿ, ಮೋಡಿ, ಉರ್ದು, ಪಾರ್ಸಿ ಭಾಷೆಗಳು ಬರುತ್ತಿದ್ದವು. ಜೀವನದ ನಿರ್ವಹಣೆಗಾಗಿ ಅವರು ಕೃಷಿಯೊಂದಿಗೆ ಆಹಾರ ಧಾನ್ಯಗಳನ್ನು ವಿತರಿಸುವ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದರು.

ಮನದೊಳಗ ಮನಿಮಾಡಿ
ಮಾದೇವ ಕುಂತಾನ
ಅವ ಹೇಳಿದಾಂಗ ನೀನು
ನಡಿಬೇಕು ತಮ್ಮಾ ॥ ೩ ॥

ಅಡಿಗಡಿಗಿ ನಡುಗುತಿ ಯಾಕ ?
ಅನ್ಯರೆಡಗಿ ನೋಡುತಿ ಯಾಕ ?
ಬಿಡು ಬಾಹ್ಯದ ಡಂಭವನು
ಮನದೊಳ ನಂಬು ಶಿವವನು ॥ ೪ ॥

ಮೂರು ದಿನಕಾಗಿ ನೀನು ಬಂದಿ
ಆರೂ ದಿನಾ ನೀ ಇಲ್ಲೇ ಇರುತೀನಿ ಅಂದಿ
ಅವರ – ಇವರ ಮಾತು ಕೇಳಿ ನಿನ್ನ ನೆಲ ಕಳಕೊಂಡಿ
ಮನಸ್ಸಿನ ಮಾತಿಗಿ ನೀ ಕಿವಿ ಕೊಡದೆ ಹ್ವಾದಿ ॥ ೫ ॥

ಜನರೇನು ಮಾಡುವರು ?
ಕೊಡವರಾ, ಕೊಸ್ಯಾವರಾ ?
ನಿನ್ನ ಜೀವನಕೆ ನೀನೆ ಹೊಣೆಗಾರ
ಚನ್ನಾಗಿ ತಿಳಿಬೇಕು ಸುಳ್ಳ ಸಂಸಾರ ॥ ೬ ॥

ದೇಶದೊಳಗ ಅದ ಕಣಜಿ
ಮಸ್ತಾನಲಿ ಹೇಳ್ಯಾನ ನಡಿ ಅಂಜಿ
ಲೋಕದ ಮಾತು ಕೇಳಿ ನೀ ಆದಿ ಬಂಜಿ
ಮೂಕನಾಗಿ ನೀ ಜ್ವಾಕೀಲಿರು ಬಡಮಂಜಿ ॥ ೭ ॥

ಮೋಹರಮ್ ಹಬ್ಬಾ

ಮೋಹರಮ್ ಹಬ್ಬಾ
ಎಷ್ಟು ದಿನದಬ್ಬಾ
ಪಾಂಚ ದಿನಕ ಪಾಜಾ ಮುಟ್ಟಿಸಿ
ಮುಗಿಸಿ ಬಿಡಬೇಕು ಹಬ್ಬಾ ॥ ಪ ॥

ಹೋದರು. ನಮ್ಮ ತಂದೆ ಅವರು ಅತ್ಯಂತ ಶಾಂತ ಮತ್ತು ಸಮಾಧಾನದಿಂದ ಇರುತ್ತಿದ್ದರು. ಹೀಗಾಗಿ ಅವರಿಗೆ ಯಾರೂ ಏನೂ ಮಾಡುವುದಕ್ಕೆ ಸಾಧ್ಯವಾಗಲಿಲ್ಲ. ನಮ್ಮ ತಂದೆ ಅವರಿಗೆ ಒಳಗೊಳಗೆ ಬೈದವರು ಇಂದು ಸತ್ತು ಹೋಗಿದ್ದಾರೆ. ಅವರ ಹೆಸರು ಇಂದು ಯಾರಿಗೂ ಗೊತ್ತಿಲ್ಲ, ಆದರೆ ನಮ್ಮ ತಂದೆಯವರು ಎಲ್ಲವನ್ನು ಒಳ್ಳೆಯತನದಿಂದ ನೋಡಿ; ಎಲ್ಲರಿಗೂ ಒಳ್ಳೆಯದನ್ನು ಮಾಡಿ, ಪೈಗಂಬರವಾಸಿಯಾದರೂ; ಉಳಿದು ಕೊಂಡಿದ್ದಾರೆ".

ಮಸ್ತಾನಲಿ ಸಾಹೇಬರು ಹಲವಾರು ಮೋಹರಮ್ ಹಾಡುಗಳನ್ನು ಕಟ್ಟಿದರು. ಬಸವಣ್ಣನರ ಬಗೆಗಿನ ಸಮಾರಂಭಗಳಲ್ಲಿಯಂತೆ, ಅವರು ಮೋಹರಮ್ ಹಬ್ಬದ ಆಚರಣೆಯಲ್ಲಿಯೂ ಉತ್ಸಾಹದಿಂದ ಭಾಗವಹಿಸುತ್ತಿದ್ದರು. ಮೋಹರಮ್ ಹಾಡುಗಳನ್ನು ಹಾಡುತ್ತಿದ್ದರು. ಅಲಾವಿಯ ಕುಂಡದ ಸುತ್ತಲೂ ಹೆಜ್ಜೆ ಹಾಕಿ ಕುಣಿಯುತ್ತಿದ್ದರು.


ಅವರು ಬರೆದ ತತ್ತ್ವಪದಗಳಲ್ಲಿ ಹೆಚ್ಚಿನ ಹಾಡುಗಳು ಕಾಲ ಗರ್ಭದಲ್ಲಿ ಸೇರಿ ಹೋಗಿವೆ. ಅಳಿದು ಉಳಿದ ಕೆಲವು ಹಾಡುಗಳನ್ನು ಅವರ ಕೆಲವು ಶಿಷ್ಯರು ಹಾಡುತ್ತಾರೆ. ಅವರು ತತ್ತ್ವಪದಗಳಿಗೆ ಸ್ವನಾಮವನ್ನು ಅಂಕಿತವಾಗಿ ಇಟ್ಟಿದ್ದಾರೆ. ಅವರ ಎರಡು ಹಾಡುಗಳನ್ನು ಇಲ್ಲಿ ಕೊಡಲಾಗಿದೆ:

ಮನಕ್ಕಂಜಿ ನಡಿ


ಜನಕ್ಯಾಕ ಅಂಜುತಿ ತಮ್ಮಾ
ನಿನ್ನ ಮನಕ್ಕಂಜಿ ಸರಿಯಾಗಿ ನಡಕೋರೊ ॥ ಪ ॥

ಭೂಮಿಗಿ ಬಂದೀದಿ ಯಾತಕ್ಕ ?
ನಿನ್ನ ಮನಸ್ಸೀಗಿ ಅಂಜಿ ನಡೆಯಾಕ್ಕ
ಜನರೀಗಿ ಸುಖವ ಕೊಡುವದಕ್ಕ
ಜನರ ಮನದಾಗ ಪೂರಾ ಉಳಿವದಕ್ಕ ॥ ೧ ॥

ಹ್ಯಾಂಗ ನಡೀತಿ ಹೇಳು ತಮ್ಮಾ ?
ವಂಕಾಗಿ ನಡೆದರ ಕೊಂಕಾ ಅನತಾರ
ಸೀದಾ ನಡೆದರ ಭಾಳ ಸೊಕ್ಕ ಅನುತಾರ
ಬಾಗಿ ನಡೆದಾರ ಡೂಗಾ ಅನುತಾರ ॥ ೨ ॥



ಮಸ್ತಾನಲಿ ಇಸ್ಮಾಯಿಲ್ ಸಾಹೇಬರ ಮನೆ (ಕಣಜಿ).



ಮಸ್ತಾನಲಿ ಅವರ ಭಾವಚಿತ್ರ


ಹಬ್ಬಾ ಬಂದಾಗೆ ಚ್ವಾಂಗ್ಯಾ ಮಾಡು
ಹಬ್ಬಾ ಬಂದಾಗ ಚಪಾತಿ ಮಾಡು
ಮಸೂತ್ಯಾಗ ಹೋಗಿ ನಮಾಜ ಮಾಡು
ಅಲ್ಲಾನ ಸನ್ನಿಧಿಗೆ ಕೂಡು ॥ ೧ ॥

ಅಲಾವಿ ಕುಂಡಾ ಹೊರಗ ತೆಗಿಯೋ
ಚಂದ್ರನ ಕಂಡರ ದೀನ ಹೊಡಿಯೋ
ಧುಲಾ ಧುಲಾಯೆಂದು ಕುಣಿ ಕುಣಿದಾಡೋ
ಮುಲ್ಲಾನ ಸಂಗಾಟ ಪ್ರಾರ್ಥನಿ ಮಾಡೋ ॥ ೨ ॥


ಕಳೆದು ಹೋದರ ಮೋರಮ್
ಮರಳಿ ಮತ್ತ ಬರಾದು ವರ್ಷಕೆ ಅಣ್ಣಾ
ಅರುವಿನ ಜನ್ಮ ಸಿಕ್ಕಿದ್ದು ದುರ್ಲಭ
ಅದಕ್ಕಿಂತ ದೊಡ್ಡದು ಇಲ್ಲ ಲಾಭ ॥ ೩ ॥

ಧರಿಯೊಳು ಕಣಜಿ ಊರಾದ
ಅಲ್ಲಿ ಮಸ್ತಾನಲಿಯ ಪೀರಾದ
ಅಲಾಯಿ ಆಡಿ ನೋಡೋ
ಅಲ್ಲಾನಲ್ಲಿ ಕೂಡಿ ನೋಡೋ ॥ ೪ ॥


(ಈ ವಿವರಗಳನ್ನು ಕಣಜಿಯಲ್ಲಿ ವಾಸವಾಗಿರುವ ಕವಿಯ ವಂಶಸ್ಥರು ನೀಡಿದ್ದಾರೆ.)



ಮಸ್ತಾನಲಿ ಅವರ ಆರಾಧ್ಯ ದೇವರು ಹಜರತ್ ಮೌಲಾಲಿ ದರ್ಗಾ
(ಕಣಜಿ)



ಮಸ್ತಾನಲಿ ಅವರ ಸಮಾಧಿ



ಮಸ್ತಾನಲಿ ಸಾಹೇಬರ ಕರಳು-ವಂಶಸಂಬಂಧಿಗಳು.



ಮಸ್ತಾನಲಿ ಅವರ ಆರಾಧ್ಯದೇವರು ಬಸವೇಶ್ವರ
ದೇವಾಲಯ (ಕಣಜಿ)

ಹಣಮಂತ ಅವರು ಆಧ್ಯಾತ್ಮದ ಹಸಿವನ್ನು ಹೊಂದಿ; ಅದನ್ನು ಭರಿಸಿಕೊಳ್ಳುವುದಕ್ಕಾಗಿಯೇ ಜೀವನ ಪೂರ್ತಿ ಸವೆಸುತ್ತಿದ್ದಾರೆ. ಅವರಿಗೆ ಅಹಿಕವಾದ ಬದುಕಿನೆಡೆಗೆ ಅಷ್ಟು ಲಕ್ಷವಿಲ್ಲ, ಅವಲಂಬಿತರ ಹೊಟ್ಟೆಗಳನ್ನು ತುಂಬಿಸಬೇಕೆಂದು ಕೆಲಸ ಮಾಡುತ್ತಾರೆ. ಅದು ಅವರಿಗೆ ಅನಿವಾರ್ಯವೆ. ಆದರೆ ಅವರ ಮನಸ್ಸು ಹೆಚ್ಚು ಲೀನವಾಗಿರುವುದು ದೈವೀ ಸನ್ನಿಧಿಯಲ್ಲಿ.

ದಿನನಿತ್ಯ ಅವರು ಬೆಳಗಿನಜಾವ ಏಳುತ್ತಾರೆ. ಮನೆಯ ಅಂಗಳದ ಕಸವನ್ನು ಗುಡಿಸುತ್ತಾರೆ. ಜಳಕ ಮಾಡುತ್ತಾರೆ. ಊರಿನ ದೇವರುಗಳಾದ ಬಸವ, ಭವಾನಿ, ವೀರಭದ್ರ, ಹಣಮಂತ ಮುಂತಾದ ದೇವರುಗಳಿಗೆ ಹೋಗಿ ಕೈಮುಗಿದು ಊದುಬತ್ತಿ ಹಚ್ಚಿ ಬರುತ್ತಾರೆ.

ಈ ನೇಮವನ್ನು ಹಣಮಂತ ಅವರು ಎಂದೂ ತಪ್ಪಲಿಲ್ಲ. ಈಗಲೂ ನಿರಂತರವಾಗಿ ನಡೆದುಕೊಂಡು ಬರುತ್ತಿದೆ. ಈ ಅಭ್ಯಾಸವನ್ನು ಕಲಿಸಿ ಕೊಟ್ಟವರು ಅವರ ತಂದೆ ನೀಲಕಂಠಪ್ಪನವರೆ ಆಗಿದ್ದಾರೆ. ಈ ಕಾರಣದಿಂದ ಅವರು ತಮ್ಮ ತಂದೆಯನ್ನು ಪ್ರಥಮ ಮತ್ತು ಕೊನೆಯ ಗುರುವೆಂದು ಹೇಳುತ್ತಾರೆ.

ಹಣಮಂತ ಅವರ ಆಧ್ಯಾತ್ಮಿಕ ಸಿದ್ಧಿಯನ್ನು ಗಮನಿಸಿದ ಜನಸಾಮಾನ್ಯರು ಅವರನ್ನು 'ಸಾಧು'ಯೆಂದು ಕರೆದುದು ಸರಿಯಾಗಿಯೇ ಇದೆ.

ಹಣಮಂತ ಅವರು ಒಳ್ಳೆಯ ಹಾಡುಗಾರರಾಗಿದ್ದಾರೆ. ಮಧುರವಾಗಿ ಹಾಡುತ್ತಾರೆ; ಭಜನೆಗಳಿಗೆ ಹೋಗುತ್ತಾರೆ. ಅವರ ಸಂಪರ್ಕಕ್ಕೆ ಈಗ ಹಲವಾರು ಶಿಷ್ಯರು ಬಂದಿದ್ದಾರೆ. ಅವರಲ್ಲಿಗೆ ಹಣಮಂತ ಅವರು ಹೋಗುತ್ತಾರೆ, ಅವರಿಗೆ ತಿಳಿಯದ್ದನ್ನು ತಿಳಿಸಿಕೊಡುತ್ತಾರೆ. ಶಿಷ್ಯರನ್ನು ಕೂಡಿಸಿಕೊಂಡು ಭಜನೆ ಮಾಡುತ್ತಾರೆ. ಆಧ್ಯಾತ್ಮ ಚಿಂತನೆಯಲ್ಲಿ ಶಿಷ್ಯರು ಕೇಳಿದ ಹಲವಾರು ಪ್ರಶ್ನೆಗಳಿಗೆ ಉತ್ತರ ನೀಡುತ್ತಾರೆ.

ಹಣಮಂತ ಅವರು ಹಾಡುಗಾರಿಕೆ ಮತ್ತು ಭಜನೆ ಕಾರ್ಯಕ್ರಮಗಳಿಗೆ ಉತ್ತೇಜನ ನೀಡಿ ಮುಂದೆ ಬರುವಂತೆ ಮಾಡಿದರು. ಸಿದ್ರಾಮಪ್ಪ ಬೆಳಕುಣಿ ಅವರು ಹಣಮಂತನಿಗಿಂತಲೂ ವಯಸ್ಸಿನಲ್ಲಿ ಹಿರಿಯರು, ಹಾಡುಗಾರರು, ನೀಲಕಂಠ ಅವರಿಗೂ ಗುರುವಾಗಿದ್ದರು. ಹಣಮಂತ ಅವರನ್ನು ಅವರು ತಮ್ಮ ಜೊತೆಗೆ ಕರೆದುಕೊಂಡು ಭಜನೆಗಳಿಗೆ ಹೋಗುತ್ತಿದ್ದರು, ಈಗಲೂ ಹೋಗುತ್ತಾರೆ. ಭಜನೆಯ ಶಿಷ್ಯರಲ್ಲಿ ಬೆಳಕುಣಿ ಅವರಿಗೆ ಹಣಮಂತ ಬಲಗೈಯಂತಿರುವ ಶಿಷ್ಯರಾಗಿದ್ದರು. ಗುರುವಿನ ಕರುಣೆಯಿಂದ ಹಣಮಂತ ಒಳ್ಳೆಯ ಹಾಡುಗಾರ ಅಷ್ಟೆ ಅಲ್ಲ, ಅತ್ಯುತ್ತಮ ತತ್ತ್ವಪದಕಾರರೇ ಆದರು.

ಹಣಮಂತ ಅವರನ್ನು ಕುರಿತು "ನೀವು ಯಾವಾಗ ಪದ್ಯಗಳನ್ನು ಕಟ್ಟುತ್ತಿರಿ?" ಎಂದು ಪ್ರಶ್ನಿಸಿದರೆ ಅವರು ಹೀಗೆ ಹೇಳುತ್ತಾರೆ: "ನಾನು ಹೆಚ್ಚಾಗಿ ಹೊಲದ ಕೆಲಸಗಳಿಗೆ

೨೦. ಹಣಮಂತ ಮಹಾರಾಜ (ಕ್ರಿ.ಶ.ಸು. ೧೯೩೭)

ಸಧ್ಯ ಎಪ್ಪತ್ತೈದು ವರ್ಷ ವಯಸ್ಸಿನವರಾದ ಹಣಮಂತ ಅವರು ನೋಡುವುದಕ್ಕೆ ಅತ್ಯಂತ ಸರಳರಾಗಿ ಕಾಣುತ್ತಾರೆ. ಆದರೆ ಜನರು ಅವರನ್ನು "ಸಾಧು" ಮಹಾರಾಜ ಎಂದು ಸಂಬೋಧಿಸುತ್ತಾರೆ. ಬೀದರ ಜಿಲ್ಲೆ ಭಾಲ್ಕಿ ತಾಲ್ಲೂಕಿನಲ್ಲಿ ಬರುವ ಧನ್ನೂರು ಗ್ರಾಮವು ಹಣಮಂತ ಅವರ ಸ್ವ ಸ್ಥಳವಾಗಿದೆ. ಧನ್ನೂರು ಗ್ರಾಮಕ್ಕೆ ಹೋಗಿ ಅಲ್ಲಿನ ಜನರನ್ನು ಕುರಿತು "ಹಣಮಂತ ಅವರ ಮನೆಯೆಲ್ಲಿ?" ಎಂದು ಕೇಳಿದರೆ ಮೊದಲಿಗೆ ಅವರು "ಯಾವ ಹಣಮಂತ?" ಎಂದು ಪ್ರಶ್ನಿಸುತ್ತಾರೆ. ಆಗ "ಅವರು ಕವಿಗಳು, ಸ್ವತಃ ಹಾಡುಗಳನ್ನು ಕಟ್ಟುತ್ತಾರೆ; ಹಾಡುತ್ತಾರೆ" ಎಂದಾಗ ಜನರು "ಓ ಆ ಸಾಧು ಹಣಮಂತ ಅಲ್ಲ" ಎಂದು ಕೇಳಿ ಅವರ ಮನೆ ತೋರುತ್ತಾರೆ. ಹಣಮಂತ ಅವರದು ಭೌತಿಕತೆಯಲ್ಲಿಯೇ ಆಧ್ಯಾತ್ಮದ ಸಾಧನೆ. ಇದನ್ನೆ ಕಲಿಸಿದವರು ಅವರ ಹಿರಿಯರು.

ದಲಿತ ಕುಟುಂಬದ ನೀಲಕಂಠ ಅವರು ಹಣಮಂತ ಅವರ ತಂದೆ. ತಾಯಿ ದ್ಯಾವಮ್ಮನವರು. ಕೂಲಿ ಕಾಯಕದಿಂದ ಜೀವನ ಸಾಗಿಸುತ್ತಿದ್ದ ದಂಪತಿಗಳು. ಇರುವುದಕ್ಕೆ ಅವರಿಗೆ ಯಾವುದೇ ದೊಡ್ಡ ಮನೆಯಿರಲಿಲ್ಲ; ಅದು ಇಂದಿಗೂ ಇಲ್ಲ. ಅವರ ಆಶ್ರಯದ ತಾಣವು ಮನೆಯೆಂಬ ಹೆಸರಿನ "ಝೋಪಡಿ". ಅಂತಹ ಸ್ಥಳದಲ್ಲಿ ಹಣಮಂತ ಅವರು ಕ್ರಿ.ಶ. ೧೯೩೭ರಲ್ಲಿ ಜನಿಸಿದರು. ಹಣಮಂತ ಅವರಿಗೆ ಯಾವುದೇ ಶೈಕ್ಷಣಿಕ ಸೌಲಭ್ಯಗಳು ಲಭ್ಯವಾಗಲಿಲ್ಲ. ದಲಿತ ಪರಿಸರದಲ್ಲಿ ಹುಟ್ಟಿದ ಹುಡಗರಿಗೆ ಅಂದು ಅಂತಹ ಸೌಲಭ್ಯ ಲಭಿಸುವುದೆಂದರೆ ಪವಾಡದ ಮಾತೇ ಆಗಿತ್ತು. ಅಂತಹ ಪವಾಡವೇನೂ ಹಣಮಂತ ಅವರ ಬದುಕಿನಲ್ಲಿ ನಡೆಯಲಿಲ್ಲ. ತಂದೆ-ತಾಯಿಯವರೊಂದಿಗೆ ಹೊಲಕ್ಕೆ ಹೋಗುತ್ತ, ಕೂಲಿ ಮಾಡುತ್ತ, ದನಗಳನ್ನು ಕಾಯುತ್ತ ಬಾಲ್ಯವನ್ನು ಕಳೆದರು.

ಯೌವನಕ್ಕೆ ಬಂದ ಹಣಮಂತ ಅವರ ವಿವಾಹ ಮಾಡಲಾಯಿತು. ಅವರ ಹೆಂಡತಿ ನೀಲಮ್ಮ. ಹಣಮಂತ ತಮ್ಮ ಹೆಂಡತಿಯೊಂದಿಗೆ ಕೂಲಿ ಮಾಡುತ್ತಲೇ ಬದುಕಿನ ಬಂಡಿಯನ್ನು ಇಲ್ಲಿಯವರೆಗೆ ತಳ್ಳಿಕೊಂಡು ಬರುತ್ತಲಿದ್ದಾರೆ. ಈ ದಂಪತಿಗಳಿಗೆ ಮೂವರು ಹೆಣ್ಣು ಮಕ್ಕಳು, ಒಬ್ಬ ಮಗ. ಅವನ ಹೆಸರು ಮಲ್ಲಿಕಾರ್ಜುನ; ಊರಲ್ಲಿ ಹೊಲದ ಕೆಲಸ ಮಾಡಿಕೊಂಡು ಇದ್ದಾನೆ.

ಹಕ್ಕಿ–ಪಕ್ಕಿಗಳಗಿ ಆಧಾರ ಗಿಡವು
ಚುಕ್ಕೋಳಿಗಿ ತಕ್ಕ ಆಧಾರ ಗಿಡವು
ಬಡಬಗ್ಗರ ಗುಡಿಸಲ್ಕ ಆಶ್ರಯವು ಗಿಡವು
ಕಲ್ಲ ಹೊಡದರ ಹಣ್ಣ ಕೊಡತಾದ ಗಿಡವು ॥ ೩ ॥

ಒಮ್ಮ ನೀರ್ಹಾಕಿದರ ಬೆಳೆತಾದ ಗಿಡವು
ಸುಮ್ಮನ ಇದ್ದರೂ ಚಿಗಿತಾದ ಗಿಡವು
ನೋವೆಂದು ಯಾರ ಮುಂದು ಹೇಳುವುದಿಲ್ಲ ಗಿಡವು
ಹಾವೆಂದು ಹೊರಗೆಂದು ಹಾಕುವುದಿಲ್ಲ ಗಿಡವು ॥ ೪ ॥

ದೇಹದ ಗಿಡದಲ್ಲಿ ಎಟ್ಟೊಂದು ಹುಳುಗೋಳು
ಹಕ್ಕಿಗೋಳು – ಪಕ್ಕಿಗೋಳು ಕುಳತಾವೋ ತಮ್ಮ
ಅದು ಮುದ ನೀಡಬೇಕು ಗಿಡದಂಗ
ಅದು ಹದ ನೀಡಬೇಕು ಗಿಡವಾಗಿ ॥ ೫ ॥

ದೇಶದೊಳಗ ಅಧಿಕ ಧನ್ನೂರಾ
ಈಶ ಇರುವನು ಹಣಮಂತ ದೇವರಾ
ಅವನ ಗುಡಿ ಮುಂದಿನ ಗಿಡ ನಾನು ಬೆಳೆದರ
ಶಿವನ ಪಾದಕ ನೆರಳು ಬೇಕಾದರ ॥ ೬ ॥

ಅಬಬಾ ತೊಗರಿ ಬೆಳಿ

ಹೊಲ ಹಸನ ಮಾಡಿದೆನು
ಬಲರಂಟೆ ಹೊಡೆದೆನು
ಅಬಬಾ ತೊಗರಿ ಬೀಜ ಬಿತ್ತಿದೆನು ॥ ಪ ॥

ಒಳ್ಳೆಯ ಬೀಜ ತಂದು
ಸೊಳ್ಳೆಲ್ಲ ತೆಗೆದು ಹಾಕಿ
ಗೊಳ್ಳುಗಳೆಲ್ಲ ಕೇರಿ ತಗದು
ಹಳ್ಳ ಆರಿಸಿ ಬೀಜಾ ಬಿತ್ತಿದೆನು ॥ ೧ ॥

ಹೋದಾಗಲೇ ಹಾಡುಗಳನ್ನು ಕಟ್ಟುತ್ತೇನೆ. ನನಗೆ ನಿಜವಾಗಿ ಹೇಳಬೇಕಾದರೆ ಸಮಯ ದೊರಕುವುದಿಲ್ಲ. ಕೆಲಸಕ್ಕೆ ಹೋಗಬೇಕು. ಎಲ್ಲಿಯಾದರೂ ಭಜನೆ ಮಾಡಲು ಕರೆದರೆ, ಅಲ್ಲಿಗೆ ಹೋಗುತ್ತೇನೆ. ಹೀಗೆ ದಿನಗಟ್ಟಲೇ ನಾನು ಕೆಲಸದಲ್ಲಿಯೇ ಮುಳುಗಿ ಹೋಗುವ ಕಾರಣದಿಂದ ಬಿಡುವುಯೆಂಬುದು ದೊರಕುವುದೇ ಇಲ್ಲ. ಆದುದರಿಂದ ನಾನು ಬಿಡುವಿಗಾಗಿ ಕಾಯುವುದಿಲ್ಲ. ಹೊಲದಲ್ಲಿ ಕಸ ತೆಗೆಯುತ್ತಾ ಅಥವಾ ಪೈರುಗಳನ್ನು ಕೊಯ್ಯುತ್ತ, ನಟ್ಟು ಕಡಿಯುತ್ತಲೋ ಮನದಲ್ಲಿ ಹಾಡುಗಳನ್ನು ಕಟ್ಟುತ್ತೇನೆ. ಹಾಡಿನ ಕಡೆಗೆ ಇರುವ ನನ್ನ ಮನಸ್ಸು–ದೇಹಕ್ಕೆ ದಣಿವಾದ ಅನುಭವ ಅನಿಸುವುದಿಲ್ಲ. ನನಗೆ ಬರೆಯುವುದಕ್ಕೆ ಬರುವುದಿಲ್ಲ, ಕಟ್ಟಿದ ಹಾಡುಗಳನ್ನು ಹಾಡುತ್ತೇನೆ, ನನ್ನ ಶಿಷ್ಯರಲ್ಲಿ ಹಲವಾರು ಜನ ಬರೆಯುತ್ತಾರೆ. ಅವರ ಎದುರಿನಲ್ಲಿ ಹಾಡಿದಾಗ ಅದನ್ನು ಬರೆದುಕೊಂಡು ಬಿಡುತ್ತಾರೆ. ಹೀಗೆ ನನ್ನ ಹಾಡುಗಳು ಬಾಯಿಂದ ಬಾಯಿಗೆ, ಕೈಯಿಂದ ಕೈಗೆ ಹರಡುತ್ತಾ ಹೋಗುತ್ತಲಿವೆ".


ಹಣಮಂತ ಅವರು ಹಲವಾರು ತತ್ತ್ವಪದಗಳನ್ನು ರಚಿಸಿದ್ದಾರೆ, ಅವುಳಿಗೆಲ್ಲ "ಹಣಮಂತ" ಎಂಬ ಮುದ್ರಿಕೆಯನ್ನು ಇರಿಸಿಕೊಂಡಿದ್ದಾರೆ. ಈ ಮುದ್ರಿಯು ಒಂದೆಡೆಗೆ 'ಸ್ವನಾಮ' ನಿರ್ದೇಶನ ಮಾಡಿದಂತೆ. ಇನ್ನೊಂದೆಡೆಯಲ್ಲಿ ಊರಿನ ದೇವರು ಹಣಮಂತನ ಸ್ಮರಣೆಯೂ ಆಗಿದೆ.

ಗಿಡವ ನೋಡಿದೇನೋ ತಮ್ಮ


ಗಿಡವ ನೋಡಿದೇನೋ ತಮ್ಮ
ಕೊಡುವದರೊಳಗೆ ಉಪಕಾರಿ ಆಗಿ ಹೋಗುವಂಥ ॥ ಪ ॥

ನೆಳ್ಳ ನೀಡುತಾದೋ ತಮ್ಮ
ಒಳ್ಳೆ ಹಣ್ಣ ನೀಡುತಾದೋ ತಮ್ಮ
ಬಳ್ಳ–ಬಳ್ಳ ಹೂವಾ ನೀಡುತಾದೋ ತಮ್ಮ
ಕಳ್ಳರಿಗೂ ಆಶ್ರಯವು ಒಮ್ಮ ॥ ೧ ॥

ಉರುವದಕ ಕಟ್ಟಿಗಿ ತಮ್ಮ
ಅದರ ಉದರದಿಂದಲೆ ಕಡಿತಿ ತಮ್ಮ
ಮನಿ ಚಿಂತಿ ಮಾಡುತಿ ತಮ್ಮ
ತನಿ ಹಣ್ಣ ತಿನ್ನುತಿ ತಮ್ಮ ॥ ೨ ॥



ನೀಲಕಂಠ ಮಹಾರಾಜರ ಮಗ ಹಣಮಂತ



ಹಣಮಂತ ಅವರ ಭಾವಚಿತ್ರ
ಇನ್ನೊಂದು ನೋಟ



ಹಣಮಂತ ಅವರ
ಪತ್ನಿ ನೀಲಮ್ಮ

ಹದಕ ಹರಗಿದೆನು
ಬೆದಗಿ ಬಿತ್ತಿದೆನು
ಗೊಬ್ಬರವ ಹಾಕಿದೆನು
ನೀರನ್ನು ಉಣಿಸಿದೆನು ॥ ೨ ॥


ಪೌಡರ ಹೊಡೆದೆನು ಹತ್ತು ಸಲಾ
ಮೂರಾರು ಹುಳುಗಳ ಕೊಂದೆನು
ಎಂಟು ಹೇನುಗಳ ಕೊರೆದು ಹಾಕಿದೆನು ॥ ೩ ॥

ಬೆಳಿ ಬಂತು ಭರರ ಹೂವ್ವಾ ಬಿಟ್ಟು ಸರರಾ
ಕಾಯಿಗೊಲ್ಲ್ಯಾ ಗೊಲ್ಲ್ಯಾ
ಬಾಯಿಂದ ಹೇಳ್ಳುಕ ಸಾಧ್ಯಯಿಲ್ಲ
ಮಾಯಿಯಂಗ ಬೆಳಿ ಸೀಮಿಗೆಲ್ಲ ॥ ೪ ॥


ಮತ್ತೆಲ್ಲಿಂದೊ ಹುಳಾ ಬಂದು
ಎಲ್ಲ ಬೆಳಿ ಬರಚಿ ತಿಂದು
ಹೂ ಉದುರಿ ಬಿದ್ದು
ಕಾಯಿ ಪೊಳ್ಳಾದು ॥ ೫ ॥

ಧರಿಯೊಳು ಮೆರೆವ ಧನ್ನೂರಾ ಊರಾ
ವರ ಹನುಮಂತ ದೇವರ ತೀರಾ
ಅರುವಿನ ತೊಗರಿಯ ಬೆಳೆಯೊ
ಮರವಿನ ಹುಳಗಳ ಹೊಡೆಯೊ ॥ ೬ ॥


(ಈ ವಿವರಗಳನ್ನು ಸ್ವತಃ ಕವಿಗಳೇ ಕೊಟ್ಟಿದ್ದಾರೆ.)




ಹಣಮಂತ ಅವರ ಆರಾಧ್ಯ ದೇವರು ವೀರಭದ್ರ ದೇವಾಲಯ
(ಧನ್ನೂರು.ಎಚ್)



ಹಣಮಂತ ಅವರ ಆರಾಧ್ಯ ದೇವರು ಹನುಮಂತನ ದೇವಾಲಯ
(ಧನ್ನೂರು.ಎಚ್)



ಹಣಮಂತ ಅವರ ಆರಾಧ್ಯ ದೇವರು ಬಸವಣ್ಣನವರ ದೇವಾಲಯ
(ಧನ್ನೂರು.ಎಚ್)



ಬಸವಣ್ಣನವರ ದರ್ಶನ ಪ್ರತಿಮೆ

ಮಾಡಿಸುತ್ತಿದ್ದರು. ಕಲ್ಲಯ್ಯನವರ ಹೆಂಡತಿ ಬಸಮ್ಮ, ಈ ದಂಪತಿಗಳ ಉದರದಿಂದ ಕ್ರಿ.ಶ ೧೯೩೮ರಲ್ಲಿ ಪಂಚಾಕ್ಷರ ಸ್ವಾಮಿ ಅವರ ಜನಿಸಿದರು.

ಸ್ವಾಮಿ ಪಂಚಾಕ್ಷರಿ ಅವರು ಶಾಲೆಗೆ ಹೋಗಿ ಕಲಿತಿದ್ದು ಕಡಿಮೆ. ಅವರು ಪಾಠ ಶಾಲೆಯಲ್ಲಿ ಹೆಚ್ಚಾಗಿ ಸಂಸ್ಕೃತ ಅಭ್ಯಾಸ ಮಾಡಿದರು. ಕನ್ನಡವನ್ನು ಸ್ವಪ್ರಯತ್ನದಿಂದ ಕಲಿತುಕೊಂಡು, ಮೋಡಿ, ಮರಾಠಿ, ಹಿಂದಿ ಭಾಷೆಗಳನ್ನು ಜೀರ್ಣಿಸಿಕೊಂಡರು. ಜಂಗಮವೃತ್ತಿ ಮತ್ತು ಪುರೋಹಿತ ವೃತ್ತಿಯೆ ಪಂಚಾಕ್ಷರ ಸ್ವಾಮಿಗಳ ಕಾಯಕವಾಯಿತು. ಅದರಿಂದಲೇ ಬದುಕನ್ನು ನಡೆಯಿಸ ತೊಡಗಿದರು.

ಪಂಚಾಕ್ಷರ ಸ್ವಾಮಿಗಳು ಗೃಹಸ್ಥರಾಗಿ ಪಾರ್ವತಿಯೆಂಬ ಕನ್ಯೆಯ ಕೈಹಿಡಿದರು. ಸಂಸಾರ ಜೀವನಕ್ಕೆ ಅಡಿ ಇಟ್ಟರು. ಇವರಿಗೆ ಐದು ಜನ ಹೆಣ್ಣು ಮಕ್ಕಳು ಮತ್ತು ಒಬ್ಬ ಮಗ ಜನಿಸಿದರು.

ಪಂಚಾಕ್ಷರ ಸ್ವಾಮಿಗಳ ಮನೆತನದ ಗುರುಗಳು ದೊಡ್ಡ ಹಳ್ಳಿಖೇಡ ಗ್ರಾಮದ ಹಿರೇಮಠದ ಸ್ವಾಮಿಗಳು. ಆರಾಧ್ಯ ದೇವರು ರಟಕಲ್ಲಿನ ರೇವಣಸಿದ್ಧೇಶ್ವರರು.

ಪುರಾಣ ಪ್ರವಚನದಲ್ಲಿ ಪಂಚಾಕ್ಷರ ಸ್ವಾಮಿಗಳು ಸಿದ್ಧಹಸ್ತರಾಗಿದ್ದರು. ಶ್ರಾವಣಮಾಸದಲ್ಲಿ ಅವರು ಭಕ್ತರ ಬಿನ್ನಹದ ಮೇರೆಗೆ ಬೇರೆ–ಬೇರೆ ಸ್ಥಳಗಳಿಗೆ ಪುರಾಣ ಪ್ರವಚನ ಮಾಡಲು ಹೋಗುತ್ತಿದ್ದರು. ಅವರಿಗೆ ಸಂಗೀತ ಕಲೆಯಲ್ಲೂ ಒಂದಿಷ್ಟು ಪರಿಜ್ಞಾನವಿದೆ. ಪುರಾಣ ಪ್ರವಚನ ಕಾರ್ಯದಲ್ಲಿ ಅದನ್ನು ಬಳಸಿ ಕೊಳ್ಳುತ್ತಾರೆ. ಈಗಲೂ ಅವರಿಗೆ ಪುರಾಣಕ್ಕಾಗಿ ಕರೆದರೆ ಹೋಗುತ್ತಾರೆ. ಅವರು ಹೆಚ್ಚಾಗಿ ಶರಣಬಸವೇಶ್ವರರ ಪುರಾಣ, ರೇವಣಸಿದ್ಧೇಶ್ವರರ ಪುರಾಣ, ದೇವಿಮಹಾತ್ಮೆ, ಬಸವ ಪುರಾಣ ಇವುಗಳನ್ನು ಪ್ರವಚನ ಮಾಡುತ್ತಾರೆ.

ಪಂಚಾಕ್ಷರ ಸ್ವಾಮಿಗಳ ಮನಸ್ಸು ಪತ್ನಿಯ ವಿಯೋಗದ ನಂತರ ಸಂಪೂರ್ಣ ತತ್ತ್ವಜ್ಞಾನದ ಕಡೆಗೆ ವಾಲಿದಂತಾಗಿದೆ. ಆದರೂ ಅವರು ಜೀವನ ಪ್ರೀತಿಯನ್ನು ಕಳೆದುಕೊಂಡಿಲ್ಲ. ಹೆಚ್ಚು ಆಧ್ಯಾತ್ಮದ ಕಡೆಗೆ ತಮ್ಮ ಮನವನ್ನು ಕೇಂದ್ರಿಕರಿಸುತ್ತಿದ್ದಾರೆ. ಅದನ್ನೇ ಭಕ್ತರುಗಳಿಗೆ ಬೋಧನೆ ಮಾಡುತ್ತಾರೆ. ದೇವರ ಧ್ಯಾನದಲ್ಲಿ ತೊಡಗುತ್ತಾರೆ. ಭಜನೆಯೂ ಮಾಡುತ್ತಾರೆ.

ಪಂಚಾಕ್ಷರ ಸ್ವಾಮಿಗಳು ಹಲವಾರು ತತ್ತ್ವಪದಗಳನ್ನು ಸಾಂದರ್ಭಿಕವಾಗಿ ಬರೆದಿರುವರು. ಅವರಿಗೆ ಹಾಡುಗಳು ಬರೆಯಲೇಬೇಕೆಂಬ ಹಠವಿಲ್ಲ. ಮನದೊಳಗೆ ಬರೆಯಬೇಕೆಂಬ ಉತ್ಕಟ ಭಾವವು ಜಾಗ್ರತವಾದಾಗ ಪೆನ್ನು ಹಿಡಿಯುತ್ತಾರೆ. ಬರೆಯುತ್ತಾರೆ. ಬರೆದುದನ್ನು ಹಾಡುತ್ತಾರೆ. ಅದನ್ನು ಹಾಡಿ ಭಕ್ತರಿಗೆ ಕೇಳಿಸುತ್ತಾರೆ. ನಂತರ ಅದು ಮಡಚಿ ಇಟ್ಟು ಬಿಡುತ್ತಾರೆ. ಹೀಗೆ ನೂರಾರು ಹಾಡುಗಳು ಅವರಿಂದ ರಚನೆ ಗೊಂಡಿವೆ. ಅವೆಲ್ಲವುಗಳನ್ನು ಒಂದೆಡೆಗೆ ಕಾಳಜಿಯಿಂದ ಸಂಗ್ರಹಿಸುವ ಗೋಜಿಗೆ

೨೧. ಪಂಚಾಕ್ಷರಿ ಸ್ವಾಮಿ (ಕ್ರಿ.ಶ.ಸು. ೧೯೩೮)

ಬೀದರ ಜಿಲ್ಲೆ ಭಾಲ್ಕಿ ತಾಲ್ಲೂಕಿನಲ್ಲಿ ಬರುವ ರಾಚಪ್ಪಗೌಡಗಾಂವ ಗ್ರಾಮವು ಚಿಕ್ಕದಾದ ಒಂದು ಹಳ್ಳಿ. ಈ ಹಳ್ಳಿಗೆ ಹೆಸರು ಬಂದಿರುವುದು ಅಲ್ಲಿನ ಹಿರೇಮಠ ಮನೆತನದ ಪಂಚಾಕ್ಷರಿ ಸ್ವಾಮಿ ಅವರಿಂದ. ಇಂದು ಅವರಿಗೆ ಸುಮಾರು ಎಪ್ಪತ್ತೆರಡು ವರ್ಷಗಳ ವಯಸ್ಸು. ಇಂದು ಗೌಡಗಾಂವ ಊರಿಗೆ ಹೋದರೆ ಅಲ್ಲಿ ಪಂಚಾಕ್ಷರಿ ಅವರ ಭೇಟಿ ಆಗುವುದಿಲ್ಲ. ಅವರ ಮಕ್ಕಳು, ಮೊಮ್ಮಕ್ಕಳು, ಅಳಿಯಂದಿರ ಭೇಟಿಯಾಗುತ್ತದೆ. ಪಂಚಾಕ್ಷರಿ ಸ್ವಾಮಿಯವರು ಇಂದು ಹೈದರಾಬಾದಿನಲ್ಲಿ ನೆಲೆಸಿದ್ದಾರೆ. ಬಹಳಷ್ಟು ಜನರು ವ್ಯಾಪಾರ-ಉದ್ಯೋಗ ಮಾಡುವುದಕ್ಕಾಗಿ ದೊಡ್ಡ-ದೊಡ್ಡ ಪಟ್ಟಣಗಳನ್ನು ಹುಡುಕಿಕೊಂಡು ಹೋಗುತ್ತಾರೆ. ಆದರೆ ಪಂಚಾಕ್ಷರಿ ಸ್ವಾಮಿಗಳು ಹೈದರಾಬಾದಿಗೆ ಹೋದದ್ದು, ಅಲ್ಲಿನ ಭಕ್ತರುಗಳಿಂದ ಪೂಜೆಯಾದಿಗಳನ್ನು ಮಾಡಿಸುವುದಕ್ಕಾದಗಿ, ಅವರು ಯಾವುದೇ ಪೂಜೆ ಮಾಡಲಿ ಅತ್ಯಂತ ಶಾಸ್ತ್ರೋಕ್ತವಾಗಿ ಮಾಡುತ್ತಾರೆ. ಹೀಗಾಗಿ ಅವರಿಗೆ ಹೈದರಾಬಾದಿನಲ್ಲಿ ಬಹುಬೇಡಿಕೆಯಿದೆ. ಅಲ್ಲಿನ ಭಕ್ತರುಗಳೆ ಅವರಿಗೆ ಇರುವುದಕ್ಕೆ ಸರಿಯಾದ ವ್ಯವಸ್ಥೆಯನ್ನು ಮಾಡಿಕೊಟ್ಟಿದ್ದಾರೆ. ಇದ್ದ ಒಬ್ಬ ತಮ್ಮ ಮಗನೊಂದಿಗೆ ಅವರು ಅಲ್ಲಿ ಪುರೋಹಿತ ಬದುಕನ್ನು ನಿಭಾಯಿಸುತ್ತ; ಆಗಾಗ ತತ್ತ್ವಪದಗಳನ್ನು ರಚಿಸುತ್ತ, ಜೀವನವನ್ನು ಕಳೆಯುತ್ತಿದ್ದಾರೆ.

ಪಂಚಾಕ್ಷರಿ ಸ್ವಾಮಿಗಳ ಮೂಲಸ್ಥಳ ಹುಮನಾಬಾದ ತಾಲ್ಲೂಕಿನಲ್ಲಿ ಬರುವ ದೊಡ್ಡ ಹಳ್ಳಿಖೇಡ. ಯಾವುದೋ ಕಾಲದಲ್ಲಿ ಅವರ ಹಿರಿಯರು ಆ ಗ್ರಾಮವನ್ನು ಬಿಟ್ಟು ರಾಚಪ್ಪ ಗೌಡಗಾಂವಿಯಲ್ಲಿ ಬಂದು ನೆಲೆ ನಿಂತರು. ಇಂದು ಅಲ್ಲಿ ಅವರು ವಾಸಿಸುತ್ತಿದ್ದ ಹಾಳು ಬಿದ್ದಿರುವ ಮಠವು ಇದೆ. ಊರಿನ ಮಹಾದೇವನಲ್ಲಿ ಪಂಚಾಕ್ಷರಿ ಸ್ವಾಮಿ ಅವರದು ಭಕ್ತಿ. ಹಾಗೆಯೇ ಇತರ ಗ್ರಾಮ ದೇವತೆಗಳನ್ನು ಅವರು ನಡೆದುಕೊಳ್ಳುತ್ತಿದ್ದರು. ಭಕ್ತರಿಂದ ಆ ದೇವರುಗಳಿಗೆ ರುದ್ರಾಭಿಷೇಕ ಮಾಡಿಸುತ್ತಿದ್ದರು.

ಪಂಚಾಕ್ಷರ ಸ್ವಾಮಿಗಳ ತಂದೆ ಕಲ್ಲಯ್ಯ ಸ್ವಾಮಿಗಳು ಬಹುದೊಡ್ಡ ಪುರೋಹಿತರಾಗಿದ್ದರು, ಎಲ್ಲ ಪ್ರಕಾರದ ಪೂಜಾವಿಧಾನಗಳನ್ನು ಬಲ್ಲವರಾಗಿದ್ದರು. ಶಾಸ್ತ್ರ ಪ್ರವೀಣರಾಗಿದ್ದರು; ಜ್ಯೋತಿಷ್ಯ ಪಾರಂಗತರಾಗಿದ್ದರು. ಭಕ್ತರಿಗೆ ಬಂದ ಸಮಸ್ಯೆಗಳಿಗೆ ಅವರು ಪರಿಹಾರ ಸೂಚಿಸುತ್ತಿದ್ದರು. ಅವುಗಳ ನಿವಾರಣೆಗಾಗಿ ಪೂಜೆಗಳನ್ನು

ಕೋಳಿ ಕೂಗುತಾದ ಏಳಣ್ಣ

ಕೋಳಿ ಕೂಗುತಾದ ಏಳಣ್ಣ
ಮಲಗ ಬ್ಯಾಡ ॥ ಪ ॥

ಕೋಳಿ ಅಂದರ ಕೋಳಿ ಅಲ್ಲ
ವ್ಯಾಳೆಯೆಂಬ ಕುರ್ಛುವಿನ ಕೋಳಿ
ವ್ಯಾಳ ವ್ಯಾಳಕೆ ಕೂಗುತಾದ
ಏಳು ಎಂದು ಹೇಳುತಾದ ॥ ೧ ॥

ಕತ್ತಲ್ಹರಿದು ಅರುಣವಾಯಿತಣ್ಣ
ಮತ್ತ ಹರಿದು ಚಿತ್ತ ತೆರಿತಣ್ಣ
ಸುತ್ತ-ಮುತ್ತ ಬೆಳಕ ಥಳಕ
ಕ್ಕೊ ಕ್ಕೊ ಕ್ಕೊ ಎಂಬ ಕೋಳಿಯ ಪುಳಕ ॥ ೨ ॥

ಬೆಳಕು ಆಗದು ನಿಲ್ಲಾಂಗಿಲ್ಲ
ಕೋಳಿ ಕೂಗಾದು ಬಿಡುವಂಗಿಲ್ಲ
ಏಳುವದು ಬೀಳುವದು ನಿನ್ನದೆಲ್ಲ
ಕಳೆದುಕೊಂಡರ ಮತ್ತು ಸಿಗಲ್ಲ ॥ ೩ ॥

ಮ್ಯಾಲ ನೋಡು ಅರುಣ ಬಿಂಬ
ಒಳಗ ನೋಡು ಚಂದ್ರ ಬಿಂಬ
ಹೊರಗ ಬೆಳಕು ಒಳಗ ಬೆಳಕು
ಕೊಳಕ ಕತ್ತಲೆ ಇಲ್ಲ ತಿಳಿಕೋ ॥ ೪ ॥

ಧರಿಯೊಳಿರುವ ಗೌಡಗಾಂವ
ಪಂಚಾಕ್ಷರಿ ಸಾಕಿದ ಕೋಳಿಯಿಂದು
ಪಂಚಾಕ್ಷರಿ ಮಂತ್ರ ಕೂಗುತಾದ
ಪಂಚ ಮುಖನಾಗೆಂದು ಹೇಳುತಾದ ॥ ೫ ॥

(ಈ ವಿವರಗಳನ್ನು ಅವರ ಹಿರಿಯ ಮಗಳು ರೇಣುಕಾ ಅವರು ಕೊಟ್ಟಿದ್ದಾರೆ.)

ಹೋಗಿಲ್ಲ. ಅವರು ತತ್ತ್ವಪದಗಳಿಗೆ "ಪಂಚಾಕ್ಷರಿ" ಎಂಬ ಸ್ವನಾಮವನ್ನೇ ಅಂಕಿತವಾಗಿ ಇಟ್ಟುಕೊಂಡಿದ್ದಾರೆ. ಇಲ್ಲಿ ಅವರ ರಚನೆಯ ಎರಡು ಹಾಡುಗಳನ್ನು ಕೊಡಲಾಗಿದೆ:

ನಿಜಾರ್ಚನ

ನಿಜದ ಅರ್ಚನೆಯ ನೀ ಮಾಡೋ ತಮ್ಮ
ನಿಜದ ನಿಲುವನ್ನು ಕಾಣೋ ॥ ಪ ॥

ಅಂತರಂಗದ ಮೂಲವ ಕಳೆದುಳಿದು ನೀನು
ಸಂತತ ಜಳಕ ಮಾಡೋ
ಕಂತುವನು ಗೆದ್ದು ನೀನು
ನಿಶ್ಚಿಂತದ ಮಡಿಯ ಧರಿಸೋ ॥ ೧ ॥

ಕೋಪವನು ಸುಟ್ಟು ನೀನು
ಸೋಪಾಧಿಕ ಭಸ್ಮವ ಮಾಡೋ
ಗರ್ವದ ಕಟ್ಟಿಗೆ ತೇದು ನೀನು
ಮರ್ಮದ ಗಂಧವ ಸೂಡೋ ॥ ೨ ॥


ಶಿವ ಮನದ ಹೂವು ಧರಿಸೋ
ದೇವನಿಗೆ ಭವ ಮಾಲೆಯ ಕಳಚಿ ಬಿಡುವೋ
ಕಲ್ಮಷದ ಗುಣ ಸುಟ್ಟು ಧೂಪವ ಹಾಕಿ
ಮಂಗಳ ನಾಮದ ಗಂಟೆಯ ಬಾರಿಸೋ ॥ ೩ ॥

ವಿರತಿಯ ಅಕ್ಷತೆ ಹಾಕೋ । ನೀ
ದೇವನಿಗೆ ನಿರುತದಿ ಧ್ಯಾನವ ಮಾಡೋ
ಕ್ರೋಧ ನಾಶದ ಕುಂಕುಮವಾಗಿ ಮಾಡಿ
ಪೂಜೆಗೆ ಬಂದಂತಹ ಮುತ್ತೈದಿಯರಿಗೆ ನೀಡಿ ॥ ೪॥


ಧರಿಯೊಳು ಪಾವನದ ಗೌಡಗಾಂವ ಪುರವ
ಪಂಚಾಕ್ಷರಿ ಹೇಳ್ಯಾನೋ ಪಂಚಾರ್ಚನೆಯ ಇರುವ
ಅರಿದು ಬೇಡೋ ತಮ್ಮ ಅರ್ಚನೆ ಫಲವ
ಬೇಡಿದ್ದು ಕೊಡುವನು ದೀಕ್ಷದ ಯಶವ ॥ ೫ ॥




ಪಂಚಾಕ್ಷರಿ ಸ್ವಾಮಿಗಳ ಮಗಳು ರೇಣುಕಾ ಅವರು ತಮ್ಮ ಮಕ್ಕಳು – ಸಹ ಸಂಬಂಧಿಗಳೊಂದಿಗೆ.



ಪಂಚಾಕ್ಷರಿ ಸ್ವಾಮಿಗಳ ಆರಾಧ್ಯ ದೇವರು ಅಂಬಾಭವಾನಿ ಗುಡಿ (ರಾಚಪ್ಪ ಗೌಡಗಾಂವ)



ಪಂಚಾಕ್ಷರಿ ಸ್ವಾಮಿಗಳು ವಾಸಿಸುತ್ತಿದ್ದ ಹಳೆಯ ಮನೆ.(ರಾಚಪ್ಪ ಗೌಡಗಾಂವ).



ಪಂಚಾಕ್ಷರಿ ಸ್ವಾಮಿಗಳು ಪೂಜೆಯಲ್ಲಿ ತೊಡಗಿರುವುದು.

೨೨. ಶಿವರಾಮ (ಕ್ರಿ.ಶ.ಸು. ೧೯೪೦)

ಬೀದರ ಜಿಲ್ಲೆಯ ಭಾಲ್ಕಿ ತಾಲ್ಲೂಕಿನ ಗ್ರಾಮವಾಗಿರುವ ಕೆರೂರ (ಎಚ್) ಎಂಬುದು ಶಿವರಾಮ ಅವರ ಸ್ವಗ್ರಾಮವಾಗಿದೆ. ಈಗ ಅವರಿಗೆ ಎಪ್ಪತ್ತರ ವಯಸ್ಸು ಇದೆ. ಇಳಿಯ ವಯಸ್ಸಿನಲ್ಲೂ ಅವರು ಚಟುವಟಿಕೆಯಿಂದಲೇ ಜೀವಿಸುತ್ತಲಿದ್ದಾರೆ. ಹೊಲಕ್ಕೆ ಹೋಗುತ್ತಾರೆ. ಕೃಷಿಯ ಕೆಲಸಗಳನ್ನು ಮಾಡುತ್ತಾರೆ. ಕೃಷಿಯ ಕಾರ್ಯಗಳು ಇಲ್ಲದಾಗ ಗೌಂಡಿ ಕೆಲಸವನ್ನು ಮಾಡುತ್ತಾರೆ. ಹೀಗಾಗಿ ಊರಿನ ಜನರು ಅವರನ್ನು "ಶಿವರಾಮ ಗೌಂಡಿ" ಎಂತಲೇ ಗುರುತಿಸುತ್ತಾರೆ. ಶಿವರಾಮ ಗೌಂಡಿ ಅವರ ಮನೆಯ ವಾತಾವರಣವು ಮರಾಠ ಪರಿಸರದಿಂದ ಕೂಡಿದಂತೆ ಕಾಣುತ್ತದೆ. ಏಕೆಂದರೆ ಅವರು ತಮ್ಮ ಮನೆತನದ ಸಂಬಂಧಗಳನ್ನು ಹೆಚ್ಚಾಗಿ ಮಹಾರಾಷ್ಟ್ರದಿಂದಲೇ ಮಾಡಿಕೊಂಡಿದ್ದಾರೆ. ಅವರ ಅಜ್ಜ ಮಹಾರಾಷ್ಟ್ರದವರೆ; ಶಿವರಾಮನ ಕುಟುಂಬ ಮಹಾರಾಷ್ಟ್ರದವರೆ. ಹೀಗಾಗಿ ಅವರೆಲ್ಲ ಮರಾಠಿ ಮಾತನಾಡುವವರು ಆಗಿದ್ದಾರೆ. ಆದರೆ ಶಿವರಾಮ ಅವರು ಮರಾಠಿಯ ಗದ್ದಲದ ನಡುವೆಯೂ ಕನ್ನಡದ ಧ್ವನಿಯನ್ನು ಕೇಳಿಸುವಂತೆ ಮಾಡಿದರು. ಅವರು ಕನ್ನಡದ ತತ್ತ್ವಪದಕಾರರಾಗಿ, ಕನ್ನಡದ ಹಾಡುಗಳನ್ನು ಜನತೆಯ ಮನ ಮುಟ್ಟುವಂತೆ ಹಾಡಿದ್ದಾರೆ; ಹಾಡುತ್ತಲಿದ್ದಾರೆ.


ಶಿವರಾಮ ಅವರ ತಂದೆ ಜೆಟಿಂಗರಾವ, ಉಪ್ಪಾರ ಕುಟುಂಬದ ಯಜಮಾನ. ಕಾಯಕ ಗೌಂಡಿ ಕೆಲಸವೇ ಆಗಿದ್ದಿತು. ಜೆಟಿಂಗರಾವ ಅವರ ಹೆಂಡತಿ ರುಕ್ಮಾಬಾಯಿ. ಕ್ರಿ.ಶ.ಸು. ೧೯೪೦ರಲ್ಲಿ ಶಿವರಾಮ ಜನಿಸಿದರು.

ಶಿವರಾಮ ಶಾಲೆ ಕಲಿಯಲಿಲ್ಲ, ನಿರಕ್ಷರಿ. ಆದರೆ ವ್ಯವಹಾರ ಜ್ಞಾನದ ನಿಧಿ ಅವರು. ಕನ್ನಡ ಮತ್ತು ಮರಾಠಿಗಳೆರಡರಲ್ಲೂ ಹಾಡುಗಳನ್ನು ಕಟ್ಟುವ ಆಶುಕವಿತ್ವದ ಶಕ್ತಿ ಹೊಂದಿದ್ದಾರೆ.


ಶಿವರಾಮ ಗ್ರಾಮದೇವರಾದ ಮಹಾದೇವರನ್ನು ಭಕ್ತಿಯಿಂದ ನಡೆದುಕೊಳ್ಳುತ್ತಾರೆ. ಮಹಾದೇವರ ಮಂದಿರದಲ್ಲಿ ಆಗುವ ಉತ್ಸವ-ಸಮಾರಂಭಗಳಲ್ಲಿ ಅವರು ನೇತೃತ್ವವಹಿಸಿ, ಭಜನೆಯ ಕಾರ್ಯಕ್ರಮಗಳನ್ನು ಸಂಘಟಿಸುತ್ತಾರೆ. ಶಿವರಾಮ ಅವರು ಶಿವಭಜನೆ-ಪಂಡರಿಭಜನೆ ಉಭಯ ಪ್ರಕಾರಗಳಲ್ಲಿಯೂ ಪ್ರಸಿದ್ಧಿ ಪಡೆದಿರುವರು. ಶಿವಭಜನೆ



ಪಂಚಾಕ್ಷರಿ ಸ್ವಾಮಿಗಳ
ಆರಾಧ್ಯ ದೇವರು ಮಹಾದೇವ
ಮಂದಿರ (ರಾಚಪ್ಪ ಗೌಡಗಾಂವ)



ಪಂಚಾಕ್ಷರಿ ಸ್ವಾಮಿ
ಅವರ ಆರಾಧ್ಯ ದೇವರು
ಬಸವಣ್ಣ



ಪಂಚಾಕ್ಷರಿ ಸ್ವಾಮಿಗಳು ನಡೆದುಕೊಳ್ಳುತ್ತಿದ್ದ ಹನುಮಂತ ದೇವಾಲಯ
(ರಾಚಪ್ಪ ಗೌಡಗಾಂವ)

ಹಾಡುತ್ತಾರೆ. ಶಿವರಾಮ ಅವರೊಂದಿಗೆ ಕೂಡಿ ಹಾಡುತ್ತ ಭಜನೆ ಮಾಡುತ್ತಾರೆ. ಶಿವರಾಮ ಅವರು ತಮ್ಮ ಹಾಡುಗಳಿಗೆ ಸ್ವನಾಮವನ್ನೇ ಮುದ್ರೆಯಾಗಿಟ್ಟುಕೊಂಡಿದ್ದಾರೆ. ಅವರ ರಚನೆಯ ಎರಡು ಹಾಡುಗಳನ್ನು ಇಲ್ಲಿ ಕೊಡಲಾಗಿದೆ:

ಕಾಡುತಿ ಯಾಕಲೆ ಮಾಯ

ಕಾಡುತಿ ಯಾಕಲೆ ಮಾಯ
ಮೃಡನ ಭಕ್ತರ ನೀನು ಕಾಡುತಿ ಯಾಕೆ ? ॥ ಪ ॥

ಜಡವಾದ ದೇಹದೊಳಗ ಇದ್ದಿ
ಕರಣ–ಇಂದ್ರಿಯಾದಾಗ ಮಲಗಿ ನೀ ಎದ್ದಿ
ಬಯಲ ರೂಪರಿಗೆ ನೀ ಹೊದ್ದಿ
ಕಡಗಿ ಗೆಲ್ಲದೆ ಸೋತು ಅಂಗಾತ ಬಿದ್ದಿ ॥ ೧ ॥

ಅಳ್ಳಿ–ಬೆಂಕಿಯ ಕೂಡ ಹೋರಾಟ ಮಾಡುವದೇ ?
ಮಳ್ಳ ಮಾಯೆ ನೀನು ಶಿವಭಕ್ತರ ಕೆಣಕುವುದೆ ?
ಮಳ್ಳ ಮಾಯೆ ಕೇಳು ನಿನ್ನಿಂದ ಏನಾಗುವುದು ?
ಶಿವನ ಭಕ್ತರು ಶಿವ ಪೂಜೆಯಿಂದಲಿ ಭವ ನೀಗುವರು ॥ ೨ ॥

ರೋಗ ಬಂದರೆ ವೈದ್ಯ ಔಷಧವ ಕೊಡುವನು
ಬೇಗದಿಂದಲಿ ರೋಗ ಗುಣಮುಖವಾಗಲೆಂದು
ಮಾಯೆಯ ರೋಗಕ್ಕೆ ಶಿವಭಕ್ತನೇ ಔಷಧಿಯು
ಹಾಯವೆನಿಸುವುದು ತಿಳಿ ನೀನು ಸಾಧನೆಯು ॥ ೩ ॥

ಕೆಟ್ಟ ಮಾಯ ನಿನ್ನಿಂದೇನಾಗುವುದು
ಕೆಟ್ಟ ಮಾಯ ನೀನೇ ಸೋಲುವುದು
ಬಿಟ್ಟಿ ಮಾಯೆ ಶಿವಶಕ್ತಿಗೆ ತೊಲಗುವುದು
ಅಟ್ಟಿಸಿ ಬೈದೆಡೆ ಬಿಟ್ಟು ಓಡುವುದು ॥ ೪ ॥

ಧರೆಯೊಳು ಇರುವದು ಕೆರೂರ ಗ್ರಾಮವು
ಶಿವರಾಮ ಹೇಳಿದ ಹಾಡಿದು ಪ್ರೇಮವು

ಕನ್ನಡದಲ್ಲಿ ನಡೆಸಿಕೊಟ್ಟರೆ, ಅವರು ಪಂಡರಿಭಜನೆಯನ್ನು ಮರಾಠಿ ಭಾಷೆಯಲ್ಲಿ ನಡೆಸಿಕೊಡುತ್ತಾರೆ.

ಶಿವರಾಮ ಅವರ ಹೆಂಡತಿ ಜೀಜಾಬಾಯಿ. ಇವರಿಗೆ ನಾಲ್ಕು ಜನ ಗಂಡು ಮಕ್ಕಳು. ಅವರೆಲ್ಲ ಸ್ವತಂತ್ರವಾಗಿ ತಮ್ಮ ತಮ್ಮ ಉದ್ಯೋಗ ಮಾಡಿಕೊಂಡು ಬದುಕನ್ನು ನಡೆಸುತ್ತಿದ್ದಾರೆ.

ಶಿವರಾಮ ಅವರು ಕೆರೂರು ಗ್ರಾಮದಲ್ಲಿ ಒಂದು ಭಜನೆ ಸಂಘವನ್ನು ಕಟ್ಟಿಕೊಂಡಿದ್ದಾರೆ. ಅದಕ್ಕೆ 'ಮಹಾದೇವ ಭಜನಾ ಮಂಡಳಿ'ಯೆಂದು ಹೆಸರಿಟ್ಟಿದ್ದಾರೆ. ಭಜನೆಯ ಕಾರ್ಯಕ್ರಮಗಳನ್ನು ನಡೆಯಿಸಿ ಕೊಡುತ್ತಾರೆ. ಶಿವರಾಮ ಅವರ ಹಾಡುಗಾರಿಕೆ, ಭಜನೆಯ ಕಲೆಯು ಕೇವಲ ಕನ್ನಡಿಗರಿಗೆ ಮಾತ್ರ ಸೀಮಿತವಾಗಿ ಉಳಿದಿಲ್ಲ, ಮಹಾರಾಷ್ಟ್ರದ ಗಡಿಯೊಳಗೆ ಪ್ರವೇಶ ಮಾಡಿದೆ. ಅವರು ಕನ್ನಡ-ಮರಾಠಿಯ ಹಾಡುಗಳನ್ನು ಹಾಡುವಂತೆ; ಉಭಯ ಭಾಷೆಗಳಲ್ಲೂ ಹಾಡುಗಳನ್ನು ಕಟ್ಟಿದ್ದಾರೆ.


ಶಿವರಾಮ ಅವರ ತಂಗಿ ಮಾಣಿಕಬಾಯಿ ಅವರು ತಮ್ಮ ಅಣ್ಣನ ಕಲೆಗಾರಿಕೆಯ ಬಗೆಗೆ ಮೆಚ್ಚುಗೆಯ ಮಾತುಗಳನ್ನು ಆಡುತ್ತಾರೆ: "ನಮ್ಮ ಅಣ್ಣ ಶಿವರಾಮ ಚಿಕ್ಕವನಿದ್ದಾಗಿನಿಂದಲೂ ಹಾಡುತ್ತಿದ್ದರು, ಭಜನೆ ಮಾಡುತ್ತಿದ್ದರು. ನಮ್ಮ ತಂದೆ ಅವರು ಅದನ್ನು ನೋಡಿ ಸಂತೋಷ ಪಡುತ್ತಿದ್ದರು. ಒಮ್ಮೊಮ್ಮೆ 'ಶಿವರಾಮ ಸಂತನಾಗಿ ಬಿಟ್ಟರೆ' ಎಂದು ಹೆದರಿಕೆ ಪಡುತ್ತಿದ್ದರು. ತಾರುಣ್ಯದಲ್ಲಿಯೂ ನಮ್ಮ ಅಣ್ಣನಿಗೆ ಸಂಸಾರಕ್ಕಿಂತಲೂ ದೇವರ ಕಡೆಗೆ ಒಲವು ಬಹಳವಿದ್ದಿತು. ಎಲ್ಲ ಕೆಲಸಗಳು ಮುಗಿದ ಸಂಜೆಯ ಹೊತ್ತಿನಲ್ಲಿ ಊರಿನ ಮಹಾದೇವರ ಗುಡಿಯ ಹಿಂಭಾಗದಲ್ಲಿ ಹೋಗಿ ಕುಳಿತುಕೊಳ್ಳುತ್ತಿದ್ದರು. ಕಣ್ಣು ಮುಚ್ಚಿ ಬಹಳ ಹೊತ್ತಿನವರೆಗೂ ಧ್ಯಾನ ಮಾಡುತ್ತಿದ್ದರು. ಊರಿನ ಜನರಿಗೆ ನಮ್ಮಣ್ಣನೆಂದರೆ ಪ್ರೀತಿಯ ವ್ಯಕ್ತಿ ಮತ್ತು ಸಂತ ವ್ಯಕ್ತಿಯೇ ಆಗಿದ್ದಾರೆ. ಅವರು ಎಂದೂ ಬದುಕಿನ ಕಷ್ಟ-ನಷ್ಟಗಳ ಬಗೆಗೆ ಎದೆ ಗುಂದಿದವರಲ್ಲ. ಬಡತನದ ಬಗೆಗೆ ನೊಂದವರಲ್ಲ, ಇದ್ದುದರಲ್ಲಿಯೇ ನಿಶ್ಚಿಂತೆಯಿಂದಲೇ ಇದ್ದವರು. ಈಗಲೂ ಅವರ ಸ್ವಭಾವ ಏನೂ ಬದಲಾಗಿಲ್ಲ. ಈ ವಯಸ್ಸಿನಲ್ಲೂ ತಮ್ಮ ಕೈಲಾದ ಕೆಲಸ ಮಾಡುತ್ತಾರೆ. ಉಳಿದ ಸಮಯ ದೇವರ ಸ್ಮರಣೆ, ಭಜನೆಯಂತಹ ಕಾರ್ಯಗಳಲ್ಲಿ ಕಾಲ ಕಳೆಯುತ್ತಾರೆ. ನನ್ನ ಮೇಲೆ ನಮ್ಮ ಅಣ್ಣನದು ಅತಿ ಪ್ರೀತಿ. ನನ್ನ ಗಂಡನ ಮರಣ ನಂತರದಲ್ಲಿ ನಾನು ಇಲ್ಲಿಯೇ ಬಂದು ಇದ್ದೇನೆ. ನನ್ನ ಮಕ್ಕಳು ಅಷ್ಟಕಷ್ಟೆ, ಬಡತನದ ಬದುಕು. ಹೀಗಾಗಿ ಅಣ್ಣ ನನ್ನನ್ನೂ ಇಲ್ಲಿ ತಂದು ಇಟ್ಟುಕೊಂಡಿದ್ದಾರೆ".

ಶಿವರಾಮ ಅವರು ಹಲವಾರು ತತ್ತ್ವಪದಗಳನ್ನು ಕಟ್ಟಿದ್ದಾರೆ. ತಮ್ಮ ಶಿಷ್ಯರಿಗೆ ಕಲಿಸಿದ್ದಾರೆ. ಅವರ ಹಲವಾರು ಶಿಷ್ಯರು ಶಿವರಾಮ ಅವರ ತತ್ತ್ವಪದಗಳನ್ನು

ತಿಳಿದರದ ಭಾಳೇ ಭಾಳ ಸರಳಾ
ತಿಳಕೊಂಡು ಶಿವನಾಗೋ ಕೇಳು ನೀ ತರಳಾ ॥ ೫ ॥

(ಈ ವಿವರಗಳನ್ನು ಕೊಟ್ಟವರು ಸ್ವತಃ ಕವಿ ಮತ್ತು ಅವರ ತಂಗಿ ಮಾಣಿಕಬಾಯಿ ಅವರು).

▯



ಶಿವರಾಮ ಗೌಂಡಿ ಅವರ ಮನೆ (ಕೆರೂರ)

ಮಾಯೆಯ ಮೋಡಿಗೆ ಇಡಾಗ ಲೊಲ್ಲದು
ಕಾಯ ಗೂಡಿ ಕೈಲಾಸಕ್ಕೆ ಹೋಗುವುದು ॥ ೫ ॥

ಶಿವ ಎನ್ನು

ಶಿವ ಹರ ಎನ್ನು ತಮ್ಮಾ
ಭವ ಬಂಧನ ಅಳಿವುದು ಒಮ್ಮಾ ॥ ಪ ॥

ನಾನು–ನೀನೆಂಬುದು ಮರೆತು
ಸುಜ್ಞಾನ – ಭಕ್ತಿಯ ಕೀಲವನು ಅರಿತು
ತಾನು – ತಾನೆಯಾಗಿ ನಿಂತು
ನೀನು ಶಿವ ಹರ ಎನ್ನು ತಮ್ಮಾ ॥ ೧ ॥

ಕಳ್ಳನು ಶಿವ ನಾಮದಿಂದ ಒಳಿತನಾಗುವನು
ಕಡುಪಾಪಿ ಶಿವನಾಮದಿಂದ ಪುಣ್ಯವಂತನಾಗುವನು
ದುರಳನು ಶಿವನಾಮದಿಂದ ಪರಿಮಳನಾಗುವನು
ಮರುಳನು ಶಿವನಾಮದಿಂದ ಪಂಡಿತನಾಗುವನು ॥ ೨ ॥

ನಿನ್ನ ನಿಜವ ನೀನು ತಿಳಿದು ನಡೆಯಬೇಕು
ನಿಜವ ತಿಳಿದು ನುಡಿಯನ್ನು ನುಡಿಯಬೇಕು
ಆಶೆ–ವೇಷಾ–ಪಾಷಾಯೆಲ್ಲ ಬಿಸುಡಬೇಕು
ಈಶಾನ ನಾಮವೊಂದೆ ಜಪಿಸಬೇಕು ॥ ೩ ॥

ಆಕಾಸದೊಳಕಂಡು ಮರೆಯಾಯಿತು ಮಿಂಚು
ವಿಕಾಸವಾಯಿತು ನಿನ್ನೊಳಗ ಶಿವ ಮಿಂಚು
ಕರಣಗಳೆಲ್ಲ ನಿಲ್ಲಿಸಿದವು ತಮ್ಮ ಸಂಚು
ವರ ಮಹಾತ್ಮನಾಗುತಿ ಶಿವನಾಮ ಸ್ಮರಿಸು ॥ ೪ ॥

ಧರಿಯೊಳಗ ಕೆರೂರ ಊರಾ
ವರಕವಿ ಶಿವರಾಮನ ತತ್ತ್ವದ ಸಾರಾ

೨೩. ಚಂದ್ರಪ್ಪ ಬಾವಿಕಟ್ಟಿ (ಕ್ರಿ.ಶ.ಸು. ೧೯೪೫)

ಅರವತ್ತೈದು ವರ್ಷಗಳ ವಯಸ್ಸಿನ ಹೊಸ್ತಲಿನಲ್ಲಿರುವ ಚಂದ್ರಪ್ಪನವರು ಬೀದರ ಜಿಲ್ಲೆ, ಭಾಲ್ಕಿ ತಾಲ್ಲೂಕಿನ ಧನ್ನೂರ (ಹೆಚ್) ಗ್ರಾಮದವರು. ಅವರು ಮುಂದಾಳುತನದ ಗುಣಗಳನ್ನು ರೂಢಿಸಿಕೊಂಡವರು. ದಲಿತರ ಬದುಕಿನ ಸಮಸ್ಯೆಗಳ ನಿವಾರಣೆಗಾಗಿ ಹೋರಾಟ ಮಾಡುತ್ತಿರುವರು. ತಮ್ಮ ಜನಾಂಗದಲ್ಲಿರುವ ಅನೈಕ್ಯತೆಯನ್ನು ಹೋಗಲಾಡಿಸಲು ಪ್ರಯತ್ನ ಪಡುವವರು. ಯಾವುದೇ ಊರಿನ ಕೇರಿಯಲ್ಲಿ ಜಗಳವಾದರೂ ಅಲ್ಲಿಗೆ ಚಂದ್ರಪ್ಪನವರು ಹಾಜರಾಗುತ್ತಾರೆ. ಅವರ ವಿವಾದಗಳನ್ನು ಸುಸೂತ್ರವಾಗಿ ಮತ್ತು ನಿಷ್ಪಕ್ಷಪಾತವಾಗಿ ಬಗೆಹರಿಸುತ್ತಾರೆ. ಅವರಲ್ಲಿ ಉಂಟಾದ ಮತ್ಸರವನ್ನು ದೂರವಾಗಿಸಿ, ಸಖ್ಯ ಬೆಳೆಯುವಂತೆ ಮಾಡುತ್ತಾರೆ.


ಚಂದ್ರಪ್ಪನವರ ತಂದೆ ರುದ್ರಪ್ಪನವರು ಕೃಷಿಕರು. ಅದರಿಂದಲೇ ಬದುಕಿನ ನಿರ್ವಹಣೆ ಮಾಡುತ್ತಿದ್ದರು. ದೈವ ಭಕ್ತರು. ಜನತೆಯಲ್ಲಿರುವ ಅನೇಕತೆಯ ಬಗ್ಗೆ ಅವರಿಗೂ ಖೇದವಿದ್ದಿತು. ಸಮಯ ಬಂದಾಗ ಅವರಿಗೆಲ್ಲ ರುದ್ರಪ್ಪನವರು "ಎಲ್ಲರೂ ಒಟ್ಟಿಗೆ ಇರುವಂತೆ" ತಿಳಿಸಿ ಹೇಳುತ್ತಿದ್ದರು. ರುದ್ರಪ್ಪನವರ ಹಿರಿಯತನದ ಗುಣವೇ ಮಗ ಚಂದ್ರಪ್ಪನವರಲ್ಲಿ ಮುಂದುವರೆದಿರುವುದನ್ನು ಕಾಣಬಹುದಾಗಿದೆ.

ರುದ್ರಪ್ಪ-ಸುಭದ್ರವ್ವನವರ ಮಗ ಚಂದ್ರಪ್ಪ ಕ್ರಿ.ಶ. ೧೯೪೫ರಲ್ಲಿ ಜನಿಸಿದರು. ಎರಡನೆಯ ಅಥವಾ ಮೂರನೆಯ ತರಗತಿಯವರೆಗೆ ಚಂದ್ರಪ್ಪನವರು ಓದಿದ್ದಾರೆ. ಮೋಡಿ-ಮರಾಠಿ, ಕನ್ನಡ ಭಾಷೆಗಳು ಅವರಿಗೆ ಬರುತ್ತವೆ. ಚಂದ್ರಪ್ಪನವರು ಸತ್ಸಂಗ, ಶಿವಾನುಭಾವ; ಸ್ವಾನುಭಾವದಿಂದ ಸಾಕಷ್ಟು ಜ್ಞಾನವನ್ನು ಸಂಗ್ರಹಿಸಿದ್ದಾರೆ. ಅದರ ಬಲದಿಂದ ಹೇಳಿದ ಮಾತುಗಳೂ ಜನತೆಯ ಮೇಲೆ ಪರಿಣಾಮವನ್ನುಂಟು ಮಾಡುತ್ತವೆ. ಅವುಗಳನ್ನೇ ಕಾವ್ಯದ ಚೌಕಟ್ಟಿಗೆ ಹೊಂದಿಸಿದಾಗ ಅದೊಂದು ಉತ್ತಮ ತತ್ತ್ವಪದವಾಗಲೂ ಬಲ್ಲದು.

ಚಂದ್ರಪ್ಪನವರ ಹೆಂಡತಿ ಕಮಲಮ್ಮ. ಈ ದಂಪತಿಗಳಿಗೆ ಐದು ಜನ ಹೆಣ್ಣು ಮಕ್ಕಳು ಮತ್ತು ಒಬ್ಬ ಮಗನಿದ್ದಾನೆ. ತಮ್ಮ ಸಂಸಾರದ ನಿರ್ವಹಣೆಗಾಗಿ ಗೌಂಡಿ ಕೆಲಸವನ್ನು ಚಂದ್ರಪ್ಪನವರು ಕಾಯಕವಾಗಿಸಿ ಕೊಂಡಿದ್ದಾರೆ. ಅವರು ಜನರ ಮನೆಗಳನ್ನು



ಶಿವರಾಮ ಗೌಂಡಿ ಅವರ ತಂಗಿ ಮಾಣಿಕಬಾಯಿ



ಶಿವರಾಮ ಗೌಂಡಿ ಅವರ
ಆರಾಧ್ಯ ದೇವರು
ಮಹಾದೇವ ದೇವಾಲಯ

ಹರುಷ ಪಡುತ್ತಾರೆ. ಚಂದ್ರಪ್ಪನವರಿಗೆ ಎಲ್ಲ ಪ್ರಕಾರದ ಭಜನೆಗಳು ತಿಳಿದಿವೆ. ಎಲ್ಲಿ ಕರೆದರೂ ಅವರು ಹಿಂದೆ ಮುಂದೆ ನೋಡದೆ ಅಲ್ಲಿಗೆ ಹೋಗುತ್ತಾರೆ. ತಮ್ಮ ಸೇವೆ ಸಲ್ಲಿಸಿ ಮರಳುತ್ತಾರೆ.

ಚಂದ್ರಪ್ಪನವರು ಅಂಬೇಡ್ಕರ್ ಹಾಗೂ ಬುದ್ಧರ ತತ್ತ್ವಗಳ ಪರಿಪಾಲಕರೂ ಆಗಿದ್ದಾರೆ. ಹೀಗಾಗಿ ಹಲವಾರು ಹಾಡುಗಳು ಅವರು ಬಾಬಾ ಸಾಹೇಬರನ್ನು, ಬುದ್ಧರನ್ನು ಕುರಿತಂತೆ ರಚಿಸಿದ್ದಾರೆ. ಅವರ ಲೇಖನಿಯು ಇಂದಿಗೂ ಕಾರ್ಯ ಮಾಡುತ್ತಲೇ ಇದೆ. ಸಮಯ ಸಿಕ್ಕಾಗ ರಚನೆಗೆ ಸಿದ್ಧರಾಗಿ ಏಕಾಂತಕ್ಕೆ ಮನವನ್ನು ಕರೆದುಕೊಂಡು ಹೋಗುತ್ತಾರೆ. ಲೋಕಾಂತದ ಪರಿವೆ ಇಲ್ಲದಂತೆ, ಏಕಾಗ್ರ ಮನದಿಂದ ಅವರು ಹಾಡುಗಳನ್ನು ರಚಿಸುತ್ತಾರೆ. ತಮ್ಮ ಹೆಸರೇ ಹಾಡುಗಳಿಗೆ ಮುದ್ರೆಯಾಗಿ ಇಟ್ಟುಕೊಂಡಿದ್ದಾರೆ. ಇಲ್ಲಿ ಅವರ ಎರಡು ಹಾಡುಗಳನ್ನು ಕೊಡಲಾಗಿದೆ:

ವಡಲೊಳಗಿನ ಬೆಂಕಿ ಹಾಂಗ

ವಡಲೊಳಗ ಬೆಂಕಿಯು ಹ್ಯಾಂಗಿರತಾದಂತಿ
ಹಾಂಗಿರತಾದಪ್ಪ ಆತ್ಮದಾಗ ಶಿವಜ್ಯೋತಿ ॥ ಪ ॥

ಬೆಂಕಿಯು ಸುಡತಾದ ಅಂತಿ
ಹಾಂಗಾದರ ನೀ ತಣ್ಣಗ ಹ್ಯಾಂಗ ಕುಂತಿ
ಪರಮಾತ್ಮ ಒಳಹಾನಂತಿ
ಅರುವಿಲೇ ಕಾಣದೆ ಹಂಗೆ ಹ್ಯಾಂಗ ನಿಂತಿ ॥ ೧ ॥
ಹೊರಗಾದ ಬಯಲ ಒಳಗಾದ ಬಯಲ
ಬಯಲಿಗ ಬಯಲ ಮಾಬಯಲ
ಇದು ಆದ ನಿಜ ಶಿವನ ಲೀಲಾ
ತಿಳಿಬೇಕಾ ಸತ್ಯ ಶರಣರ ಕೀಲಾ ॥ ೨ ॥

ನಾನು ನಾನಲ್ಲ; ಅವನು ಅವನಲ್ಲ
ನಾನೆಂಬ – ಅವನೆಂಬ ಒಬ್ಬನೆ ಅವನು
ತಾನೆಂಬ – ತನುವೆಂಬಲ್ಲಿಯೇ ಶಿವನು
ನೋಡು ತಮ್ಮ ಒಳಗ ಕಂಡಾನ ಅವನು ॥ ೩ ॥

ಕಟ್ಟುತ್ತಲೆ; ಅವರ ಬಿರುಕಿನ ಜೀವನಗಳನ್ನು ದುರಸ್ತಿ ಮಾಡುವ ಕಾರ್ಯ ಮಾಡುತ್ತಲಿದ್ದಾರೆ.

ಚಂದ್ರಪ್ಪನವರ ಗುರುಗಳು ಘಾಟಬೋರಾಳದ ಸಂತ್ರಾಮ ಮಹಾರಾಜರು. ಸಂತ್ರಾಮ ಅವರು ಒಳ್ಳೆಯ ತತ್ತ್ವಪದಕಾರರು, ಭಜನೆ ಹಾಡುಗಳ ಗಾಯಕರೂ; ಪರಮದೈವೀ ಭಕ್ತರೂ ಆಗಿದ್ದಾರೆ. ಚಂದ್ರಪ್ಪನವರು ಇಂತಹ ದೈವೀ ಭಕ್ತರ ಸನ್ನಿಧಿಯಲ್ಲಿ ತಮ್ಮ ವ್ಯಕ್ತಿತ್ವವನ್ನು ಬೆಳೆಸಿಕೊಂಡಿದ್ದಾರೆ.

ಚಂದ್ರಪ್ಪನವರು ಸರಳ ಸ್ವಭಾವಿ. ಇದ್ದುದರಲ್ಲಿಯೇ ಬದುಕನ್ನು ಸಂತೃಪ್ತಿಯಿಂದ ಬದುಕಬೇಕೆಂಬ ಶರಣ. ಅವರಿಗೆ ಇಂದಿನ ದಿನದ ಪ್ರಾಪ್ತಿಯ ಬಗೆಗೆ ಅತೃಪ್ತಿಯಿಲ್ಲ; ನಾಳೆ ಹೇಗೆಂಬ ಚಿಂತೆಯಿಲ್ಲ. ಎಲ್ಲವೂ ದೇವರ ಮೇಲೆಯೆ ಹಾಕಿ ಅವರು ತಮ್ಮ ಬದುಕನ್ನು ನಡೆಯಿಸುತ್ತಲಿದ್ದಾರೆ.

ಚಂದ್ರಪ್ಪನವರೊಂದಿಗೆ ಅವರ ಸಾಹಿತ್ಯ ಕೃಷಿಯ ಬಗೆಗೆ ಮಾತನಾಡಿದಾಗ ಅವರು ಹೀಗೆ ಹೇಳಿದರು: "ನಮ್ಮ ಮನೆಯೆಂದರೆ ಹಾಡುಗಾರರ ಪರಂಪರೆಯ ಮೇಲೆಯೆ ನಿಂತಿದ್ದು. ನಮ್ಮ ಅಜ್ಜನವರು ಹಾಡುತ್ತಿದ್ದರು. ನಮ್ಮ ತಂದೆಯವರು ಹಾಡುತ್ತಿದ್ದರು; ನಾನು ಹಾಡುತ್ತಿದ್ದೇನೆ; ನನ್ನ ಮಗ ಪ್ರಶಾಂತ ಈಗ ಮುಂದೆ ಹಾಡುವುದಕ್ಕೆ ಆರಂಭ ಮಾಡಿದ್ದಾನೆ. ಹಾಡುವುದರಿಂದ ಮನಸ್ಸು ಹಗುರಾಗುತ್ತದೆ. ಹಾಗೆಯೇ ದೇವರ ಸನ್ನಿಧಿಯಲ್ಲಿ ಏಕಾಗ್ರತೆಯಿಂದ ಅಡಕಗೊಂಡಂತಾಗುತ್ತದೆ. ಅದರಿಂದ ಆರೋಗ್ಯವೂ ವರ್ಧಿಸುತ್ತದೆ. ನಾನು ತಾರುಣ್ಯದಿಂದಲೇ ಹಾಡುಗಳನ್ನು ಹಾಡುತ್ತ ಬಂದವನು. ಆಗಲೇ ನನಗೆ ನನ್ನ ಗುರುಗಳಾದ ಸಂತ್ರಾಮ ಮಹಾರಾಜರ ದರ್ಶನ ಲಭ್ಯವಾಗಿತ್ತು. ಅವರು ನನಗೆ ಹಾಡುವುದರೊಂದಿಗೆ ಹಾಡುಗಳ ರಚನೆಯ ಮರ್ಮವನ್ನು ಹೇಳಿಕೊಟ್ಟರು. ಹೀಗಾಗಿ ನಾನು ಹಾಡು ಬರೆಯುವುದಕ್ಕೆ ತೊಡಗಿದೆನು. ಆರಂಭದಲ್ಲಿ ನಾನು ಬರೆದ ಹಾಡುಗಳನ್ನು ಒಮ್ಮೆಲೆ ಬಯಲಿಗೆ ಹಾಕುತ್ತಿರಲಿಲ್ಲ. ಗುರುಗಳ ಎದುರಿನಲ್ಲಿ ಇರಿಸುತ್ತಿದ್ದೆನು. ಅವರು ಹಲವಾರು ಬಾರಿ ತಿರುವಿ-ತಿರುವಿ ನೋಡುತ್ತಿದ್ದರು. ಅದರಲ್ಲಿ ವಿಷಾಕ್ಷರವೇನಾದರೂ ಬಂದಿವೆಯೋ? ಎಂಬುದರ ಬಗೆಗೆ ಲಕ್ಷ್ಯವಹಿಸುತ್ತಿದ್ದರು. ಹಾಡುಗಳಲ್ಲಿ ಯಾವುದೇ ದೋಷಗಳು ಇಲ್ಲವೆಂಬುದು ಖಾತ್ರಿಯಾದ ನಂತರ ಅವರು ಮೊದಲಿನ ಚರಣಗಳನ್ನು ಹಾಡುತ್ತಿದ್ದರು. ಅವರೊಂದಿಗೆ ನನಗೆ ದನಿ ಕೂಡಿಸಲು ಹೇಳುತ್ತಿದ್ದರು. ನಾನು ಹಾಡುತ್ತಿದ್ದೆನು. ಹೀಗೆ ನನ್ನ ಹಾಡಿನ ಪಯಣವು ಆರಂಭವಾಯಿತು. ನಾನು ಹಾಡುಗಾರ; ಕವಿಗಾರ ಆಗಿ ಬೆಳೆಯ ತೊಡಗಿದೆ; ಇನ್ನೂ ಬೆಳೆಯುವ ದಿಶೆಯಲ್ಲಿಯೇ ಇದ್ದೇನೆ."

ಚಂದ್ರಪ್ಪನವರಿಗೂ ಹಲವಾರು ಜನ ಶಿಷ್ಯರಿದ್ದಾರೆ. ಅವರ ಮುಖಾಂತರ ಹಾಡುಗಳು ಪ್ರಸಾರವಾಗುತ್ತಲಿವೆ. ಅವರು ತಮ್ಮ ಹಾಡುಗಳನ್ನು ಶಿಷ್ಯರ ಬಾಯಿಂದ ಕೇಳಿ


ಒಳಗ ಸಿಕ್ಕ ಹಾಕೊಂಡಿರಾ ಮರಿ
ಕಿವಿ ಗಡಚಿಕ್ಕುವಂತೆ ಡೊಳ್ಳ ಬಡಿ ॥ ೨ ॥

ಬಾವಲಿ ಒದರುತಾವ
ಗೂಗಿ ಕಿರುಚುತಾವ
ಹದ್ದು ಕೇಕೆ ಹಾಕುತಾವ
ಸದ್ದು ಮೀರಿ ಬೆಳೆಯುತಾವ ॥ ೩ ॥

ಸುದ್ದಾಗಿ ಒಳಗ ಹೋಗಿ
ಗದ್ದಲೆಲ್ಲ ಗಪ್ಪಾಗಿಸಬೇಕು
ಪೆದ್ದನಂತಾಗಿ ನಿಂತು ಸುಮ್ಮ ಒಳಗ ನೋಡಬೇಕು
ಹದ್ದಮೀರಿ ಹೋಗದಂತೆ ಕಾಯಬೇಕು ॥ ೪ ॥

ಭೂಮಿಯ ವಳಗ ಧನ್ನೂರ ಮ್ಯಾಲ
ಚಂದ್ರಪ್ಪ ಹೇಳ್ಯಾನ ಗುಡಿಯ ಲೀಲಾ
ಮಾಡಬೇಕ್ರಿ ಒಳಗಿನ ಗುಡಿ ಶುದ್ಧ
ಆಗುತಿ ನೀ ಆಗ ಬುದ್ಧ ॥ ೫ ॥

(ಈ ವಿವರಗಳನ್ನು ಸ್ವತಃ ಕವಿ ಮತ್ತು ಅವರೊಂದಿಗೆ ಇದ್ದ ಇಸ್ಮಾಯಿಲ್-ಜರೆಮ್ಮ ಅವರು ನೀಡಿದ್ದಾರೆ.)



ಚಂದ್ರಪ್ಪ ಬ್ಯಾಲಹಳ್ಳಿ ಅವರ ಮನೆ (ಧನ್ನೂರ.ಎಚ್)

ಮೂರು ದಿನ ಸಂಸಾರದಾಗ ನಿದ್ದಿ
ಅರುಬಿಟ್ಟು ಹುದಲಾಗ ಕಾಣಲಾರದೆ ಬಿದ್ದಿ
ಹಿಂಗೆ ಕುಂತಾರ ಯಮನರು ಒಯಿತಾರೋ ಗುದ್ದಿ ॥ ೪ ॥

ಅಣುವಿನೊಳಗ ಅಣುರೂಪ ಶಿವನು
ಅವನು ಪರಕೆ ಪರತರ ರೂಪನು ಗುರುವು
ಇಬ್ಬರ ಪಾದವ ಹಿಡಿಯೋ
ನಿನಗಂಟಿದ ಜಲ್ಮ ಜಂಜಡವ ಕಡಿಯೋ ॥ ೫ ॥

ದುಷ್ಟದುರ್ಜನರ ಕಾಟ ಹೆಚ್ಚಾಗಿ
ಕಷ್ಟದ ಭಾದೆಲಿಂದ ಮುಖವು ಪೆಚ್ಚಾಗಿ
ತಲೆ ಕೆಟ್ಟಿತೊ ತಮ್ಮ ನಿನ ಧಿಮಾಕ ಹೆಚ್ಚಾಗಿ
ಗುರುವಿನ ಪಾದ ಬಿಡಬ್ಯಾಡ ಹಿಡಿ ಗಟ್ಯಾಗಿ ॥ ೬ ॥

ವಡಲೊಳಗಿನ ಬೆಂಕಿ ಸೋಂಕದ ತೆರನಂತೆ
ಅಡಗಿರುವ ಮೃಢನನ್ನು ಕಾಣು ನೀ ನಿನ್ನಂತೆ
ಪೊಡವಿಯೊಳಗ ಧನ್ನೂರ ಗ್ರಾಮವಂತೆ
ಮೃಢ ಭಕ್ತ ಚಂದ್ರಪ್ಪನ ನುಡಿಯು ರುಚಿಯಂತೆ ॥ ೭ ॥

ಗದ್ದಲದ ಗುಡಿ

ಗದ್ದಲದ ಗುಡಿಯಿದು ಯಪ್ಪಾ
ಶುದ್ಧ ಒಳಗೆಲ್ಲ್ಯಾದ ಹೇಳೋಯಪ್ಪಾ ॥ ಪ ॥

ಐದುಮಂದಿ ಪೂಜಾರಿಗೋಳು
ಐದಾರು ಮಂದಿ ಮದ್ದಳಿ ಬಾರಿಸುತಾರ ನೋಡು
ಎಂಟು ಮಂದಿ ಚೀರತಾರ
ಒಂಬತ್ತು ಮಂದಿ ಕೂಗ್ಯಾಡತಾರ ॥ ೧ ॥

ಕೆಟ್ಟ ನಾರುವ ಧೂಪದ ಹೊಗಿ
ಬಟ್ಟ ಬಯಲಿಗ ಬಾರದಂತ ಗುಡಿ



ಚಂದ್ರಪ್ಪ ದಂಪತಿಗಳ ಕರುಳಿನ ಕುಡಿಗಳು.

೨೪. ದೇವೇಂದ್ರಪ್ಪ ಹಜನಾಳ (ಕ್ರಿ.ಶ.ಸು. ೧೯೪೬)

ಬೀದರ ಜಿಲ್ಲೆ ಭಾಲ್ಕಿ ತಾಲ್ಲೂಕಿನಲ್ಲಿ ಬರುವ ಗ್ರಾಮವು ಹಜನಾಳ. ಇದೊಂದು ಚಿಕ್ಕಗ್ರಾಮ. ಆದರೆ ಇದು ಪ್ರಸಿದ್ಧವಾಗಿರುವುದು ಇಲ್ಲಿನ ಶ್ರೇಷ್ಠ ತತ್ತ್ವಪದಕಾರರು ಮತ್ತು ಹಾಡುಗಾರರಿಂದ. ಪಂಚಾಕ್ಷರಯ್ಯ ಹಿರೇಮಠ; ದೇವೇಂದ್ರಪ್ಪ ಮುಂತಾದವರು ಇಲ್ಲಿ ತತ್ತ್ವಪದಕಾರರಾಗಿ ತತ್ತ್ವಪದ ಸಾಹಿತ್ಯವನ್ನು ಕೃಷಿ ಮಾಡಿದ್ದಾರೆ; ಮಾಡುತ್ತಲಿದ್ದಾರೆ.

ದೇವೇಂದ್ರಪ್ಪ ಹಜನಾಳ ತತ್ತ್ವಪದಕಾರರಾಗಿ ಬೆಳೆದುದ್ದರಿಂದಲೇ ಅವರ ವ್ಯಕ್ತಿತ್ವಕ್ಕೆ ತಾತ್ತ್ವಿಕತೆಯ ಹಲವಾರು ಮುಖಗಳು ಮೂಡಿವೆ. ಅವರ ತತ್ತ್ವಪದಗಳಲ್ಲಿ ಮೂಡಿರುವ ಭಾವೈಕ್ಯ ದೃಷ್ಟಿ; ಸುಜ್ಞಾನದ ಮಹತ್ವ, ಜನಸೇವೆಯ ಕಳಕಳಿ– ಇಂತಹ ವಿಷಯಗಳು ಅವರ ಬದುಕಿನಲ್ಲಿ ಅನುಸಂಧಾನಗೊಳ್ಳುತ್ತಿರುವ ಕಾರ್ಯ ಸಾಧನೆಗಳಾಗಿವೆ.

ಹಜನಾಳ ಗ್ರಾಮದ ಹೊರ ವಲಯದಲ್ಲಿ ಪ್ಯಾರೇ ಸಾಹೇಬ ದೇವರ ದರ್ಗಾಯಿದೆ. ಹೊರಗಿನಿಂದ ಬಂದವರು ಅದೊಂದು ಮುಸಲ್ಮಾನರ ಧಾರ್ಮಿಕ ಸ್ಥಳವೆಂದು ತಿಳಿಯುವದು ಸಹಜವೆ. ಆದರೆ ದೇವೇಂದ್ರಪ್ಪನವರು ಅದನ್ನು ಅರ್ಧಸತ್ಯವನ್ನಾಗಿ ಮಾಡಿದ್ದಾರೆ. ಮೊದಲು ಈ ದರ್ಗಾ ಶಿಥಿಲಾವಸ್ಥೆಯಲ್ಲಿದ್ದಿತು. ಸ್ವತ: ದೇವೇಂದ್ರಪ್ಪನವರು ನಿಂತು ಊರಿನ ಕೆಲವು ಆಸಕ್ತರನ್ನು ಕೂಡಿಸಿಕೊಂಡು ಒಟ್ಟು ಗ್ರಾಮಸ್ಥರ ಸಹಕಾರದಿಂದ ದರ್ಗಾದ ಜೀರ್ಣೋದ್ಧಾರ ಕಾರ್ಯ ಮಾಡಿಸಿದರು. ಗ್ರಾಮದ ಬಹು ಸಂಖ್ಯಾತ ಹಿಂದೂಗಳು ದರ್ಗಾಕ್ಕೆ ನಡೆದು ಕೊಳ್ಳುವಂತಾಯಿತು. ದರ್ಗಾದ ವ್ಯವಸ್ಥೆಯು ಇಂದು ಮುಸ್ಲೀಮ್ ಬಾಂಧವರಕ್ಕಿಂತಲೂ ಗ್ರಾಮದ ಹಿಂದೂಗಳ ಕೈಯಲ್ಲಿಯೇ ಇರುವುದು ದೇವೇಂದ್ರಪ್ಪನವರ ಭಾವೈಕ್ಯ ಸಾಧನೆಯ ಪ್ರತಿಫಲ ಎನ್ನಬೇಕು. ನಾವು ದೇವೇಂದ್ರಪ್ಪನವರನ್ನು ಕಾಣಲೆಂದು ಹಜನಾಳ ಗ್ರಾಮಕ್ಕೆ ಹೋದಾಗ ಅವರು ಸ್ವತ: ನಮಗೆ ಪ್ಯಾರೇ ಸಾಹೇಬ ದರ್ಗಾಕ್ಕೆ ಕರೆದುಕೊಂಡು ಹೋಗಿ ದರ್ಶನ ಮಾಡಿಸಿದರು.

ದೇವೇಂದ್ರಪ್ಪನವರ ತಂದೆ ಮಾರುತಿ. ತಾಯಿ ನಾಗಮ್ಮ. ಶ್ರದ್ಧಾವಂತ ದಂಪತಿಗಳು. ಧಾರ್ಮಿಕ ಶ್ರದ್ಧೆಯುಳ್ಳವರು. ಕೃಷಿಕಾಯಕದಿಂದ ಬದುಕನ್ನು ನಿಭಾಯಿಸುತ್ತಿದ್ದರು. ಈ ದಂಪತಿಗಳಿಗೆ ಮಗನಾಗಿ ದೇವೇಂದ್ರಪ್ಪನವರು ಕ್ರಿ.ಶ. ೧೯೪೬ರ ವರ್ಷದ ಅಕ್ಟೋಬರ ತಿಂಗಳಿನಲ್ಲಿ ಜನಿಸಿದರು.

ದೇವೇಂದ್ರಪ್ಪನವರು ಸುಶಿಕ್ಷಿತರಾಗಿ ಬೆಳೆಯುವುದಕ್ಕೆ ಪ್ರಸ್ತುತ ಶಿಕ್ಷಣ ವ್ಯವಸ್ಥೆ ಸಹಕಾರಿಯಾಯಿತು. ಅವರು ಸರಕಾರಿ ಶಾಲೆಗೆ ಹೋದರು. ಪಿ.ಯು.ಸಿ. ವರೆಗೆ ಶಿಕ್ಷಣ ಕಲಿತರು. ಕನ್ನಡ-ಹಿಂದಿ-ಇಂಗ್ಲೀಷ ಭಾಷೆಗಳ ಓದು-ಬರಹಗಳನ್ನು ಸಾಧಿಸಿಕೊಂಡರು.

ದೇವೇಂದ್ರಪ್ಪನವರ ಭೌತಿಕ ಜೀವನವು ಅತ್ಯಂತ ಸರಳವಾದುದು ಮತ್ತು ಸುಸಂಸ್ಕೃತಿಯಿಂದ ಕೂಡಿದುದು. ವೀರಶೈವ ಸಂಸ್ಕೃತಿಯ ಅನುಸಂಧಾನ ಅವರ ಕುಟುಂಬದಲ್ಲಿ ಸ್ಪಷ್ಟವಾಗಿ ಎದ್ದುಕಾಣುತ್ತದೆ. ಅವರ ಪತ್ನಿ ಚಂದ್ರಮ್ಮನವರು. ಈ ದಂಪತಿಗಳಿಗೆ ಮೂವರು ಹೆಣ್ಣು ಮಕ್ಕಳು ಮತ್ತು ಇಬ್ಬರು ಗಂಡು ಮಕ್ಕಳು. ಹೆಣ್ಣು ಮಕ್ಕಳ ವಿವಾಹವಾಗಿದೆ. ಗಂಡು ಮಕ್ಕಳು ಒಳ್ಳೆಯ ಶಿಕ್ಷಣಹೊಂದಿ ಉತ್ತಮ ರೀತಿಯಲ್ಲಿ ಬದುಕನ್ನು ನಡೆಯಿಸಿಕೊಂಡು ಹೋಗುತ್ತಿದ್ದಾರೆ.

ದೇವೇಂದ್ರಪ್ಪನವರ ನಡವಳಿಕೆ ಅತ್ಯಂತ ಸೌಜನ್ಯಶೀಲವಾದ ನಡವಳಿಕೆ. ಅವರನ್ನು ನೋಡಿದರೆ ಅವರೊಬ್ಬ ಕಲಿತವರು; ಕವಿಗಳು ಎಂದು ಥಟ್ಟನೆ ಯಾರಿಗೂ ತಿಳಿಯುವುದಿಲ್ಲ. ಅವರು ಒಬ್ಬ ಸಾಮಾನ್ಯ ರೈತನಂತೆ ಕಾಣುತ್ತಾರೆ. ಆದರೆ ಅವರ ಸಂಪರ್ಕದಲ್ಲಿ ಹೋದವರಿಗೆ ದೇವೇಂದ್ರಪ್ಪನವರ ಅಂತರಂಗವು ಅನಾವರಣಗೊಂಡು ಕಾಣುತ್ತದೆ. ಸಾಮಾನ್ಯ ರೈತನ ಒಳಗಡೆ ಅಡಗಿ ಕುಳಿತಿರುವ ಪುರಾಣಕಾರ, ಪ್ರವಚನಕಾರ ಸಮಾಜ ಸೇವಕ; ತತ್ತ್ವಪದಕಾರ, ಹಾಡುಗಾರ; ಭಜನೆಯ ಕಲೆಯಲ್ಲಿ ಪ್ರಾವಿಣ್ಯ ಪಡೆದವ ಇಂತಹ ಹಲವಾರು ವ್ಯಕ್ತಿ ಮುಖಗಳು ಮೂಡಿ ನಿಂತು ಹೊರಗಡೆ ಕಾಣಿಸಿಕೊಳ್ಳುತ್ತವೆ.

ದೇವೇಂದ್ರಪ್ಪನವರ ಮನೆತನದ ಹೆಸರು "ಸಕ್ರೆಪ್ಪನವರು" ಎಂದಿದೆ. ಈಗ ಅವರು ಭೌತಿಕವಾದ ಸಕ್ಕರೆಗಿಂತಲೂ ತತ್ತ್ವಪದದ ಸಕ್ಕರೆ ಎಲ್ಲರಿಗೂ ಹಂಚುತ್ತಲಿದ್ದಾರೆ. ಅದನ್ನು ಸವಿದು ಜನರು ಬಾಯಿ ಚಪ್ಪರಿಸಬೇಕು. ಅಂತರಂಗದ ಸಂಸ್ಕಾರ ಹೊಂದಬೇಕು.

ದೇವೇಂದ್ರಪ್ಪನವರು ಊರಿನ ಏನೆಲ್ಲ ಸಮಾಜ ಕಾರ್ಯಗಳಲ್ಲಿ ಮುಂಚೂಣಿಯಲ್ಲಿ ಇರುತ್ತಾರೆ. ಊರಿನ ಜಾತ್ರೆಯಾದಿಗಳನ್ನು ನಡೆಯಿಸುತ್ತಾರೆ. ಊರಿನಲ್ಲಿ ಉಂಟಾದ ಭಿನ್ನಾಭಿಪ್ರಾಯಗಳನ್ನು ನಿವಾರಿಸುವಲ್ಲಿ ಭಾಗವಹಿಸುತ್ತಾರೆ. ಎಲ್ಲರೂ ಒಂದಾಗಿ ಚಂದಾಗಿ ಬದುಕಬೇಕೆಂದು ಹೇಳುತ್ತಾರೆ.

ದೇವೇಂದ್ರಪ್ಪನವರ ಸಾಹಿತ್ಯದ ಗುರುಗಳು ಅದೇ ಗ್ರಾಮದ ಪಂಚಾಕ್ಷರಯ್ಯ ಸ್ವಾಮಿಗಳು. ಅವರು ಆಧ್ಯಾತ್ಮ ಸಾಧಕರೂ, ತತ್ತ್ವಪದಕಾರರೂ ಆಗಿದ್ದರು. ಅವರ ಮಾರ್ಗದರ್ಶನದಲ್ಲಿಯೇ ದೇವೇಂದ್ರಪ್ಪನವರು ಕವಿಯಾಗಿ ಬೆಳೆದರು; ಭಜನೆಯ

ವೃಂದ ಕಟ್ಟಿ ಹಾಡಿದರು. ಪುರಾಣ ಹೇಳುವುದನ್ನು ರೂಢಿಸಿಕೊಂಡು ಸಂಗೀತ ಕಲಿತರು. ಅದರ ಉಪಯೋಗವನ್ನು ಪುರಾಣ ಪ್ರವಚನ ಕಾರ್ಯಕ್ರಮದಲ್ಲಿ ಮಾಡಿಕೊಳ್ಳ ತೊಡಗಿದರು.

ದೇವೇಂದ್ರಪ್ಪನವರು ಪ್ಯಾರೇಸಾಹೇಬ ದೇವರನ್ನು ನಂಬುವಂತೆ, ಗ್ರಾಮದ ಹಣಮಂತ ದೇವರನ್ನೂ ನಡೆದುಕೊಳ್ಳುತ್ತಾರೆ. ಹಣಮಂತ ದೇವರ ದೇವಾಲಯದ ನಿರ್ಮಾಣ ಕಾರ್ಯದಲ್ಲೂ ಅವರು ತೊಡಗಿದ್ದಾರೆ.

ದೇವೇಂದ್ರಪ್ಪನವರದು ಕೃಷಿಕ ಮನೆತನ. ಅವರ ಆಧ್ಯಾತ್ಮ ಬದುಕಿಗೆ ಪ್ರೋತ್ಸಾಹ ನೀಡಿದವರು ನಿಡೋದಾ ಗ್ರಾಮದ ಗುರು ಶಂಕರಲಿಂಗ ಸ್ವಾಮಿಗಳು. ಅವರಲ್ಲಿ ದೇವೇಂದ್ರಪ್ಪನವರಿಗೆ ಅಪಾರವಾದ ಭಕ್ತಿಯಿದೆ. ದೇವೇಂದ್ರಪ್ಪನವರ ದಿನಚರಿ ವೈವಿಧ್ಯಮಯವಾಗಿದೆ. ಆಗಾಗ ಹೊಲಕ್ಕೆ ಹೋಗುತ್ತಾರೆ. ಊರಲ್ಲಿ ಇದ್ದಾಗ ಅವರು ಊರಿನ ಶಾಲೆಗೆ ಹೋಗುತ್ತಾರೆ. ಊರಿನ ಮಕ್ಕಳಿಗೆ ನೀತಿ ಪಾಠ ಹೇಳುತ್ತಾರೆ. ಹಾಡುಗಳನ್ನು ಕಲಿಸುತ್ತಾರೆ: ಹಾಡಿಸುತ್ತಾರೆ. ಅವರಲ್ಲಿ ಸಾಂಸ್ಕೃತಿಕ ವ್ಯಕ್ತಿತ್ವವನ್ನು ಜಾಗೃತಗೊಳಿಸಲು ಸಂಸ್ಕೃತಿಯ ಶಿಕ್ಷಕರಾಗಿ ಕಾರ್ಯ ಮಾಡುತ್ತಾರೆ. ಬೇರೆ ಊರುಗಳ ಶಾಲೆಗಳಿಗೂ ಅವರು ಸ್ವಯಂ ಪ್ರೇರಣೆಯಿಂದ ಭೇಟಿ ನೀಡುತ್ತಾರೆ. ಅಲ್ಲಿ ತಮ್ಮ ನೀತಿ ಬೋಧನೆಯ ಕಾರ್ಯಕ್ರಮಗಳನ್ನು ನೀಡುತ್ತಾರೆ.

ದೇವೇಂದ್ರಪ್ಪನವರು ಹಲವಾರು ತತ್ತ್ವಪದಗಳನ್ನೂ, ಭಜನೆ ಪದಗಳನ್ನೂ, ಮೋಹರಮ್ ಹಾಡುಗಳನ್ನೂ ಕಟ್ಟಿದ್ದಾರೆ. ತಮ್ಮ ಗುರುಗಳಾಗಿರುವ ಪಂಚಾಕ್ಷರಯ್ಯನವರ ಹೆಸರನ್ನೂ, ನಿಡೋದಾದ ಶಂಕರಲಿಂಗರ ನಾಮವನ್ನು ಅವರು ತಮ್ಮ ತತ್ತ್ವಪದಗಳಿಗೆ ಅಂಕಿತವಾಗಿಟ್ಟುಕೊಂಡಿದ್ದಾರೆ. ಇಂದೂ ಅವರ ಲೇಖನಿ ನಿರಂತರವಾಗಿ ಹಾಡುಗಳ ರಚನೆಯಲ್ಲಿ ತೊಡಗಿದೆ. ಅವರು ರಚಿಸಿದ ಎರಡು ಹಾಡುಗಳನ್ನು ಇಲ್ಲಿ ಕೊಡಲಾಗಿದೆ:


ಬರಿ ಮಾತಿನಿಂದ ಫಲವೇನು ?

ಗುರಿಯ ತಾಗದ ತರಹ ನೂರಾಸೆ ಇದ್ದರೇನು?
ಬರಿಮಾತಿನಿಂದ ಫಲವೇನು? ॥ ಪ ॥

ಕರುಣಾಳುಗಳು ಜಯಿಸದ ಕರಣೇಂದ್ರಿಗಳೇನು?
ಪರ ತತ್ವ ಮನ್ನಿಸದ ನರಜನ್ಮವೇನು?
ಎತ್ತು ಗಾಣಾ ಹೊತ್ತು ತಿರುಗಿದರೇನು?
ಚಿತ್ತವಿಲ್ಲದ ಗುಡಿಯ ಸುತ್ತಿದರೇನು? ॥ ೧ ॥

ಚಾರುಹಂಸನ ಮೇಟಿ ಧೀರದಿಂದ ಮೇಲಕ್ಕೇರಿಸಿ.
ಚೈತನ್ಯ ಸ್ನೇಹದಲ್ಲಿ ನೋಡಿ ಅವುಗಳು.
ಶಿವನೆಂಬ ಅಕ್ಷರದಿಂದ ಭಕ್ತ ಮಾರ್ಕಂಡೇಯಗ
ಒಲಿದಾ ಶಿವವೆಂಬ ಅಕ್ಷರದಿಂದ ಸಾಯುಜ್ಯ
ಪದವಿ ಪಡೆದುಕೊಂಡಾರ. ॥ ೨ ॥

ಐವತ್ತೆರಡು ಅಕ್ಷರ ಇಪ್ಪತ್ತೊಂದು ಸಾವಿರದ ಆರುನೂರ ಅಕ್ಷರ.
ಅದೆ ಕಾಲದಲ್ಲಿ ಹುಟ್ಟು ಸಾಕ್ಷ್ಯತದಿಂದ ಶಿವನ ರೂಪ ಪಡೆದಾರ.
ದೇಶದೊಳಗ ಹಜನಾಳ ಗ್ರಾಮ ದೇವೀಂದ್ರಪ್ಪಾ
ಭಕ್ತಿಯಿಂದ ಗುರು ಸೇವೆ ಮಾಡ್ಯಾರ
ಶಂಕರಲಿಂಗನು ಸದಾ ಅವರ ಮ್ಯಾಲೆ ಪ್ರೇಮ ಮಾಡುತಾರ. ॥ ೩ ॥



ದೇವೇಂದ್ರಪ್ಪ ಹಜನಾಳ ಅವರ ಮನೆ (ಹಜನಾಳ).

ಹುತ್ತಕ್ಕೆ ಬಡಿದರೆ ಹಾವು ಸಾಯುವದೇನು?
ಜ್ಞಾನವಿಲ್ಲದ ಭಕ್ತಿ ಎಷ್ಟಿದ್ದರೇನು?
ಸತ್ವವಿಲ್ಲದ ಭಕ್ತಿ ಎಷ್ಟಿದ್ದರೇನು?
ಹಾದಿ ಕಲ್ಲಿಗೆ ಹರನೆಂದರೇನು? ॥ ೨ ॥

ಭಾನುವಿಲ್ಲದ ಮುಗಿಲು ಬೆಳಗುವದೇನು?
ಚಂದ್ರನ ಕಿರಣವು ಅಂಧ ನೋಡುವನೇನು?
ಧ್ಯಾನದಲ್ಲಿ ಬಕಪಕ್ಷಿ ಮೌನವಾಗಿದ್ದರೇನು?
ಮೀನು ನೀರೊಳಗೆ ಸ್ನಾನ ಮಾಡಿದರೇನು? ॥ ೩ ॥


ದೇಶದೊಳಗ ನಮ್ಮ ನಿಡೋದಿಯ ಗ್ರಾಮ
ಗುರು ಶಂಕರಲಿಂಗರಿಗೆ ನನ ಮ್ಯಾಲ ಪ್ರೇಮ
ಹಜನಾಳ ಗ್ರಾಮದ ದೇವೀಂದ್ರಪ್ಪನಿಗೆ
ಹೀಂಗ ಪದಗಳ ರಚನಾನೇಮ ॥ ೪ ॥

ಗುರುವಿನಾ ಶಾಲೆ ಕಲಿಬೇಕು

ಶಾಲಿ ಕಲಿಯ ಬೇಕು
ಕನ್ನಡ ಶಾಲಿ ಕಲಿಯಬೇಕು. ॥ ಪ ॥

ಶಾಲಿ ಕಲಿಯ ಬೇಕು ಮೇಲ ಮಂದಿರದೊಳು
ನಿಲ್ಲುತಾ ಗುರುವಿನ ಆಲಯದೋಳ್ ಹೊಕ್ಕು
ಆರು ಮೂರು ಅಕ್ಷರ ಮೂನ್ನೂರ ಅರವತ್ತು ತೆರೆದು ದ್ವಾರ,
ಏರಸಿ ಮ್ಯಾಲಕ್ಕೆ ಧೀರ ಧಿಟ್ಟತನದಿ
ಜಾಗ್ರದಿಂದ ಮೇಲಕ್ಕೆ ನೋಡುತಲಿ.
ರಾಮರಾಮ ಅಕ್ಷರ ವಿಭೀಷಣ ಶಾಲಿ ಕಲಿತಾರ.
ರಾಮನೆಂಬ ಅಕ್ಷರದಿಂದ ಲಂಕಾಕ ರಾಜ್ಯ
ಪಡೆದುಕೊಂಡಾರ. ॥ ೧ ॥

ಮೂಂದೊಂದು ಇನ್ನೂರಾ
ಹದಿನಾರು ಸಂದುಗಳೆಲ್ಲ ಪೂರ.




ದೇವೇಂದ್ರಪ್ಪ ಹಜನಾಳ.



ಸೊಸೆ–ಮಕ್ಕಳು–ಮೊಮ್ಮಕ್ಕಳೊಂದಿಗೆ ದೇವೇಂದ್ರಪ್ಪನವರು.

ಪ್ಯಾರೇ ಸಾಹೇಬನ
ದರ್ಗಾ
(ಹಜನಾಳ).





ದೇವೇಂದ್ರಪ್ಪನವರ ಪತ್ನಿ
ಚಂದ್ರಮ್ಮ.

ದೇವೇಂದ್ರಪ್ಪನವರ
ಗುರು
ಶಂಕರಯ್ಯ ಸ್ವಾಮಿ
ಅವರ
ಛಾಯಾಚಿತ್ರ



೨೫. ಬಾಬುರಾವ ಜಾಧವ (ಕ್ರಿ.ಶ.ಸು. ೧೯೪೭)

ದಲಿತ ಕುಟುಂಬದಲ್ಲಿ ಜನಿಸಿದ ಬಾಬುರಾವ ಜಾಧವ ಅವರು ಸುಶಿಕ್ಷಿತರು; ಸುಸಂಸ್ಕೃತರು; ಸಭ್ಯನಡೆಯುಳ್ಳವರು. ಇವರ ಸ್ವಗ್ರಾಮವು ಡೋಣಗಾಪುರ. ಬೀದರ ಜಿಲ್ಲೆ ಭಾಲ್ಕಿ ತಾಲ್ಲೂಕಿನಲ್ಲಿ ಬರುವ ಗ್ರಾಮವಿದು. ಸಧ್ಯ ಅರವತ್ತುಮೂರು ವರ್ಷಗಳ ವಯಸ್ಸಿನವರಾದ ಬಾಬುರಾವ ಅವರು ತಮ್ಮ ಬದುಕಿನ ಅವಧಿಯನ್ನು ಸಾಹಿತ್ಯಸೇವೆ, ಧಾರ್ಮಿಕ, ಸಾಮಾಜಿಕ ಚಟುವಟಿಕೆಗಳನ್ನು ಮಾಡುತ್ತ ಕಳೆಯುತ್ತಿರುವರು.

ಬಾಬುರಾವ ಜಾಧವ ಅವರ ತಂದೆ ಮರೆಪ್ಪನವರು ಅತ್ಯಂತ ಬಡವರು. ಜೀವನ ನಿರ್ವಹಣೆಗಾಗಿ ಕೂಲಿ ಕೆಲಸವನ್ನು ಮಾಡುತ್ತಿದ್ದರು. ತಾಯಿ ಮಹಾದೇವಿ. ತಮ್ಮ ಪತಿಯೊಂದಿಗೆ ಒಕ್ಕಲುತನದ ಕಾರ್ಯಗಳನ್ನು ಮಾಡುವುದಕ್ಕಾಗಿ ಹೊಲಕ್ಕೆ ಹೋಗುತ್ತಿದ್ದರು. ಶ್ರಮಜೀವಿಗಳಾಗಿ ದುಡಿದು ಅವರು ತಮ್ಮ ಮಕ್ಕಳಿಗೆ ಸಾಕಿದರು. ಒಳ್ಳೆಯ ಸಂಸ್ಕಾರ, ಶಿಕ್ಷಣ ನೀಡಿದರು.

ಬಾಬುರಾವ ಅವರು ಪಿ.ಯು.ಸಿ ಎರಡನೆಯ ವರ್ಷದ ವರೆಗೆ ಶಿಕ್ಷಣ ಹೊಂದಿದರು. ಕನ್ನಡ, ಮರಾಠಿ, ಹಿಂದಿ ತಕ್ಕಮಟ್ಟಿಗೆ ಇಂಗ್ಲೀಷ ಕಲಿತರು. ಮುಂದೆ ಅವರಿಗೆ ಪ್ರಾಥಮಿಕ ಶಾಲೆಯ ಶಿಕ್ಷಕ ಹುದ್ದೆ ದೊರೆಯಿತು, ನೌಕರಿಯಲ್ಲಿ ಮುಂದುವರೆದರು.

ಬಾಬುರಾವ ಅವರಿಗೆ ವೃತ್ತಿ ಜೀವನದಲ್ಲಿ ಬೀದರಿನ ಶಾಂತಪ್ಪ ದೇವರಾಯ ಅವರ ಸಂಪರ್ಕವು ದೊರಕಿತು. ಅವರು ಕವಿಗಳು, ತತ್ತ್ವಪದಕಾರರು ಆಗಿದ್ದಾರೆ. ಒಳ್ಳೆಯ ಶಿಕ್ಷಕರಾಗಿ ಹೆಸರು ಮಾಡಿದ ದೇಶಾಂಶ ಹುಡುಗಿ ಅವರು ಬಾಬುರಾವ ಅವರನ್ನು ಸಾಹಿತ್ಯ ಕೃಷಿಗೆ ಪ್ರೋತ್ಸಾಹ ನೀಡಿದರು. ಆದುದರಿಂದ ಇಂದಿಗೂ ಬಾಬುರಾವ ಅವರ ಹೆಸರನ್ನು ಮರೆತಿಲ್ಲ. "ದೇವರಾಯ ಶಾಂತಪ್ಪನವರು ನನ್ನ ಗುರುಗಳು" ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ.

ಬಾಬುರಾವ ಅವರ ಸಂಸಾರಿಕ ಜೀವನವು ಸರಳವಾದದು. ಅವರ ಮನೆಗೆ ಹೋದರೆ ಸೀದಾ-ಸಾದಾ ಪರಿಸರವು ಕಂಡುಬರುತ್ತದೆ. ಅಲ್ಲಿ ಅವರು ಯಾವುದೇ ಆಡಂಬರದ ವಸ್ತುಗಳನ್ನು ಪ್ರದರ್ಶನ ಮಾಡಲು ಹೋಗಿಲ್ಲ. ಚಿಕ್ಕದಾದ-ಚೊಕ್ಕದಾದ

ಒಂದು ಮನೆಯು ಬಾಬುರಾವ ಅವರ ಸಂಸಾರಕ್ಕೆ ಆಶ್ರಯ ತಾಣವಾಗಿದೆ. ಅದರಲ್ಲಿಯೇ ಅವರು ಸಂತೃಪ್ತ ಭಾವದಿಂದ ಬದುಕುತ್ತಲಿದ್ದಾರೆ. ಬಾಬುರಾವ ಅವರ ಪತ್ನಿ ನರಸಾಬಾಯಿ, ಅವರಾದರೂ ಅಷ್ಟೆ. ಈ ದಂಪತಿಗಳಿಗೆ ಇಬ್ಬರು ಗಂಡು; ಒಬ್ಬಳು ಹೆಣ್ಣು ಮಗಳು.

ಬಾಬುರಾವ ಅವರು ಹಲವಾರು ಪ್ರಕಾರದ ಪದ್ಯಗಳನ್ನು ಬರೆದಿದ್ದಾರೆ. ಅವರಿಗೆ ಕನ್ನಡದಲ್ಲಿ ಬರವಣಿಗೆಯ ಗತಿಯಿದ್ದಂತೆ, ಹಿಂದಿಯಲ್ಲೂ ಬರೆಯುವ ಗತಿ ಇದೆ. ಉಭಯ ಭಾಷೆಗಳಲ್ಲೂ ಪದ್ಯಗಳನ್ನು ಅವರು ರಚಿಸಿದ್ದಾರೆ. ಬಾಬುರಾವ ಅವರು ಬೌದ್ಧ ಧರ್ಮದ ಅನುಯಾಯಿಯಾಗಿ ನಡೆದುಕೊಳ್ಳುತ್ತಲಿದ್ದಾರೆ. ಅವರಿಗೆ ಡಾ.ಬಾಬಾ ಸಾಹೇಬ ಅಂಬೇಡ್ಕರರ ಸಿದ್ಧಾಂತಗಳಲ್ಲಿ ಅತೀವ ವಿಶ್ವಾಸವಿದೆ. ಅವರ ಆರಾಧ್ಯ ದೇವರೆಂದರೆ ಬುದ್ಧದೇವ. ಅವರಿಗೆ ಈ ವಿಷಯದಲ್ಲಿ ಕೇಳಿದಾಗ ಹೀಗೆ ಹೇಳಿದರು:

"ನಾನು ಶಾಲೆಯ ದಿನಗಳಿಂದಲೂ ಬುದ್ಧನ ಬಗೆಗೆ ಆಸಕ್ತಿ ತಾಳಿದವನಾಗಿದ್ದೆನು. ಬುದ್ಧದೇವನು ಹೇಳಿದ ಜಾತಕದ ಕತೆಗಳನ್ನು ನಾನು ವಿದ್ಯಾರ್ಥಿಯಾಗಿದ್ದಾಗಲೇ ಓದಿ ಮುಗಿಸಿದೆನು. ಅವನ ತತ್ವಗಳು ನನಗೆ ಹಿತವೆನಿಸಿದವು. ಡಾ. ಬಾಬಾಸಾಹೇಬ ಅಂಬೇಡ್ಕರರು ಈ ಕಾರಣದಿಂದಲೇ ಬುದ್ಧ ಭಕ್ತರಾದರು. ನಾನು ದಲಿತ ಸಂಸ್ಕೃತಿಯಲ್ಲಿ ಹುಟ್ಟಿದವನು. ಶರಣರ ತತ್ತ್ವಗಳನ್ನು ಓದಿದ್ದೇನೆ. ಅಲ್ಲಿಯೂ ನನಗೆ ವಿಶ್ವಾಸವಿದೆ. ಆದರೆ ಸಮುದಾಯದ ದೃಷ್ಟಿಯಿಂದ ಇಂದು ನಾನು ಬೌದ್ಧಧರ್ಮದ ತತ್ತ್ವಗಳ ಅನುಸಂಧಾನ-ಪ್ರಚಾರ ಕಾರ್ಯದಲ್ಲಿ ತೊಡಗಿದ್ದೇನೆ. ಬುದ್ಧನನ್ನು ಕುರಿತು ಹಲವಾರು ಪದ್ಯಗಳನ್ನು ಬರೆದಿದ್ದೇನೆ". 'ಮಹಾಮಾನವ'ಯೆಂಬುದು ಬಾಬುರಾವ ಅವರು ಬುದ್ಧನ ಕುರಿತು ಬರೆದ ಚರಿತೆಯೇ ಆಗಿದೆ. 'ಧರ್ಮಜ್ಯೋತಿ', 'ಜನ ಜಾಗೃತಿ' ಎಂಬ ಕವನ ಸಂಕಲನಗಳನ್ನು ಹೊರ ತಂದಿದ್ದಾರೆ.

ಬಿಡಿ-ಬಿಡಿಯಾಗಿ ಸಮಾಜ, ಧರ್ಮ, ಸಂಸ್ಕೃತಿಗೆ ಸಂಬಂಧಿಸಿದಂತೆ ಪದ್ಯಗಳನ್ನು ಬರೆದಿರುವರು. ಅಂತಹ ಪದ್ಯಗಳಲ್ಲಿ ಹಲವಾರು ತತ್ತ್ವಸಂಯುತವಾದ ಪದ್ಯಗಳಿವೆ. ಬಾಬುರಾವ ಅವರು ತಾವು ಬರೆದ ಪದ್ಯಗಳಿಗೆ "ಡೋಣಗಾಪುರ ಈಶ" ಎಂಬ ಅಂಕಿತ ಇರಿಸಿದ್ದಾರೆ.

ಬಾಬುರಾವ ಅವರ ಮೇಲೆ ವೀರಶೈವದ ಪ್ರಭಾವ ಆಗದೆ ಬಿಟ್ಟಿಲ್ಲ. ಈ ಕಾರಣದಿಂದಲೇ ಅವರು ಹಲವಾರು ವೀರಶೈವ ಮಹಾಪುರುಷರು-ಶರಣರನ್ನು ಕುರಿತು ಹಾಡುಗಳನ್ನು ಬರೆದು ತಮ್ಮ ಭಕ್ತಿಯನ್ನು ಸಲ್ಲಿಸಿದ್ದಾರೆ. ಸಾಹಿತ್ಯ ಕೃಷಿಯ ಬಗೆಗೆ ಅವರು ಹೇಳುವ ಮಾತುಗಳನ್ನು ಕೇಳೋಣ: "ನನಗೆ ಹೈಸ್ಕೂಲ ವಿದ್ಯಾರ್ಥಿಯಾಗಿದ್ದಾಗಿನಿಂದಲೂ ಹಾಡಿನ ಬಗೆಗೆ ಆಸಕ್ತಿಯಿದ್ದಿತು. ಪಠ್ಯದಲ್ಲಿ ಬರುವ ಪದ್ಯಗಳನ್ನು ಸರಿಯಾಗಿ ಕಂಠಪಾಠ ಮಾಡಿ ಹಾಡುತ್ತಿದ್ದೆನು. ಶಿಕ್ಷಕನಾದ ಮೇಲೆ

ನಾನು ಸ್ವತಃ ಪದ್ಯಗಳನ್ನು ಬರೆಯ ತೊಡಗಿದೆನು. ನಾನೇನೂ ಮಹಾ ಕವಿಯಲ್ಲ, ಆಗಾಗ ಏನೋ ಒಂದಿಷ್ಟು ಬರೆಯುತ್ತೇನೆ. ಎಷ್ಟೋ ಬರೆದಿದ್ದೇನೆ. ಅವೆಲ್ಲ ಪ್ರಕಟವಾಗದೆ, ಅಲ್ಲಲ್ಲಿ ಬಿದ್ದು ಕಳೆದು ಹೋಗಿವೆ".

ಬಾಬುರಾವ ಅವರು ಮಹಾರಾಷ್ಟ್ರ ಗಡಿಯಲ್ಲಿರುವ ಡೋಣಗಾಪುರವೆಂಬ ಚಿಕ್ಕ ಹಳ್ಳಿಯಲ್ಲಿದ್ದುಕೊಂಡು ತತ್ತ್ವಪದಗಳ ಮುಖಾಂತರ ಕನ್ನಡದ ಕಂಪು ಹರಡುತ್ತಿರುವುದು ಸ್ತುತ್ಯಕಾರ್ಯವಾಗಿದೆ. ಇದಕ್ಕಾಗಿ ಅವರಿಗೆ ಹಲವಾರು ಸಾಹಿತ್ಯಿಕ ಸಂಘ-ಸಂಸ್ಥೆಗಳು ಸನ್ಮಾನಿಸಿವೆ. ಇಲ್ಲಿ ಬಾಬುರಾವ ಅವರ ಎರಡು ಪದ್ಯಗಳನ್ನು ಕೊಡಲಾಗಿದೆ:

ಏನೂ ಆಗದಂತ ಕೂಡಬ್ಯಾಡ

ಏನೂ ಆಗದಂತ ಕೂಡ ಬ್ಯಾಡೆಲೋ ಮೂಢ
ಮನಸ ಮಾಡಿ ನೋಡೋ ಬಿಡಬ್ಯಾಡ ॥ ಪ ॥

ಭೂಮೀಗಿ ದೇವರು ಯಾಕ ಕಳುವ್ಯಾನಪ್ಪ?
ಸುಮ್ಮ ಕುಡುವದಕ್ಕಲ್ಲ ದುಡಿಲಿಕ್ಕಪ್ಪ
ಒಮ್ಮಾರೆ ವಿಚಾರ ಮನದಲ್ಲಿ ಮಾಡಪ್ಪ
ಒಪ್ಪುವ ಕೈಗಳಿಂದ ಕೆಲಸವ ಮಾಡಪ್ಪ ॥ ೧ ॥

ಇರುವೆ ಎಂಬತ್ತುನಾಲ್ಕು ಲಕ್ಷ ಜೀವರಾಶಿ
ಅರುವಿಲ್ಲ ಅದಕ ಅಂತಿ ನೀ ಹೇಸಿ
ಅವು ಸುಮ್ಮನ ಕೂಡೋದಿಲ್ಲೊ ಪರದೇಶಿ
ಇರುವಿನ ಕೆಲಸಾ ನೋಡೋ ನೀ ಸೋಸಿ ॥ ೨ ॥

ಅರುವಿನ ಜಲ್ಮಕ್ಕ ಬಂದಿದಂದ ಮ್ಯಾಲ
ಮರುವೀಲೆ ಯಾಕ ಕೂಡುತಿ?
ಜರಿದರ ಜರಿಯಲಿ ಅದರ ಪರವಿಲ್ಲ
ಮರದು ಕೂಡಲಿ ಬ್ಯಾಡ ಮಾಡುವ ಕೆಲಸ ॥ ೩ ॥

ಕೆಲಸಕ್ಕ ಪೂಜ ಮಾಡಲಿ ಬೇಕು
ಪೂಜ ನೀ ಕೆಲಸಂತ ತಿಳಿಬ್ಯಾಡ

ತೇಜಿಲಿಂದ ನೀ ದುಡಿಯುತ ಹ್ವಾದರ
ರಾಜ್ಯದ ಸಂಪತ್ತ ನಿನ ಪದರಾಗ ॥ ೪ ॥

ಎಲ್ಲ ಜೀವಿಗಳಲಿ ಮನುಷ್ಯ ಜಲ್ಮ ಶ್ರೇಷ್ಠ
ಬಲ್ಲ ದೇವನು ಮಾಡ್ಯಾನ ಸೃಷ್ಟಿ
ಅಲ್ಲಾ ಇಲ್ಲಾ ಅನುತ ಸುಮ್ಮ ಕೂಡಲು ಬ್ಯಾಡ
ಖುಲ್ಲತನ ಮಾಡಿ ಹಾಳಾಗ ಬ್ಯಾಡ ॥ ೫ ॥

ದೇಶದೊಳಗ ನಮ್ಮ ವಾಸುಳ್ಳ ಡೋಣಗಾಪುರ
ಈಶ ಡೋಣಗೇಶ್ವರನ ಕರುಣಾ ಪೂರಾ
ಲೇಸದಿಂದಲಿ ನೀನು ಪಡಕೊಂಡು ಧೀರಾ
ಖಾಸಾ ಮಗನಾಗಿ ಬದುಕು ನಿಶ್ಚಿಂತಿಯಲಿ ಜೋರಾ ॥ ೬ ॥

ತಾಳ–ಮೇಳದ ಬದುಕು ಮೇಲ

ತಾಳ–ಮ್ಯಾಳ ಇಲ್ಲದ ಬದುಕು
ಹಾಳ ಹಟ್ಟಿಯಂಗ ಹರಕು ॥ ಪ ॥

ತಾಳ–ಮೇಳದ ಬದುಕು ಮೇಲ
ವ್ಯಾಳ್ಯಾದ ಅರಿವು ಇರುವುದು ಸೇಲ ॥ ಅನುಪಲ್ಲವಿ॥


ದೇಹ–ಮನಸ ಹೊಂದಿಕೆ ಇರಲಿ
ಜೀವ–ಆತ್ಮರ ಹೊಂದಿಕೆ ಇರಲಿ
ನರ–ಹರಗ ಹೊಂದಿಕೆ ಇರಲಿ
ಹಾಲ–ಸಕ್ಕರಿಗಿ ಹೊಂದಿಕೆ ಇದ್ದಾಂಗ ಇರಲಿ ॥ ೧ ॥

ಭಾವ–ದೇವನಿಗೆ ಹೊಂದಿಕೆ ಇರಲಿ
ಕಾಯಾ–ವಾಚಕ್ಕ ಹೊಂದಿಕೆ ಇರಲಿ
ಮನ–ಪ್ರಾಣಕ್ಕ ಹೊಂದಿಕೆ ಇರಲಿ
ಬುದ್ಧಿ–ಭಾವಕ್ಕ ಹೊಂದಿಕೆ ಇರಲಿ ॥ ೨ ॥

ಗಂಡ–ಹೆಂಡತಿಗಿ ಹೊಂದಿಕೆ ಇರಲಿ
ತಂದಿ–ಮಕ್ಕಳಿಗಿ ಹೊಂದಿಕೆ ಇರಲಿ
ತಾಯಿ–ಮಗಳೀಗಿ ಹೊಂದಿಕೆ ಇರಲಿ
ಕೇರಿ–ಊರೀಗಿ ಹೊಂದಿಕೆ ಇರಲಿ ॥ ೩ ॥

ಹಾಡು–ಹಾಡಗಾರರಿಗೆ ಹೊಂದಿಕೆ ಇರಲಿ
ಡೋಣಗಾಪುರ ಈಶನಿಗೆ ಹೊಂದಿಕೆ ಇರಲಿ
ಸುಖ–ದುಃಖಕ ಹೊಂದಿಕೆ ಇರಲಿ
ಭಕ್ತಿ–ಮುಕ್ತೀಗಿ ಹೊಂದಿಕೆ ಇರಲಿ ॥ ೪ ॥

(ಸ್ವತಃ ಕವಿಗಳೇ ಈ ವಿವರಗಳನ್ನು ನೀಡಿದ್ದಾರೆ.)



ಬಾಬುರಾವ ಜಾಧವ ಅವರ ಮನೆ (ಡೋಣಗಾಪುರ)



ಬಾಬುರಾವ ಜಾಧವ.



ಬಾಬುರಾವ ಅವರ
ಅಧ್ಯಯನದ ಸ್ಥಾನ.



ಬಾಬುರಾವ ಅವರ ಆರಾಧ್ಯ ದೇವರು ಡೋಣೇಶ್ವರ ದೇವಾಲಯ.
(ಡೋಣಗಾಪೂರ).

೨೬. ನೀಲಕಂಠ ಜ್ಯಾಂತಿ (ಕ್ರಿ.ಶ.ಸು. ೧೯೪೫)

ಬೀದರ ಜಿಲ್ಲೆಯ ಭಾಲ್ಕಿ ತಾಲ್ಲೂಕಿನ ಚಿಕ್ಕಗ್ರಾಮ ಜ್ಯಾಂತಿ. 'ಜ್ಯಾಂತಿ' ಎಂದರೆ "ತಿಳಿದಿರುವುದು" ಎಂದು ಅರ್ಥ. ಈ ಗ್ರಾಮವು ನೀಲಕಂಠನವರಂತಹ ಕವಿಗಳನ್ನೂ ಅಥವಾ ತಿಳುವಳಿಕೆವುಳ್ಳವರನ್ನೂ ಪಡೆದುಕೊಂಡು, ತನ್ನ ಹೆಸರನ್ನು ಇನ್ನಷ್ಟು ಸಾರ್ಥಕವಾಗಿಸಿಕೊಂಡಿದೆ ಎಂದು ಹೇಳಬಹುದು.

ಅರವತ್ತೊಂದು ವಯಸ್ಸಿನ ನೀಲಕಂಠ ಜ್ಯಾಂತಿಯವರು ದಲಿತ ಕುಟುಂಬದಲ್ಲಿ ಹುಟ್ಟಿ ಶರಣ – ಬುದ್ಧ – ಅಂಬೇಡ್ಕರ ಅವರ ಸಿದ್ಧಾಂತಗಳಿಗೆ ಬದ್ಧರಾಗಿ ನಡೆಯುತ್ತಾ ಬದುಕುತ್ತಿದ್ದಾರೆ. ಅವರದು ಮೂಲತಃ ಕುರಬ ಖೇಳಗಿ ಗ್ರಾಮ. ಅಲ್ಲಿಂದ ಬಂದು ಜ್ಯಾಂತಿ ಗ್ರಾಮದಲ್ಲಿ ಹಲವು ವರುಷಗಳಿಂದ ವಾಸವಾಗಿದ್ದಾರೆ.

ನೀಲಕಂಠ ಅವರು ಶಾಂತ ಸ್ವಭಾವದವರು. ಆರ್ಥಿಕ ಮುಗ್ಗಟ್ಟಿನೊಂದಿಗೆ ಹೋರಾಡುತ್ತಲೇ, ಹಾಡಿನ ಬದುಕನ್ನು ಗೆದ್ದವರು. ಕೃಷಿಯ ಕೆಲಸ – ಕೂಲಿಯಾದಿಗಳನ್ನು ಮಾಡಿ ಉಪಜೀವನ ನಡೆಸುತ್ತಿರುವರಾದರೂ ಅವರು ಅದರಲ್ಲಿಯೇ ಮುಳುಗಿ ಹೋಗಿಲ್ಲ. ಅದರಲ್ಲಿಯೇ ವಿಶಿಷ್ಟವಾದ; ಎಲ್ಲರಿಗೂ ಹೊಂದುವುದಕ್ಕೆ ಸಾಧ್ಯವಿಲ್ಲದ ಜೀವನವೊಂದು ಕಟ್ಟಿಕೊಳ್ಳುತ್ತಿದ್ದಾರೆ.

ನೀಲಕಂಠ ಅವರ ತಂದೆ ಬಸವಣ್ಣಪ್ಪನವರು ಸಂತ ಜೀವಿಗಳಂತಿದ್ದರು. ಆಧ್ಯಾತ್ಮದ ಕಡೆಗೆ ಅವರಿಗೆ ಹೆಚ್ಚಿನ ಒಲವು ಇದ್ದಿತು. ಯಲ್ಲಾಲಿಂಗನಲ್ಲಿ ಭಕ್ತಿಯಿದ್ದಿತು. ಊರ ಹೊರಗೆ ಕಟ್ಟಿದ ಯಲ್ಲಾಲಿಂಗನ ಗುಂಪಾದಲ್ಲಿ ಸಾಧು–ಸಂತರೊಡನೆ ಸತ್ಸಂಗಕ್ಕಾಗಿ ಬಸವಣ್ಣಪ್ಪನವರು ಹೋಗುತ್ತಿದ್ದರು.

ಅವರು ತತ್ವಪದಗಳನ್ನು ಹಾಡುತ್ತಿದ್ದರು. ಪ್ರವಚನ ಹೇಳುತ್ತಿದ್ದರು. ತಮ್ಮಲ್ಲಿಗೆ ಯಾರಾದರು ಬಂದರೆ ಅವರಿಗೆ ಹಿತದ ನುಡಿಗಳನ್ನು ತಿಳಿಸುತ್ತಿದ್ದರು. ಹೀಗಾಗಿ ಜನರು ಅವರನ್ನು "ಸಾಧುಬಸವಣ್ಣಪ್ಪ" ಎಂದೇ ಕರೆಯುತ್ತಿದ್ದರು. ಅವರು ನೂರು ವರ್ಷಗಳ ಮೇಲ್ಪಟ್ಟು ಜೀವಿಸಿದ್ದರು. ಬಸವಣ್ಣಪ್ಪನವರ ಹೆಂಡತಿ ಕಾಶಮ್ಮ. ಈ ದಂಪತಿಗಳ ಮಗನಾಗಿ ನೀಲಕಂಠ ಅವರು ದಿ: ೧೦–೦೮–೧೯೪೫ರಂದು ಹುಟ್ಟಿದರು.

ನೀಲಕಂಠ ಅವರು ಆಧುನಿಕವಾದ ಶಿಕ್ಷಣವನ್ನು ಹೊಂದಿದವರು. ಅವರದು ಪಿ.ಯು.ಸಿಯವರೆಗೆ ಶಿಕ್ಷಣವಾಗಿದೆ. ಹೀಗಾಗಿ ನೀಲಕಂಠ ಅವರು ಕನ್ನಡವಲ್ಲದೆ ಹಿಂದಿ, ಇಂಗ್ಲೀಷ ಭಾಷೆಗಳಲ್ಲಿ ಒಂದಿಷ್ಟು ಜ್ಞಾನ ಪಡೆದುಕೊಂಡಿದ್ದಾರೆ. ಕ್ರಿ.ಶ ೧೯೭೩ನೇ ವರ್ಷದಿಂದ ಅವರ ಕಾವ್ಯ ರಚನೆಯ ಕೃಷಿ ಆರಂಭವಾಗಿದೆ.

ನೀಲಕಂಠ ಅವರ ಹೆಂಡತಿ ಗೌರಮ್ಮ. ಈ ದಂಪತಿಗಳಿಗೆ ಒಟ್ಟು ಆರು ಜನ ಮಕ್ಕಳಿದ್ದಾರೆ. ಅವರಲ್ಲಿ ನಾಲ್ಕು ಜನ ಹೆಣ್ಣು ಮಕ್ಕಳು ಮತ್ತು ಇಬ್ಬರು ಗಂಡು ಮಕ್ಕಳು. ಉಪಜೀವನಕ್ಕಾಗಿ ನೀಲಕಂಠ ಅವರು ಹೊಲಕ್ಕೆ ಹೋಗಿ ಕೆಲಸ ಮಾಡುತ್ತಾರೆ. ಯಾವುದೇ ಕೆಲಸವಿರಲಿ ಅದರಲ್ಲಿ ಶ್ರದ್ಧೆಯಿಂದ ದುಡಿಯುತ್ತಾರೆ. 'ನಾನು ಕಲಿತವನು' ಎಂಬ ಅಹಂಕಾರವಿಲ್ಲ. 'ಕಾಯಕ ಗೌರವ' ಅವರ ಜೀವನದಲ್ಲಿ ಎದ್ದು ಕಾಣುತ್ತಿದೆ.

ನೀಲಕಂಠ ಅವರಿಗೆ ಭಾಲ್ಕಿ ಸ್ವಾಮಿಗಳಲ್ಲಿ ಗೌರವವಿದೆ. ಶರಣರಲ್ಲಿ ಭಕ್ತಿಯಿದೆ, ಬುದ್ಧ – ಬಾಬಾಸಾಹೇಬರ ಸಿದ್ಧಾಂತದಲ್ಲಿ ನಿಷ್ಠೆಯಿದೆ. ಅವರ ಸಾಹಿತ್ಯದಲ್ಲಿ ಇವೆಲ್ಲವುಗಳ ಪ್ರಭಾವ ಮುದ್ರೆಯು ಎದ್ದುಕಾಣುತ್ತದೆ. ನೀಲಕಂಠ ಅವರಿಗೆ ಅವರ ತಂದೆಯವರಿಂದ ಆಧ್ಯಾತ್ಮ ಸಾಧನೆಯ ಹಂಬಲವೂ ಬಳುವಳಿಯಾಗಿ ದೊರಕಿದೆ. ಜ್ಯಾಂತಿಯ ಹೊರವಲಯದಲ್ಲಿ ಯಲ್ಲಾಲಿಂಗ ಮಹಾರಾಜರ ಆಶ್ರಮವಿದೆ. ಅಲ್ಲಿ ಹಣಮಂತ ಸಾಧುಗಳಿದ್ದಾರೆ. ಅವರು ಆರೂಢರು, ಆಧ್ಯಾತ್ಮ ಸಾಧಕರು. ಅವರಿಗೆ ಹಲವಾರು ಜನ ಶಿಷ್ಯರಿದ್ದಾರೆ. ಅವರಲ್ಲಿ ನೀಲಕಂಠ ಅವರು ಒಬ್ಬರು. ಅವರು ಆಗಾಗ ಸಮಯ ಮಾಡಿಕೊಂಡು ಆಶ್ರಮಕ್ಕೆ ಹೋಗುತ್ತಾರೆ. ಸತ್ಸಂಗದಲ್ಲಿ ಭಾಗವಹಿಸುತ್ತಾರೆ. ಹಣಮಂತ ಸಾಧು ಮಹಾರಾಜರ ಆಪ್ತ ಶಿಷ್ಯರಾಗಿ ಜೀವಿಸುತ್ತಿದ್ದಾರೆ.

ನೀಲಕಂಠ ಅವರು ತಮಗೆ ಉಂಟಾದ ಕಾವ್ಯದ ಪ್ರೇರಣೆಯನ್ನು ಕುರಿತು ಹೀಗೆ ಹೇಳುತ್ತಾರೆ. "ನಾನು ದಿನನಿತ್ಯ ಹೊಲಕ್ಕೆ ಹೋಗುತ್ತೇನೆ. ಒಂದು ದಿನ ಜೋಳದ ಸುಗ್ಗಿಯ ಕಾಲದಲ್ಲಿ ಹಕ್ಕಿ ಹೊಡೆಯಲೆಂದು ಹೊಲಕ್ಕೆ ಹೋದೆನು ಬಿಸಿಲಿತ್ತು. ಜೋಳದ ದಂಟುಗಳನ್ನು ಹೊಂದಿಸಿ ಕಟ್ಟಿ ಕುಳಿತುಕೊಳ್ಳಲು ನೆರಳು ಮಾಡಿಕೊಂಡೆನು. ಅದರ ಆಶ್ರಯದಲ್ಲಿ ನಾನು ಕುಳಿತು ಕೊಂಡಾಗ ಹಕ್ಕಿಗಳು ಬಂದು ನನ್ನ ಮೇಲೆ ಕುಳಿತವು. ಆಗ ನನಗೆ ಆಶ್ಚರ್ಯವೂ ಆಯಿತು. ಆನಂದವೂ ಆಯಿತು. ನಿಸರ್ಗದ ಬಗೆಗೆ ನನಗೊಂದು ಆತ್ಮೀಯ ಭಾವವೂ ಹುಟ್ಟಿತು. ಆಗ ನನ್ನ ಒಳಗೊಂದು ಹಾಡುಹುಟ್ಟಿತು. ಅದುವೇ ನನಗೆ ಕಾವ್ಯ ಬರೆಯಲು ಪ್ರೇರಣೆಯಾಯಿತು. ಅಂದಿನಿಂದ ಹಾಡು ಬರೆಯಲು ಆರಂಭ ಮಾಡಿದೆನು. ಕ್ರಿ.ಶ. ೧೯೭೩ರಿಂದ ಇಲ್ಲಿಯವರೆಗೆ ನಾನು ಹಲವಾರು ಹಾಡುಗಳನ್ನು ಬರೆದಿದ್ದೇನೆ. ನನ್ನ ಮನಸ್ಸಿಗೆ ನೋವು ಉಂಟಾದಾಗ ಈ ಹಾಡುಗಳ ರಚನೆಗೆ ತೊಡಗುತ್ತೇನೆ. ಬಹುಶಃ ಆ ನೋವು ಹಾಡಾಗಿ ಹೊರಗೆ ಬರುತ್ತದೆಂದು ಕಾಣುತ್ತದೆ.

ನೀಲಕಂಠ ಅವರು ಹಲವಾರು ತತ್ತ್ವಪದಗಳನ್ನು ಬರೆದಿದ್ದಾರೆ. ಮೋಹರಮ್, ಹಂತಿ ಹಾಡುಗಳನ್ನೂ ಬರೆದಿರುವರು. ಬಸವಣ್ಣ – ಬುದ್ಧ ಹಾಗೂ ಬಾಬಾಸಾಹೇಬರ ಕುರಿತು ಹಾಡುಗಳನ್ನು ರಚಿಸಿದ್ದಾರೆ. ಅವರು ಬರೆದು ಅವೆಲ್ಲವನ್ನೂ ಬಂಗಾರ ರೀತಿಯಲ್ಲಿ ಜೋಪಾನವಾಗಿ ಇರಿಸಿದ್ದಾರೆ. ನೀಲಕಂಠ ಅವರು ತಮ್ಮ ಹೆಸರನ್ನೆ ಹಾಡುಗಳಿಗೆ ಮುದ್ರೆಯಾಗಿ ಇರಿಸಿಕೊಂಡಿದ್ದಾರೆ. ಅವರ ಎರಡು ಹಾಡುಗಳನ್ನು ಇಲ್ಲಿ ಕೊಡಲಾಗಿದೆ:

ಯಾರಗೊಡವಿ ನಮಗೇನು ಮಾಡುವುದು ?

ಯಾರಗೊಡವಿ ನಮಗೇನು ಮಾಡುವುದು ?
ಮೂರನಾಶ ಶಿವನನ್ನು ಹಾಡುವುದು ॥ ಪ ॥

ಬ್ಯಾಡ ಬ್ಯಾಡ ಅನುವುದು ಯಾಕ ?
ಬ್ಯಾಡ ತನವು ಮಾಡುವುದು ಯಾಕ ?
ಗಾಢ ಶುದ್ಧದಲಿ ನಡೆದರ ಸಾಕ
ಮೂಢತನ ಅಳಿದು ಮನುಷರ ಮಾಡಬೇಕ ॥ ೧ ॥

ಅವರ ಕಡಿ ಯಾಕ ಬೆರಳ ತೋರುತಿ
ನಿಮ್ಮವರ ನೀ ಯಾಕ ಬೈಯ್ಯತಿ ?
ಎಲ್ಲರೂ ನಿನ್ನವರ ಅಂತ ತಿಳಿಬೇಕ
ಏಕಭಾವನಾಗಿ ಜನರಾಗ ಇರಬೇಕ ॥ ೨ ॥

ಅವರು ವಂಕಾ ಅಂದರ ವಂಕ ಅಲ್ಲ
ಅವರು ಸೀದಾ ಅಂದರ ನಾವು ಸೀದಾ ಅಲ್ಲ
ನಮ್ಮ ನಾವು ವಂಕ ಸೀದಾ
ನಮಗ್ಯಾಕ ಬೇಕ ಯಾರ ಭೇದ ॥ ೩ ॥

ಬಡವ ಬಡವ ಅನಬ್ಯಾಡ
ಸಿರಿತನದಲ್ಲಿ ನೀನು ನಗಬ್ಯಾಡ
ಅವರ ಗೊಡವಿ ಅವರಿಗಿರಲಿ
ಭೇದ ಭಾವ ಮಾಡದು ಬಿಡಲಿ ॥ ೪ ॥

ನಾವು ಸೀದಾ–ಸಾದಾ ನಡಿಬೇಕು
ನಮ್ಮ ನಾವು ತಿದ್ದಿ ಕೊಳ್ಳಬೇಕು
ಜ್ಯಾಂತಿ ನೀಲಕಂಠನ ಹಾಡು ಕೇಳಬೇಕು
ಭ್ರಾಂತಿ ಬಿಟ್ಟು ಸುಖದಿಂದ ಬದುಕಬೇಕು ॥ ೫ ॥

ನೀ ಯಾರಪ್ಪಾ ?

ನೀ ಯಾರಪ್ಪ; ಎಲ್ಲಿಂದ ಬಂದಿಯಪ್ಪಾ ?
ನಿನ್ನ ಮನಿ ಎಲ್ಲಿ ಅದ ಯಪ್ಪಾ ? ॥ ಪ ॥

ನೀ ಹಣವಂತನಲ್ಲ; ನೀ ಹಣಮಂತನಲ್ಲ
ನೀ ಗುಣವಂತನಲ್ಲ; ನೀ ಜಾಣವಂತನಲ್ಲ
ನೀ ಕಾಣುವಂತನಲ್ಲ; ನೀ ಕೇಳುವಂತವನಲ್ಲ ॥ ೧ ॥

ನೀ ಅಧಿಕಾರಿಯಲ್ಲ; ನೀ ಸೇವಕ ಅಲ್ಲ
ನೀ ಕೂಲಿಕಾರ ಅಲ್ಲ; ನೀನು ಒಕ್ಕಲಿಗ್ಯಾ ಅಲ್ಲ
ನೀನು ಮ್ಯಾಲಜಾತಿ ಅಲ್ಲ; ನೀನು ಕೀಳು ಜಾತಿ ಅಲ್ಲ
ನೀನು ಏನೂ ಅಲ್ಲ ನಿನಗ ತಿಳಿದ ಇಲ್ಲ ॥ ೨ ॥

ಏಸು ನೀನಲ್ಲ; ಮಹಮ್ಮದ ನೀನಲ್ಲ
ಬುದ್ಧನು ನೀನಲ್ಲ; ಬಸವನು ನೀನಲ್ಲ
ಗಾಂಧೀ ನಿನಲ್ಲ: ಬಾಬಾ ಸಾಹೇಬರು ನೀನಲ್ಲ
ನೀನು ಯಾರೂ ಅಲ್ಲ; ನಿನಗೆ ತಿಳಿದೆಯಿಲ್ಲ ॥ ೩ ॥

ಚಂದ್ರನು ನೀನಲ್ಲ; ಇಂದ್ರನು ನೀನಲ್ಲ
ಸೂರ್ಯನು ನೀನಲ್ಲ; ಕಾರ್ಯನು ನೀನಲ್ಲ
ಪಾರನು ನೀನಲ್ಲ; ಬೋರನು ನೀನಲ್ಲ
ಯಾರೂ ಅಲ್ಲ ನೀನು ತಿಳಿದು ನೋಡು ಯಾರೆಂದು ನೀನು ॥ ೪ ॥

ನಮ್ಮ ಗೊಡವಿ ನಮಗ ಪಾಡ
ಆಗ ನಮಗ ತಿಳಿತಾದ ನೋಡ


ಬ್ಯಾರೇ ಅವರ ನಿಂದಾ ಆಡಿದರ
ಹಂದಿ ಜನ್ಮ ಬರತಾದ ನೋಡ ॥ ೫ ॥

ನಾನು–ನೀನು ಅಂದಿ ನೀನು ನಿಲ್ಲು ಶಿವನ ಹೊಂದಿ
ಶಿವನಿಂದ ನೀನು ಇಲ್ಲಿ ಬಂದಿ
ಅವನ ಮರತ್ಯಾಕ ಇಲ್ಲಿ ನಿಂದಿ
ತಿಳಿಸ್ಯಾರ ನೀಲಕಂಠ ನಿಜದ ಸಂಧಿ ॥ ೬ ॥


(ಈ ವಿವರಗಳನ್ನು ಸ್ವತಃ ಕವಿಗಳೇ ನೀಡಿದ್ದಾರೆ.)



ನೀಲಕಂಠ ಜ್ಯಾಂತಿ ಅವರ ಮನೆ (ಜ್ಯಾಂತಿ)




ನೀಲಕಂಠ ಜ್ಯಾಂತಿ




ನೀಲಕಂಠ ಜ್ಯಾಂತಿ
ದಂಪತಿಗಳು
(ಪತ್ನಿ:ನಾಗಮ್ಮ).



ನೀಲಕಂಠ ಜ್ಯಾಂತಿ ಅವರ ಆರಾಧ್ಯ ದೇವರು ಮಲ್ಲಿಕಾರ್ಜುನ
ದೇವಾಲಯ



ನೀಲಕಂಠ ಅವರ ಅನುಭಾವ ಸಾಧನೆ ಸ್ಥಳ ಯಲ್ಲಾಲಿಂಗರ
ಮಠ (ಜ್ಯಾಂತಿ)



ಯಲ್ಲಾಲಿಂಗರ ಮಠದಲ್ಲಿರುವ ಹಣಮಂತ ಮಹಾರಾಜರು

೨೭. ಪುಂಡಲಿಕ (ಕ್ರಿ.ಶ.ಸು. ೧೯೪೯)

ಬೀದರ ಜಿಲ್ಲೆಯ ಭಾಲ್ಕಿ ತಾಲ್ಲೂಕಿನಲ್ಲಿ ಬರುವ ಹಜನಾಳ ಗ್ರಾಮದ ಪುಂಡಲಿಕ ಅವರು ಅರವತ್ತು ವರುಷಗಳ ವಯಸ್ಸಿನ ಹೊಸ್ತಿಲಲ್ಲಿ ಇರುವವರು. ಆರ್ಥಿಕವಾಗಿ ಹಿಂದುಳಿದವರಾಗಿರುವ ಪುಂಡಲಿಕ ಅವರು ಅದರ ಬಗೆಗೆ ಹೆಚ್ಚು ತಲೆ ಕೆಡಿಸಿಕೊಂಡವರಲ್ಲ. ದೇವರು ಕೊಟ್ಟ ಹಾಡುಗಾರಿಕೆ ಮತ್ತು ಹಾಡು ಕಟ್ಟುವ ಶಕ್ತಿಯ ವಿನಿಯೋಗದಲ್ಲಿ ಅವರು ತಮ್ಮ ಬದುಕನ್ನು ಹೆಚ್ಚಾಗಿ ತೊಡಗಿಸಿದವರಾಗಿದ್ದಾರೆ. ದಲಿತ ವರ್ಗದ (ಮಾದಿಗರು) ರಾಮಪ್ಪನವರು ಕೂಲಿ ಮತ್ತು ಮನೆ ಕಟ್ಟುವ ಕೆಲಸ ಮಾಡುತ್ತಲೆ ಜೀವನದ ಬಂಡಿ ನಡೆಸಿಕೊಂಡು ಹೋದವರು. ರಾಮಪ್ಪನವರು ಉತ್ತಮ ಹಾಡುಗಾರರಾಗಿದ್ದರು. ಕೋಲಾಟ ಕಲಿಸುತ್ತಿದ್ದರು. ರಾಮಪ್ಪನವರ ಹೆಂಡತಿ ಫಾಳೆಮ್ಮನವರು, ಹೆಣ್ಣುಮಕ್ಕಳ ಹಾಡುಗಳನ್ನು ಅತ್ಯಂತ ಸುಶ್ರಾವ್ಯವಾಗಿ ಹಾಡುತ್ತಿದ್ದರು. ಇವರ ಹೊಟ್ಟೆಯಿಂದ ಪುಂಡಲಿಕ ಅವರು ಕ್ರಿ.ಶ.ಸು. ೧೯೪೯ರಲ್ಲಿ ಜನಿಸಿದರು.

ಪುಂಡಲಿಕ ಅವರು ಊರಿನ ಶಾಲೆಯಲ್ಲಿಯೇ ಶಿಕ್ಷಣ ಹೊಂದುವ ಅವಕಾಶ ಪಡೆದರು. ಅಲ್ಲಿ ಐದನೆಯ ತರಗತಿಯವರೆಗೆ ಓದಿದರು. ಬಾಲ್ಯದಿಂದಲೆ ಅವರಿಗೆ ಹಾಡುಗಾರಿಕೆಯತ್ತ ಆಸಕ್ತಿಯಿದ್ದಿತು. ಪಠ್ಯ ಪುಸ್ತಕದಲ್ಲಿದ್ದ ಪದ್ಯಗಳನ್ನು ಅವರು ಸುಂದರವಾಗಿ ಹಾಡುತ್ತಿದ್ದರು. ಅವರ ಹಾಡು ಕೇಳಿದ ಶಿಕ್ಷಕರು ಪುಂಡಲಿಕ ಅವರ ಬೆನ್ನು ಚಪ್ಪರಿಸುತ್ತಿದ್ದರು.

ಪುಂಡಲಿಕರ ಮದುವೆಯು ನರಸಮ್ಮನವರೊಂದಿಗೆ ಆಯಿತು. ಅವರಿಗೆ ಒಟ್ಟು ನಾಲ್ಕು ಜನ ಮಕ್ಕಳು ಜನಿಸಿದರು. ಅವರಲ್ಲಿ ಇಬ್ಬರು ಹೆಣ್ಣುಮಕ್ಕಳು; ಇಬ್ಬರು ಗಂಡು ಮಕ್ಕಳು. ಪುಂಡಲಿಕ ಅವರು ತಂದೆಯ ಉದ್ಯೋಗವಾಗಿದ್ದ ಮನೆ ಕಟ್ಟುವುದನ್ನೇ ಮುಂದುವರೆಸಿದರು. ಮನೆ ಕಟ್ಟುವ ಕೆಲಸವು ಇಲ್ಲದಾಗ ಕೂಲಿ ಕೆಲಸ ಮಾಡುವುದಕ್ಕಾಗಿ ಹೊಲಗಳಿಗೆ ಹೋಗುತ್ತಾರೆ.

ಪುಂಡಲಿಕ ದೇವಿ ಭಕ್ತರು. ಅವರಿಗೆ ಮೊದಲಿನಿಂದಲೂ ಊರಿನ ಹನುಮಂತ ಮತ್ತು ಮಹಾದೇವರಲ್ಲಿ ಅನುಪಮ ಭಕ್ತಿಯಿದೆ. ಆದರೆ ಇತ್ತೀಚೆಗೆ ಅವರ ಒಟ್ಟು ಕುಟುಂಬವೆಲ್ಲ ಕ್ರೈಸ್ತ ಧರ್ಮಕ್ಕೆ ಮತಾಂತರವಾಗಿದೆ. ಹೀಗಾಗಿ ರವಿವಾರದಂದು ಪ್ರಾರ್ಥನೆ ಮಾಡಲು ಪುಂಡಲಿಕ ಅವರು ಚರ್ಚಿಗೂ ಹೋಗುತ್ತಾರೆ.

ಪುಂಡಲಿಕ ಅವರಿಗೆ ಧರ್ಮಾಂತರದ ಬಗೆಗೆ ಕೇಳಿದಾಗ ಅವರು ಹೀಗೆ ಹೇಳುತ್ತಾರೆ: "ದಲಿತರೆಲ್ಲ ಬಹಳ ಕಾಲದಿಂದ ಶೋಷಣೆಯಲ್ಲಿಯೇ ನಲುಗಿ ಬಂದವರು, ಅವರನ್ನು ಹಿಂದೂಗಳೆಂದು ಹೇಳಿದರೂ; ಅದರಿಂದ ಏನೂ ಪ್ರಯೋಜನ ದಲಿತರಿಗೆ ಆಗಿಲ್ಲ. ಮೇಲಿನವರಾದ ಹಿಂದೂಗಳು ನಮ್ಮನ್ನು ಕನಿಷ್ಠವಾಗಿಯೇ ನೋಡುತ್ತಾರೆ. ಹೀಗಾಗಿ ನಮ್ಮ ಪರಿಸ್ಥಿತಿಯು ಅತ್ತ ನರಿಯೂ ಅಲ್ಲದ: ಇತ್ತ ಹುಲಿಯೂ ಅಲ್ಲದ ಸ್ಥಿತಿಯಂತಾಗಿದೆ. ಹೀಗಾದಾಗ ಏನು ಮಾಡುವುದು? ಕಾಲ ಸಾಕಷ್ಟು ಬದಲಾಗಿದೆಯೆಂದು ಹೇಳುತ್ತಾರೆ. ಆದರೆ ನಮ್ಮ ಸ್ಥಿತಿ-ಗತಿಗಳು ಬದಲಾಗಲಿಲ್ಲ, ಹಾಗೆಯೇ ಉಳಿದಂತೆ ನಮಗೆ ಅನಿಸುತ್ತದೆ. ಕ್ರೈಸ್ತ ಧರ್ಮದವರು ನಮಗೆ ಉಚಿತ ಶಿಕ್ಷಣ ಕೊಡುತ್ತಾರೆ. ನಮ್ಮ ಮಕ್ಕಳಿಗೆ ಶಾಲೆ ಕಲಿಸಲು ಹಣ ಕೊಡುತ್ತಾರೆ, ಅವರು ನಮ್ಮನ್ನು ಮನುಷ್ಯರಂತೆ ಕಾಣುತ್ತಾರೆ. ಆದುದರಿಂದ ನಾವೆಲ್ಲ ದಲಿತರು ಕ್ರೈಸ್ತಧರ್ಮವನ್ನು ಸೇರುತ್ತಿದ್ದೇವೆ". ಈ ಮಾತುಗಳು ಪೂರ್ಣ ಸತ್ಯವೋ, ಅರ್ಧ ಸತ್ಯವೋ ತಿಳಿಯದು.

ಪುಂಡಲಿಕ ಅವರು ಹೊರಗಡೆ ಕ್ರೈಸ್ತರಾಗಿರಬಹುದು, ಆದರೆ ಅವರ ಅಂತರಂಗ ಮಾತ್ರ ಅದೇ ಹಿಂದುತ್ವದಿಂದಲೇ ಕೂಡಿದೆಯೆಂಬುದಕ್ಕೆ ಅವರು ತತ್ತ್ವಪದಗಳನ್ನು ರಚಿಸುತ್ತಿರುವುದೇ ನಿದರ್ಶನವಾಗಿದೆ. ಅವರ ತತ್ತ್ವಪದಗಳು ಕ್ರೈಸ್ತನನ್ನು ಕುರಿತಾಗಿಲ್ಲವೆಂಬುದು ಇನ್ನೊಂದು ಅಂಶ.

ಪುಂಡಲಿಕ ಅವರನ್ನು ಕುರಿತು ನಾನು "ಈಗ ನೀವು ನಿಮ್ಮ ಗ್ರಾಮದ ದೇವರಿಗೆ ನಡೆದುಕೊಳ್ಳುವುದಿಲ್ಲವೆ? ಭಜನೆ ಮಾಡುವುದಿಲ್ಲವೆ?" ಎಂಬಂತಹ ಪ್ರಶ್ನೆಗಳನ್ನು ಕೇಳಿದೆನು. ಅದಕ್ಕೆ ಪುಂಡಲಿಕ ಅವರು "ನಾವು ಎಲ್ಲ ದೇವರನ್ನೂ ನಡೆದುಕೊಳ್ಳುತ್ತೇವೆ. ಊರಿನ ಪ್ಯಾರೇ ಸಾಹೇಬನ ದರ್ಗಾಕ್ಕೂ ನಡೆದುಕೊಳ್ಳುತ್ತೇವೆ. ಭಜನೆ ಮಾಡುತ್ತೇವೆ. ಹಾಡುತ್ತೇವೆ. ಹಾಡುಗಳನ್ನು ನಾನು ಇಂದಿಗೂ ರಚನೆ ಮಾಡುತ್ತಿದ್ದೇನೆ. ಇವೆಲ್ಲವುಗಳೊಂದಿಗೆ ಈಗ ನಾವು ಚರ್ಚಿಗೂ ಹೋಗುತ್ತೇವೆ, ಕ್ರಿಸ್ತನನ್ನು ಕುರಿತು ಪ್ರಾರ್ಥನೆ ಮಾಡುತ್ತೇವೆ. ಕ್ರೈಸ್ತ ಧರ್ಮಗುರುಗಳು ಹೇಳಿಕೊಡುವ ಪ್ರಾರ್ಥನಾ ಪರವಾದ ಹಾಡುಗಳನ್ನೂ ಹಾಡುತ್ತೇವೆ" ಎನ್ನುತ್ತಾರೆ.

ಅವರ ಧರ್ಮ ಅವರಿಗೆ. ಯಾವಾಗಲೂ ಅದು ವಯಕ್ತಿಕವಾದುದು; ಅದರ ಫಲ ಸಾರ್ವತ್ರಿಕವಾದುದು. ಪುಂಡಲಿಕ ಅವರು ಬೇರೆಯವರಿಗೆ ಯಾವುದೇ ಧರ್ಮದವರಾಗಿರಲಿ; ನಮಗೆ ಮಾತ್ರ ಅವರು ತತ್ತ್ವಪದಕಾರರ ಧರ್ಮದವರು. ಆದುದರಿಂದಲೇ ಅವರು ಮುಖ್ಯರಾಗುತ್ತಾರೆ.

ಪುಂಡಲಿಕ ಅವರು ಇಲ್ಲಿಯವರೆಗೆ ಹಲವಾರು ತತ್ತ್ವಪದಗಳನ್ನು ಬರೆದಿರುವರು. ಅವುಗಳಿಗೆ 'ಮಹಾದೇವ'ನ ಮುದ್ರೆಯನ್ನು ಹಾಕಿದ್ದಾರೆ. ಇಲ್ಲಿ ಅವರ ಎರಡು ತತ್ತ್ವಪದಗಳನ್ನು ಕೊಡಲಾಗಿದೆ:

ಡಂಭಾಚಾರಿಗಳು ಇವರು

ನಂಬಬಾರದಪ್ಪ ಇವರ ನಂಬಬಾರದು
ಡಂಭಾಚಾರಿಗಳಪ್ಪ ಇವರು ನಂಬಬಾರದು ॥ ಪ ॥

ಶಿವನ ಭಕ್ತಿ ಇಲ್ಲದವರ ನಂಬಬಾರದು
ಭವದ ರಕ್ತಿವುಳ್ಳವರ ನಂಬಬಾರದು
ಜೀವನ ಪ್ರೀತಿ ಇಲ್ಲದವರ ನಂಬಬಾರದು
ಶಿವನ ನೆನಪು ಇಲ್ಲದವರ ನಂಬಬಾರದು ॥ ೧ ॥

ಬ್ಯಾರೆ ದೇವರಿಗಿ ಎರಗುವವರ ನಂಬಬಾರದು
ಬ್ಯಾರೆ ಹೆಣ್ಣೀಗಿ ಆಶೆ ಪಡುವವರ ನಂಬಬಾರದು
ಬ್ಯಾರೆ–ಬ್ಯಾರೆ ಅಂತ ಭೇದ ಮಾಡುವರ ನಂಬಬಾರದು ॥ ೨ ॥

ಧನ್ಯರಿಗೆ ದೂರೀಕರಿಸುವವರ ನಂಬಬಾರದು
ಧನಕ್ಕೆ ಅಡ್ಡಬೀಳುವವರ ನಂಬಬಾರದು
ಮಾತಿನಲ್ಲಿ ನೀತಿ ಇಲ್ಲದವರ ನಂಬಬಾರದು
ಮಾತಿನಂತೆ ರೀತಿ ಇಲ್ಲದವರ ನಂಬಬಾರದು ॥ ೩ ॥
ವೇಷಾ ತೊಟ್ಟು ತಿರುಗುವವರ ನಂಬಬಾರದು
ಮೋಸ ಮಾಡುವ ಮನುಜಾರನ್ನು ನಂಬಬಾರದು
ಕೋಪವುಂಟು ಮಾಡುವವರ ನಂಬಬಾರದು
ಈಶಾನ ಅಣುಕಿಸುವವರ ನಂಬಬಾರದು ॥ ೪ ॥

ಪೊಡವಿಯೊಳಗ ಹಜನಾಳ ಗ್ರಾಮ ಇರುವುದು
ಅಲ್ಲಿ ಮಹಾದೇವರು ಸಂಭ್ರಮದಿಂದ ನೆಲೆಸಿರುವರು
ಮಹಾದೇವನ ಮ್ಯಾಲ ನಂಬಿಗ ಇಟ್ಟು ನಡೆಯಬೇಕಪ್ಪಾ
ಅವನ ಪಾದದಲ್ಲಿರುವ ನಂಬಗಿ ಒಂದೇ ಸಾಕಪ್ಪಾ॥ ೫ ॥

ಬಾಯಲ್ಲಿ ವೇದ, ಮನದೊಳಗ ಭೇದ

ಬಾಯಲ್ಲಿ ವೇದ ಹೇಳುತಿ
ಮನದಾಗ ಭೇದ ಮಾಡುತಿ ॥ ಪ ॥
ಕೆಲವು ಶಾಸ್ತ್ರ ಓದಿದಂತಿ
ಮಲ ಒಳಗ ತುಂಬಿಕೊಂಡು ಕುಂತಿ
ಮಲದೂರ ಶರಣನ ಮಾತು
ಗೆಲ ಆಯ್ತು ವೇದದಕ್ಕಿಂತು ॥ ೧ ॥


ವೇದ ಶಾಸ್ತ್ರ ಪುರಾಣ ಓದುತಿ
ನಿಜವ ತಿಳಿಯದೆ ಸುಮ್ಮನೆ ಕೂಗುತಿ
ಅಂತರಂಗ ಅರಿಯಲಿಲ್ಲ
ಅನಂತದ ಸಂಗ ಒದಗಲಿಲ್ಲ ॥ ೨ ॥

ನಿತ್ಯ–ಅನಿತ್ಯ ತಿಳಿಯದ
ಗಾದಿ ಮಾತುಗಳು ಹೇಳಿದರೇನು?
ಸತ್ತು–ಹುಟ್ಟುಗಳ ಗೊತ್ತು ತಿಳಿಯದೆ
ವೇದಗಳೆಲ್ಲ ಕುಟ್ಟಿ ಕುಡಿದರೇನು? ॥ ೩ ॥


ಕೆಟ್ಟ ಮನಸ ಬಿಡದ ಕಾಶೀಗೆ ಹೋಗಿ ಫಲವೇನು?
ದುಷ್ಟ ನಡತೆ ಬಿಡದೆ ಈಶನ ನೆನದರ ಫಲವೇನು?
ನಷ್ಟ ಮನವೂ ಬಿಡದೆ ಮಹಾಘನನೆನಿಸಿದರ ಫಲವೇನು?
ಭ್ರಷ್ಟನಾಗಿ ತೀರ್ಥಯಾತ್ರೆ ಮಾಡಿದರ ಫಲವೇನು? ॥ ೪ ॥

ಪೊಡವಿಯೊಳಗ ನಮ್ಮ ಹಜನಾಳ ದೊಡ್ಡದು
ಮೃಢ ಮಹಾದೇವನಲ್ಲಿ ನೆನವಿಹುದು
ಮನದಾಗ ಮಹಾದೇವನ ನೆನೆಸು
ಬಾಯಲ್ಲಿ ಶಿವ ಧ್ಯಾನದ ಗೆಣಸು ॥ ೫ ॥

(ಸ್ವತಃ ಕವಿಗಳೇ ಈ ವಿವರಗಳನ್ನು ನೀಡಿದ್ದಾರೆ).



ಪುಂಡಲಿಕ ಅವರ ಮನೆ (ಹಜನಾಳ)




ಪುಂಡಲಿಕ



ಪುಂಡಲಿಕ ಅವರ ತಾಯಿ
ಫಾಳೆಮ್ಮ



ಪುಂಡಲಿಕ ಅವರು ತಮ್ಮ ಮಕ್ಕಳೊಂದಿಗೆ.



ಪುಂಡಲಿಕ ಅವರ ಆರಾಧ್ಯ ದೇವರು ಹನುಮಾನ
ದೇವಾಲಯ (ಹಜನಾಳ)

೨೮. ಮಾಣಿಕಪ್ಪ (ಕ್ರಿ.ಶ.ಸು. ೧೯೫೦)

ಬೀದರ ಜಿಲ್ಲೆ ಭಾಲ್ಕಿ ತಾಲ್ಲೂಕಿನಲ್ಲಿ ಬರುವ ಹಜನಾಳ ಗ್ರಾಮದ ಇನ್ನೊಬ್ಬ ತತ್ತ್ವಪದಕಾರರು ಮಾಣಿಕಪ್ಪನವರು. ಇವರು ದೇವೇಂದ್ರಪ್ಪ ಹಜನಾಳ ಅವರ ಪ್ರಭಾವಕ್ಕೆ ಒಳಗಾದವರು. ಅವರ ಹಾಡುಗಳಿಂದ ಮತ್ತು ಭಜನೆಯ ಕಾರ್ಯಕ್ರಮಗಳಿಂದ ಪ್ರೇರಣೆಗೊಂಡು ಹಾಡು ರಚಿಸುವುದಕ್ಕೆ ತೊಡಗಿದವರು. ದಲಿತ ಕುಟುಂಬದಲ್ಲಿ ಹುಟ್ಟಿದ ಮಾಣಿಕಪ್ಪನವರು ಕ್ರೈಸ್ತ ಧರ್ಮಾನುಯಾಯಿಗಳಾಗಿದ್ದಾರೆ. ಆದರೆ ಶರಣ ಸಂಸ್ಕೃತಿಯ ಗಾಳಿಯು ಅವರ ಉಸಿರಾಟಕ್ಕೆ ಅನಿವಾರ್ಯವೆಂಬಂತಿದೆ. ಅವರು ಹೆಚ್ಚಾಗಿ ಭಜನೆಗಳಲ್ಲಿ ಶರಣರನ್ನು ಕುರಿತು ಹಾಡುತ್ತಾರೆ. ಶರಣರ ವಿಚಾರಧಾರೆಯನ್ನು ಒಳಗೊಂಡು ಅವರು ತತ್ತ್ವಪದಗಳನ್ನು ರಚಿಸಿದ್ದಾರೆ. ಈ ಹಿನ್ನೆಲೆಯಲ್ಲಿಯೇ ಅವರು ಇತರ ವಸ್ತು-ವಿಷಯಾಧಾರಿತ ತತ್ತ್ವಪದಗಳನ್ನೂ ರಚಿಸಿದ್ದಾರೆ. ಅವರು ಚರ್ಚಿಗೆ ಪ್ರಾರ್ಥನೆ ಸಲ್ಲಿಸಿಲು ಹೋಗುವಂತೆ, ಗ್ರಾಮದ ಹನುಮಂತ ಮತ್ತು ಮಹಾದೇವ ದೇವರಿಗೂ ಹೋಗಿ ನಮಸ್ಕರಿಸಿ ತಮ್ಮ ಭಕ್ತಿ-ಶ್ರದ್ಧೆಯನ್ನು ಅರ್ಪಿಸುತ್ತಾರೆ

ತಂದೆಶಿವರಾಯ ಅವರ ಕಾಲದಲ್ಲಿ ಅವರು ಮೂಲತಃ ಹಿಂದೂ ಸಂಸ್ಕೃತಿಯನ್ನು ಉಸಿರಾಡಿಸುತ್ತಿದ್ದರು. ಆರ್ಥಿಕ ಮುಗ್ಗಟ್ಟಿನಿಂದ ಕೂಡಿದ್ದ ಅವರು ಕೂಲಿ-ಕೃಷಿಕಾಯಕದಿಂದ ಹೊಟ್ಟೆ ತುಂಬಿಸಿ ಕೊಳ್ಳುತ್ತಿದ್ದರು. ಅವರಲ್ಲಿ ದೈವಿ ಭಕ್ತಿಯಿದ್ದಿತು. ಮಹಾದೇವ ದೇವರಲ್ಲಿ ಅವರಿಗೆ ಅತೀವ ನಂಬುಗೆಯಿದ್ದಿತು. ಅಲ್ಲಿಗೆ ಆಗಾಗ ಹೋಗುತ್ತಿದ್ದರು. ಅಲ್ಲಿ ನಡೆಯುವ ಭಜನೆಗಳಲ್ಲಿ ಅವರು ಹಾಡುತ್ತಿದ್ದರು. ಮಾಣಿಕಪ್ಪನವರ ತಾಯಿ ನಾಗಮ್ಮ. ಶಿವರಾಯ-ನಾಗಮ್ಮ ದಂಪತಿಗಳ ಮಗನಾಗಿ ಮಾಣಿಕಪ್ಪನರು ಕ್ರಿ.ಶ.ಸು ೧೯೫೦ರಲ್ಲಿ ಹುಟ್ಟಿದರು. ಮಾಣಿಕಪ್ಪನವರು ಸರಕಾರಿ ಪ್ರಾಥಮಿಕ ಶಾಲೆಗೆ ಹೋದರು. ಬಡತನದ ಬವಣೆಯಲ್ಲಿ ಹೆಚ್ಚು ಶಿಕ್ಷಣ ಕಲಿಯುವುದಕ್ಕೆ ಸಾಧ್ಯವಿರಲಿಲ್ಲ. ಆದುದರಿಂದ ಎರಡನೆಯ ತರಗತಿಯವರೆಗೆ ಓದಿದ ಮಾಣಿಕಪ್ಪನವರು ಅಲ್ಲಿಗೆ ಶಿಕ್ಷಣಕ್ಕೆ ಶರಣು ಸಲ್ಲಿಸಿ, ಹೊರ ಬಿದ್ದರು, ತಂದೆಯೊಡನೆ ಕೃಷಿ ಕೆಲಸಗಳಿಗೆ ಹೋಗುವುದಕ್ಕೆ ಆರಂಭ ಮಾಡಿದರು. ಕೆಲವು ದಿನ ದನಗಳನ್ನು ಕಾಯುವ ಕೆಲಸವೂ ಅವರು ಮಾಡಿದ್ದುಂಟು.

ಮಾಣಿಕಪ್ಪನವರ ಕೌಟುಂಬಿಕ ಜೀವನವು ಏರು-ಪೇರುಗಳಿಂದಲೇ ಕೂಡಿದೆ. ಆರ್ಥಿಕ ಮುಗ್ಗಟ್ಟೆ ಇದಕ್ಕೆ ಮುಖ್ಯ ಕಾರಣ. ಹೆಂಡತಿ ಪಾರಮ್ಮ. ಇವರಿಗೆ ನಾಲ್ಕು ಜನ ಹೆಣ್ಣು ಮಕ್ಕಳು, ಮತ್ತು ಒಬ್ಬ ಗಂಡುಮಗ ಇದ್ದಾರೆ. ಮಾಣಿಕಪ್ಪನವರು ಊರಲ್ಲಿ ಇದ್ದರೆ ಕೂಲಿ ಕೆಲಸಕ್ಕೆ ಹೋಗುತ್ತಾರೆ. ಬಂದ ಉತ್ಪನ್ನದಲ್ಲಿಯೇ ಕುಟುಂಬವನ್ನು ಸಾಗಿಸಿಕೊಂಡು ಹೊರಟಿದ್ದಾರೆ. ಅವರಿಗೆ ಬೇರೆ ರೀತಿಯ ಯಾವುದೇ ಆದಾಯವಿಲ್ಲ.

ಮಾಣಿಕಪ್ಪನವರು ಒಳ್ಳೆಯ ಹಾಡುಗಾರರಾಗಿದ್ದರಿಂದ ಅವರಿಗೆ ಬೇರೆ-ಬೇರೆ ಊರುಗಳಿಂದ ಕರೆಗಳು ಬರುತ್ತವೆ. ತಮ್ಮ ಗೆಳೆಯರನ್ನು ಕೂಡಿಸಿಕೊಂಡು ಮಾಣಿಕಪ್ಪನವರು ಭಜನೆ ಮಾಡಲು ಹೋಗುತ್ತಿರುತ್ತಾರೆ. ಮಾಣಿಕಪ್ಪನವರದು 'ಶಿವಭಜನೆ' ಮಾಡುವುದರಲ್ಲಿ ಎತ್ತಿದ ಕೈ. ಅವರು ತಮಗೆ ಜನ್ಮಜಾತವಾಗಿ ಬಂದಿರುವ ಕಲೆಯನ್ನು ಕುರಿತು ಹೀಗೆ ಹೇಳುತ್ತಾರೆ: "ನಾನು ಒಳ್ಳೆಯ ರೀತಿಯಲ್ಲಿ ಹಾಡುತ್ತೇನೆ. ಜನರು ನನ್ನನ್ನು ಉತ್ತಮ ಹಾಡುಗಾರನೆಂದು ಒಪ್ಪಿಕೊಂಡಿದ್ದಾರೆ. ಶಿವನ ಸ್ತೋತ್ರ, ಮಹಿಮೆ, ಶಕ್ತಿ-ಸಾಮರ್ಥ್ಯ ಕುರಿತಾದ ಹಾಡುಗಳನ್ನು ಹಾಡುತ್ತ ಶಿವಭಜನೆ ನಡೆಸಿಕೊಡುತ್ತೇನೆ. ಅವುಗಳಲ್ಲಿ ಕೆಲವು ಹಾಡುಗಳನ್ನು ನಾನೇ ಬರೆದಿರುವೆನು. ಭಜನೆಯಲ್ಲಿ ನನ್ನ ಗೆಳೆಯರು ಅವುಗಳನ್ನು ಹಾಡುತ್ತಾರೆ. ನಾನು ಕಾರಣಾಂತರಗಳಿಂದ ಕ್ರೈಸ್ತ ಧರ್ಮವು ಸ್ವೀಕರಿಸಿದ್ದೇನೆ. ಮೂಲತಃ ನಾನು ಹಿಂದೂವಾಗಿರುವುದರಿಂದ ಅಂತರಂಗದಲ್ಲಿ ಅದರ ಸಂಸ್ಕಾರವು ಇನ್ನೂ ಉಳಿದುಕೊಂಡಂತೆ ಭಾಸವಾಗುತ್ತದೆ. ನಾನು ಮಹಾದೇವ ಮಂದಿರ, ಹನುಮಂತ ದೇವಾಲಯಗಳಲ್ಲಿ ಜರಗುವ ಭಕ್ತಿಯ ಭಜನೆಗಳಿಗೆ ಹೋಗುತ್ತೇನೆ. ಅಲ್ಲಿ ಶಿವಪರವಾದ ಹಾಡುಗಳನ್ನು ಸುಂದರವಾಗಿ ಹಾಡುತ್ತೇನೆ. ಜನತೆ ಕೇಳಿ ಬೆಕ್ಕಸ ಬೆರಗಾಗುತ್ತಾರೆ. ಒಟ್ಟಾರೆ ನಾನು ನನ್ನ ಅಂತರಂಗವನ್ನು ತತ್ತ್ವಪದಗಳ ಅಭಿವ್ಯಕ್ತಿಗೆ ಒಡ್ಡುತ್ತೇನೆ. ನಮ್ಮ ಊರಲ್ಲಿ ಹಲವಾರು ಜನ ತತ್ತ್ವಪದಕಾರರಿದ್ದಾರೆ; ಆಗಿ ಹೋಗಿದ್ದಾರೆ. ಸಧ್ಯ ಇದ್ದವರು ದೇವೇಂದ್ರಪ್ಪನವರು. ಅವರ ಪ್ರಭಾವಕ್ಕೆ ನಾನು ಒಳಗಾಗದೇ ಇಲ್ಲ. ಅವರು ಬಹುದೊಡ್ಡ ಕವಿಗಳು; ಕಲಾವಿದರು. ಹಾಡು ಹಾಡುವುದರಿಂದ; ಭಜನೆ ಮಾಡುವುದರಿಂದ ಮತ್ತು ಪದ್ಯಗಳನ್ನು ಬರೆಯುವುದರಿಂದ ನನ್ನ ಮನಕ್ಕೆ ಮುದವೆನಿಸುತ್ತದೆ. ಆದುದರಿಂದ ಬರೆಯುತ್ತೇನೆ, ಹಾಡುವುದರಿಂದ ಮನಸ್ಸು-ಹೃದಯಗಳು ಹಗುರಾಗುತ್ತವೆ. ಆದುದರಿಂದ ಹಾಡುತ್ತೇನೆ."

ಮಾಣಿಕಪ್ಪನವರು ಹಲವಾರು ತತ್ತ್ವಪದಗಳನ್ನು ರಚಿಸಿದ್ದಾರೆ. ಅವುಗಳೊಂದಿಗೆ ಕೆಲವು ಮೋಹರಮ್, ಗೀಗೀ, ಹಾಡುಗಳನ್ನೂ ರಚಿಸಿದ್ದಾರೆ. ಅವರಿಗೆ ಪದ್ಯ ಬರೆಯುವುದು ಅತ್ಯಂತ ಸರಳವಾದ ಕಾರ್ಯವಾಗಿದೆ, ಅವರು ಹೀಗೆ ಹೇಳುತ್ತಾರೆ: "ನನಗೆ ಮನಸ್ಸು ಬರೆಯಬೇಕು ಅನ್ನಿಸಿದಾಗ ಬೇಕಾದ ವಿಷಯವಿರಲಿ; ಅದರ ಬಗೆಗೆ ಹಾಡು ಬರೆದು ಬಿಡುತ್ತೇನೆ."

ಮಾಣಿಕಪ್ಪನವರು ತಾವು ಬರೆದ ಹಾಡುಗಳನ್ನು ಒಂದೆಡೆಯಲ್ಲಿ ಸಂಗ್ರಹಿಸಿ ಇಡುವ ಗೋಜಿಗೆ ಹೋದವರಲ್ಲ. ಬರೆದು ಬರೆದು ಯಾರ್‍ಯಾರಿಗೋ ಕೊಟ್ಟಿದ್ದಾರೆ. ಎಲ್ಲೆಲ್ಲೋ ಇಟ್ಟಿದ್ದಾರೆ. ಹೀಗಾಗಿ ಎಷ್ಟೋ ಹಾಡುಗಳು ಕಳೆದು ಹೋಗಿವೆ. ಮಾಣಿಕಪ್ಪನವರ ಹಾಡುಗಳನ್ನು ಹಜನಾಳದಲ್ಲಿನ ಅವರ ಗೆಳೆಯರು ಹಾಡುತ್ತಾರೆ. ಮಾಣಿಕಪ್ಪನವರು ತಮ್ಮ ಹೆಸರನ್ನೆ ಮುದ್ರಿಕೆಯಾಗಿ ಬಳಕೆ ಮಾಡಿದ್ದುಂಟು. ಎರಡು ಹಾಡುಗಳನ್ನು ಇಲ್ಲಿ ಉದ್ಧರಿಸಲಾಗಿದೆ:

ನಮೋ ಮಹಾದೇವ

ನಮೋ ಮಹಾದೇವ ದೇವಾಧಿದೇವ
ನಮಿಸುವೆ ನಿನ್ನ ಚರಣಕ್ಕೆ ಶಿವ ॥ ಪ ॥

ಕಾಲಾರಿ ನೀನೇ, ಭವಹಾರಿ ನೀನೆ
ಮಲವಿದೂರ ನೀನೇ ಭವಪಾಪನಾಶಕನೆ
ಶೂಲಧರ ನೀನೆ; ಚಂದ್ರಧರ ನೀನೆ
ಕಪಾಲಧರನು ನೀನೇ ಶಿವನೆ ॥ ೧ ॥

ಆಕಾಶವನು ಬಟ್ಟೆಯಾಗಿಸಿದವನೆ
ಮಿಕ್ಕ ಮೀರಿದವರ ಗರ್ವ ಹರಿದವನೆ
ಲಕ್ಷ ಲಕ್ಷದ ಜೀವರಾಶಿಗಳ ಪಾಲಕನೆ
ಲಕ್ಷವಿಟ್ಟು ಭಕ್ತರ ರಕ್ಷಿಸುವವನೆ ॥ ೨ ॥

ನೀಲಕಂಧರನೆ ನಿಗಮಾಗಮಕಗೋಚರನೆ
ಬಾಲಿಗೆ ಒಲಿದವನೆ ಹಾಲ ಸವಿದನೆ
ಲೋಲ ಶ್ರೀಗುರು ರಾಯನೆ ॥ ೩ ॥

ಪಾಲಿಸೆಮ್ಮನು ತಂದೆ ಕರುಣಾಳು ಎಂದು
ವರಭಕ್ತ ಪ್ರೇಮನೆ
ಗುರುಸ್ವರೂಪ ನೀನೆ
ಪರಮ ಪಾವನಮೂರ್ತಿ ನೀನೆ ॥ ೪ ॥

ಮೂರು ಕಣ್ಣುವುಳ್ಳವನೆ
ಮುಕ್ಕಣ್ಣನೆಂಬ ಹೆಸರು ಧರಿಸಿದವನೆ
ಮಕ್ಕಳಂದದಿ ಹಾವು ಸಲುಹಿದವನೆ
ಕಂಕಣ ಮಾಡಿ ಕೈಯಲ್ಲಿ ಹಾಕಿಕೊಂಡವನೆ ॥ ೫ ॥

ವಿಷವ ಕುಡಿದು ಅಮೃತ ನೀಡಿದವನೆ
ಪಾಶವ ಬಿಡಿಸಿ; ಶಿಶುವಿನಂದದಿ ರಕ್ಷಿಸಿದವನೆ
ಲೇಸದಿ ಮೋಕ್ಷವ ಕರುಣಿಸಿದವನೆ
ಘಾಷಿಯ ಜೀವವನು ಉದ್ಧರಿಸಿದವನೆ ॥ ೬ ॥

ಧರಿಯೊಳು ಮೆರೆವ ಹಜನಾಳಗ್ರಾಮ
ವರ ನರಪದವಿ ಸಾಕೆಂದ ಮಾಣಿಕನಿಗೆ
ಮಹಾದೇವನ ಹೆಸರಿನಿಂದ ಒಲಿದವನೆ
ವರಕವಿಯ ಪದ ನೀಡಿದವನೆ ॥ ೮ ॥

ನಮೋ ಮಾದೇವನೆ
ನಮೋ ಮಾದೇವನೆ.

ಮನದಿಂದ ನೆನೆಯೊ

ಬಾಯಿಬಡಿವಾರ ಬಿಟ್ಟು ತಮ್ಮಾ
ಮನದಿಂದ ನೆನೆಯೋ ಶಿವನ ನಾಮ ॥ ಪ ॥


ಅಂದು-ಇಂದು ಎನ ಬೇಡ
ಚಿಂದಿಯ ಸಂಸಾರಕ್ಕ ಬಲಿಯಾಗಬೇಡ
ಹೊಂದಿದ್ದು ಹೋದಿತು; ಇಲ್ಲದ್ದು ಬಂದೀತು
ಕಂದಿ ಕಂದಿ ಸಾಯಬ್ಯಾಡ ತಮ್ಮಾ ॥ ೧ ॥

ಹಗಲೀಗಿ ಹನ್ನೆಡು ತಾಸ ಅಂತಿ
ನೋಡ ನೋಡದರಾಗ ಕತ್ತಲಾತಂತ ಅಳುತಿ
ತಡ ಮಾಡಬ್ಯಾಡ ನಿನ ಸಂತಿ
ಗಡ ಬಿಡಲೆ ಮುಗಿಸು ಕಳ್ಳರು ಬರುತಾರ ಅಂತಿ ॥ ೨ ॥


ನಗಬ್ಯಾಡ ಸುಮಸುಮಕ ತಮ್ಮಾ
ಅಳವು ಬರುತಾದ ನೋಡು ಒಮ್ಮ
ಮನದಿಂದ ಶಿವನ ನೆನಿಬೇಕೊ
ಘನದಿಂದ ಅವನ ಪಾದ ಹೊಂದ ಬೇಕೊ ॥ ೩ ॥

ನಾ–ನಾ ಅನಬ್ಯಾಡ ಮನುಜಾ
ನೀನು ಯಾವ ನರಪಿಳ್ಳೆಯೊ ಮನುಜಾ
ಹಜನಾಳ ಗ್ರಾಮಕ್ಕ ಹೊರಡು
ಅಲ್ಲಿ ಮಾಣಿಕನ ಒಡಗೂಡಿ ಹಾಡು ॥ ೪ ॥

(ಈ ವಿವರಗಳನ್ನು ಸ್ವತಃ ಕವಿಗಳೆ ಕೊಟ್ಟಿದ್ದಾರೆ.)




ಮಾಣಿಕಪ್ಪ ಅವರ ಮನೆ (ಹಜನಾಳ)



ಮಾಣಿಕಪ್ಪ ಹಜನಾಳ.



ಮಾಣಿಕಪ್ಪ ಅವರ ಕರುಳಿನ ಕುಡಿಗಳು.



ಮಾಣಿಕಪ್ಪ ಅವರ ಆರಾಧ್ಯ ದೇವರು ಮಹಾದೇವ ದೇವಾಲಯ
(ಹಜನಾಳ).

೨೯. ಮಲ್ಲಪ್ಪ ವಾಗ್ಮೊರೆ (ಕ್ರಿ.ಶ.ಸು. ೧೯೫೦)

ಬೀದರ ಜಿಲ್ಲೆಯ ಭಾಲ್ಕಿ ತಾಲ್ಲೂಕಿನಲ್ಲಿ ಬರುವ ನಿಟ್ಟೂರು ಗ್ರಾಮವು ಮಲ್ಲಪ್ಪ ವಾಗ್ಮೊರೆ ಅವರ ಸ್ವಗ್ರಾಮವಾಗಿದೆ. ದಲಿತ ಕುಟುಂಬದಲ್ಲಿ ಹುಟ್ಟಿದ ಮಲ್ಲಪ್ಪನವರು ಸುಶಿಕ್ಷಿತರು; ಸುಸಂಸ್ಕೃತರು; ಸರಳರು. ಆಧ್ಯಾತ್ಮ ಜೀವಿಗಳು.

ತಂದೆ ಜಟ್ಟೆಪ್ಪನವರು ಬಡತನದ ಜೀವನದಲ್ಲಿ ಬದುಕಿದವರು. ಕೂಲಿ-ಕೃಷಿ ಕಾಯಕದಿಂದ ಜೀವನದ ಪೋಷಣೆಗಾಗಿ ಹೆಣಗಿದವರು. ಆದಷ್ಟು ತಮ್ಮ ಮಕ್ಕಳಿಗೆ ಒಳ್ಳೆಯ ಸಂಸ್ಕಾರ ಒದಗಿಸಲು ಹಂಬಲಿಸಿದವರು. ಅವರ ಬದುಕಿನ ಸುಖದ ಬಗೆಗೆ ತಮ್ಮದೆ ಆದ ರೀತಿಯಲ್ಲಿ ಕನಸು ಕಂಡವರು. ಜೆಟ್ಟೆಪ್ಪನವರ ಹೆಂಡತಿ ಗಂಗಮ್ಮನವರು. ಹಳ್ಳಿಯ ಮುಗ್ಧ ಹೆಣ್ಣುಮಗಳು. ಈ ದಂಪತಿಗಳ ಮಡಿಲಿನಿಂದ ಮಲ್ಲಪ್ಪನವರು ಕ್ರಿ.ಶ. ೧೯೫೦ರಂದು ಹುಟ್ಟಿ ಬಂದರು.

ಮಲ್ಲಪ್ಪನವರಿಗೆ ಬಡತನದಲ್ಲಿ ಶಿಕ್ಷಣ ಹೊಂದುವ ಅವಕಾಶವಾದುದು ದೇವರ ಇಚ್ಛೆ. ಇಂದು ಮಲ್ಲಪ್ಪನವರು ಇದೇ ಮಾತನ್ನು ಹೇಳುತ್ತಾರೆ. ಅವರ ಕೆಲವು ಮಾತುಗಳನ್ನು ಕೇಳಬೇಕು: "ನಮ್ಮ ಮನೆಯಲ್ಲಿ ಹಿಂದೆ ಯಾರೂ ಕಲಿಯಲಿಲ್ಲ, ನಮ್ಮ ತಂದೆ ಸರಳ ಸ್ವಭಾವದ ನಿರಕ್ಷರಿಯಾದ ಮನುಷ್ಯ. ಆದರೆ ಅವನಿಗೆ ಬದುಕಿನಲ್ಲಿ ಬದುಕಬೇಕಾದ ನೀತಿಯ ಬಗೆಗೆ ತಿಳಿದಿತ್ತು. ಕೆಟ್ಟ ನಡತೆಯ ಬಗೆಗೆ ಅವರಿಗೆ ಸಿಟ್ಟು ಇದ್ದಿತು. ಹೀಗಾಗಿ ನಮಗೆ ನಮ್ಮ ತಂದೆ ಅವರು ಒಳ್ಳೆಯ ಗುಣಗಳನ್ನು ಕಲಿಸಿದರು. ನಮಗೆ ಶಾಲೆಗೆ ಹೋಗುವುದಕ್ಕಾಗಿ ಅವಕಾಶ ಒದಗಿಸಿದರು. ಅವರೊಂದಿಗೆ ಹೊಲಕ್ಕೆ ಹೋಗಲು ಸಿದ್ಧರಾದರೆ ಬೈಯುತ್ತಿದ್ದರು. ಶಾಲೆಗೆ ಹೋಗುವಂತೆ ಹೇಳುತ್ತಿದ್ದರು. ಹೀಗಾಗಿ ನಾವು ಶಿಕ್ಷಣ ಹೊಂದುವುದಕ್ಕೆ ಸಾಧ್ಯವಾಯಿತು".

ಮಲ್ಲಪ್ಪನವರು ಮೆಟ್ರಿಕ್‌ವರೆಗೆ ಓದಿದವರಾಗಿದ್ದಾರೆ. ಅವರಿಗೆ ಕನ್ನಡ-ಹಿಂದಿ ಭಾಷೆಗಳೊಂದಿಗೆ ತಕ್ಕಮಟ್ಟಿಗೆ ಇಂಗ್ಲೀಷ ಭಾಷೆಯೂ ತಿಳಿಯುತ್ತದೆ.

ಮಲ್ಲಪ್ಪನವರು ಜೀವನ ನಿರ್ವಹಣೆಗಾಗಿ ಸರಕಾರಿ ನೌಕರಿ ಹುಡುಕಿಕೊಂಡರು. ಸರಕಾರಿ ಪ್ರೌಢ ಶಾಲೆಯಲ್ಲಿ ಎರಡನೇ ದರ್ಜೆಯ ಗುಮಾಸ್ತನಾಗಿ ಸೇರಿಕೊಂಡರು.

ಮಲ್ಲಪ್ಪನವರ ಹೆಂಡತಿ ಮಲ್ಲಮ್ಮ. ಈ ದಂಪತಿಗಳಿಗೆ ಮಕ್ಕಳಿಲ್ಲ. ಹೀಗಾಗಿ

ಸಹೋದರ ಸಂಬಂಧಿ ಮಕ್ಕಳಿಗೆ ತಮ್ಮ ಮನೆಯಲ್ಲಿ ಆಶ್ರಯ ನೀಡಿ, ಅವರ ಬಾಳು ಬೆಳಗಿಸಲು ಕಾರಣರಾಗಿದ್ದಾರೆ. ಮಲ್ಲಪ್ಪನವರಲ್ಲಿ ಭೌತಿಕತೆಯ ಬಗೆಗೆ ಹೆಚ್ಚಾಗಿ ಆಶೆಯಿಲ್ಲ. ಆರ್ಥಿಕ ದೃಷ್ಟಿಯಿಂದಲೂ ಬಡತನವೆಂಬುದಿಲ್ಲ. ಸರಕಾರದಿಂದ ನಿವೃತ್ತಿವೇತನ ಬರುತ್ತದೆ. ನಿವೃತ್ತಿಯ ಜೀವನವು ಸುಖ ಮತ್ತು ಶಾಂತಿಗಳಿಂದಲೇ ನಡೆಯುತ್ತಲಿದೆ.

ಮಲ್ಲಪ್ಪನವರಿಗೆ ಭೌತಿಕ ಬದುಕಿನಕ್ಕಿಂತಲೂ ಆಧ್ಯಾತ್ಮ ಬದುಕಿನ ಸಾಧನೆ ಮಹತ್ವವಾಗಿದೆ. ಅವರು ಊರಿನ ಹನುಮಾನ ಮತ್ತು ಮಹಾದೇವ ದೇವರುಗಳಿಗೆ ಅತ್ಯಂತ ಭಕ್ತಿಯಿಂದ ನಡೆದುಕೊಳ್ಳುತ್ತಾರೆ. ದೇವರುಗಳ ಭಜನೆಯ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಾರೆ. ಸುಮಾರು ತಮ್ಮ ವಯಸ್ಸಿನ ಐವತ್ತೈದು ವರ್ಷಗಳವರೆಗೆ ಹಾಡುಗಳನ್ನು ಹಾಡುತ್ತ; ಭಜನೆ ಮಾಡುತ್ತಲೇ ಬಂದಿದ್ದಾರೆ. ಮಲ್ಲಪ್ಪನವರ ಗುರು ಬಾಳೂರ ಶಂಕರದಾಸರು. ಅವರು ಆಧ್ಯಾತ್ಮಿಕ ಜೀವಿಗಳೂ ಮತ್ತು ತತ್ತ್ವಪದಕಾರರು. ಅವರ ಸಾನ್ನಿಧ್ಯದಲ್ಲಿಯೇ ಮಲ್ಲಪ್ಪನವರು ಆಧ್ಯಾತ್ಮ ಸಂಸ್ಕಾರವನ್ನು ಪಡೆದುಕೊಂಡರು. ಭಜನೆ–ಹಾಡುಗಾರಿಕೆಯ ಹಂಬಲವನ್ನು ಹೆಚ್ಚಿಸಿಕೊಂಡರು. ಮುಂದೆ ಶಂಕರದಾಸರ ಅಪ್ಪಣೆಯಂತೆ ಇತ್ತೀಚಿನ ಎರಡು ವರುಷಗಳಿಂದ ಹಾಡು ಬರೆಯಲು ಆರಂಭಿಸಿದರು. ಹಾಡು ಬರೆಯಬೇಕಾಗಿ ಬಂದಾಗ ಮಲ್ಲಪ್ಪನವರು ಊರಿನ ಹೊರಗಡೆಯಲ್ಲಿರುವ ಮಾಂಜ್ರಾನದಿಯ ದಡದ ಮೇಲಿರುವ ಮಹಾದೇವನ ಮಂದಿರಕ್ಕೆ ಹೋಗುತ್ತಾರೆ. ದೇವಾಲಯದ ಕಟ್ಟೆಯ ಮೇಲೆ ಕುಳಿತುಕೊಳ್ಳುತ್ತಾರೆ. "ನದಿಯ ನೀರನ್ನೂ ಅದರ ಮೇಲೆ ಹೊಯ್ದಾಡುವ ತೆರೆಗಳನ್ನೂ ನೋಡುತ್ತಿದ್ದರೆ; ಒಳಗಡೆಯಲ್ಲಿ ಕಾವ್ಯದ ತರಂಗಗಳೂ ಏಳುತ್ತವೆಂದು" ಮಲ್ಲಪ್ಪನವರು ಹೇಳುತ್ತಾರೆ. ಅಂತಹ ಸಮಯದಲ್ಲಿಯೇ ಅವರಿಗೆ ಅನಿಸಿದುದನ್ನು ಬರೆದು ಬಿಡುತ್ತಾರೆ. ತಮ್ಮ ಗುರುಗಳಾದ ಶಂಕರದಾಸರಿಗೆ ತೋರಿಸುತ್ತಾರೆ. ಅವರಿಂದ ಒಪ್ಪಿಗೆಯಾದ ಮೇಲೆ ಬೇರೆಯವರಿಗೆ ಹಾಡುವುದಕ್ಕಾಗಿ ಅದನ್ನು ಕೊಡುತ್ತಾರೆ.

ಮಲ್ಲಪ್ಪನವರು ಮೂಲತಃ ಹಾಡುಗಾರರು. ಅನಂತರ ತತ್ತ್ವಪದಕಾರರು. ಮಲ್ಲಪ್ಪನವರು ಬೆರಳೆಣಿಕೆಯಷ್ಟು ತತ್ತ್ವಪದಗಳನ್ನು ರಚಿಸಿದ್ದಾರೆ. ಅವುಗಳಲ್ಲಿ ತಾತ್ವಿಕ ಶಕ್ತಿಯಿರುವುದನ್ನು ಕಾಣಬಹುದಾಗಿದೆ. ಮಲ್ಲಪ್ಪನವರು ತತ್ತ್ವಪದಗಳಲ್ಲದೆ ಗೀಗಿ, ಮೋಹರಂ ಹಾಡುಗಳನ್ನು ಬರೆದಿದ್ದಾರೆ. ಅವುಗಳ ಪ್ರಮಾಣವೂ ಸಂಖ್ಯೆಯಲ್ಲಿ ಕಡಿಮೆಯೇ ಇದೆ.

ಮಲ್ಲಪ್ಪನವರು ತಾವು ರಚಿಸಿದ ಹಾಡುಗಳಿಗೆ ತಮ್ಮ ಗುರುಗಳಾದ ಶಂಕರದಾಸರ ಅಂಕಿತವನ್ನು ಇರಿಸಿಕೊಂಡಿದ್ದಾರೆ. ಅವರ ಎರಡು ಹಾಡುಗಳನ್ನು ಇಲ್ಲಿ ಕೊಡಲಾಗಿದೆ:

ಗುರುವೇ ನಿಮ್ಮ ಗುರುತು ತಿಳಿದಿಲ್ಲ

ಗುರುವೆ ನಿಮ್ಮ ಗುರುತು ತಿಳಿದಿಲ್ಲ
ನಿಮ್ಮ ಹೊರತು ಮತ್ತ್ಯಾರಿಲ್ಲ ॥ ಪ ॥

ನಾಮವಿಲ್ಲ; ನೇಮವಿಲ್ಲ
ಪ್ರೇಮವಿಲ್ಲ; ಕಾಮವಿಲ್ಲ
ಹೇವವಿಲ್ಲ; ಭಾವವಿಲ್ಲ
ಕಾಮಿತನು ನೀನಲ್ಲ ॥ ೧ ॥

ವಾಮರೂಪನು ನೀನಲ್ಲ
ಪ್ರೇಮರೂಪನು ನೀನಲ್ಲ
ಕಾಮ ಪ್ರಿಯನು ನೀನಲ್ಲ
ಓಂಕಾರನು ನೀನೇಯಲ್ಲ ॥ ೨ ॥

ಪುರುಷನು ನೀನಲ್ಲ
ಸ್ತ್ರೀಯು ನೀನಲ್ಲ
ನಪುಂಸಕನು ನೀನಲ್ಲ
ಯಾವುದಕ್ಕೆ ನಿಲುಕಿಲ್ಲ ॥ ೩ ॥

ಜಾತಿಯು ನಿನಗಿಲ್ಲ
ಜನ್ಮವೂ ನಿನಗಿಲ್ಲ
ಮರಣವೂ ನಿನಗಿಲ್ಲ
ಹರಣವೂ ನಿನಗಿಲ್ಲ ॥ ೪ ॥

ಅನಂತನು ನೀನೆ
ಅಂತನು ನೀನೇಯಲ್ಲ
ಮಹಿಮಾನು ನೀನೆ
ಮನುಷ್ಯನು ನೀನೇಯಲ್ಲ ॥ ೫ ॥

ಧರೆಯೊಳ ಮೆರೆಯುವ ಬಾಳೂರ ವಾಸ
ಮೆರೆವನು ಅಲ್ಲಿ ಶಂಕರ ದಾಸ
ಅರಿವಿಂದ ನಮಿಸುವ ಪಾದಕ ದಾಸ
ಕರವಿಡಿದು ಕಾಪಾಡೋ ನೀನೇ ಮಹೇಶ ॥ ೬ ॥

ಎಂಥ ಮರುವೆಯೋ

ಎಂಥಾ ಮರವೆಯೋ ಗುರುವೆ
ಎಂಥಾ ಮಾಯವೋ ॥ ಪ ॥

ಕಣ್ಣು ತೆರೆದು ನೋಡಿದೇನು
ಕತ್ತಲಾವರಿಸಿದಂತೆ ನಾನು
ಮರವೆಯ ಕತ್ತಲೆಯಲಿ
ಮೋಹದ ಮಂಜಿನಲಿ ॥ ೧ ॥

ಗುರುವೆ ನಿನ್ನ ದಿವ್ಯರೂಪ
ಆಗಿತೆನಗೆ ಬೆಳಗ ದೀಪಾ
ತಾಗಿತೆನಗೆ ಹೃದಯ ಸೌಖ್ಯ
ಆಗಿತು ಶಿವನ ಸಾದಾಖ್ಯ ॥ ೨ ॥


ಗುರುವ ಬಂದು ಎದುರು ನಿಂತ
ಕೇಳುತಾನ "ಮಗಾ ಏನಂತಾ"
ಹೇಳಿದನು ಯಪ್ಪಾ ಸಾಕುಮಾಡೊ
ಹೋಗುತಾದ ವ್ಯರ್ಥ ಪ್ರಾಯ ॥ ೩ ॥

ಗಾಳಿಗೆ ಗಾಳಿ ಧೂಳಿಗೆ ಧೂಳ
ಬೈಲಿಗೆ ಬೈಲ ಮ್ಯಾಲಿಗೆ ಮ್ಯಾಲ
ಏನಿಲ್ಲ ಕೀಲ; ಎಲ್ಲ ಗುರುವಿನ ಸಕೀಲ
ತಿಳಿಬೇಕ್ರಿ ಗುರುವಿನ ಲೀಲ ॥ ೪ ॥

ಧರಿಯೊಳಗ ಮೇಲಾದ ಬಾಳೂರ
ಅಲ್ಲಿ ಗುರುವು ಹಾನ ದಾಸ ಶಂಕರ

ಅವನ ಚರಣಕ ನಾನು ಎರಗಿದೆನು
ಘೋರ ಮರವೆಯ ಹರಿದಿದೆನು ॥ ೫ ॥

(ಸ್ವತಃ ಕವಿಗಳೇ ಈ ವಿವರಗಳನ್ನು ನೀಡಿದ್ದಾರೆ.)



ಮಲ್ಲಪ್ಪನ ಮನೆ (ನಿಟ್ಟೂರು).



ಮಲ್ಲಪ್ಪ ವಾಗ್ಮೊರೆ




ಮಲ್ಲಪ್ಪ ವಾಗ್ಮೊರೆ ದಂಪತಿಗಳು (ಪತ್ನಿ : ಮಲ್ಲಮ್ಮ }




ಮಲ್ಲಪ್ಪ ವಾಗ್ಮೊರೆ ಅವರ ಆರಾಧ್ಯ ದೇವರು ಹನುಮಾನ ದೇವಾಲಯ



ಮಲ್ಲಪ್ಪ ವಾಗ್ಮೊರೆ ಅವರ ಆರಾಧ್ಯ ದೇವರು ದತ್ತ ಮಂದಿರ
(ನಿಟ್ಟೂರ).



ಮಲ್ಲಪ್ಪ ವಾಗ್ಮೊರೆ ಅವರ ಆರಾಧ್ಯ ದೇವರು ಮಹಾದೇವ.



ಮಾಂಜ್ರಾ ನದಿಯ ದಡದ ಮೇಲಿರುವ ಮಹಾದೇವ
ಮಂದಿರ (ನಿಟ್ಟೂರು)

೩೦. ಆತ್ಮಾನಂದ ಪಾಂಡುರಂಗ (ಕ್ರಿ.ಶ. ಸು.೧೯೫೪–೨೦೧೦)

ಬೀದರ ಜಿಲ್ಲೆ ಭಾಲ್ಕಿ ತಾಲ್ಲೂಕಿನಲ್ಲಿ ಬರುವ ಗ್ರಾಮ ಬ್ಯಾಲಹಳ್ಳಿಯು ಆತ್ಮಾನಂದರ ಸ್ವಗ್ರಾಮವಾಗಿದೆ. ಅವರು ಅತ್ಯುತ್ತಮ ತತ್ತ್ವಪದಕಾರರಾಗಿದ್ದು, ಹಲವಾರು ಪದಗಳನ್ನು ರಚಿಸಿದ್ದಾರೆ. ಇಂದು ಭೌತಿಕವಾಗಿ ನಮ್ಮ ಕಣ್ಣೆದುರಿನಲ್ಲಿ ಇಲ್ಲದ ಆತ್ಮಾನಂದ ಅವರ ಆತ್ಮಸದೃಶ್ಯವಾದ ತತ್ತ್ವಪದಗಳು ಜನರ ಮನದಲ್ಲಿ ಧ್ವನಿತಗೊಳ್ಳುತ್ತಲಿವೆ.

ದಲಿತ ಕುಟುಂಬದ ಪಾಂಡುರಂಗ ಎಂಬುವರು ಆರೂಢ ಭಕ್ತ. ಆರ್ಥಿಕವಾಗಿ ಬಡವರಾಗಿದ್ದರೂ; ಸಾಂಸ್ಕೃತಿಕವಾಗಿ ಶ್ರೀಮಂತವಾಗಿಯೇ ಬದುಕಿದ ಜೀವ. ಹುಬ್ಬಳ್ಳಿಯ ಸಿದ್ಧಾರೂಢ ಸಂಪ್ರದಾಯಕ್ಕೆ ತಮ್ಮನ್ನು ಅರ್ಪಿಸಿಕೊಂಡಿದ್ದರು. ಅದೇ ಸಂಪ್ರದಾಯದ ಕೈಲಾಸ ಆಶ್ರಮದ ಗುರುಗಳಲ್ಲಿ ಭಕ್ತಿಯುಳ್ಳವರಾಗಿ ಬದುಕುತ್ತಿದ್ದರು. ಪಾಂಡುರಂಗ ಅವರ ಹೆಂಡತಿ ರುದ್ರಮ್ಮ ಗಂಡನೊಡನೆ ಹೊಲಕ್ಕೆ ಹೋಗಿ ಹೊಲದ ಕೆಲಸವನ್ನು ಮಾಡುತ್ತಿದ್ದರು. ಈ ದಂಪತಿಗಳ ಮಗನೆ ಆತ್ಮಾನಂದ. ಕ್ರಿ.ಶ. ೧೯೫೪ ಜನ್ಮದ ವರ್ಷ.

ಆತ್ಮಾನಂದ ಅವರು ಸುಶಿಕ್ಷಿತರು. ಏಳನೆಯ ತರಗತಿಯವರೆಗೆ ಓದಿದವರು. ಕನ್ನಡದಲ್ಲಿ ಸ್ವಪ್ರಯತ್ನದಿಂದ ಸಾಧನೆ ಮಾಡಿದರು. ಸಾಹಿತ್ಯದ ಹಲವಾರು ಗ್ರಂಥಗಳನ್ನು ಪರಿಚಯ ಮಾಡಿಕೊಂಡರು. ಅವರ ಒಲವು ಮೊದಲಿನಿಂದಲೂ ಸಾಹಿತ್ಯದ ಕಡೆಗೆ ಇದ್ದಿತು. ಹೀಗಾಗಿ ಕಾವ್ಯ ರಚನೆಯು ಒಲಿದು ಬಂದಿತು. ಆಧ್ಯಾತ್ಮದ ಹಂಬಲವು ಅದಕ್ಕೆ ಬೆನ್ನು ಬಲವಾಯಿತು. ಆಳಂದದ ಗುರುಲಿಂಗ ಶಿವಯೋಗಿಗಳು, ಅವರ ಶಿಷ್ಯರಾದ ಶಿವಾನಂದರು ಆತ್ಮಾನಂದನ ಗುರುಗಳು. ಗುರುಲಿಂಗರು ಕರಿಬಸವೇಶ್ವರಾದಿಗಳಂತಹ ಮಹಾಮಹಾ ಶಿಷ್ಯರನ್ನು ತಯ್ಯಾರಿಸಿದ ಗುರು ಶಕ್ತಿಗಳು. ಅಂಥವರ ಸನ್ನಿಧಾನದಲ್ಲಿ ಆತ್ಮಾನಂದ ಅವರು ಆತ್ಮಜ್ಞಾನದೊಂದಿಗೆ ಸಾಹಿತ್ಯದ ಜ್ಞಾನವನ್ನು ಕೈಗತಮಾಡಿಕೊಂಡರು.

ಆತ್ಮಾನಂದರು ಬದುಕಿನ ನಿರ್ವಹಣೆಯಲ್ಲಿ ತೊಡಗಿದಾಗ ಅದರ ಇನ್ನೊಂದು ಆಧಾರಶಕ್ತಿಯಾಗಿ ಬಂದವರು ಶ್ರೀಮತಿ ಲಲಿತಾ ಅವರು. ಈ ದಂಪತಿಗಳಿಗೆ ಒಬ್ಬ ಮಗ ಮತ್ತು ಮೂರು ಜನ ಹೆಣ್ಣುಮಕ್ಕಳು.

ಆತ್ಮಾನಂದ ಅವರಲ್ಲಿ ಕಲಿತವನೆಂಬ ಅಹಂಕಾರವಿರಲಿಲ್ಲ; ಕೃಷಿ ಕಾಯಕ

ಮಾಡುವಲ್ಲಿ ನಾಚಿಕೆಯಿರಲಿಲ್ಲ. ಕಾಯಕನಿಷ್ಠೆಯಿಂದ ಅವರು ಕೃಷಿಯ ಕೆಲಸಗಳನ್ನು ಮಾಡುತ್ತಿದ್ದರು.

ಆತ್ಮಾನಂದರ ಸೋದರಮಾವ ಗುಂಡಪ್ಪನವರು ಹೇಳುವ ಮಾತುಗಳು ಅವರ ನಿಜವಾದ ಪರಿಚಯ ಮಾಡಿಸುತ್ತವೆ:

"ನಮ್ಮ ಆತ್ಮಾ ಬಹಳ ಒಳ್ಳೆಯ ಹುಡುಗ. ಈ ಕೇರಿಯಲ್ಲಿ ಅಷ್ಟೇ ಅಲ್ಲ; ಊರಲ್ಲಿಯೇ ಅವನಂತಹ ವ್ಯಕ್ತಿ ಇರಲಿಲ್ಲ. ಅವನು ಹಣೆಯ ಮೇಲೆ ಯಾವಾಗಲೂ ವಿಭೂತಿ ಧಾರಣ ಮಾಡುತ್ತಿದ್ದನು. ಸಿದ್ಧಾರೂಢ ಪರಂಪರೆಯ ಸ್ವಾಮಿಯೊಬ್ಬರು ಇಲ್ಲಿಗೆ ಬಂದಾಗ ನಮ್ಮ ಅಳಿಯ ಅವರಿಗಾಗಿ ಒಂದು ಆಶ್ರಮ ಮಾಡಿಕೊಡಲು ಪ್ರಯತ್ನಿಸಿದನು. ಅವನು ಕೇರಿಯ ಜನರ ದರ್ಶನಕ್ಕೆಂದು ಇಲ್ಲಿಯೆ ಒಂದು ಸಿದ್ಧಾರೂಢರ ಗುಂಪಾ ಸ್ಥಾಪನೆ ಮಾಡಿರುವನು. ಅವನು ಒಳ್ಳೆಯ ಹಾಡುಗಾರನಾಗಿದ್ದನು. ಹಲವಾರು ಹಾಡುಗಳನ್ನು ಅವನು ಸ್ವತಃ ಬರೆದಿದ್ದಾನೆ. ಯಪ್ಪಾ ಖರೆ ಹೇಳಬೇಕಂದ್ರ ಅವನು ನಮ್ಮ ಅಳಿಯ ಅಂತ ಹೇಳಿಕೊಳ್ಳುವುದಕ್ಕೆ ಭಾಳ ಸಂತೋಷ ಅನಸತದ ನೋಡ್ರಿ".

ಆತ್ಮಾನಂದ ಅವರಿಗೆ ಸಿದ್ಧಾರೂಢರ ಬಗೆಗೆ ಅಪಾರವಾದ ಭಕ್ತಿ ಇದ್ದಿತು. ಅವರು ಹಲವಾರು ಸಲ ಹುಬ್ಬಳ್ಳಿಗೆ ಹೋಗಿ ಬಂದಿದ್ದರು. ಸಿದ್ಧಾರೂಢರ ದರ್ಶನ ಭಾಗ್ಯದಿಂದ ಅವರು ಅತ್ಯಂತ ಪುಲಕಿತ ಗೊಂಡಂತೆ ಕಾಣುತ್ತಿತ್ತು. ಪ್ರತಿವರುಷ ಸಿದ್ಧಾರೂಢರ ಜಾತ್ರೆಯ ಸಮಯದಲ್ಲಿ ತಮ್ಮ ಸಹಮಿತ್ರರನ್ನೂ ಕೂಡಿಸಿಕೊಂಡು ಹುಬ್ಬಳ್ಳಿಗೆ ಹೋಗಿ, ಭಜನೆ ಸೇವೆ ಸಲ್ಲಿಸಿ ಬರುತ್ತಿದ್ದರು.

ಆತ್ಮಾನಂದ ಅವರಿಗೂ ಕೈಲಾಸ ಆಶ್ರಮಕ್ಕೂ ಭಕ್ತಿಯ ಸಂಬಂಧವಿದ್ದಿತು. ಸಿದ್ಧಾರೂಢರ ಭಜನೆಗಾಗಿ ಆಶ್ರಮಕ್ಕೆ ಹೋಗುತ್ತಿದ್ದರು. ಭಕ್ತಿ ಪರವಾದ ಹಾಡುಗಳನ್ನು ಹಾಡುತ್ತಿದ್ದರು.

ಆತ್ಮಾನಂದರ ಆರೋಗ್ಯ ಸರಿಯಿರಲಿಲ್ಲ. ನಿರಂತರ ದುಡಿಮೆ, ಹಾಡುಗಾರಿಕೆ, ಭಜನೆಗಳಿಗಾಗಿ ಕೈಗೊಳ್ಳುತ್ತಿದ್ದ ಓಡಾಟದಿಂದ ಅವರ ಆರೋಗ್ಯ ಮತ್ತಷ್ಟು ಹದಗೆಟ್ಟಿತು. ಕಿರಿಯ ವಯಸ್ಸಿನಲ್ಲಿಯೇ ಅವರು ಇಹಲೋಕಯಾತ್ರೆ ಪೂರೈಸಿದರು. ಅವರ ದೇಹ ತ್ಯಾಗದ ವರ್ಷ ಕ್ರಿ.ಶ. ೨೦೧೦.

ಆತ್ಮಾನಂದರು ನೂರಾರು ತತ್ತ್ವಪದಗಳನ್ನು ಬರೆದಿದ್ದಾರೆ. ಅವುಗಳೊಂದಿಗೆ ಹಲವಾರು ಮೋಹರಮ್ ಹಾಡುಗಳು, ಗೀಗಿ ಪದಗಳು ಬರೆದಿದ್ದಾರೆ. ಅವರು ತಮ್ಮ ಹಾಡುಗಳಿಗೆ "ಶಿವಾನಂದ", "ಸಿದ್ಧಾರೂಢ" ಎಂಬ ಅಂಕಿತವನ್ನು ಹಾಕಿದ್ದಾರೆ. ಅವರ ಎರಡು ತತ್ತ್ವಪದಗಳನ್ನು ಇಲ್ಲಿ ಕೊಡಲಾಗಿದೆ:

ದಯತೋರು ಸಿದ್ಧಾರೂಢ

ದಯತೋರು ದೇವ ಸಿದ್ಧಾರೂಢನೆ
ಮಾಯಾಮೋಹದ ಬಲಿಯ ಹರಿದವನೆ ॥ ಪ ॥

ಭಕ್ತ ರಕ್ಷಕ ಸಿದ್ಧಾರೂಢ ಗುರುವೆ
ಶ್ರೀ ಗುರುವೆ ಸಿದ್ಧಾರೂಢ ಪರವೆ
ಸಿದ್ಧಾರೂಢರ ನೆನೆಯಣ್ಣಾ
ಶುದ್ಧ ಮನದಲ್ಲಿ ನೆನೆಯಿರಣ್ಣ ॥ ೧ ॥

ಸಿದ್ಧಾರೂಢರ ಪಾದಗಳ ತೊಳೆದು
ಶುದ್ಧನಾಗಿ ಮನದೊಳಗಿನ ಕಲ್ಮಷವ ಕಳೆದು
ಪ್ರಸಿದ್ಧನಾದ ಸಿದ್ಧನ ಲೀಲೆ ನಯದಿಂದ ತಿಳಿದು
ಮೃದು ಭಾವದ ಪುಷ್ಪವನು ಸಿದ್ಧನಿಗೆ ತಳೆದು ॥ ೨ ॥

ಮಾತು–ಮಾತಿಗೆ ಗುರುವ ಸ್ಮರಿಸಿರಿ
ಮಾತು–ಮಾತಿಗೆ ಗುರು ಸಿದ್ಧನ ಧ್ಯಾನ ಮಾಡಿರಿ
ಮಾತು–ಮಾತಿಗೆ ಸಿದ್ಧಿಯ ಮಂತ್ರವ ನುಡಿಯಿರಿ
ಮಾತು–ಮಾತಿಗೆ ಶುದ್ಧರಾಗಿ ಸಿದ್ಧರೂಪ ಹೊಂದಿರಿ ॥ ೩ ॥

ಸಿದ್ಧನ ನಾಮವು ಗೆಲಿಸುವದಣ್ಣ
ಸಿದ್ಧನ ಪ್ರೇಮವು ಒಲಿಸುವುದಣ್ಣ
ಸಿದ್ಧಾರೂಢನ ಕರುಣೆಯ ಇರಲು
ಶುದ್ಧ–ಅಶುದ್ಧವೆಲ್ಲ ತೊಳೆಯುವದಣ್ಣ ॥ ೪ ॥

ನಾನು ಸಿದ್ಧ–ನೀನು ಸಿದ್ಧ
ಅವನು ಸಿದ್ಧ–ಅವಳು ಸಿದ್ಧ
ಲೋಕವೆಲ್ಲಾ ಭದ್ಧ
ಆಗಬೇಕು ನೀ ಆ ಸಿದ್ಧ ॥ ೫ ॥

ಚದುರ ಚರಿತ್ರರಿವರು ಸಿದ್ಧಾರೂಢರು
ಭವಹರ ಚರಿತ್ರ ಅವರು ಸಿದ್ಧಾರೂಢರು
ಜೀವಜಾಲ ಪಾಲರು ಸಿದ್ಧಾರೂಢರು
ಶಿವ–ಜೀವ ಸಮನ್ವಯರು ಸಿದ್ಧಾರೂಢರು ॥ ೬ ॥

ಧರಿಯೊಳು ಮೆರೆವ ಹಳ್ಳಿ ಬ್ಯಾಲಹಳ್ಳಿ
ಸಿದ್ಧನ ನೆನೆಯದೆ ಕುಳಿತಿರುವೆ ಕಳ್ಳಿ
ಹೊಳ್ಳಿ ಹೊಳ್ಳಿ ಹಿಂದ ನೋಡುತೇನ ಮಳ್ಳಿ
ಹಿಂದಿನ ಜನ್ಮಕ ಮತ್ತ ಹೋಗಬ್ಯಾಡ ಹೊಳ್ಳಿ ॥ ೭ ॥

ದೀಕ್ಷೆ ಪಡಿಯೋ

ದೀಕ್ಷೆ ಪಡೆದು ನೀನು ಆದಿ ಗುರು ಪುತ್ರ
ತನು–ಮನ–ಧನವು ಅರ್ಪಣ ಮಾಡಬೇಕು ಗುರು ಚರಣಕ ॥ ಪ ॥

ಆರು ಬಿಟ್ಟಿ ನೀನು, ಹಿಡಿದಿ ಕರ್ಮದ ಹಾದಿ
ಚದುರ ಗುರುರಾಯ ನಿನ್ನ ಮುಟ್ಟಿ ನುಡಿದಿ
ಮಾತು ಕೇಳಲಿಲ್ಲ ನೀನು ಸುಮ್ಮ ಹದಗೆಟ್ಟಿದಿ
ಹಿಂಗ ನಡೆದರ ಗುರುಪುತ್ರ ಹ್ಯಾಂಗ ಆಗುತಿ ? ॥ ೧ ॥

ಕಾಮ, ಕ್ರೋಧ, ಮದ, ಮತ್ಸರ ಗುಣವು ಕಳೆಯಲಿಲ್ಲ ಮೂರ್ಖ
ನಾನು ನಂದಂಬುದು ಆಶೆ ಮಾಡಿದಿ ಮಾನವ ನಿನ್ನ ಮನಕ ॥ ೨ ॥

ದೀಕ್ಷೆ ಪಡೆದು ಧನ ಮದದಲ್ಲಿ, ಕುಲ ಮದದಲ್ಲಿ ಕಾಲ ಕಳೆದಿ ಸುಮಕಾ
ವಿದ್ಯ ಮದದಲ್ಲಿ ರೂಪ ಮದದಲ್ಲಿ ತಿಳಿಯಲಿಲ್ಲ ಬೆಳಕಾ ॥ ೩ ॥

ದೀಕ್ಷೆಯೆಂಬುದು ಯೌವ್ವನದ ಕತ್ತಲೆಯ ಕಳೆವ ಜ್ಯೋತಿ ದ್ಯೋತಕ
ಉಭಯ ಮದದಲ್ಲಿ ಮರೆತು ಕುಂತಿದಿ ಆತ್ಮಲಿಂಗನ ಬೆಳಕ ॥ ೪ ॥

ಆರು ಗುಣಗಳು ಅಷ್ಟ ಮದಗಳು ಮೊದಲ ಕಳೆಯ ಬೇಕಾ
ಶಿವಾನಂದ ಮಹಾಸ್ವಾಮಿ ಹೇಳಿದ ಮಂತ್ರವ ನಿತ್ಯ ಜಪಿಸಬೇಕಾ ॥ ೫ ॥

(ಈ ವಿವರಗಳನ್ನು ಕವಿಯ ಸೋದರ ಮಾವ ಗುಂಡಪ್ಪ–ಸೋದರತ್ತೆ ಲಕ್ಷ್ಮಿಬಾಯಿ ಅವರು ನೀಡಿರುವರು.)

□□□□□



ಆತ್ಮಾನಂದ ಬ್ಯಾಲಹಳ್ಳಿ ಅವರ ಮನೆ (ಬ್ಯಾಲಹಳ್ಳಿ)



ಆತ್ಮಾನಂದ



ಆತ್ಮಾನಂದ ಬ್ಯಾಲಹಳ್ಳಿ ಅವರ ಮನೆಯ ಒಳಾಂಗಣ (ಬ್ಯಾಲಹಳ್ಳಿ).




ಆತ್ಮಾನಂದ ಅವರ ಪತ್ನಿ ಲಲಿತಾ ಮತ್ತು ಮಕ್ಕಳು.

ಆತ್ಮಾನಂದ ಅವರ
ಸೋದರತ್ತೆ ಲಕ್ಷೀಬಾಯಿ
– ಸೋದರ ಮಾವ
ಗುಂಡಪ್ಪ







ಆತ್ಮಾನಂದರ ಹಾಡುಗಳನ್ನು ಹಾಡುವ ಹಾಡುಗಾರ್ತಿಯರು.



ಆತ್ಮಾನಂದರು ನಿರ್ಮಿಸಿದ ಶಿವಾನಂದ ಗುರುಗಳ ಆಶ್ರಮ (ಬ್ಯಾಲಹಳ್ಳಿ)



ಆತ್ಮಾನಂದರ
ಗುರುಗಳಾದ ಶ್ರೀ ಶಿವಾನಂದರ
ಛಾಯಾಚಿತ್ರ.



ಗುರುಗಳ ಆಶ್ರಮದ ಒಳಾಂಗಣ
ನೋಟ.

ಹುಮನಾಬಾದ ತಾಲ್ಲೂಕ

೧. ಮಾಣಿಕಪ್ರಭು ಮಹಾರಾಜ (ಕ್ರಿ.ಶ.ಸು. ೧೮೧೭-೧೮೬೫)

ಇಂದು ಭಕ್ತಕೋಟಿಯ ಮುಖದಿಂದ "ಮಾಣಿಕನಗರ", "ಮಾಣಿಕಗಿರಿ"ಯೆಂದು ಕರೆಯಿಸಿಕೊಳ್ಳುತ್ತ; ಆಧ್ಯಾತ್ಮಿಕ ಮೌಲ್ಯಗಳೆಂಬ ಮಾಣಿಕ್ಯಗಳನ್ನು ನೀಡುತ್ತಿರುವ ಸ್ಥಲವು ಬೀದರ ಜಿಲ್ಲೆ, ಹುಮನಾಬಾದ ತಾಲ್ಲೂಕಿನ ಗಡವಂತಿ; ಧುಮ್ಮನಸೂರು ಮತ್ತು ಹುಮನಾಬಾದಗಳ ಸ್ವಲ್ಪ ಸ್ವಲ್ಪ ವ್ಯಾಪ್ತಿಯನ್ನು ಒಳಗೊಂಡು ರೂಪುಗೊಂಡಿದೆ. ಕ್ರಿ.ಶ. ೧೮೪೫ರಲ್ಲಿ ಇದರ ಸ್ಥಾಪನೆಯಾಯಿತು. ಇದರ ಮೂಲ ಪುರುಷರೆ ಮಾಣಿಕ ಪ್ರಭುಗಳು.

ಮಾಣಿಕ ಪ್ರಭುಗಳ ನೆಲೆಯೂ ಕನ್ನಡದ್ದೆ ಆಗಿದೆ. ಅವರ ವಂಶಸ್ಥರ ಹಿನ್ನೆಲೆಯನ್ನು ಅನ್ವೇಷಿಸುತ್ತ ಹೋದರೆ ಹಾರಕೂಡ ಗ್ರಾಮದ ಭಾವುನಾಯಕನೆಂಬ ವ್ಯಕ್ತಿಯವರೆಗೆ ಸಾಗಬೇಕಾಗುತ್ತದೆ. ಅವರ ಮಗ ಕೇಶವ ನಾಯಕ (ಹೆಂಡತಿ: ರಮಾಬಾಯಿ); ನರಸಿಂಹನಾಯಕರ ಮಗ ಮನೋಹರ ನಾಯಕ-ಹೀಗೇ ಮುಂದಕ್ಕೆ ಅವರ ವಂಶದ ಬಳ್ಳಿ ಸಾಗುತ್ತ ಬರುತ್ತದೆ.

ಮನೋಹರ ನಾಯಕ-ಬಯಾದೇವಿ ಅವರ ಮೂರನೆಯ ಪುತ್ರರೇ ಮಾಣಿಕ ಪ್ರಭುಗಳು. ಅವರಿಗೆ ಅಣ್ಣ ಹಣಮಂತರಾವ. ಅಕ್ಕ ಚಿಮಣಾಬಾಯಿ. ತಮ್ಮ ನೃಸಿಂಹ.

ದಿ.೨೨-೧೨-೧೮೧೭ರಂದು ಮಾಣಿಕಪ್ರಭುಗಳು ಬಸವಕಲ್ಯಾಣ ತಾಲ್ಲೂಕಿನ ಲಾಡವಂತಿ ಗ್ರಾಮದಲ್ಲಿ ಜನಿಸಿದರು. ಅವರ ಬಾಲ್ಯವು ವಿಕಾಸಗೊಂಡುದು ಅವರ ಸೋದರ ಮಾವಂದಿರಾದ ಬಳವಂತರಾಯ ಕುಲಕರ್ಣಿ ಅವರ ಆಶ್ರಯದಲ್ಲಿ. ಮಾಣಿಕ ಪ್ರಭುಗಳು ಶಾಲೆಗೆ ಹೋಗಲಿಲ್ಲ; ಯಾವುದೇ ತೆರನಾದ ಶಿಕ್ಷಣ ಹೊಂದಲಿಲ್ಲ. ಅದಕ್ಕೆ ಬದಲಾಗಿ ಏಕಾಂತದಲ್ಲಿಯೇ; ಇಲ್ಲವೆ ಯಾವುದಾದರೂ ಗುಹೆ-ಗುಡಿಯಲ್ಲಿ ಕುಳಿತು ಕಣ್ಣು ಮುಚ್ಚಿ ಧ್ಯಾನಲೀನರಾಗುತ್ತಿದ್ದರು.

ಮಾಣಿಕ ಪ್ರಭುಗಳದು ಶೈವಬ್ರಾಹ್ಮಣ ಮನೆತನ. ಪೂರ್ವಜರು ಶ್ರೀಮಂತಿಕೆಯಿಂದ ಕೂಡಿದ್ದು, ಬಡ್ಡಿವ್ಯವಹಾರ ಮಾಡುತ್ತಿದ್ದರು. ಅದಕ್ಕಾಗಿಯೇ ಅವರಿಗೆ 'ನಾಯಕ'ಯೆಂಬ ಅಡ್ಡ ಹೆಸರು ಬಂದಿತೆಂದು ಹೇಳಲಾಗುತ್ತದೆ. ಪ್ರಭುಗಳ ಹಿರಿಯರು ಬರೀ ಆರ್ಥಿಕ ಶ್ರೀಮಂತರೇ ಆಗಿರಲಿಲ್ಲ; ಆಧ್ಯಾತ್ಮದಲ್ಲೂ ಶ್ರೀಮಂತರೇ ಆಗಿದ್ದರು. ಕೇಶವ ನಾಯಕರು

ಪರಮ ಶಿವಭಕ್ತರು. ಝುರಣಿ ನರಸಿಂಹನ ಸ್ಥಲದಲ್ಲಿ ಹಲವು ಕಾಲ ಅನುಷ್ಠಾನ ಮಾಡಿದರು. ಮನೋಹರ ನಾಯಕರು ತಮ್ಮ ಆಧ್ಯಾತ್ಮ ಜ್ಞಾನದ ಬಲದಿಂದ ಜನರ ಬಾಯಲ್ಲಿ ಸತ್ಪುರುಷರೆಂದೇ ಕರೆಯಿಸಿಕೊಳ್ಳುತ್ತಿದ್ದರು. ಹಲವಾರು ಜನ ಶಿಷ್ಯರು ಇದ್ದರು. ಅವರು ತಮ್ಮ ಆಧ್ಯಾತ್ಮ ಜ್ಞಾನದ ಬಲದಿಂದ ಬಹುಸಂಖ್ಯಾತರ ದೈಹಿಕ-ಮಾನಸಿಕ ಜಾಡ್ಯಗಳನ್ನು ನಿವಾರಿಸಿದರು.

ಇಂತಹ ಉಜ್ವಲವಾದ ಆಧ್ಯಾತ್ಮಿಕ ಪರಂಪರೆಯ ಸಾರವೇ ಗಟ್ಟಿಗೊಂಡು 'ಮಾಣಿಕ ಪ್ರಭು'ಗಳ ಅವತಾರವಾದಂತಾಯಿತು.

ಮಾಣಿಕ ಪ್ರಭುಗಳು ಲೋಕಜ್ಞಾನಕ್ಕಾಗಿ ಕನ್ನಡ, ಮರಾಠಿ, ತೆಲಗು, ಉರ್ದು, ಪಾರ್ಸಿ, ಹಿಂದಿ, ಮರಾಠಿ, ಅರಬ್ಬಿ, ಬ್ರಜ್ ಭಾಷೆಗಳಲ್ಲಿ ಪ್ರೌಢಿಮೆ ಸಾಧಿಸಿದ್ದರೂ, ಅಲೌಕಿಕ ಜ್ಞಾನದ ಅರ್ಜನೆಗಾಗಿ ಅವರು ಯಾವಾಗಲೂ ತಮ್ಮ ಆತ್ಮದ ಬಾಗಿಲನ್ನು ತೆರದೇ ಇರಿಸಿಕೊಂಡರು. ಹೀಗಾಗಿ ಅವರು ಆತ್ಮ ಜ್ಞಾನಿಗಳಾಗಿಯೇ ಬೆಳೆದರು. ಇದಕ್ಕೆ ಒಂದು ಘಟನೆ ಹೇಳಬೇಕು. ಪ್ರಭುಗಳ ಸೋದರಮಾವ ಜಕಾತ್ ನಾಕಾದಲ್ಲಿ ಕಾರಕೂನನ ಕೆಲಸ ಕೊಡಿಸಿದರು. ಮಾಣಿಕ ಪ್ರಭುಗಳು ನಾಕಾದಲ್ಲಿ ಅಂದಂದಿಗೆ ಜಮೆಯಾಗುತ್ತಿದ್ದ ಹಣವನ್ನು ಬಡ-ಬಗ್ಗರಿಗೆ ದಾನ ಮಾಡಿ ಬಿಡುತ್ತಿದ್ದರು. ಹೀಗಾಗಿ ನೌಕರಿ ಕಳೆದುಕೊಳ್ಳುವಂತಾಯಿತು. ಸೋದರ ಮಾವನವರಿಗೆ ಇದರಿಂದ ಬೇಸರವಾಯಿತು. ಲೋಕದ ಮನಸ್ಸು ಬೇಸರ ಪಡುವುದು ಸಹಜವೆ.ಆದರೆ ಅಲೌಕಿಕದ ಮನಸ್ಸು ಬೇರೆ ಯೋಚನೆಯಲ್ಲಿದ್ದಿತು. ಮಾವನವರ ಮೂದಲಿಕೆಯ ಮಾತುಗಳಿಗೆ ಅದು ಪ್ರತಿಕ್ರಿಯಿಸಿದ್ದೆ ಬೇರೆ ರೀತಿಯಲ್ಲಿ. ಉಟ್ಟ ಧೋತರ ಹರಿಯಿತು; ಅದರ ಒಂದು ತುಂಡನ್ನು ಲಂಗೋಟಿಯಾಗಿ ಧರಿಸಿತು. ಮನೆಯ ಸೀಮೆಯನ್ನು ದಾಟಿ; ಅಸೀಮದ ಅಂಗಣಕ್ಕೆ ಹೊರಟು ಬಿಟ್ಟಿತು.

ಮಾಣಿಕ ಪ್ರಭುಗಳ ಪಯಣ ಆರಂಭವಾಯಿತು. ಬಸವಕಲ್ಯಾಣದಿಂದ ಚಂಡಾಕಾಪುರ, ಮಂಠಾಳ ಅದರ ಸಮೀಪಕ್ಕಿರುವ ಅಮೃತ ಕುಂಡ ಹೀಗೆ ಪಯಣಿಸುತ್ತ; ಅಲ್ಲಲ್ಲಿ ನಿಂತು ಅನುಷ್ಠಾನ ಮಾಡುತ್ತ; ದರ್ಶನಕ್ಕೆ ಬಂದ ಭಕ್ತರಿಗೆ ಆಧ್ಯಾತ್ಮದ ಬೋಧೆ ಮಾಡುತ್ತ ಮತ್ತೆ ಮರಳಿ ಪ್ರಭುಗಳು ಕಲ್ಯಾಣಕ್ಕೆ ಬಂದರು. ಎರಡನೆಯ ಪಯಣದಲ್ಲಿ ಅವರು ಕ್ರಮಿಸಿದ್ದು ದೀರ್ಘವಾದ ಭೌತಿಕ ಹಾದಿಯೂ ಹೌದು; ಅದು ಆಧ್ಯಾತ್ಮದ ಹಾದಿಯೂ ಆಗಿತ್ತು. ಭಾಲ್ಕಿ, ಮೈಲಾರ; ಕರ್ಕನಳ್ಳಿ; ಗೊಟ್ಟಂಗೊಟ್ಟಿ, ಚಿಟಗುಪ್ಪಾ ಹೀಗೆ ಪಯಣಿಸುತ್ತ ಪರಳಿ, ತುಳಜಾಪುರ, ಪಂಢರಾಪುರ, ಗಿರಿನಾರ, ಪ್ರಯಾಗ, ಕಾಶಿ, ಹರಿದ್ವಾರ, ಗಂಗೋತ್ರಿ, ಬದರಿ, ಕೇದಾರ ಮಾಹೂರ, ಜಗನ್ನಾಥಪುರಿ, ವೆಂಕಟಗಿರಿ, ಕೊಲ್ಲಾಪುರ, ನೃಸಿಂಹವಾಡಿ ಹೀಗೆ ಹತ್ತು ಹಲವಾರು ತೀರ್ಥ ಕ್ಷೇತ್ರಗಳಲ್ಲೆಲ್ಲ ಪ್ರಭುಗಳ ಪಾದಗಳು ನಡೆದಾಡಿದವು. ಅವರು ಮರಳಿ ಮತ್ತೆ ಕನ್ನಡನಾಡಿಗೆ ಬಂದರು.

ಬೀದರಿನಲ್ಲಿ ಕೆಲವು ಕಾಲ ನಿಂತರು. ಅಲ್ಲಿಂದ ಅವರು ಬಂದು ಮುಟ್ಟಿದುದು ಇಂದಿನ ಮಾಣಿಕಗಿರಿಯ ಸ್ಥಲಕ್ಕೆ. ಮಾಣಿಕ ಪ್ರಭುಗಳ ನೆಲಸುವಿಕೆ ಮತ್ತು ಅವರ ಆಧ್ಯಾತ್ಮದ ತಪ್ಪಿಸ್ಸಿನಿಂದಾಗಿ ದಟ್ಟಡವಿಯಾಗಿದ್ದ ಕ್ರೂರ-ಭಯಾನಕ ಸ್ಥಳವು ದತ್ತನ-ಶಿವನ ನೆಲೆಯಾಯಿತು; ಪುಣ್ಯ ಭೂಮಿಯಾಯಿತು; ಮೋಕ್ಷದ ಧಾಮವಾಯಿತು. ಕಾಡು ಕ್ಷೇತ್ರವಾದಾಗ ನಾಡಿನ ಭಕ್ತಸಾಗರ ಇತ್ತ ಕಡೆಗೆ ಹರಿದು ಬರತೊಡಗಿತು. ಮಾಣಿಕಪ್ರಭುಗಳು ದತ್ತನನ್ನು ಗುರುವೆಂದು ಭಾವಿಸಿದರು; ಭಜಿಸಿದರು. ತಮ್ಮ ಸನ್ನಿಧಿಗೆ ಬಂದ ವೆಂಕಮ್ಮನಂತಹ ನೂರಾರು ಮುಮುಕ್ಷುಳಿಗೆ ಮೋಕ್ಷದ ದಾರಿ ತೋರಿದರು. ಗುಡಿಸಲುಗಳ ವಾಸ್ತವ್ಯದಿಂದ ಆರಂಭವಾದ ಶ್ರೀಕ್ಷೇತ್ರವು ದತ್ತ ಪೀಠದ ಸ್ಥಾಪನೆಗೆ ನಾಂದಿಹಾಡಿತು. "ಸಕಲಮತ ಸಂಪ್ರದಾಯ"ವೆಂಬ ಹೊಸದಾದ ಧಾರ್ಮಿಕತೆಗೊಂದು ವೇದಿಕೆಯಾಯಿತು. ಮಾಣಿಕ ಪ್ರಭುಗಳು ಆಜನ್ಮ ಬ್ರಹ್ಮಚಾರಿಗಳೇನೋ ಸರಿ. ಆದರೆ ಅವರ ಗಾದಿಗೆ ಬಂದವರೆಲ್ಲ ಗೃಹಸ್ಥರೇ ಆಗಿದ್ದಾರೆ. ಆದುದರಿಂದ ಪ್ರಭುಪ್ರಣೀತ ಧಾರ್ಮಿಕ ಸಂಪ್ರದಾಯವು 'ಜೀವನ ಪ್ರೀತಿಯ' ಸಂಪ್ರದಾಯವಾಗಿದೆ. ಇದು ಲೋಕದಲ್ಲಿದ್ದೇ ಲೋಕವನ್ನು ಗೆದೆಯಲು ಹೇಳುತ್ತದೆ.

ಮಾಣಿಕ ಪ್ರಭುಗಳಿಗೆ ಎಲ್ಲ ಜಾತಿ-ಮತ-ಪಂಥ-ಪಂಗಡದವರು ಶಿಷ್ಯರಾಗಿದ್ದಾರೆ. ಅವರು ಭಕ್ತರ ಉದ್ಧಾರಕ್ಕಾಗಿ ಹಲವಾರು ಪವಾಡಗಳನ್ನು ಎಸಗಿರುವುದು ಕಂಡುಬರುತ್ತದೆ. ಮಾಣಿಕ ಪ್ರಭುಗಳ ಪೀಠಗಳು ನಾಡು-ದೇಶದುದ್ದಗಲಕ್ಕೂ ಹರಡಿಕೊಂಡಿವೆ. ಅವರ ಪರಂಪರೆ ಇಂದಿಗೂ ಮಾಣಿಕ ನಗರದ ಸಂಸ್ಥಾನದಲ್ಲಿ ಮುಂದುವರೆದಿದೆ. ಕ್ರಿ.ಶ.೧೮೬೫ರಲ್ಲಿ ಮಾಣಿಕ ಪ್ರಭುಗಳು ಜೀವಂತ ಸಮಾಧಿ ಸ್ವೀಕರಿಸಿದರು. ಅವರ ತರುವಾಯ ಮನೋಹರ ಮಾಣಿಕ ಪ್ರಭುಗಳು; ಮಾರ್ತಾಂಡ ಮಾಣಿಕ ಪ್ರಭುಗಳು, ಶಂಕರ ಮಾಣಿಕ ಪ್ರಭುಗಳು. ಮಾಣಿಕ ಪ್ರಭುಗಳು ಮಾಣಿಕ ನಗರದ ಪೀಠ ಪರಂಪರೆಯನ್ನು ತೇಜೋಜ್ವಲವಾಗಿ ಬೆಳೆಯಿಸಿದರು. ಸಧ್ಯ ಸಿದ್ಧರಾಜ ಜ್ಞಾನರಾಜ ಮಹಾರಾಜರು ಪೀಠದ ಅಧಿಪತಿಗಳಾಗಿ, ಸಂಸ್ಥೆಯನ್ನು ಸರ್ವತೋಮುಖವಾಗಿ ಬೆಳೆಯಿಸುತ್ತಿದ್ದಾರೆ.

ಮಾಣಿಕಪ್ರಭುಗಳ ಮಹಿಮಾತಿಶಯವನ್ನು ಕುರಿತು ಬೇರೆ-ಬೇರೆ ಭಾಷೆಗಳಲ್ಲಿ ಸಾಹಿತ್ಯ ನಿರ್ಮಾಣಗೊಂಡಿದೆ. ಮಾಣಿಕಪ್ರಭುಗಳ ಪರಂಪರೆಯವರು ಸಾಹಿತ್ಯಕೃಷಿಕರೇ ಆಗಿದ್ದಾರೆ. ಸ್ವತಃ ಮಾಣಿಕ ಪ್ರಭುಗಳು ಆಧ್ಯಾತ್ಮಿಕ ಕವಿಗಳಾಗಿ, ಸ್ವನಾಮಮುದ್ರೆಯಲ್ಲಿ ಕನ್ನಡ, ಹಿಂದಿ, ಮರಾಠಿ ಭಾಷೆಗಳಲ್ಲಿ ಹಾಡುಗಳನ್ನು ರಚಿಸಿದ್ದಾರೆ. ಅವೆಲ್ಲ ಸಂಸ್ಥಾನದಿಂದ ಸಂಗ್ರಹಿತಗೊಂಡು ಪ್ರಕಾಶಿತವಾಗಿವೆ.

ಇಲ್ಲಿ ಮಾಣಿಕ ಪ್ರಭುಗಳು ರಚಿಸಿದ ಕೆಲವು ತತ್ತ್ವಪದಗಳನ್ನು ಉದ್ಧರಿಸಲಾಗಿದೆ:

ಹೇ ಪ್ರಭು

ಹೇ ಪ್ರಭು ದಯಾ ನಿಧಿ ನೀ ನಮಗೆ ಪಾಲಿಸು
ಜ್ಞಾನ ಹೀನ ನಮ್ಮ ಮತಿಗೆ ಬೆಳಕು ಕಾಣಿಸು ॥ ಪ ॥

ನಾನು ನೀನು ಅವಳು ಅವನು ಯಾರು ಯೆಂಬುದು
ಹೀಗೆ ಏನೋ ಯಾಕೆ ಎಂದು ಏನು ತಿಳಿಯದು ॥ ೧ ॥

ಯೋಗ ಲೇಸು ಧ್ಯಾನ ಲೇಸು ಭಕ್ತಿ ಲೇಸವೋ
ಹೀನ ದೀನ ಮಂದ ಮತಿಗೆ ಏನು ತೋಚದು ॥ ೨ ॥

ಏನು ತತ್ತ್ವಜ್ಞಾನ ವೇದವಾಕ್ಯವೋ
ನೀತಿ ಕರ್ಮ ಜಾತಿ ಧರ್ಮ ಏನು ಅರಿಯದು ॥ ೩ ॥

ನೋಡಿ ನೋಡದೆ ಕಂಡು ಕಾಣದೆ ಸುಳ್ಳು ನುಡಿಯದು
ದೈವ ಜಾತ ಕಲಿಯ ಕಾಟ ಹೇಗೆ ಸಹಿಸದು ॥ ೪ ॥

ನಾಕು ದಿಕ್ಕು ದಿಗಿಲು ಹೆಚ್ಚು ಹೇಗೆ ತಡಿಯದು
ಸಿದ್ಧನಾಗಿ ಮಾಣಿಕನಿಗೆ ದಾರಿ ತೋರೋ ಪಾರಾಗುವುದು ॥ ೫ ॥

(ಶ್ರೀ ಮಾಣಿಕ ಪ್ರಭು. ಪು. ೧೭೬)

ವ್ಯಾಪಕ ಶಿವ

ವ್ಯಾಪಕ ಶಿವ ಹೀಂಗ ಅಂದವನು ತಾನೆ
ಮತ ಒಬ್ಬ ತಾನೇನು ತಾನೇನು ತಾನೆ ॥ ಪ ॥

ಮೂಢನು ತಾನೆ ಚದುರನು ತಾನೆ
ಅರಸನು ತಾನೆ ರಂಕನು ತಾನೆ ॥ ೧ ॥

ರೂಪನು ತಾನೇನು ಕುರೂಪನು ತಾನೆ
ಬಲವಾನ ತಾನೇನು ನಿರ್ಬಲನು ತಾನೆ ॥ ೨ ॥

ಸಣ್ಣವನು ತಾನೇನು ದೊಡ್ಡವನು ತಾನೆ
ಶ್ರೀ ಗುರು ತಾನೇನು ಶಿಷ್ಯನು ತಾನೆ ॥ ೩ ॥

ಪಿಂಡಾಂಡ ತಾನೇನು ಬ್ರಹ್ಮಾಂಡ ತಾನೆ
ಮಾಣಿಕ ಹೆಸರ ಹೀಂಗ ಇಟ್ಟವನು ತಾನೆ ॥ ೪ ॥

ಸದ್ಗುರು ಸೇವಾ

ನಿನ್ನ ಒಳಗೆ ನೀ ನಿನಗ ನೋಡೋ
ಎಲೊ ಅನುಮಾನಿಸ ಬ್ಯಾಡೋ ॥ ಪ ॥

ನಿರಾಕಾರ ನೀ ಆಕಾರನು ಅಲ್ಲಾ
ನಾ ದೇಹದ ಭ್ರಾಂತಿ ಬಿಡೋ ॥ ೧ ॥

ದೇಹ ಅಶಾಶ್ವತ ವಸ್ತುನೆ ಶಾಶ್ವತ
ಮೃತ್ಯು ಚಿಂತಿ ಬಿಟ್ಟು ಕೊಡೋ ॥ ೨ ॥

ಮಾಣಿಕ ನಿನಗೆ ಈ ಮಾತ ತಿಳಿಲಕ್ಕೆ
ಸದ್ಗುರು ಸೇವಾ ಮಾಡೋ ॥ ೩ ॥

ಅನುಭವ

ನೀ ದಾರು ನಿನಗೆ ನಾ ಏನು ನಿನಗೆ
ನಾ ನೀ ಅಂಬೋದು ಪ್ರಕೃತಿ ಸ್ವಭಾವ ॥ ಪ ॥

ಪ್ರಥಮದಲ್ಲಿ ಶಿವನು ಅವರಿಂದ ಜೀವನು
ಶಿವನು ಇಲ್ಲದಲಿ ಜೀವನು ಅಭಾವ ॥ ೧ ॥

ಎಲ್ಲಿತ್ತು ಕಾಯೊ ಅಲ್ಲಾದೊ ಛಾಯಾ
ಕಾಯ ಇಲ್ಲದಲ್ಲಿ ಛಾಯಾನು ಅಭಾವ ॥ ೨ ॥

ಮಾಣಿಕ ಹೆಸರಲ್ಲಿ ನೀ ನಾನು ಹುಟ್ಟಲ್ಲಿ
ದ್ವೈತ ಮಾರ್ಗ ಬಿಟ್ಟು ನೋಡ ಅನುಭಾವ ॥ ೩ ॥


ಹಾನ ಇಲ್ಲಾ ತಾನೇ ಎಲ್ಲಾ

ವಸ್ತು ಅಲ್ಲಿಲ್ಲಾ ಇಲ್ಲಿಲ್ಲಾ
ತಾವಠಿಕಾಣಿನೆ ಇಲ್ಲ ॥ ಪ ॥

ತೆಳಗ ಮ್ಯಾಲಿಲ್ಲಾ ನಡುವಿಲ್ಲಾ
ನೋಡಿದವನು ನೋಡಿಲ್ಲಾ ॥ ೧ ॥

ರಕ್ತ ಶ್ವೇತಲ್ಲಾ ಶಾಮಲಲ್ಲಾ
ನೀಲ ಪೂರ್ಣ ಅದು ಅಲ್ಲಾ ॥ ೨ ॥


ಮಾಣಿಕ ಹೆಸರಲ್ಲಾ
ಹಾನ ಇಲ್ಲಾ ತಾನೆ ಎಲ್ಲಾ ॥ ೩ ॥



ಮಾಣಿಕಪ್ರಭು ಜನಿಸಿದ ಸ್ಥಳ, ಲಾಡವಂತಿ (ಬ.ಕ.ತಾ)




ಜನ್ಮಸ್ಮಾರಕ ದೇವಾಲಯದಲ್ಲಿರುವ ದರ್ಶನ ಮೂರ್ತಿ (ಲಾಡವಂತಿ)



ಮಾಣಿಕಪ್ರಭುಗಳ ಸಂಸ್ಥಾನದ ಮಹಾದ್ವಾರ (ಮಾಣಿಕನಗರ).



ಮಾಣಿಕ ಪ್ರಭುಗಳ ದೇವಾಲಯದ ಒಳಾಂಗಣ ದೃಶ್ಯ.





ಸದ್ಗುರು ಮಾಣಿಕ
ಪ್ರಭುಗಳು



ಮಾಣಿಕ ಪ್ರಭು
ಮಹಾರಾಜರ ಸಮಾಧಿ
ಗದ್ದುಗೆ

ಮನೋಹರ ಮಾಣಿಕ
ಪ್ರಭುಗಳು






ಮನೋಹರ ಮಾಣಿಕ ಪ್ರಭುಗಳ ಸಮಾಧಿ ಮಂದಿರ


ಮಾರ್ತಾಂಡ ಮಾಣಿಕ
ಪ್ರಭುಗಳು



ಮಾರ್ತಾಂಡ
ಮಾಣಿಕ
ಪ್ರಭುಗಳು
ಸಮಾಧಿ ಮಂದಿರ




ಶಂಕರ ಮಾಣಿಕ
ಪ್ರಭುಗಳು.






ಶಂಕರ
ಮಾಣಿಕ
ಪ್ರಭುಗಳ
ಸಮಾಧಿ
ಮಂದಿರ.



ಸಿದ್ಧರಾಜ
ಮಾಣಿಕ ಪ್ರಭು
ಮಹಾರಾಜ.



ಸಿದ್ಧರಾಜ ಮಾಣಿಕಪ್ರಭು ಮಹಾರಾಜರ ಸಮಾಧಿ ಮಂದಿರ



ಜ್ಞಾನರಾಜ ಮಾಣಿಕ ಪ್ರಭು ಮಹಾರಾಜರು ವಾಸಿಸುತ್ತಿರುವ ಭವನ.

೨. ಸಿದ್ಧಪ್ರಭು (ಕ್ರಿ.ಶ.ಸು. ೧೮೭೨-೧೯೭೭)

ಸಂಸಿದ್ಧ ವ್ಯಕ್ತಿತ್ವದ ಸಿದ್ಧಪ್ರಭುಗಳ ನೆಲೆಸುವಿಕೆಯಿಂದ ಕೇವಲ ಧುಮ್ಮನಸೂರು ಗ್ರಾಮವಷ್ಟೆ ಪವಿತ್ರವಾಗಿಲ್ಲ. ಅವರು ಪಾದವಿಟ್ಟು ಸಂಚರಿಸಿದ ಸ್ಥಳವೆಲ್ಲವೂ ಪವಿತ್ರಕ್ಕೆ ಪವಿತ್ರವಾಗಿದೆ. ಧುಮ್ಮನಸೂರು ಗ್ರಾಮವು ಬೀದರ ಜಿಲ್ಲೆಯ ತಾಲ್ಲೂಕಾ ಸ್ಥಳವಾಗಿರುವ ಹುಮನಾಬಾದಿಗೆ ಕೇವಲ ಎರಡು ಕಿ.ಮೀಟರ್‌ಗಳ ಅಂತರದ ಸ್ಥಳ. ಇಂದು ಅಲ್ಲಿ ಸಿದ್ಧಪ್ರಭುಗಳ ಸಮಾಧಿ ದೇವಾಲಯವು ಸಾಂಸ್ಕೃತಿಕ ಕೇಂದ್ರವಾಗಿ; ಭಕ್ತರ ಭಕ್ತಿಯ ತಾಣವಾಗಿ ನಿಂತುಕೊಂಡಿದೆ. ಅದರ ಉಸ್ತುವಾರಿನೋಡಿಕೊಳ್ಳುತ್ತಿರುವವರು ಸಿದ್ಧಪ್ರಭುಗಳ ಹಿರಿಯ ಮಗಳಾದ ಶ್ರೀಮತಿ ಗೋವರ್ಧನಬಾಯಿ ಅವರು.

ಸಿದ್ಧಪ್ರಭುಗಳ ಮೂಲ ನೆಲೆಯು ಭಾಲ್ಕಿ ತಾಲ್ಲೂಕಿನಲ್ಲಿ ಬರುವ ತೂಗ್ಯೆ ಗ್ರಾಮ ಎಂದು ಹೇಳಲಾಗುತ್ತದೆ. ಆ ಗ್ರಾಮದಿಂದ ಬಂದ ಹಿರಿಯರು ಹುಮನಾಬಾದಿನಲ್ಲಿ ನೆಲೆ ನಿಂತರು. ಹೀಗಾಗಿ ಅವರ ಮನೆತನವು ಹುಮನಾಬಾದಿನವರ ಬಾಯಲ್ಲಿ "ತೂಗ್ಯೆ ಅವರ ಮನೆತನ" ವಾಯಿತು. ಸಿದ್ಧ ಪ್ರಭುಗಳು ಹುಮನಾಬಾದಿನ ತೂಗ್ಯೆ ಅವರ ಮನೆಯಲ್ಲಿಯೇ ಹುಟ್ಟಿದರು. ಇಂದು ಅದನ್ನು ನಾವು ಅತ್ಯಂತ ಹಳೆಯದಾದ ಸ್ಥಿತಿಯಲ್ಲಿ ಕಾಣಬಹುದಾಗಿದೆ.

ಸಿದ್ಧಪ್ರಭುಗಳು ದಿ.೧೬.೨.೧೮೭೨ರಂದು ಜನಿಸಿ ಬಂದರು. ತಂದೆ ವೀರಶೈವ ಮನೆತನದ ಬಸಪ್ಪನವರು. ತಾಯಿ ಸಂಗಮ್ಮ. ಸಿದ್ಧಪ್ರಭುಗಳು ಮೂರನೆಯ ತರಗತಿಯವರೆಗೆ ಲೌಕಿಕ ಶಿಕ್ಷಣವನ್ನು ಹೊಂದಿದರು. ಕನ್ನಡ, ಹಿಂದಿ, ಮರಾಠಿ, ಮೋಡಿ, ತೆಲಗು; ಗುಜರಾತಿ ಈ ಮುಂತಾದ ಭಾಷೆಗಳಲ್ಲಿ ಅವರು ಸಿದ್ಧ ಹಸ್ತರೆನಿಸಿದರು.

ಸಿದ್ಧಪ್ರಭುಗಳಿಗೆ ವೀರಶೈವದ ದೀಕ್ಷೆ ನೀಡಿದವರು ನಾವದಗಿ ರೇವಪ್ಪಯ್ಯನವರು. ಭಾಲ್ಕಿ ತಾಲ್ಲೂಕಿನಲ್ಲಿ ಬರುವ ಚಂದಾಪುರದ ಮಲ್ಕಪ್ಪ ಮುತ್ತ್ಯಾ ಅವರು ಸಿದ್ಧಪ್ರಭುಗಳ ಆಧ್ಯಾತ್ಮ ಒಡನಾಡಿಗಳಾಗಿದ್ದರು. ಹೀಗಾಗಿ ಅವರು ಪರಸ್ಪರ ಆಧ್ಯಾತ್ಮಿಕ ಚರ್ಚೆಗಳನ್ನು ಆಗಾಗ ಮಾಡುತ್ತಿದ್ದರು. ಅವರಿಗೆ ತುಳಜಾಪುರದ ಅಂಬಾಭವಾನಿಯಲ್ಲಿ ಭಕ್ತಿಯಿದ್ದಿತು. ಪ್ರಭುಗಳು ತಮ್ಮನ್ನು "ದೇವಿದಾಸ" ಎಂದು ಕರೆದುಕೊಳ್ಳುತ್ತಿದ್ದರು.

ಸಿದ್ಧಪ್ರಭುಗಳ ತಂದೆ ಬಸಪ್ಪನವರು ಕೃಷಿಕರಾಗಿದ್ದರು. ಪ್ರಾಮಾಣಿಕವಾದ

ಕೃಷಿಕಾಯಕ ಮಾಡುತ್ತಿದ್ದರು. ಕೃಷಿಗೆ ಮೀಸಲಾಗಿದ್ದ ಹೊಲವು ಅಷ್ಟು ಸತ್ವಯುತವಾದದ್ದಾಗಿರಲಿಲ್ಲ. ಹೀಗಾಗಿ ಒಟ್ಟು ಕುಟುಂಬಕ್ಕೆ ಸಾಕಾಗುವಷ್ಟು ಉತ್ಪನ್ನವು ಬರುತ್ತಿರಲಿಲ್ಲ. ಸಿದ್ಧಪ್ರಭುಗಳು ತಮ್ಮ ಶಿಕ್ಷಣ ಅರ್ಧಕ್ಕೆ ನಿಲ್ಲಿಸುವುದಕ್ಕೆ ಆರ್ಥಿಕ ಮುಗ್ಗಟ್ಟು ಒಂದು ಕಾರಣವೇ ಆಯಿತು. ಅವರು ಶಾಲೆ ಬಿಟ್ಟು ಹೊಲಕ್ಕೆ ದನಕಾಯಲು ಹೋಗ ತೊಡಗಿದರು. ತಂದೆಯೊಡನೆ ಕೃಷಿಕಾಯಕದಲ್ಲಿ ಸಹಾಯ ಮಾಡಲು ಆರಂಭಿಸಿದರು.

ಸಿದ್ಧಪ್ರಭುಗಳು ಸಂಸಾರಿಗರಾಗಿ ಮೂರು ಮದುವೆ ಮಾಡಿಕೊಂಡರು. ಮೊದಲ ಹೆಂಡತಿ ಹುಮನಾಬಾದಿನ ಪಾಳೆನವರ ಮನೆತನದ ರತ್ನಮ್ಮನವರು. ಇವರಿಗೆ ಮಕ್ಕಳಾಗಲಿಲ್ಲ. ಎಂಟುವರುಷಗಳ ನಂತರ ಲಿಂಗೈಕ್ಯರಾದರು. ಎರಡನೆಯ ಪತ್ನಿಯಾಗಿ ಬಂದವರು ಧುಮ್ಮನಸೂರಿನ ಕೊಳಾರ ಮನೆತನದ ಮುಕ್ತಾಬಾಯಿ ಅವರು. ಮುಕ್ತಾಬಾಯಿ ಅವರಿಗೆ ಬಹುಕಾಲ ಮಕ್ಕಳಾಗದ ಕಾರಣ ಅವರ ತಂಗಿ ರಾಚಮ್ಮನನ್ನು ಮದುವೆಯಾದರು. ರಾಚಮ್ಮಳಿಗೆ ಇಬ್ಬರು ಹೆಣ್ಣುಮಕ್ಕಳು ಹುಟ್ಟಿದರು. ಅವರೆ ಹಿರಿಯ ಗೋವರ್ಧನ ಬಾಯಿ ಮತ್ತು ಕಿರಿಯ ಗೋವರ್ಧನ ಬಾಯಿ. ನಂತರ ಮುಕ್ತಾಬಾಯಿ ಅವರು ಜ್ಞಾನದೇವ ಎಂಬ ಮಗನಿಗೆ ಜನ್ಮಕೊಟ್ಟರು.

ಸಿದ್ಧಪ್ರಭುಗಳು ಮೊದಲು ಸಂಸಾರದ ನಿರ್ವಹಣೆಗೆ ಕೃಷಿ ಕಾಯಕವನ್ನೇ ಅವಲಂಬಿಸಿದರು. ನಂತರ ಅವರು ಅದನ್ನು ಬಿಟ್ಟು ಹುಮನಾಬಾದಿನ ಶರಭಯ್ಯ ಗಾದಾ ಅವರ ಉಪ್ಪಿನ ಅಂಗಡಿಯಲ್ಲಿ ಕೆಲವು ಕಾಲ ನೌಕರಿ ಹಿಡಿದರು. ಕೆಲವು ಕಾಲ ಭಾಲ್ಕಿಯಲ್ಲಿನ ಭಾವು ನಾಯಕ ಅವರ ಸರಾಫ್ ಅಂಗಡಿಯಲ್ಲಿ ಲೆಕ್ಕ ಬರೆಯುವ ವೃತ್ತಿ ನಿರ್ವಹಿಸಿದರು. ಭಾವು ನಾಯಕರ ಅನುಮಾನದ ಕಾರಣದಿಂದ ಸಿದ್ಧಪ್ರಭುಗಳು ನೌಕರಿ ಬಿಟ್ಟು ಸಂಚಾರಿಯಾಗಿ ಹೊರಟರು. ಅವರು ಸಂಸಾರ ಸಮೇತ ಪರ್ಯಟನ ಮಾಡಿದರು. ಇಡೀ ಬೀದರ ಜಿಲ್ಲೆಯಾದ್ಯಂತ ತಿರುಗಿದರು. ಭಕ್ತರಿಗೆ ಅನುಭವದ ಪ್ರವಚನ ನೀಡುತ್ತ; ಲೋಕೋದ್ಧಾರ ಕಾರ್ಯಕ್ಕೆ ತಮ್ಮನ್ನು ಅರ್ಪಿಸಿಕೊಂಡರು. ಭಾಲ್ಕಿ ತಾಲ್ಲೂಕಿನ ದಾಡಗಿ, ಕಲ್ಲವಾಡಿ, ರಾಮತೀರ್ಥವಾಡಿ, ಹುಮನಾಬಾದ ತಾಲ್ಲೂಕಿನ ಬೋರಂಪಳ್ಳಿ, ಕಂದಗೂಳ, ಮಂಗಲಗಿ ಗ್ರಾಮಗಳಲ್ಲಿ ಗುಂಪಾಗಳನ್ನು ಕಟ್ಟಿಕೊಂಡು ಅಲ್ಲಲ್ಲಿ ಕೆಲವು ಕಾಲ ವಾಸ ಮಾಡಿದರು. ಜನತೆಗೆ ಸುಜ್ಞಾನ, ಶಿವಜ್ಞಾನ ದಾಸೋಹ ಮಾಡಿದರು. ಸಿದ್ಧಪ್ರಭುಗಳಿಗೆ ಸಾವಿರಾರು ಜನರು ಶಿಷ್ಯರಾದರು. ಅವರ ಹೆಸರಿನಲ್ಲಿ ಹಲವಾರು ಸ್ಮಾರಕಗಳು ತಲೆಯೆತ್ತಿನಿಂತವು. ಸಿದ್ಧಪ್ರಭುಗಳು ಕಲ್ಲವಾಡಿಯಲ್ಲಿರುವಾಗಲೆ ಅವರ ಪತ್ನಿಯೊಬ್ಬರ ನಿಧನವಾಯಿತು. ಆದುದರಿಂದ ಪ್ರಭುಗಳ ಹೆಂಡತಿಯ ಸಮಾಧಿಯು ಕಲ್ಲುವಾಡಿಯ ತೋಟವೊಂದರಲ್ಲಿ ಇಂದು ಕಾಣಬಹುದಾಗಿದೆ.

ಸಿದ್ಧಪ್ರಭುಗಳು ಸಂಚಾರ ಪೂರೈಸಿ ಕೊನೆಗೆ ಧುಮ್ಮನಸೂರು ತಲುಪಿದರು. ಅಲ್ಲಿಯೂ ಅವರು ಒಂದೇ ಸಲಕ್ಕೆ ಒಂದು ಸ್ಥಿರವಾದ ಸ್ಥಲವನ್ನು ಆರಿಸಿಕೊಳ್ಳಲಿಲ್ಲ. ಕೊಳಾರರ ಮನೆ-ತೋಟ; ಶಂಕರ ಶೆಟ್ಟಿ ಅವರ ಹೊಲ; ರುಕ್ಕಣ್ಣನವರ ಹೊಲ ಹೀಗೆ ಸ್ಥಳಗಳನ್ನು ಬದಲಾಯಿಸುತ್ತ ಕೊನೆಗೆ ಧುಮ್ಮನಸೂರು ಗ್ರಾಮದ ಉತ್ತರ ದಿಕ್ಕಿನಲ್ಲಿರುವ ಸರಕಾರಿ ಸ್ಥಳದಲ್ಲಿ ಆಶ್ರಮ ಕಟ್ಟಿಕೊಂಡು ಸ್ಥಿರವಾಗಿ ನೆಲೆನಿಂತರು.

ಸಿದ್ಧಪ್ರಭುಗಳ ಆಧ್ಯಾತ್ಮ ಸನ್ನಿಧಿಯಲ್ಲಿ ಹಲವಾರು ಪವಾಡಗಳು ಜರುಗಿವೆ. ಮಲಕಪ್ಪ ಮುತ್ತ್ಯಾ ಅವರ ಮಾರ್ಗದರ್ಶನದಲ್ಲಿ ಅವರು ಸಿದ್ಧಿಸಿಕೊಂಡ ಸಿದ್ಧವ್ಯಕ್ತಿತ್ವ ಅಪೂರ್ವವಾದುದು. ಸಿದ್ಧಪ್ರಭುಗಳು ಮಲಕಪ್ಪ ಮುತ್ತ್ಯಾ ಅವರೊಂದಿಗೆ ಭಜನೆ-ಪ್ರವಚನಗಳಲ್ಲಿ ತೊಡಗಿದಾಗಲೇ ಅವರಿಂದ ತತ್ತ್ವಪದಗಳು ಮೂಡುವುದಕ್ಕೆ ಆರಂಭಿಸಿದವು.

ಸಿದ್ಧಪ್ರಭುಗಳು ಸಾವಿರಾರು ತತ್ತ್ವಪದಗಳನ್ನು ರಚಿಸಿದರು. ಅವರ ಹಾಡುಗಳು ಸಂಗ್ರಹಿಸಲಾಗುತ್ತಿದೆ. ಶ್ರೀ ಕಾಶೀನಾಥ ರೆಡ್ಡಿ ಅವರು ಈ ದಿಶೆಯಲ್ಲಿ ಸಾಕಷ್ಟು ಕೆಲಸ ಮಾಡಿದ್ದಾರೆ.

ಸಿದ್ಧಪ್ರಭುಗಳು ದಿ.೧೯.೨.೧೯೭೭ರಂದು ಲಿಂಗದೊಳಗಾಗಿ ಲಿಂಗ ಸ್ವರೂಪರಾದರು. ಸಿದ್ಧಪ್ರಭುಗಳು ಬಹುಭಾಷೆಗಳಲ್ಲಿ ತತ್ತ್ವಪದಗಳನ್ನು ರಚಿಸಿಕೊಟ್ಟಿದ್ದಾರೆ. ಅವರ ಪದಗಳಲ್ಲಿ ಸಿದ್ಧ, ದೇವಿದಾಸ, ಜೇಜಿ ಎಂಬಂತಹ ಮುದ್ರಿಕೆಗಳು ಬರುತ್ತವೆ. ಅವರ ಕೆಲವು ಹಾಡುಗಳನ್ನು ಇಲ್ಲಿ ಉದ್ಧರಿಸಲಾಗಿದೆ:

ಸಾವಧಾನ

ಸಾವಧಾನ ಸಾವಧಾನ
ಮನ ಆವರಿಸಕೊಳ್ಳೋ ಜ್ಞಾನ ॥ ಪ ॥

ಶ್ರೀ ಗುರು ವಚನುಪದೇಶ
ನಿನಗಾಯಿತು ಭಲೆ ಉಲ್ಲಾಸ
ನೀ ಕಂಡ ಮೇಲೆ ಕೈಲಾಸ
ಉಂಡಿರು ಜ್ಞಾನ ಪಾಯಿಸ
ಭಾಂಡವಾಯಿತು ಮನಮೌನ ॥ ೧ ॥

ಪರಬ್ರಹ್ಮ ಕೊಟ್ಟ ಮೇಲೆ ವರು
ನರ ಪ್ರಾಣಿಗಿ ಬರುವದು ಗುರು

ನರ ಅನುವನು ನಾ ದೇವರು
ಮರವಿನ ಜಲ್ಮಕಿದು ಮರು
ನಾ ಎಂಬ ಶಬ್ದ ಅಜ್ಞಾನ ॥ ೨ ॥

ಸಾಧು ನಡಿಬಹುದು ಕಷ್ಟೇನ
ಬಹು ಬಲಿಸಬೇಕು ದೃಷ್ಟೀನ
ಈ ಮನಕೆ ಆಗುವುದು ಕಷ್ಟೇನ
ಮಹಾ ಸಂತರಿಗಿ ಚಾಷ್ಟೀನ
ಸಿದ್ಧ ಪ್ರಭು ಬ್ಯಾಡಂದ ಅನುಷ್ಠಾನ ॥ ೩ ॥

ಕನಸಿನ ಸಂಸಾರ

ಕನಸಿನ ಸಂಸಾರ ತಿಳಿದಂವ
ತನ್ನ ಮನಸಿಗಿ ಬಂದಂಗ ನಡದಂವ
ಬಸವನ ಉಪದೇಶ ಪಡದಂವ
ಹೊಸ ಹೊಸ್ತಲ ಆಚಾರವಿಡದಂವ ॥ ಪ ॥

ಹಿಂದಿನ ಮಾರ್ಗ ಹಿಡದಂವ
ಮುಂದಿನ ತುದಿಗಳ ಕಡದಂವ
ನಿಂದಕರಿಗಿ ಸವಿ ನೀಡದಂವ
ವಂದಿಕರ ಸಂಗ ಪದ ಹಾಡದಂವ ॥ ೧ ॥

ಮೂಗು ಹಿಡದು ಚಪರಾಕಿ ಹೊಡದಂವ
ತ್ಯಾಗ ಆದವರ ಮುಂದ ಹೋದ ದೌಡಂವ
ಹಿಗ್ಗಿಲಿ ನಾಮರಸವ ಕುಡದಂವ
ಅಗ್ಗ ಆಗಿದ ಮೇಲೆ ಪಿರ್ರ್ಯಾ ನೋಡದಂವ ॥ ೨ ॥

ಕುಂಬಾರ ಗಡಗಿ ಬಿಟ್ಟಂವ
ಕಂಬಾರ ಕುಲುಮಿನಲ್ಲಿ ಸುಟ್ಟಂವ
ಅಂಬಿಗಾರ ಆಗಿದ ಸಿಟ್ಟಂವ
ಗುಂಬಿಗಿ ಬಿದ್ದರ ಸಿದ್ಧಪದ ಪೆಟ್ಟಂವ ॥ ೩ ॥

ಈಸದು ಬಿರಿ

ಸಂಸಾರ ಸಾಗರ ಈಸದು ಬಿರಿಯ
ಖಜ್ಜಿಯ ತುರುಸುವ ಆ ಪರಿಯ ॥ ಪ ॥

ದಾಟುವದಕ ಕರ ಪಿಡಿದಾ ಆವಾರ ಗ್ವಾಡಿ
ಎಷ್ಟು ದೂರ ಇರುವದು ಹತ್ತಲಿಲ್ಲ ಧಡಿ
ಕಷ್ಟ ನಿವಾರ ಹಣಿಬಾರ ಖೋಡಿ
ಇಷ್ಟಕ್ಕೆ ಗುರು ಬಂದು ಹಚ್ಚಿದ ಕಡಿಯ
ಬಾಯಿ ಬಿಡುವೆನು ಬಡಿಯ ॥ ೧ ॥

ಅಗಸಿ ಬದಿಲಿ ತಿಂಡಿ ಆಯಿತು ಭಾರಿ
ತುರುಸುವದಕ ಕೈ ಬಿಟ್ಟು ಮುಂದ ಹೋದ ಸಾರಿ
ಚೌರ್‍ಯಾವಂಸಿ ಲಕ್ಷಾ ತಿರುಗುತ ಫೇರಿ
ಆಲಸ್ಯ ಕಂಡು ಬಂದ ಎನ್ನ ಧಣಿಯ
ಸಿದ್ಧ ಮಾಡಿ ಬರಿಯ ॥ ೨ ॥

ತಿಳಿದರೆ ಹೇಳಯ್ಯ

ದೇವರು ತಿಳಿದರೆ ಹೇಳಯ್ಯಾ
ಸುಳ್ಳೇ ಗೋಳು ಯಾಕಯ್ಯ ॥ ಪ ॥

ಜೀವದ ಹೆಣ್ಣ ದೇವರು ಅಲ್ಲಾ
ಜೀವದ ಗಂಡ ದೇವರು ಅಲ್ಲಾ
ನಿರ್ಜೀವದ ಗೊಂಬಿ ಅಲ್ಲಯ್ಯ ॥ ೧ ॥

ಗಂಗಾ, ಅಗ್ನಿ ದೇವರೇನಯ್ಯ
ನಿಂಗಾ, ಜಾನು ದೇವರೇನಯ್ಯ
ಸಂಗನ ಶರಣರ ಸಿದ್ಧ ಬಲ್ಲಯ್ಯ ॥ ೨ ॥

ವಚನೋಪದೇಶ

ಶ್ರೀ ಗುರು ವಚನೋಪದೇಶ
ಪಡದಂವ ಮಾನವ ಬೇರುಂಟು ॥ ಪ ॥

ಶ್ರೀ ಗುರು ಜ್ಞಾನಾಮೃತ ಚಿತ್ತಕಿರಣ ಸೇರಲಾಗಿ
ಶ್ರವಣ, ಮನನ, ನಿಜಧ್ಯಾಸಾಗಿ, ಜೀವಶಿವ ಏಕವಾಗಿ
ಕಾನನ ಸೇರಿದಂತೆ ಈ ದೇಹ ರೂಪವಾಗಿ ॥ ೧ ॥

ನಿಜತತ್ತ್ವ ತಿಳಿಲಾರದೆ ರಾಜಯೋಗದೊಳು ಸೇರಿ
ಸಹಜ ಮಾತನಾಡಲಿಕ್ಕೆ ತಾಜಮಹಲ ಬಂದಿಲ ನೀಗಿ
ಅಜಹರಿ ಸುರರಲ್ಲಿ ಆಗಲಿಲ್ಲ ತ್ಯಾಗಿ ॥ ೨ ॥

ನಾಲ್ಕು ಐದು ವೇದ ಓದಿ ಧನುರ್ವಿದ್ಯಾ ಕಲ್ತವರೆಲ್ಲಾ
ಮಧ್ಯಪಾನ ಸೇವಿಸದಂತೆ ಶುದ್ಧ ಆತ್ಮವಿಲ್ಲದ ತಿರುಗಿ
ಬುದ್ಧಿಶುದ್ಧ ನಿರ್ಗುಣ ವಿಚಾರ ಬಾ ಸಿದ್ಧ ಭಜನಿಗೆ ॥ ೩ ॥

ಹರದಾಡದು ಸಾಕು

ಎಲಾ ಮನಸಾ ಹರದಾಡದು ಸಾಕು
ಮೃಗ ಝುಳ ನೀರೆಂದು
ಖ್ಯಾಲ ಮಾಡು ಬಿಸಿಲಿನ ಝುಳ ಇದು
ಹರಿವದು ನಿನ್ನ ಮುಂದು ॥ ಪ ॥

ಎಲಾ ಮನಸಾ ಉಪದೇಶ ಪಡೆದ
ಮೇಲೆ ಸುಳ್ಳ ನುಡಿ ಬ್ಯಾಡ ಒಂದು
ಸುಳ್ಳು ಜೂಜನಾಡಿ ಶಕುನಿ ದುರ್ಯೋಧನ
ದುಸವಾಸ ಹೋದರು ನೊಂದು ॥ ೧ ॥

ವಜ್ರ ದೇಹದ ಇಂದ್ರ ಚಂದ್ರ
ಸೂರ್ಯರಿಗೆ ಬಂದ ಒದಗಿತ್ತು ಕುಂದು

ಮನಸ್ಸು ನೀನು ಮರಿಬ್ಯಾಡ
ಮಹಾದೇವಗ ನರ ಜಲ್ಮಕ್ಕೆ ಬಂದು ॥ ೨ ॥

ಪ್ರಾಣ ಇರೋಸ್ಥನ ದಾರುನೆಂಬೋದಿಲ್ಲ
ತಿಳಿ ಧ್ಯಾನಕ ತಂದು
ಭಕ್ತಿ ಇಲ್ಲೆಂದು ಬಾಯಿಲಿ ನುಡಿಬ್ಯಾಡ
ನಾನೇ ಯೋಗಿ ಎಂದು ॥ ೩ ॥

ತಿರ್ಕರ ಅಂಗಡ್ಯಾಗ ಉನ್ಮನಿ ಮಾತ ಹೇಳಿ
ಬಡಿವಾರ ಮನಸ್ಸಿಂದು
ನಾನೇ ಭಕ್ತರು ಹೆಚ್ಚು ಚಂಗಳೆವ್ವ
ಬಾವಲಿ ಜಲ್ಮಕ ಬಂದು ॥ ೪ ॥

ಶಾಸ್ತ್ರಗಳು ಓದಿ ಮನಸ್ಸು ಇದು
ಬಾಗಿಲ ಸಣ್ಣ ಎಂದು
ಸಣ್ಣ ಆಗಿದ ಮೇಲೆ ಹೌದ ಹೌದ
ಅನುವದು ಈ ಮನಸಿನ ಧುಂದು ॥ ೫ ॥

ಮತ್ತೊಂದು ಮಾತಲ್ಲ ಗುಪ್ತ ಆಡಿಕೋ
ಮಂತ್ರ ಕಟಾಕ್ಷ ಗುರುವಿಂದು
ಹರಿದಾಡು ಮನಸಿಗೆ ಕೆಲಸ ಹಚಬೇಕರಿ
ಇಳಿವದು ಆದರ ದುಂದು ॥ ೬ ॥

ಮಾತ ಮೀರಿದರೆ ಧೂತ ಬರುವನೋ
ಯಮ ಪುರದಿಂದ
ದಿನವ ಹೋದ ಮೇಲೆ ತಮಾಶ ನೀನು
ಮನಸೇನು ಕೆಲಸಂದು ॥ ೭ ॥

ಮನ ಬಲ್ಲಂಗ ಮಾತಾಡಿ ರಂಗ ಇಳಿಸಿತು
ಮೊಗಲೈ ಬಾದಶಂದು

ಸತ್ವಲಿಂದ ರಾಜ ಗೆದ್ದರು
ಜವಾಹರ ಕುಬೇರನು ಅಂದು ॥ ೮ ॥


ಹೌದೇನು ಮನಸಾ ನಾದ ಬ್ರಹ್ಮ
ಸವಿ ಭಜನಿಯ ಹೆಚ್ಚಿಂದು
ನಾಮ ಖ್ಯಾಲದೊಳ ಬೈಲ ತಿಳಿವದು
ಗುಪ್ತ ಅದ ಮುಚ್ಚಿಂದು ॥ ೯ ॥

ದೇವಿದಾಸನ ಬರಿ ವಿಚಾರ ಚೆಂದು
ಉದಯ ಪಂಚಕರಣ ಸಾಧು
ಸಂಸಾರ ಸಾಗರ ಈಸಲಿಕೆ
ಗುರುಭಜನಿ ಬೇಕೆಂದು ॥ ೧೦ ॥

(ಈ ವಿವರಗಳನ್ನು ಶ್ರೀಮತಿ ಗೋವರ್ಧನ ಬಾಯಿ ಮತ್ತು ಶ್ರೀ ಎಚ್.ಕಾಶೀನಾಥ ರಡ್ಡಿ ಅವರು ನೀಡಿರುವರು.)




ಸಿದ್ಧಪ್ರಭುಗಳು ಜನಿಸಿದ ತೂಗ್ಯೆ ಅವರ ಮನೆ (ಹುಮನಾಬಾದ).




ಸಿದ್ಧಪ್ರಭುಗಳ ಸಮಾಧಿ ದೇವಾಲಯದ ಒಂದು ನೋಟ (ಧುಮ್ಮನಸೂರು).



ಸಿದ್ಧಪ್ರಭುಗಳ ದರ್ಶನ ಪ್ರತಿಮೆ



ಸಿದ್ಧಪ್ರಭುಗಳ ಧರ್ಮ ಪತ್ನಿಯವರ ಸಮಾಧಿ (ಕಲ್ಲವಾಡಿ).



ಕಲ್ಲವಾಡಿಯ ಸಮಾಧಿ ಮಂದಿರದ ಒಂದು ದೃಶ್ಯ




ಸಿದ್ಧಪ್ರಭುಗಳು ಭಜನೆಗಾಗಿ ಬಳಕೆ ಮಾಡುತ್ತಿದ್ದ ಸಂಗೀತ ಸಾಮಗ್ರಿಗಳು.




ಸಿದ್ಧಪ್ರಭುಗಳ ಹಿರಿಯ ಮಗಳು ಶ್ರೀಮತಿ ಗೋವರ್ಧನ ಬಾಯಿ




ಸಿದ್ಧಪ್ರಭುಗಳು ಕಟ್ಟಿಸಿದ ಭವಾನಿ ಮಂದಿರ (ಕಲ್ಲವಾಡಿ.ಭಾ.ತಾ).




ಸಿದ್ಧಪ್ರಭುಗಳು ಸ್ಥಾಪಿಸಿದ ಮಹಾದೇವನಲಿಂಗ
(ನಾರಂಜಾನದಿಯಲ್ಲಿ. ದಾಡಗಿ – ಭಾ.ತಾ)




ಸಿದ್ಧಪ್ರಭುಗಳು ಅನುಷ್ಠಾನ ಮಾಡಿದ ಗದ್ದುಗೆ (ಸಪ್ಪಣಪ್ಪ ಕಂದಗೂಳು ಅವರ ಹೊದಲ್ಲಿ ಹು.ತಾ).




ಸಿದ್ಧಪ್ರಭುಗಳು ಸ್ಥಾಪಿಸಿದ ಕೈಲಾಸ ಆಶ್ರಮ.
(ಕಾಶೀನಾಥ ಅವರ ಹೊಲ. ಕಲ್ಲವಾಡಿ).




ಸಿದ್ಧಪ್ರಭುಗಳ ಮಗ ಜ್ಞಾನದೇವನ ಸಮಾಧಿ ಧುಮ್ಮನಸೂರು.




ಸಿದ್ಧಪ್ರಭುಗಳ ಅನುಷ್ಠಾನ ಮಾಡಿದ ಸ್ಥಳ ಧುಮ್ಮನಸೂರು.




ಸಿದ್ಧಪ್ರಭುಗಳು ಕುಳಿತ ಸ್ಥಳ (ಚಿನಕೇರಾ)



ಸಿದ್ಧಪ್ರಭುಗಳು ಕಟ್ಟಿಸಿದ ಧುನಿ (ಮಾಕಾ ವೀರಭದ್ರಪ್ಪನವರ ಹೊಲದಲ್ಲಿ ದಾಡಗಿ)



ಸಿದ್ಧಪ್ರಭುಗಳ ಧರ್ಮಪತ್ನಿ ಮುಕ್ತಬಾಯಿ ಅವರ ಸಮಾಧಿ, ಧುಮ್ಮನಸೂರು.



ಸಿದ್ಧಪ್ರಭುಗಳು ಅನುಷ್ಠಾನ ಮಾಡಿದ ಗವಿ (ಧುಮ್ಮನಸೂರು).

೩. ನನ್ನೆಸಾಬ (ಕ್ರಿ.ಶ.ಸು. ೧೮೭೪-೧೯೮೪)

ಬೀದರ ಜಿಲ್ಲೆ ಹುಮನಾಬಾದ ತಾಲ್ಲೂಕಿನ ಮಂಗಲಗಿ ಗ್ರಾಮವು ನನ್ನೆಸಾಬರನ್ನು ಪಡೆದು, ತತ್ತ್ವಪದ ಚರಿತ್ರೆಯಲ್ಲಿ ತನ್ನ ಹೆಸರನ್ನು ಶಾಶ್ವತವಾಗಿಸಿಕೊಂಡಿದೆ. ಅವರನ್ನು ಜನತೆ ಗುರುತಿಸುವುದು "ಕವಿಗಾರ ಮಂಗಲಗಿಯ ನನ್ನೆಸಾಬರು" ಎಂದೆ. "ಚಾಬುಕ್‌ಸವಾರ" ಎಂಬುದು ಅವರ ಮನೆತನದ ಹೆಸರಾಗಿದೆ. ನನ್ನೆಸಾಬರದು ಮುಸ್ಲೀಮ್ ಕುಟುಂಬವಾದರೂ; ಅದು "ಜಾತಿಗಾರ"ವರ್ಗಕ್ಕೆ ಸೇರಿದೆ. ಹೀಗಾಗಿ 'ಕಲೆ'ಯೆಂಬುದು ನನ್ನೆಸಾಬರ ಮನೆತನದೊಂದಿಗೆ ಅವಿಭಾಜ್ಯವಾದ ಅಂಗವಾಗಿಯೆ ಉಳಿದುಕೊಂಡು ಬಂದಿದೆಯೆನ್ನಬೇಕು. ನನ್ನೆಸಾಬರ ಮನೆತನವೊಂದು ಕಲಾವಂತರ ಮನೆತನವಾದುದರಿಂದಲೇ ಅವರಿಗೆ "ಕವಿತ್ವದ ಸಿದ್ಧಿ"ಯು ಸಹಜವಾಗಿ ಒಲಿಯಿತೆನ್ನಬೇಕು.

ನನ್ನೆಸಾಬರ ತಂದೆ ಶೇಖ್ ಫಕ್ರುದ್ದೀನ್ ಅವರು. ಶ್ರದ್ಧಾವಂತ ಮನದವರು. ಆಧ್ಯಾತ್ಮಿಕತೆಯಲ್ಲಿ ನಂಬುಗೆವುಳ್ಳವರಾಗಿದ್ದರು. ಅವರಿಗೆ ದೇವರಲ್ಲಿ ಅತೀವ ಭಕ್ತಿಯಿದ್ದಿತು. ಪತಿಗೆ ತಕ್ಕ ಪತ್ನಿ ಮೌಲಾನ್‌ಬಿ ಅವರು. ಈ ದಂಪತಿಗಳ ಉದರದಿಂದ ದಿ.೧೪-೩-೧೮೭೪ರಂದು ನನ್ನೆಸಾಬರು ಜನಿಸಿದರು. ನನ್ನೆಸಾಬರಿಗೆ ಇಬ್ಬರು ಅಣ್ಣಂದಿರು ಮತ್ತು ಒಬ್ಬಳು ಸೋದರಿ ಇದ್ದರು. "ತಮ್ಮ ಎಲ್ಲ ಮಕ್ಕಳಲ್ಲಿ ನನ್ನೆಸಾಬನು ಕೀರ್ತಿ ತರುವ ಮಗನಾಗುತ್ತಾನೆಂದು" ಶೇಖ ಫಕ್ರುದ್ದೀನ್ ಸಾಬರು ನಂಬಿದ್ದರು. ಅವರ ನಂಬುಗೆ ಸುಳ್ಳಾಗಲಿಲ್ಲ. ಖ್ಯಾತಕವಿ-ತತ್ತ್ವಪದಕಾರರಾಗಿ ನನ್ನೆಸಾಬರು ತಂದೆಯ ಆಶೆಯನ್ನು ಕಾರ್ಯಗತಗೊಳಿಸಿದರು.

ನನ್ನೆಸಾಬರು ಉರ್ದು ಶಾಲೆಗೆ ಹೋದರು. ಉರ್ದು, ಮೋಡಿ, ಮರಾಠಿ ಭಾಷೆಗಳನ್ನು ಕಲಿತರು. ಕನ್ನಡ-ಹಿಂದಿ, ತೆಲಗು ಭಾಷೆಗಳನ್ನು ವ್ಯವಹಾರದ ಬದುಕಿನಲ್ಲಿ ಕರಗತ ಮಾಡಿಕೊಂಡರು.

ನನ್ನೆಸಾಬರದು ಬಹುದೊಡ್ಡ ಕುಟುಂಬವಾಗಿತ್ತು. ಅವರಿಗೆ ಬುರಾನಬಿ, ಮಸ್ತಾನಬಿ ಎಂಬ ಇಬ್ಬರು ಪತ್ನಿಯರಿದ್ದರು. ಇಬ್ಬರು ಪತ್ನಿಯರಿಂದ ಅವರು ಹೊಂದಿದ ಮಕ್ಕಳು ಇಪ್ಪತ್ತಮೂರುಜನ. ಆದರೆ ಎಲ್ಲ ಮಕ್ಕಳು ಬದುಕಲಿಲ್ಲ, ಮೊದಲ ಪತ್ನಿಯ ಹದಿನೆಂಟು ಮಕ್ಕಳಲ್ಲಿ ಜೀವಂತವಾಗಿ ಬದುಕಿದವರು ನಾಲ್ಕು ಜನ ಮಕ್ಕಳು ಮಾತ್ರ.

ಶೇಖ್ ಇಮಾಮ ಎಂಬುವರು ಒಬ್ಬರು ಮತ್ತು ಮೂರು ಜನ ಹೆಣ್ಣುಮಕ್ಕಳು. ನನ್ನೆಸಾಬರ ಎರಡನೆಯ ಹೆಂಡತಿಯಿಂದ ಐದು ಜನಗಂಡು ಮಕ್ಕಳು ಜನಿಸಿದರು. ಇಂದು ನನ್ನೆಸಾಬರ ಮಕ್ಕಳಲ್ಲಿ ಹೆಚ್ಚಿನವರು ಪೋಲೀಸ ಇಲಾಖೆಯಲ್ಲಿ ಕಾರ್ಯ ಮಾಡುತ್ತಿದ್ದಾರೆ. ಶೇಖ್ ಇಮಾಮರು ಇಂದು ಪೋಲೀಸ ಅಧಿಕಾರಿಯಾಗಿ ಬೀದರಿನಲ್ಲಿ ಕಾರ್ಯ ನಿರ್ವಹಿಸುತ್ತಲಿದ್ದಾರೆ.

ನನ್ನೆಸಾಬರು ತಮ್ಮ ಬದುಕಿನ ನಿರ್ವಹಣೆಗಾಗಿ 'ಬಹುರೂಪಿ' ಕಾಯಕವನ್ನೇ ಮಾಡುತ್ತಿದ್ದರು. ಅವರು ಅದ್ಭುತ ನಟರಾಗಿದ್ದರು. ವೇಷಗಾರಿಕೆಯಿಂದ ಜನತೆಯನ್ನು ಸಮ್ಮೋಹನಗೊಳಿಸುತ್ತಿದ್ದರು. ಒಂದು ಸಲ ಖೇಣಿ ರಂಜೋಳದ ಆಗರ್ಭ ಶ್ರೀಮಂತರಾಗಿದ್ದ ಮಹಾರುದ್ರಪ್ಪನವರನ್ನೇ ನನ್ನೆಸಾಬರು ತಮ್ಮ 'ಪೋಲೀಸ ಅಧಿಕಾರಿ' ವೇಷದಿಂದ ದಿಗ್ಭ್ರಮೆಗೊಳಿಸಿದಂತೆ ಘಟನೆಯೊಂದನ್ನು ಹೇಳುತ್ತಾರೆ. ಹೀಗೆ ತಮ್ಮ 'ಬಹುರೂಪಿ' ಕಲೆಗಾರಿಕೆಯಿಂದ ನನ್ನೆಸಾಬರು ದೊಡ್ಡ-ದೊಡ್ಡವರ ಪ್ರೀತಿಯನ್ನೂ; ಮೆಚ್ಚುಗೆಯನ್ನೂ, ಗೌರವವನ್ನೂ ಪಡೆದುಕೊಂಡಿದ್ದರು.

ನನ್ನೆಸಾಬರು ಗೀಗೀ ಪದಗಳ ಹಾಡುಗಾರಿಕೆಯಲ್ಲೂ ಪ್ರಸಿದ್ಧರಾಗಿದ್ದರು. ಬೀದರ, ಕಲಬುರ್ಗಿ ಜಿಲ್ಲೆಗಳಲ್ಲಿನ ಹಲವಾರು ಸ್ಥಳಗಳಲ್ಲಿ ಅವರು ಹಾಡಿದ್ದುಂಟು. ಗೀಗೀ ಪದಗಳನ್ನು ಹಾಡುತ್ತಲೇ ಅವರು ಸ್ವತಃ ಹಾಡುಗಳನ್ನು ರಚಿಸುವುದಕ್ಕೆ ಆರಂಭಮಾಡಿದರು. ನನ್ನೆಸಾಬರಿಗೆ ಒಬ್ಬರು ಅತ್ಯುತ್ತಮ ಗುರು ದೊರೆತರು. ಅವರೆ ಮಂಗಲಗಿ ಗ್ರಾಮದ ಸೈಯ್ಯದ ಅಮೀರ ಅವರು. ಮುಂದಿನ ದಿನಗಳಲ್ಲಿ ನನ್ನೆಸಾಬರು ಗೀಗೀ ಪದಗಳನ್ನು ಹಾಡುವುದನ್ನೇ ತಮ್ಮ ವೃತ್ತಿಯಾಗಿಸಿಕೊಂಡರು.

ಕ್ರಿ.ಶ. ೧೯೬೪ರ ವರ್ಷ. ಬೀದರಿನಲ್ಲಿ ಕಲ್ಯಾಣ ಮಂಟಪವೊಂದರ ಉದ್ಘಾಟನಾ ಕಾರ್ಯಕ್ರಮಕ್ಕಾಗಿ ಹಲವಾರು ಜನ ಪೋಲೀಸ ಅಧಿಕಾರಿಗಳು ಬಂದಿದ್ದರು. ಆ ಕಾರ್ಯಕ್ರಮದಲ್ಲಿ ನನ್ನೆಸಾಬರಿಗೆ ಹಾಡುವುದಕ್ಕಾಗಿ ಆಮಂತ್ರಣ ನೀಡಲಾಗಿತ್ತು. ಕಾರ್ಯಕ್ರಮದಲ್ಲಿ ಅವರು ಎಸ್.ಪಿ.ಶ್ರೀನಿವಾಸರನ್ನು ಕುರಿತು ಆಶುಕವಿತ್ವ ಶಕ್ತಿಯಿಂದ ಹಾಡು ರಚಿಸಿ ಹಾಡಿದರಂತೆ. ಪೋಲೀಸ ಅಧಿಕಾರಿಗಳು ನನ್ನೆಸಾಬರ ಕಾವ್ಯಶಕ್ತಿಗೆ ಮೆಚ್ಚಿ, ಮಗ ರಿಯಾಜ್ ಮಿಯಾನನ್ನು ಡಿ.ಆರ್.ಪೋಲೀಸನಲ್ಲಿ ನೌಕರಿ ಕೊಡಿಸಿದಂತೆ ತಿಳಿದು ಬರುತ್ತದೆ.

ನನ್ನೆಸಾಬರ ಕಲೆಯನ್ನು ಮೆಚ್ಚಿ, ಜಿಲ್ಲೆ-ನಾಡಿನ ಹಲವಾರು ಸಂಘ, ಸಂಸ್ಥೆ, ಮಠ-ಮಾನ್ಯಗಳು ಸತ್ಕರಿಸಿವೆ. ಪ್ರಶಸ್ತಿಗಳನ್ನು ನೀಡಿವೆ. ಕರ್ನಾಟಕ ಸರಕಾರವು ಅವರಿಗೆ ಕ್ರಿ.ಶ.೧೯೮೪ರಲ್ಲಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಪ್ರಶಸ್ತಿನೀಡಿ ತನ್ನ ಕೃತಜ್ಞತೆಯನ್ನು ಸಲ್ಲಿಸಿದೆ.

ನನ್ನೆಸಾಬರು ದಿ.೧೮-೪-೧೯೮೪ರಂದು ನಿಧನರಾದರು. ಅವರ ಸಮಾಧಿ ಇಂದು ಮಂಗಲಗಿ ಗ್ರಾಮದ ಹೊರವಲಯದಲ್ಲಿ ಕಾಣಬಹುದಾಗಿದೆ. ಅವರ ವಂಶಸ್ಥರು ಮಂಗಲಗಿಯಲ್ಲಿದ್ದಾರೆ.

ನನ್ನೆಸಾಬರು ಗೀಗೀ ಮತ್ತು ತತ್ತ್ವಪದಗಳನ್ನು ರಚಿಸಿ, ಇಂದಿಗೂ ಉಳಿದು ಕೊಂಡಿದ್ದಾರೆ. ಅವರ ತತ್ತ್ವಪದಗಳಿಗೆ 'ನನ್ನಾ' ಎಂಬ ಮುದ್ರಿಕೆಯನ್ನು ಇರಿಸಿಕೊಂಡಿದ್ದಾರೆ. ಅವರ ಎರಡು ಹಾಡುಗಳನ್ನು ಇಲ್ಲಿ ಕೊಡಲಾಗಿದೆ:

ಗುಣವಂತ ಗಂಡ

ಗುಣವಂತ ಗಂಡನ ಗುಣ
ಎಟ್ಟು ಮಾಡಲಿ ವರ್ಣನ ॥ ಪ ॥

ಮೈಯ್ಯಮ್ಯಾಲೆ ಬಂದು ಕುಂತ
ಕೈಯ್ಯಮ್ಯಾಲೆ ಬಂದು ನಿಂತ
ಗುರುವಿನಿಂದ ಪರಿಚಯ ಆದ
ಮರವಿಲಿಂದ ಹ್ಯಾಗೋ ಬಂದ ॥ ೧ ॥

ಕಣ್ಣೀಗಿ ಕಣ್ಣಿಟ್ಟು ನೋಡು ಅಂದ
ಕಾಣ್ಣಾನ ರೂಪ ಕಾಣುತಾದ ಚಂದ
ಹೆಣ್ಣೀಗಿ ಹೆಣ್ಣ ಮಾಡಿಬಿಟ್ಟ
ಗುಣವಂತ ಗಂಡನಾಗಿದ ದಿಟ್ಟ ॥ ೨ ॥

ಅಂಗದ ಸುಕವ ಬೇಕಂದ
ಅಂತರಂಗದೊಳಗ ಕೈ ಆಡಿಸಿದ
ಕಾಂತೆ ನೀ ಬಾಯೆಂದು
ಏಕಾಂತಕ್ಕೆ ಕರೆದು ಒಯ್ದು ॥ ೩ ॥

ತನ್ನ ಗುಣವ ನನಗ ನೀಡಿದನು
ಅನ್ಯವನ್ನು ಬಿಡಿಸಿ ಹಾಕಿದನು
ಚೆನ್ನ ರೂಪಂತೆಯ ಮಾಡಿದನು
ಭಿನ್ನವಿಲ್ಲದೆ ನನ್ನ ಕೂಡಿದನು ॥ ೪ ॥

ಧರಿಯೊಳಗಾದ ಮಂಗಲಗಿ ಗ್ರಾಮ
ಕವಿಗಾರ ನನ್ನಾ ಹೇಳ್ಯಾನಮ್ಮ
ಗುಣವಂತ ಗಂಡನ ಕಟಗೊಂಡು
ಗುಣವಂತೆ ನಾನಾದೆನಮ್ಮ ॥ ೫ ॥

ಮೂರು ದಿನ ಇರುತಿ

ಮೂರ ದಿನಾ ಇರುತಿ ಖೋಡಿ
ಬ್ಯಾರೆಯಾಕ ಮಾಡುತಿ ಮೋಡಿ ॥ ಪ ॥

ರೊಕ್ಕಾ ಗಳೀಸಿನಂತ ಲೆಕ್ಕಾ ಮಾಡುತಿ
ಚಿಕ್ಕ ಪೈಸೆಗೂ ನೀ ಲೆಕ್ಕಾ ಹಾಕುತಿ
ಬೊಕ್ಕ ಬಾಯಿಗಿ ಮಣ್ಣ ಹಾಕುತಿ
ರೊಕ್ಕ ನೋಡಿ ನೋಡಿ ಖೊಕ್ಕಂತ ನಗುತಿ ॥ ೧ ॥

ಐದು ಮಂದೀಗಿ ಮದುವಿ ಮಾಡಿಕೊಂಡಿ
ಯದರದು ಸುಖ ನೀ ಎಂದೆಂದ ಉಂಡಿ ?
ಬದಿಯಲ್ಲಿ ಎಲ್ಲ ಇಟಕೊಂಡು ಕುಳಿತಿ
ಮೂರುದಿನ ಮುಗದ ಮ್ಯಾಲ ಮಣ್ಣೀಗಿ ಹೋಗುತಿ ॥ ೨ ॥

ಬ್ಯಾಸರ ಇಲ್ಲದ ಬೆರಕಿ ಮಾಡುತಿ
ಈಶನ ಧ್ಯಾನವು ಮರತೆ ಬಿಡುತಿ
ದಾಸನಂಗ ದಿನವೆಲ್ಲ ದುಡೀತಿ
ದಿಕ್ಕ ತಪ್ಪಿದಾಂಗ ಯಾಕ ಹಾರ್‍ಯಾಡತಿ ? ॥ ೩ ॥

ಸೊಕ್ಕಲಿಂದ ನಡೆದರ ಪಾಡಲ್ಲ
ರೊಕ್ಕದ ಮೋಹಕ್ಕ ಬಿದ್ದರ ಬಿಡಲ್ಲ
ಚೊಕ್ಕಲಿಂದ ನೀ ಸಂಸಾರ ಮಾಡು
ಮೂರು ದಿನದ ಸಂತಿ ಖತಮ್ ನೋಡು ॥ ೪ ॥

ಪೊಡವಿಯೊಳಗಧಿಕ ಮಂಗಲಗಿ ಪುರವ
ಕವಿಗಾರ 'ನನ್ನಾ' ನಯದಿಂದ ಇರುವ

ಗುರುವಿನ ಪಾದಕ್ಕ ಶರಣಾಗು ಜರುವ
ಮೂರು ದಿನದ ಬದುಕ ಅರುವಿಲೆ ನಡೆಸುವ ॥ ೫ ॥


(ಈ ವಿವರಗಳನ್ನು ಕವಿಗಳ ವಂಶಸ್ಥರಾದ ಶ್ರೀ ಶೇಖ್ಇಮಾಮ ಸಾಹೇಬರು ನೀಡಿದ್ದಾರೆ.)



ನನ್ನೆಸಾಬರ ಮನೆ - ಅದರ ಮುಂದೆ ನಿಂತಿರುವವರು ಅವರ ವಂಶದವರಾದ ಖುರ್ಶಿದಬಿ-ಬಿಸ್ಮಿಲ್ಲಾ (ಮಂಗಲಗಿ)



ನನ್ನೆಸಾಬರ ಆರಾಧ್ಯದೇವರು ಮೌನೇಶ್ವರ ಮಂದಿರ (ಮಂಗಲಗಿ)



ನನ್ನೆಸಾಬರ ಸಮಾಧಿ (ಮಂಗಲಗಿ)

೪. ಸಂತರಾಮ ಮಹಾರಾಜ (ಕ್ರಿ.ಶ.ಸು ೧೮೮೦-೧೯೬೮)

'ಸಂತರಾಮ' ಎಂಬ ಹೆಸರಿನಿಂದಲೇ ಜನರಿಂದ ಗುರುತಿಸಿಕೊಂಡಿರುವ ಇವರ ಮೂಲ ಹೆಸರು 'ರಾಮ' ಎಂದಿದೆ.

ದಲಿತ ಕುಟುಂಬದಲ್ಲಿ ಹುಟ್ಟಿ; ಬಾಲ್ಯದಿಂದಲೇ ಆಧ್ಯಾತ್ಮದ ಹಂಬಲವನ್ನು ಹೆಚ್ಚಿಸಿಕೊಳ್ಳುತ್ತ ಬೆಳೆದ ರಾಮಣ್ಣ ಮುಂದೆ ಮುಟ್ಟಿದ್ದು 'ಸಂತ'ನ ಸ್ಥಲ. ಹೀಗಾಗಿ 'ಸಂತರಾಮ' ಎಂಬುದು ಅವರ ಅಂಕಿತವಾಗಿರುವಂತೆ, ಅನ್ವರ್ಥಕವೂ ಆಯಿತು.

ಕ್ರಿ.ಶ. ಸು. ೧೮೮೦ ರಲ್ಲಿ ಸಂತರಾಮ ಅವರು ಜನಿಸಿದರು. ಅವರ ಜನ್ಮ ಸ್ಥಳವು ಹುಮನಾಬಾದ ತಾಲ್ಲೂಕಿನಲ್ಲಿ ಬರುವ ಘಾಟಬೋರಾಳ ಗ್ರಾಮ. ತಂದೆ ವಿಠೋಬಾ, ತಾಯಿ ಸಕ್ಕೂಬಾಯಿ. ವಿಠೋಬಾ ಅವರು ಪಂಡರಾಪುರದ ವಿಠ್ಠಲನ ಪರಮ ಭಕ್ತರಾಗಿದ್ದರು. ಆಗಾಗ ಭಕ್ತರನ್ನು ಕೂಡಿಸಿಕೊಂಡು ಭಜನೆ ಮಾಡುತ್ತ, ಪಾದಯಾತ್ರೆಯಿಂದ ಪಂಡರಾಪುರಕ್ಕೆ ಹೋಗಿ ವಿಠ್ಠಲನ ದರ್ಶನ ಮಾಡಿಕೊಂಡು ಬರುತ್ತಿದ್ದರು. ಹೀಗಾಗಿ ಮನೆಯಲ್ಲಿ ಮರಾಠಿ ಭಾಷೆಯ ಅಸ್ತಿತ್ವವು ಕಾಣುವಂತಾಯಿತು. ಆದರೂ ಅವರು ತಮ್ಮ ತಾಯಿನುಡಿಯನ್ನು ಮರೆಯಲಿಲ್ಲ. ಸಕ್ಕೂಬಾಯಿ ಮಹಾರಾಷ್ಟ್ರದವರು. ಸಂದರ್ಭ ಒದಗಿ ಬಂದಾಗ ಮನೆಯಲ್ಲಿ ಸಂತರಾಮ ಅವರು ಮರಾಠಿಯನ್ನು ಮಾತಾಡುತ್ತಿದ್ದರು. ಆದರೆ ಅವರು ಉಳಿಸಿದ್ದು ಕನ್ನಡದ ಸಂಸ್ಕೃತಿ; ಹವ್ಯಾಸವಾಗಿ ಬೆಳೆಯಿಸಿಕೊಂಡದ್ದು ಕನ್ನಡದಲ್ಲಿ ತತ್ತ್ವಪದಗಳ ರಚನೆ.

ಸಂತರಾಮ ಅವರಿಗೆ ಯಾವುದೇ ಶಾಲೆಯ ಸಂಪರ್ಕವು ಒದಗಲಿಲ್ಲ. ತಂದೆಯ ಆಧ್ಯಾತ್ಮ ಸಂಸ್ಕಾರವೇ ಅವರನ್ನು ಸುಶಿಕ್ಷಿತರಾಗುವಂತೆ ಮಾಡಿತು. ತಾಣಾಚಿಂಚೋಳಿ ಗ್ರಾಮದ ಮಲ್ಲಿಕಾರ್ಜುನ ಅವರ ಮಾರ್ಗದರ್ಶನ ದೊರಕಿದ ಕಾರಣದಿಂದ ಸಂತರಾಮ ಅವರಿಗೆ ಕೆಲವು ವಿದ್ಯೆಗಳು ಸಾಧಿತವಾದವು. ಕನ್ನಡದ ಅಕ್ಷರಗಳ ಪರಿಚಯವಾಯಿತು. ಜ್ಯೋತಿಷ್ಯಶಾಸ್ತ್ರದಲ್ಲಿ ತಿಳಿಕೆಯನ್ನು ಪಡೆದುಕೊಂಡರು. ಕೀರ್ತನೆ ಮಾಡುವುದು ಕಲಿತುಕೊಂಡರು.

ವಿಠ್ಠಲನ ಅಭಂಗಗಳನ್ನು ಹಾಡುವುದರ ಜೊತೆಗೆ ಕನ್ನಡ ತತ್ತ್ವಪದಕಾರರಾದ ಕಡಕೋಳ ಮಡಿವಾಳಪ್ಪ, ನಾವದಗಿ ರೇವಪ್ಪಯ್ಯನವರಾದಿಗಳ ಹಾಡುಗಳನ್ನು ಕಂಠಪಾಠ

ಮಾಡಿಕೊಂಡರು. ಹೀಗಾಗಿ ಸಂತರಾಮ ಸತ್ಸಂಗದ ಪರಿಣಾಮದಿಂದ ಸುಸಂಸ್ಕೃತರಾದರು; ಆಧ್ಯಾತ್ಮ ಸಾಧಕರಾಗಿ ಸಂತರೆನಿಸಿಕೊಂಡರು.

ರಾಮಣ್ಣನವರದು ಸಂಸಾರದಿಂದ ದೂರವಾಗಿದ್ದುಕೊಂಡು ಸಂನ್ಯಾಸವನ್ನು ಅಪ್ಪಿಕೊಂಡ ಸಂತತನವಾಗಿರಲಿಲ್ಲ. ಸಂಸಾರದಲ್ಲಿದ್ದುಕೊಂಡೇ ಅವರು 'ಸಂತತನ'ದ ಸಾಧನೆ ಮಾಡಿದರು.

ರಾಮಣ್ಣನವರ ಹೆಂಡತಿ ಲಕ್ಷ್ಮಿಬಾಯಿ. ಈ ದಂಪತಿಗಳಿಗೆ ಮೂವರು ಮಕ್ಕಳು. ಧೊಂಡಿಬಾ, ವಿಠ್ಠಲ, ಗುರುನಾಥ ಇವರೆ – ಆ ಮಕ್ಕಳಾಗಿದ್ದಾರೆ. ಇಬ್ಬರು ಹೆಣ್ಣುಮಕ್ಕಳೂ ಇದ್ದಾರೆ. ಸಧ್ಯ ವಿಠ್ಠಲ ಬದುಕಿಲ್ಲ. ಧೊಂಡಿಬಾ, ಗುರುನಾಥ ಜೀವಿಸಿದ್ದಾರೆ. ಗುರುನಾಥ ಅವರು ತಂದೆಯ ಪರಂಪರೆಯನ್ನು ಮುನ್ನೆಡೆಸಿಕೊಂಡು ಹೊರಟ ಸಾಧುಜೀವಿಗಳಾಗಿದ್ದಾರೆ. ತಂದೆಯಂತೆ ಗುರುನಾಥ ಅವರೂ ತತ್ತ್ವಪದಗಳನ್ನು ರಚನೆ ಮಾಡುತ್ತಾರೆ. (ಅವರ ಬಗೆಗೆ ಪ್ರತ್ಯೇಕವಾಗಿ ಬರೆಯಲಾಗಿದೆ).

ಸಂತರಾಮ ಅವರು ತಮ್ಮ ಬದುಕಿನ ಸಾಗಿಸುವಿಕೆಗಾಗಿ ಜ್ಯೋತಿಷ್ಯ ಹೇಳುತ್ತಿದ್ದರು. ಪ್ರವಚನ ಮಾಡಲು ಹೋಗುತ್ತಿದ್ದರು. ಕೆಲವೊಮ್ಮೆ ಕಂತಿಭಿಕ್ಷೆಯೂ ಮಾಡುತ್ತಿದ್ದರು. ಅವರು ತಮ್ಮ ಮಕ್ಕಳಿಗೆ ಒಳ್ಳೆಯ ಸಂಸ್ಕಾರವನ್ನು ನೀಡಿದರು. ಮನೆಯಲ್ಲಿ ಆಧ್ಯಾತ್ಮದ ವಾತಾವರಣವನ್ನು ಸ್ಥಾಯಿಯಾಗಿರುವಂತೆ ನೋಡಿಕೊಂಡರು.

ಸಂತರಾಮ ಅವರು ಕಾಲಕ್ರಮೇಣ ಸಂತಬದುಕಿಗೆ ಶರಣನಾಗಿ ಸಂಚಾರ ಕೈಕೊಂಡರು. ಬೇರೆ ಸ್ಥಳಗಳಿಗೆ ಹೋದಾಗ ಅಲ್ಲಿ ಹಲವು ದಿನಗಳ ಕಾಲ ನಿಂತು ಶರಣ–ಸಂತರ ಬಗೆಗೆ ಪ್ರವಚನ ಮಾಡುತ್ತಿದ್ದರು. ಹಾಗೆಯೇ ಸಮಯ ದೊರೆತಾಗ ತತ್ತ್ವಪದಗಳನ್ನು ಕಟ್ಟಿ ಹಾಡುತ್ತಿದ್ದರು. ಕಟ್ಟಿದ ಪದಗಳನ್ನು ತಮಗೆ ದಕ್ಕಿದ ಕನ್ನಡ ಬರಹದಲ್ಲಿ ಬರೆಯುತ್ತಿದ್ದರು. ಕೆಲವೊಮ್ಮೆ ತಮ್ಮ ಶಿಷ್ಯರಿಗೆ ಹೇಳಿ ಬರೆಯಿಸುತ್ತಿದ್ದರು. ಹೀಗೆ ಹಾಡುಗಳನ್ನು ಕಾಪಿಟ್ಟುಕೊಳ್ಳುವ ಶಿಷ್ಯರುಗಳಲ್ಲಿ ಅವರ ಮಗ ಗುರುನಾಥ ಅವರೆ ಪ್ರಮುಖ ಮತ್ತು ಪ್ರಥಮರಾಗಿದ್ದರು.

ಸಂತರಾಮ ಕನ್ನಡ ಸಂಸ್ಕೃತಿಗೆ ನೀಡಿದ ಕೊಡುಗೆ ಮಹತ್ವದ್ದೆಂದೇ ಹೇಳಬೇಕು. ಏಕೆಂದರೆ ಅವರು ಕನ್ನಡ ಬೊಕ್ಕಸಕ್ಕೆ ತತ್ತ್ವಪದಗಳನ್ನು ನೀಡುವುದರೊಂದಿಗೆ; ಒಬ್ಬ ತತ್ತ್ವಪದಕಾರನನ್ನೂ ನೀಡಿದರು.

ಸಂತರಾಮ ಅವರು ಸು. ಎಂಬತ್ತೆಂಟು ವರುಷಗಳ ಕಾಲ ಸಂತಬದುಕನ್ನು ಬದುಕಿ ದಿನಾಂಕ ೦೨.೦೯.೧೯೬೮ ರಲ್ಲಿ ಇಹಲೋಕ ತ್ಯಜಿಸಿದರು. ಸಂತರಾಮ ಅವರು 'ವಿಠ್ಠಲ' ಎಂಬ ಅಂಕಿತದಲ್ಲಿ ಹಾಡುಗಳ ರಚನೆ ಮಾಡಿದ್ದಾರೆ. ಅವರ ಒಂದು ಪದ್ಯವನ್ನು ಇಲ್ಲಿ ಕೊಡಲಾಗಿದೆ:

ಹಂಗಿನೊಳಗ ಇರುವದ್ಯಾಕ?


ಹಂಗಿನೊಳಗ ನಾನು ಇರುವದ್ಯಾಕ
ಭಂಗಿ ಸೇದುವರ ಸಂಗಯಾಕ? ॥ ಪ ॥

ಹುಟ್ಟಿಸಿದ ಸಾಂಬನೆ ಕೊಡುತಾನೆ
ಮುಟ್ಟಿ ಭಜಿಸು ಅವನ ಪಾದವನೆ
ಕಟ್ಟಿಟ್ಟ ಬುತ್ತಿ ಬಿಡು ಮಗನೆ
ನಿಷ್ಠೆಲಿಂದ ಅಡಗಿ ಮಾಡಿ ಉಣು ಮಗನೆ ॥ ೧ ॥


ಬಿಕ್ಷಾಕ ಹ್ವಾದಾರ ಬೇಕಾದ ನೀಡತಾರಂದೆ
ಶಿಕ್ಷಾದ ಮಾತ ಮರೆಯದು ತಂದೆ
ಕುಕ್ಷಿಗಿ ಹಾಕಾದು ಒಂದೆಯಲ್ಲ ಧಂದೆ
ಬಕ್ಷೀಸು ಕೊಡತಾನ ಶಿವ ತಂದೆ ॥ ೨ ॥

ಯಾರೀಗಿ ಯಾರಿಲ್ಲ ಮನವೆ
ದಾರೀಗಿ ಜೋಡಿಲ್ಲ ಮನವೆ
ಯಾರ್‍ಯಾರ ಹಂಗ ಬ್ಯಾಡ ನಮಗ
ಸಾರಸಂಗ ವಿಠ್ಠಲನೆ ದೇವಹಾನ ನಮಗ ॥ ೩ ॥


[ಈ ವಿವರಗಳನ್ನು ಕವಿಗಳ ಮಗನಾದ ಗುರುನಾಥ ಅವರು ನೀಡಿದ್ದಾರೆ]



ಸಂತ್ರಾಮ ಮಹಾರಾಜರ ಮನೆ (ಘಾಟಬೋರಾಳ).



ಸಂತ್ರಾಮ ಮಹಾರಾಜರ ಮಗ ಗುರುನಾಥ
(ಇವರು ತತ್ತ್ವಪದಕಾರರು)



ಸಂತ್ರಾಮ ಮಹಾರಾಜರ ಸಮಾಧಿ (ಘಾಟಬೋರಾಳ)

೫. ತುಕಾರಾಮ ಉಪ್ಪಾರ (ಕ್ರಿ.ಶ.ಸು. ೧೮೮೪–೧೯೪೯)

ಬೆಳಕೇರಾ ಗ್ರಾಮದ ತುಕಾರಾಮ ಉಪ್ಪಾರ ಅವರು ಶ್ರೇಷ್ಠ ತತ್ತ್ವಪದಕಾರರಾಗಿ ಹೋಗಿದ್ದಾರೆ. ಬೀದರ ಜಿಲ್ಲೆ; ಹುಮನಾಬಾದ ತಾಲ್ಲೂಕಿನಲ್ಲಿ ಈ ಗ್ರಾಮವು ಒಳಗೊಳ್ಳುತ್ತದೆ. ತುಕಾರಾಮನ ಪೂರ್ವಜರು ಬಸವಕಲ್ಯಾಣ ತಾಲ್ಲೂಕಿನ ತೊಗಲೂರು ಗ್ರಾಮಕ್ಕೆ ಸಂಬಂಧಿಸಿರುವುದಾಗಿ ತಿಳಿದುಬರುತ್ತದೆ. ತುಕಾರಾಮ ಅವರ ತಂದೆ– ಮತ್ತು ದೊಡ್ಡಪ್ಪನವರು ತೊಗಲೂರು ಗ್ರಾಮ ಬಿಟ್ಟು ಬೆಳಕೇರಾ ಗ್ರಾಮದಲ್ಲಿ ಬಂದು ನೆಲೆ ನಿಂತುಕೊಂಡರು. ಹೀಗಾಗಿ "ತೊಗಲೂರಿನ ತುಕಾರಾಮ" ಎಂದು ಹೆಸರಾಗಬೇಕಾಗಿದ್ದ ಕವಿಗಳು "ತುಕಾರಾಮ ಬೆಳಕೇರಾ" ಎಂದು ಪ್ರಸಿದ್ಧರಾದರು.

ಕ್ರಿ.ಶ. ೧೮೮೪ರ ವರ್ಷದಲ್ಲಿ ರಾಜಪ್ಪ–ಸಂಗವ್ವ ದಂಪತಿಗಳಿಂದ ತುಕಾರಾಮ ಅವರು ಜನಿಸಿದರು. ಅವರನ್ನು ಶಿಕ್ಷಣ ಕಲಿಯಲೆಂದು ಪಾಲಕರು ಶಾಲೆಗೆ ಹಾಕಿದರು. ನಾಲ್ಕನೆಯ ತರಗತಿಯವರೆಗೆ ಶಿಕ್ಷಣ ಹೊಂದಿದ ತುಕಾರಾಮ ಅವರ ಶಿಕ್ಷಣದ ಮಾಧ್ಯಮವು ಮೋಡಿಯಾಗಿತ್ತು. ಮೋಡಿಲಿಪಿಗಳನ್ನು ಅವರು ಕಲಿತರು. ಅದರೊಂದಿಗೆ ಕನ್ನಡ, ಮರಾಠಿ, ತೆಲಗು, ಉರ್ದು ಭಾಷೆಗಳ ಮೇಲೆ ಹಿಡಿತ ಸಾಧಿಸಿದರು.

ತೊಗಲೂರಿನಿಂದ ತುಕಾರಾಮನ ಹಿರಿಯರು ಬೆಳಕೇರಾ ಗ್ರಾಮಕ್ಕೆ ಬರುವುದಕ್ಕೆ ಆರ್ಥಿಕ ಅಡಚಣೆಯೇ ಮೂಲಕಾರಣವಾಗಿತ್ತು. ತುಕಾರಾಮನ ಕಾಲಕ್ಕೂ ಅದು ಹಿಂಗಲಿಲ್ಲ. ಹಾಗೆಯೇ ಮುಂದುವರೆಯಿತು. ಇದ್ದ ಹೊಲವು ಫಲವತ್ತಾಗಿರಲಿಲ್ಲ. ಎಷ್ಟೇ ಶ್ರಮವಹಿಸಿದರೂ ಸರಿಯಾದ ಬೆಳೆ ಬರುವಂತಿರಲಿಲ್ಲ. ಹೀಗಾಗಿ ತುಕಾರಾಮ ಕವಿಗಳ ಜೀವನವು ಬಡತನದ ಬವಣೆ ಅನುಭವಿಸುತ್ತಲೇ ಮುಂದುವರೆಯಿತು. ತಮ್ಮ ಹೊಲದಲ್ಲಿ ಅವರು ಸ್ವತಃ ಕೆಲವು ಮಾವಿನ ಗಿಡಗಳನ್ನು ನಾಟಿ ಮಾಡಿದ್ದರು. ಅವುಗಳ ಫಲವು ಮುಂದೆ ಆರ್ಥಿಕ ಬಡತನ ಹಿಂಗಿಸಬಹುದೆಂಬ ಆಶಾಭಾವದಿಂದ ತುಕಾರಾಮ ಐಹಿಕ ಬದುಕನ್ನು ಮುನ್ನಡೆಸಿಕೊಂಡು ನಡೆದಿದ್ದರು. ಕೃಷಿಕಾಯಕದೊಂದಿಗೆ ಅವರು ಮನೆಕಟ್ಟುವ ಕಾಯಕವನ್ನು ಮಾಡುತ್ತಿದ್ದರು. ಹೀಗಾಗಿ ಅವರ ಮನೆತನಕ್ಕೆ "ಉಪ್ಪಾರ" ಎಂಬ ಹೆಸರು ಬಂತು.

ತುಕಾರಾಮನ ಹೆಂಡತಿ ಗಂಗಮ್ಮ. ಈ ದಂಪತಿಗಳಿಗೆ ಒಟ್ಟು ಐದು ಜನ ಮಕ್ಕಳು. ಅವರಲ್ಲಿ ಇಬ್ಬರು ಗಂಡು ಮತ್ತು ಮೂವರು ಹೆಣ್ಣು ಮಕ್ಕಳು. ಇಂದು

ತುಕಾರಾಮ ಅವರ ಮಗಳಾದ ಭೀಮವ್ವ ಅವರು ತಮ್ಮ ಮಗನಿಗೆ ತನ್ನ ತಂದೆಯ ಹೆಸರನ್ನೇ ಇಟ್ಟಿದ್ದಾರೆ.

ಅವನು ತನ್ನ ಸ್ವಗ್ರಾಮ ದುಬಲ ಗುಂಡಿ ಬಿಟ್ಟು ಅಜ್ಜನ ಊರಲ್ಲೇ ಬಂದು ನೆಲೆಸಿದ್ದಾನೆ. ಅಜ್ಜನ ಹೆಸರನ್ನು ಇಟ್ಟುಕೊಂಡು ಅವನು ತುಕಾರಾಮ ಅವರ ಸಾಹಿತ್ಯವನ್ನು ಕಾಪಾಡುತ್ತಿದ್ದಾನೆ.

ತುಕಾರಾಮನು ಪಕ್ಕಾ ದೈವೀ ಭಕ್ತ. ರೇಕುಳಗಿಯ ಶಂಭುಲಿಂಗಪ್ಪನವರನ್ನು ಈ ಕವಿಗಳು ತಮ್ಮ ಆರಾಧ್ಯ ದೇವರೆಂದು ನಂಬಿಕೊಂಡಿದ್ದಾರೆ. ತುಕಾರಾಮ ಅವರ ಜೀವನದಲ್ಲಿ ಒಂದು ಕಹಿ ಘಟನೆ ನಡೆಯಿತು. ಅವರ ಸಂಬಂಧಿಯೊಬ್ಬರ ಕೊಲೆಯ ಅಪರಾಧದಲ್ಲಿ ಸಿಲುಕಿ ತುಕಾರಾಮ ಜೈಲಿಗೆ ಹೋದರು. ಇದರಿಂದಾಗಿ ತುಕಾರಾಮ ಅವರ ಮನಸ್ಸು ಅತ್ಯಂತ ಘಾಷಿಯಾಯಿತು. ಕೆಲವು ದಿನ ಮೌನವಾಗಿಯೇ ಕಾಲ ಕಳೆದರು. ಅವರನ್ನು ನೋಡಿದರೆ ಅಹಿಕ ಬದುಕಿನ ಆಸಕ್ತಿ ಸಂಪೂರ್ಣವಾಗಿ ಕಳೆದುಕೊಂಡಂತೆ ಭಾಸವಾಗುತ್ತಿದ್ದಿತು. ಜನರು ಏನೋನೋ ಮಾತನಾಡಿದರು. ಒಳಗೊಂದು-ಹೊರಗೊಂದು ರೀತಿಯಲ್ಲಿದ್ದ ಜನರ ವ್ಯವಹಾರವು ತುಕಾರಾಮ ಅವರ ಮನಸ್ಸು ಮತ್ತಷ್ಟು ಕೆಡಿಸಿತು. ಮುಂದಿನ ದಿನಗಳಲ್ಲಿ ತುಕಾರಾಮ ಉಪ್ಪಾರಿಕೆಯ ಕೆಲಸವನ್ನು ಬಿಟ್ಟು ಬಿಟ್ಟರು. ಮಕ್ಕಳಿಗೆ ಶಿಕ್ಷಣ ಕಲಿಸುವ ವೃತ್ತಿಯನ್ನು ಸ್ವೀಕರಿಸಿದರು. ತಮ್ಮ ಈ ವೃತ್ತಿಗಾಗಿ ಹೊಲವನ್ನೇ ಯೋಗ್ಯಸ್ಥಳವೆಂದು ಆರಿಸಿಕೊಂಡರು. ಮಾವಿನ ಗಿಡದ ನೆರಳಿನಲ್ಲಿ ಮಕ್ಕಳನ್ನು ಕೂಡಿಸಿಕೊಂಡು ಪಾಠ ಹೇಳತೊಡಗಿದರು. ಮೋಡಿ ಅಕ್ಷರಗಳನ್ನು ತಿದ್ದಲು ಮಕ್ಕಳಿಗೆ ತಿಳಿಸಿದರು. ಇದೇ ಹೊತ್ತಿನಲ್ಲಿ ತುಕಾರಾಮ ಅವರು ಗೀಗೀ ಪದಗಳನ್ನು ಹಾಡುವಲ್ಲಿ ಅಭಿರುಚಿ ಬೆಳೆಯಿಸಿಕೊಂಡರು. 'ಹರದೇಶಿ' ಸಂಪ್ರದಾಯದ ಅತ್ಯುನ್ನತ ಹಾಡುಗಾರನೆಂದು ಹೆಸರುಗಳಿಸಿದರು. ಕಾಲಾನು ಕ್ರಮವಾಗಿ ತಾವೇ ಹರದೇಶಿ ಹಾಡುಗಳನ್ನು ರಚಿಸ ತೊಡಗಿದರು. ಹೀಗೆ ಅವರ ಕಾವ್ಯ ಕೃಷಿಯು ಆರಂಭವಾಯಿತು. ಮುಂದೆ ತುಕಾರಾಮ ಅವರು ಶಿಕ್ಷಕ ವೃತ್ತಿ ಬಿಟ್ಟು ಹಾಡುಗಾರರಾಗಿ ಡಪ್ಪು-ತುಂತುಣಿ ಹಿಡಿದು ಹೊರಟರು. ಬೀದರ - ಗುಲ್ಬರ್ಗ ಮುಂತಾದ ಜಿಲ್ಲೆಗಳಲ್ಲೆಲ್ಲ ಸಂಚಾರ ಕೈಗೊಂಡರು.

ತುಕಾರಾಮ ಅವರು ಗೀಗೀ ಹಾಡುಗಳೊಂದಿಗೆ, ಭಜನೆಯ ಕಲೆಯಲ್ಲೂ ಪಾರಂಗತರಾಗಿದ್ದರು. ಸ್ವತಃ ತತ್ತ್ವಪದಗಳನ್ನು ರಚಿಸಿ ಭಜನೆಯಲ್ಲಿ ಹಾಡುತ್ತಿದ್ದರು. ಅವರು ಒಂದು ಭಜನೆಯ ಮೇಳವನ್ನು ಕಟ್ಟಿಕೊಂಡಿದ್ದರು. ತುಕಾರಾಮ ಅವರು 'ಸಾರಂಧರ' ಎಂಬ ನಾಟಕವನ್ನು ರಚಿಸಿದಂತೆ ಹೇಳಲಾಗುತ್ತದೆ.

ಅವರು ರಚಿಸಿದ ಗೀಗಿ, ಮೋಹರಮ್, ಹೋಳಿ, ತತ್ತ್ವಪದಗಳು ಅವರ ಶಿಷ್ಯರು ಇಂದಿಗೂ ಹಾಡುತ್ತಾರೆ.

ತುಕಾರಾಮ ಅವರ ತತ್ತ್ವಪದಗಳಿಗೆ ಸ್ವನಾಮವೇ ಅಂಕಿತವಾಗಿದೆ. ಇಲ್ಲಿ ಎರಡು ಪದಗಳನ್ನು ನಿದರ್ಶನಕ್ಕಾಗಿ ಕೊಡಲಾಗಿದೆ:

ಸಂಸಾರದ ಜಾತರಿ

ಸಂಸಾರದ ಜಾತರಗಿ ಬಂದೆನಲ್ಲ
ಸಸಾರಾಗತಾದನಾದು ತಿಳಿದೆ ಇಲ್ಲ ॥ ಪ ॥

ಹೊತ್ತ ಹೋದರೂ ಹೀನಾ ದುಕಾನ ಮುಚ್ಚೆ ಇಲ್ಲ
ಕತ್ತಲಾಗಿ ಕಣ್ಣ ಕಾಣದಿದ್ದರೂ ಜನಾ ಹೋಗೆ ಇಲ್ಲ
ಅತ್ತ-ಇತ್ತ ತಿರಗಾ ಮಂದಿ ಯಾರೂ ಕಾಣದಿಲ್ಲ
ಜತೀಲಿ ಬಂದವರು ಎಲ್ಲಿ ಹೋದರೋ ಗೊತ್ತೇ ಇಲ್ಲ ॥ ೧ ॥

ಒಬ್ಬರ ಖೂನಾ ಒಬ್ಬರೀಗಿ ಅಲ್ಲಿ ಹತ್ತಾಣಿಲ್ಲ
ಮಬ್ಬಿನ ಕಣ್ಣೀಗಿ ಎಲ್ಲಾ ಒಂದೆ ಕಾಣುತಾದಲ್ಲ
ದಬ್ಬುತ ಜನರು ಮುಂದೆ ಮುಂದೆ ನಡದಾರಲ್ಲ
ಹಬ್ಬಕ ಹೋಗಾ ಜಾಗ ಇವರಿಗೆ ತಿಳಿದೆ ಇಲ್ಲ ॥ ೨ ॥

ಕಾಲಚಾಚಿ ಕೆಲವರು ಅಲ್ಲೆ ಮಲಗ್ಯಾರಲ್ಲ
ಇಲ್ಲದೊಂದು ಬೇಕಂತ ಮತ್ತ ಬೇಡ್ಯಾರಲ್ಲ
ಕಲ್ಲದಿಂಬ ಮಾಡಿ ಗೊರಕಿ ಹೊಡದಾರಲ್ಲ
ಎಲ್ಲ ಬಿಟ್ಟು ಯಾಕ ಇವರು ಮುಂದ ಹೊಂಟಾರಲ್ಲ ॥ ೩ ॥

ಧರಿಯೊಳಗಾದ ಬೆಳಕೇರಿ ಊರಾ
ಪೂರಾ ಪೂರಾ ಜಾತರಿ ನೆರದಾದ ನೋಡಾ
ಬ್ಯಾಸರದಿಂದ ಸಂಸಾರ ಮಾಡಿ
ಕೂಸು ತುಕಾರಾಮನ ಗೂಡಿ ಹೋಗದು ಪಾಡಾ ॥ ೪ ॥

ಬಟ್ಟೆ ತೊಟ್ಟು ಬಂದೀನಲ್ಲ

ಬಟ್ಟೆ ತೊಟ್ಟು ಬಂದೀನಲ್ಲ
ಖೊಟ್ಟಿ ಖಮೀಸ ಕೆಳಗ ಖುಲ್ಲ ॥ ಪ ॥


ಉಟ್ಟು ನಾನು ತಿರುಗಿದೆನಲ್ಲ
ಲಕ್ಷದ ಮ್ಯಾಲ ಚೌರ್‍ಯಾಂಸಿ ಜಲ್ಮ
ಲಕ್ಷ ಕೊಟ್ಟು ಒಗಿಯಲಿಲ್ಲ
ತಿಕ್ಕಿ ತಿಕ್ಕಿ ತೀಡಲಿಲ್ಲ ॥ ೧ ॥

ಸೂಟ ಬೂಟ ಅದಕ ಹಾಕೀನಲ್ಲ
ಥೇಟ ನೇಟ ಕಾಣುತಾದಲ್ಲ
ಬೆಲ್ಟ ಒಂದು ಕಟ್ಟಿದೆನಲ್ಲ
ಉಟ್ಟು ಬ್ಯಾಸರ ಬಂದೀತಲ್ಲ ॥ ೨ ॥


ಹರಿಯ ತನಕ ಉಡಲೇ ಬೇಕು
ಮುರಕ ಮಾಡುತ ನಡೆಯಲೇ ಬೇಕು
ಹರಕ – ಮುರಕ ಅಂಗಿ ತೊಟ್ಟು
ತಿರುಕನಂಗ ತಿರುಗಲು ಬೇಕು ॥ ೩ ॥

ಊರ ಮ್ಯಾಲ ಬೆಳಕೇರಿ ತಮ್ಮಾ
ಯಾರ ಗೊಡವಿ ನನಗಿಲ್ಲಮ್ಮ
ಸಾರಿದಾನು ಕವಿ ತುಕಾರಾಮ
ಹರಿದ ಬಟ್ಟೆ ಬಿಕಾಟು ತಮ್ಮ ॥ ೪ ॥

▯



ತುಕಾರಾಮ ಅವರ ಮನೆ (ಬೆಳಕೇರಾ).



ತುಕಾರಾಮ ಅವರ ಸಮಾಧಿ.

೭. ಗುರುಪಾದಪ್ಪ ಶಿವರೆಡ್ಡಿ (ಕ್ರಿ.ಶ.ಸು. ೧೮೮೫-೧೯೮೦)

ಬೀದರ ಜಿಲ್ಲೆಯ ಹುಮನಾಬಾದ ತಾಲ್ಲೂಕಿನಲ್ಲಿ ಬರುವ ಗ್ರಾಮ ಹುಡಗಿ-ಎಂಬುದು ಕರಿಬಸವೇಶ್ವರರಂತಹ ಆಧ್ಯಾತ್ಮ ಸಾಧಕರಿಂದ ಹೆಸರುಗೊಂಡಿದೆ. ಈ ಗ್ರಾಮದಲ್ಲಿ ಗುರುಪಾದಪ್ಪನವರು ಒಬ್ಬ ತತ್ತ್ವಪದಕಾರರಾಗಿ ಬಾಳಿರುವುದರಿಂದ ಅದಕ್ಕೆ ಇನ್ನೊಂದು ಶ್ರೇಯಸ್ಸು ದಕ್ಕಿದಂತಾಗಿದೆ.

ಗುರುಪಾದಪ್ಪನವರ ತಂದೆ ಬಸಪ್ಪನವರು. ಸದಾಚಾರ-ಸದ್ವಿಚಾರ ಸಂಪನ್ನರು. 'ಶಿವರೆಡ್ಡಿ' ಎಂಬುದು ಅವರ ಮನೆತನದ ಹೆಸರು. ಅದರ ಮೇಲೆಯೇ ಗುರುಪಾದಪ್ಪನವರ ಹಿರಿಯರು ಶಿವಭಕ್ತಿ ಸಂಪನ್ನರಾಗಿದ್ದರೆಂದು ಹೇಳಬಹುದು. ಬಸಪ್ಪನವರು ಕಟ್ಟಾ ಆಸ್ತಿಕ ಮನದ ವ್ಯಕ್ತಿಗಳು. ತಂದೆಯ ಗುಣಗಳನ್ನು ಮೈವೆತ್ತಂತೆ ಗುರುಪಾದಪ್ಪನವರು ಕ್ರಿ.ಶ.ಸು. ೧೮೮೫ರಲ್ಲಿ ಜನ್ಮತಾಳಿದರು.

ಗುರುಪಾದಪ್ಪನವರ ಶಿಕ್ಷಣವು ಮೋಡಿ, ಮರಾಠಿ, ಕನ್ನಡ ಭಾಷೆಗಳಲ್ಲಿ ನಡೆಯಿತು. ಅದಕ್ಕಿಂತ ಹೆಚ್ಚಿನದನ್ನು ಅವರು ಬದುಕಿನ ವಿದ್ಯಾಲಯದಲ್ಲಿ ಅನುಭವ ಜ್ಞಾನದ ಶಿಕ್ಷಣ ಹೊಂದುವುದರಿಂದ ಪಡೆದುಕೊಂಡರು. ಶಿವರೆಡ್ಡಿ ಅವರ ಮನೆತನದ ಗುರುಗಳು ಹುಚ್ಚಯ್ಯ ಇಮ್ಮಡಿ ಮತ್ತು ಅವರ ಹಿರಿಯ ತಲೆಮಾರಿನವರು. ಮನೆಯ ದೇವರು ಕೇತಕಿ ಸಂಗಮೇಶ್ವರ.

ಶಿವರಡ್ಡಿಯವರ ಮನೆತನದ ಕಾಯಕವು ಕೃಷಿಯಾಗಿತ್ತು. ಮುಂದೆ ಗುರುಪಾದಪ್ಪನವರು ಅದೇ ಕಾಯಕವನ್ನು ಮುಂದುವರೆಸಿದರು.

ಗುರುಪಾದಪ್ಪನವರ ಸಂಸಾರಿಕ ಬದುಕು ಸುಖ-ಸಂತೋಷದಿಂದ ಕೂಡಿದ್ದಾಗಿತ್ತು. ಇದಕ್ಕೆ ಭಾಗಶಃ ಕಾರಣರಾಗಿದ್ದವರು ಅವರ ಪತ್ನಿ ಚೆನ್ನಮ್ಮನವರು. ಈ ದಂಪತಿಗಳಿಗೆ ಫಾಳೆಪ್ಪ ಎಂಬುವರು ಮಗ ಮತ್ತು ಗಂಗಮ್ಮ, ಮಡೆಮ್ಮ, ಸಿದ್ಧಮ್ಮ ಎಂಬ ಮೂವರು ಹೆಣ್ಣುಮಕ್ಕಳು.

ಇಂದು ಗುರುಪಾದಪ್ಪನವರ ಮಗ ಫಾಳೆಪ್ಪನವರು ಎಂಬತ್ತರ ಪ್ರಾಯದಲ್ಲಿದ್ದಾರೆ.

ಗುರುಪಾದಪ್ಪನವರಲ್ಲಿ ಸಮಾಜ ಸೇವೆಯ ಬಗೆಗೆ ತವಕವಿದ್ದಿತು. ಊರಿನ ಅಭಿವೃದ್ಧಿಯನ್ನು ಕುರಿತಂತೆ ಅವರಿಗೆ ಕಾಳಜಿಯಿದ್ದಿತು. ಹುಡುಗಿ ಗ್ರಾಮದ

ವಿಷಯಗಳನ್ನು ಗುರುಪಾದಪ್ಪನವರು ಆಮೂಲಾಗ್ರವಾಗಿ ಬಲ್ಲವರಾಗಿದ್ದರು. ಅವರು ಬಹುಭಾಷಾ ಪಂಡಿತರಾಗಿದ್ದರು

ಅವರ ಗಮನವು ಗ್ರಾಮದ ಹಿತದೆಡೆಗೆ ಇದ್ದಿತು. ಗ್ರಾಮಸ್ಥರಿಗೆ ಎಲ್ಲ ಹಂತದಲ್ಲಿಯೂ ಅವರ ಸಹಾಯಹಸ್ತವು ದೊರಕುತ್ತಿದ್ದಿತು. ಹೊಲ ಉಳುಮೆಗೆ ಹಚ್ಚುವುದಿದ್ದರೆ, ಹೊಲ-ಮನೆಗಳ ವಿಷಯದಲ್ಲಿ ವ್ಯಾಜ್ಯ ತಲೆದೋರಿದರೆ, ಸೋಡ ಚೀಟಿ ಕೊಡುವುದಿದ್ದರೆ- ಇಂತಹವುಗಳೆಲ್ಲ ಗುರುಪಾದಪ್ಪನವರ ಸಮ್ಮುಖಕ್ಕೆ ಬರುತ್ತಿದ್ದವು. ಆಗ ಅವರು ಅತ್ಯಂತ ಸಮಾಧಾನದಿಂದ ಅವುಗಳಿಗೆ ಬರಹರೂಪದ ಪರಿಹಾರವನ್ನು ಒದಗಿಸುತ್ತಿದ್ದರು.

ಗುರುಪಾದಪ್ಪನವರ ಮನೆಯೆಂದರೆ ಒಂದು ಅನುಭವ ಮಂಟಪವೇ ಆಗಿದ್ದಿತು. ಅವರು ಮೊದಲಿನಿಂದಲೂ ಸಜ್ಜನರ ಸತ್ಸಂಗದಲ್ಲಿರುತ್ತ ಬಂದವರು. ಸದ್ವಿಚಾರ-ಶಿವವಿಚಾರಗಳಲ್ಲಿ ಕಾಲಕಳೆಯುತ್ತಿದ್ದರು. ತಮ್ಮ ಗೆಳೆಯರನ್ನು ಸಂಗಮಿಸಿಕೊಂಡು ದಿನನಿತ್ಯ ಮನೆಯಲ್ಲಿ ಜ್ಞಾನಸಿಂಧು, ಶರಣರ ವಿಚಾರಧಾರೆ, ಮಂಜಪ್ಪನವರ "ಶರಣ ಸಂದೇಶ" ಇತ್ಯಾದಿ ವಿಷಯಗಳನ್ನು ಕುರಿತು ಚರ್ಚಿಸುತ್ತಿದ್ದರು. ಈ ಕಾರ್ಯವನ್ನು ಅವರು ಜೀವನಾಂತ್ಯದವರೆಗೂ ನಡೆಸಿಕೊಂಡು ಬಂದರು.

ಸ್ವಪ್ರಯತ್ನದಿಂದ ಕನ್ನಡದಲ್ಲಿ ಪಾಂಡಿತ್ಯವನ್ನು ಸಿದ್ಧಿಸಿಕೊಂಡಿದ್ದ ಗುರುಪಾದಪ್ಪನವರು ತಮ್ಮ ಊರಿನ ಪರಿಸರವನ್ನು ಕನ್ನಡಮಯವಾಗಿಸಿದರು. ಅನೇಕರಿಗೆ ಸ್ವತಃ ಶಿಕ್ಷಕರಾಗಿ ಕನ್ನಡವನ್ನು ಕಲಿಸಿದರು. ಸ್ತ್ರೀ ಶಿಕ್ಷಣಕ್ಕೆ ಅವರು ಬಹು ಮಹತ್ವ ನೀಡಿದರು.

ಗುರುಪಾದಪ್ಪನವರು ಸಾಮಾಜಿಕ ಸಮನ್ವಯದ ಚಿಂತಕರಾಗಿದ್ದರು. ಅವರಿಗೆ ಜಾತಿಭೇದ ಭಾವದಲ್ಲಿ ನಂಬುಗೆ ಇರಲಿಲ್ಲ. "ಮನುಷ್ಯರೆಲ್ಲ ಒಂದೇ" ಎಂದು ಹೇಳುತ್ತಿದ್ದರು. ಕ್ರಿ.ಶ. ೧೯೩೦ರಲ್ಲಿ ಆರಂಭವಾದ ಶುದ್ಧಿ ಸಂಘಟನೆಯ ಚಳುವಳಿಯಲ್ಲಿ ಸಕ್ರೀಯವಾಗಿ ಭಾಗವಹಿಸಿದ ಗುರುಪಾದಪ್ಪನವರು ಶುದ್ಧಾಚಾರಿಗಳಾದ ನ್ಯಾಮಾಜಿಯವರ ಮನೆತನಕ್ಕೆ ಸಮಾಜದಲ್ಲಿ ಸರಿಯಾದ ಸ್ಥಾನ ಒದಗಿಸಿಕೊಡಲು ಶ್ರಮಿಸಿದರು. ಆ ಮನೆತನದವರನ್ನು ಕೆಳಗಿನವರೆಂದು ಹೊರಗಿಡಲಾಗಿತ್ತು. ಗುರುಪಾದಪ್ಪನವರು ಮನೆತನದ ಸದಸ್ಯರಿಗೆ ವೀರಶೈವ ಸಂಸ್ಕಾರ ಕೊಡಿಸಿದರು. ಮನೆಯ ಸದಸ್ಯರಿಗೆಲ್ಲ ಲಿಂಗಧಾರಣೆ ಮಾಡಿಸಿದರು. ಶರಣ-ಸಂತರ ವಿಚಾರ ಧಾರೆಗಳನ್ನು ಬದುಕಿನಲ್ಲಿ ಅಳವಡಿಸಿಕೊಂಡು ಜೀವಿಸಿದ್ದ ಗುರುಪಾದಪ್ಪನವರು ಕ್ರಿ.ಶ. ೧೯೭೦ರಲ್ಲಿ ಲಿಂಗೈಕ್ಯರಾದರು. ಅವರ ಸಮಾಧಿ ಊರಿನ ಹೊರವಲಯದಲ್ಲಿದೆ. ಅವರು ಕಟ್ಟಿಸಿದ ವೆಂಕಮ್ಮನ ದೇವಾಲಯವು ಇಂದು ಭಕ್ತಿಯ ಕೇಂದ್ರವಾಗಿ ನಿಂತುಕೊಂಡಿದೆ.

ಗುರುಪಾದಪ್ಪನವರು ಹಲವಾರು ತತ್ತ್ವಪದಗಳನ್ನು ರಚಿಸಿದ್ದಾರೆ. ಅವುಗಳಿಗೆ ಅಂಕಿತವಾಗಿ 'ಆರೂಢ'ಯೆಂಬುದು ಇಟ್ಟು ಕೊಂಡಿರುವರು. ಇಲ್ಲಿ ಕೆಲವು ಹಾಡುಗಳನ್ನು ಕೊಡಲಾಗಿದೆ:

ಕರ್ತನೇ ಜಗಕ್ಕೆಲ್ಲಾ

ಪ್ರಥಮ ನಿರ್ಬೈಲಾ
ನಿತ್ಯಾನಂದ ಹಾನಲ್ಲಾ ॥ ಪ ॥

ಕರ್ತನೆ ಜಗಕೆಲ್ಲಾ
ಅವನ್ಹೊರ್ತು ಯಾರಿಲ್ಲಾ ॥ ೧ ॥

ಅವನಲ್ಲೆ ಹುಟ್ಟುವುದು ಅವನಲ್ಲೆ ಲೈಸುವುದು
ಅವನಿಂದಲೇ ಈ ಜಗವು ವಿಸ್ತಾರವು ॥ ೨ ॥

ಮೊದಮೊದಲು ಒಂದು ಆ ಮೇಲೆ ಎರಡು
ಮೂರು ಮೂರು ಕೂಡಿ ಮೂವತ್ತಾರು ॥ ೩ ॥

ಆಕಾಶ, ವಾಯು, ಅಗ್ನಿ, ಜಲ, ಪೃಥ್ವಿ, ಐದು
ಕೂಡಿ ಆಯ್ತು ಜಗವು ನಾನಾರೂಪ ॥ ೪ ॥

ನಾ ನಿನ್ನ ಶಿಶುವೋ ಕೊಡು ಎನಗೆ ಅರುವೋ
ಗರ್ವದಿಂದ ಮರವೊ ಆರೂಢನ ವರವೊ ॥ ೫ ॥

(ಭಜನಿ ಮಾಡಿ ಭವ ಗೆದಿ. ಪು.೧)

ಶಿವನಿನ್ನೊಳಗ

ಶಿವನ ತಿಳಿವದಕ
ಸುವಿಚಾರ ಬೇಕೋ

ಅನುಭವ ಸಂಗ ಬೇಕೋ
ಅಜ್ಞಾನ ಪಡಿವದೇಕೋ ॥ ೧ ॥

ಅಹಂಕಾರ ಅಳಿಬೇಕೋ
ಕಿಂಕರ ನಾಗಬೇಕೋ
ಪರೋಪಕಾರಕ್ಕಾಗಿ
ಪ್ರಾಣವ ಕೊಡಬೇಕೋ ॥ ೨ ॥

ತನ್ನ ಸುಖವನ್ನು
ಪರರಂತೆ ಬಗಿವವನು
ಅವನಿಗೆ ಪರಶಿವನು
ಎತ್ತಿಕೊಳ್ಳುವನು ॥ ೩ ॥

ದುಡಿದವಗ ಕೂಲಿ
ದುಡಿಯಲ್ದವಗದು ಝೋಲಿ
ಮಾಯದ ಮೂಲಿ
ತಿಳಿಯದೆ ಬೀಳ್ಬ್ಯಾಡರಿ ಝೋಲಿ ॥ ೪ ॥

ಆರೂಢ ಹೇಳಿದ ಮಾತು
ನಡಿ ಗುರುತಿಟ್ಟು
ಶಿವನಿಲ್ಲ ನಿನ್ಹೊರ್ತು
ಹುಡಕಬ್ಯಾಡೋ ಮರ್ತು ॥ ೫ ॥

(ಅದೇ– ಪು. ೫)

ಭವ ದಾಟುವ ಬಗೆ

ಹುಸಿ ಪಾಪದ ಮೂಲ, ದುರ್ಗುಣದ ಮೇಳ
ಒಯ್ದು ಹಾಕಿತಲ್ಲಿ ಯಮನ ಪಾಲಾ ॥ ೧ ॥

ಬೇಡಿತೆಂಬುದಾಶಾ, ಹಸಿದು ಸಾಯ್ವುದು ಲೇಸ
ದುಡಿದು ಜೀವನ ಸಂತೋಷ ಅವಗಿಲ್ಲ ಆದೇಶಾ ॥ ೨ ॥

ಶಿವ ಮಾಡಿದ ಆಟಾ । ನಗುತಾ ಮಾಡೋ ಥಾಟಾ
ನಗುನಗುತ ದಾಟೋ ಬಂದ ಸಂಕಟ ॥ ೩ ॥

ಸಂಚಿತ ತಂದದ್ದು ಪ್ರಾರಬ್ಧ ಭೋಗಿಸುವುದು
ಆಗಮದ ಬೀಜ ನೀ ಬಿಡೋ ಹುರಿದು ॥ ೪ ॥

ತಾನೇ ಆತ್ಮನೆಂದು । ದೃಢ ಮನ ಒಲದು
ಹುಟ್ಟು ಸಾವು ಅಳಿದು ಆರೂಢನ ಪಾದ ಹಿಡಿದು ॥ ೫ ॥

(ಅದೇ- ಪು.೯)

(ಈ ವಿವರಗಳನ್ನು ಗುರುಪಾದಪ್ಪನವರ ಮಗ ಫಾಳೆಪ್ಪ ಅವರು ನೀಡಿರುವರು.)


□




ಗುರುಪಾದಪ್ಪ ಶಿವರಡ್ಡಿ ಅವರ ಮನೆಯ ಮುಂಭಾಗದ ನೋಟ (ಹುಡಗಿ).




ಮನೆಯ ಒಳಾಂಗಣ.




ಗುರುಪಾದಪ್ಪನವರು ಉಪಯೋಗಿಸುತ್ತಿದ್ದ ಸಾಹಿತ್ಯ ಸಾಮಗ್ರಿಗಳು
ಮತ್ತು ಅವರ ಹಿರಿಯಮಗ ಘಾಳೆಪ್ಪ ಅವರು.




ಗುರುಪಾದಪ್ಪನವರ ಆರಾಧ್ಯ ಗುರುಗಳಾದ ಶ್ರೀ ಕರಿಬಸವೇಶ್ವರರ ಮಠ (ಹುಡಗಿ)



ಗುರುಪಾದಪ್ಪನವರು ಅಭಿವೃದ್ಧಿಪಡಿಸಿದ ವೆಂಕಮ್ಮನವರ ಮಂದಿರ (ಹುಡಗಿ)



ಮಂದಿರದ ಒಳನೋಟ



ಗುರುಪಾದಪ್ಪ ಶಿವರಡ್ಡಿ ಅವರ ಸಮಾಧಿ (ಹುಡಗಿ)

೭. ಹಣಮಂತರಾವ ಮಂಕಾಲ (ಕ್ರಿ.ಶ.ಸು. ೧೯೦೨-೧೯೮೫)

ಇಂದು ಚಿಟಗುಪ್ಪಾದಲ್ಲಿ ಮಂಕಾಲ ಅವರ ಮನೆತನದ ವಂಶಸ್ಥರಿದ್ದಾರೆ. ಅವರಲ್ಲಿ ಹಲವು ಜನರು ಆರ್ಥಿಕವಾಗಿ ಅತ್ಯಂತ ಉನ್ನತ ಸ್ಥಿತಿಯಲ್ಲಿದ್ದಾರೆ. ಮಂಕಾಲ ಹಣಮಂತರಾವ ಅವರು ಅಂದು ವಾಸವಾಗಿದ್ದ ಮನೆಯು ದೊಡ್ಡ ಬಂಗಲೆಯಾಗಿದೆ.

ಬೀದರ ಜಿಲ್ಲೆ; ಹುಮನಾಬಾದ ತಾಲ್ಲೂಕಿನ ಚಿಟಗುಪ್ಪಾ ಗ್ರಾಮವು ಶಿಲ್ಲಪ್ಪ ಕವಿಯನ್ನು ಹೊಂದಿದಂತೆ ಹಣಮಂತರಾವ ಮಂಕಾಲ ಅವರನ್ನು ತತ್ತ್ವಪದಕಾರರನ್ನಾಗಿ ಪಡೆದುಕೊಂಡಿದೆ. ಮಂಕಾಲರ ಮನೆತನವು ಕೋಮಟಿ ಜನಾಂಗಕ್ಕೆ ಸೇರಿದೆ. ಅವರು ಅತ್ಯಂತ ವ್ಯವಹಾರ ಕುಶಲ ಜನಾಂಗವಾಗಿರುವುದರಿಂದ ಆರ್ಥಿಕವಾಗಿ ಹೆಚ್ಚಾಗಿ ಶ್ರೀಮಂತರೇ ಆಗಿರುತ್ತಾರೆ.

ಹಣಮಂತರಾವ ಮಂಕಾಲ ಅವರು ಶ್ರೀಮಂತ ಕುಟುಂಬದಲ್ಲಿಯೇ ಜನಿಸಿದರು. ಅವರ ಜನ್ಮದ ದಿನಾಂಕವು ೨-೮-೧೯೦೨. ತಂದೆ ಶಿವರಾಮಪ್ಪ. ತಾಯಿ ತುಳಸಾಬಾಯಿ.

ಹಣಮಂತರಾವ ಮಂಕಾಲ ಅವರಿಗೆ ಸಂಗಣ್ಣ ಎಂಬ ಒಬ್ಬ ತಮ್ಮನೂ; ನೀಲಮ್ಮ ಎಂಬ ಒಬ್ಬ ಕಿರಿಯ ಸೋದರಿಯೂ ಇದ್ದಾರೆ.

ಹಣಮಂತರಾವ ಮಂಕಾಲ ಅವರ ಕಾಲಕ್ಕೆ ಚಿಟಗುಪ್ಪಾದಲ್ಲಿಯೇ ಒಳ್ಳೆಯ ಶಾಲೆಯಿದ್ದಿತು. ಗ್ರಾಮದ ಶಾಲೆಯಲ್ಲಿ ಹಣಮಂತರಾವ ಅವರ ವಿದ್ಯಾಭ್ಯಾಸವು ನಡೆಯಿತು. ಅವರು ಏಳನೆಯ ತರಗತಿಯವರೆಗೆ ಓದಿದರು. ಹಣಮಂತರಾವ ಅವರಿಗೆ ಶಂಕರ ಪರಾಂಜಪೆ ಎಂಬ ಶಿಕ್ಷಕರು ಗುರುವಾಗಿ ದೊರಕಿದರು. ಅವರು ಶಾಲೆಯ ಮುಖ್ಯೋಪಾಧ್ಯಾಯರೂ ಆಗಿದ್ದರು. ಹಣಮಂತ್ರಾಯರು ಕನ್ನಡ, ಹಿಂದಿ, ಉರ್ದು, ಮರಾಠಿ, ಇಂಗ್ಲೀಷ ಭಾಷೆಗಳನ್ನು ಸರಿಯಾಗಿ ಕಲಿತು ಕೊಂಡರು.

ಹಣಮಂತರಾವ ಅವರ ಮನೆತನಕ್ಕೆ ಒಂದು ನೂರು ಎಕರೆಗಳಷ್ಟು ಆಸ್ತಿಯಿದ್ದಿತು. ಇಂದಿಗೂ ಅವರ ಕೃಷಿ ವ್ಯವಸ್ಥೆ ಅತ್ಯಂತ ಭದ್ರವಾಗಿದೆ. ತೋಟಗಾರಿಕೆಯಿಂದ ಅವರಿಗೆ ಸಾಕಷ್ಟು ಕೃಷಿಯ ಆದಾಯವು ಬರುತ್ತದೆ. ಹಣಮಂತರಾವ ಅವರ ತಂದೆ ಕೃಷಿಕಾಯಕದೊಂದಿಗೆ ಬಡ್ಡಿ ವ್ಯವಹಾರ ಮಾಡುತ್ತಿದ್ದರು. ಹೀಗಾಗಿ ಅವರದು ಆಗರ್ಭ ಶ್ರೀಮಂತಿಕೆಯ ಕುಟುಂಬವೇ ಆಗಿದ್ದಿತು.

ಹಣಮಂತರಾಯರು ಪ್ರಾಪಂಚಿಕರಾಗಿದ್ದರೂ, ಅನುಭಾವಿಗಳಾಗಿ ಬೆಳೆದರು. ಅವರ ಪತ್ನಿ ಲಕ್ಷ್ಮೀಬಾಯಿ. ಅನ್ವರ್ಥಕಾರ್ಥದಲ್ಲಿ ಸಂಪತ್ತಿನ ದೇವತೆಯೇ ಆಗಿದ್ದರು. ಅವರು ಬಂದ ನಂತರ ಹಣಮಂತರಾವ ಅವರ ಶ್ರೀಮಂತಿಕೆ ಮತ್ತಷ್ಟು ಸಂವರ್ಧಿಸಿತು. ಈ ದಂಪತಿಗಳಿಗೆ ಒಟ್ಟು ಮೂವರು ಮಕ್ಕಳು. ಅವರಲ್ಲಿ ಅರುಣಾಚಲ, ತ್ರಯಂಬಕ ಎಂಬ ಇಬ್ಬರು ಗಂಡು ಮಕ್ಕಳು. ಸುಭದ್ರಾಬಾಯಿ ಎಂಬ ಒಬ್ಬಳು ಮಗಳು ಇದ್ದಾರೆ. ಹಿರಿಯ ಮಗ ಅರುಣಾಚಲ ಅವರು ಆಯುರ್ವೇದ ವೈದ್ಯರಾಗಿದ್ದಾರೆ. ತ್ರಯಂಬಕ ಅವರಿಗೆ ರಸಗೊಬ್ಬರದ ಅಂಗಡಿ ಇದ್ದು ಅವರು ವ್ಯಾಪಾರ ಮಾಡುತ್ತಲಿದ್ದಾರೆ.

ಹಣಮಂತರಾವ ಅವರ ಮನಸ್ಸು ಚಿಕ್ಕಂದಿನಿಂದಲೇ ಆಧ್ಯಾತ್ಮದತ್ತ ಒಲಿದಿತ್ತು. ಅವರು ದೈಹಿಕವಾಗಿ ಬೆಳೆದಂತೆ; ಅಂತರಂಗದಲ್ಲಿ ಆಧ್ಯಾತ್ಮಿಕ ಸತ್ವವೂ ಬೆಳೆಯ ತೊಡಗಿತು. ಅವರು ಕ್ಷಣ ಕ್ಷಣಕ್ಕೂ ದೇವರ ನಾಮಗಳನ್ನು ನುಡಿಯುತ್ತಿದ್ದರು. ಆಂಧ್ರ ಪ್ರದೇಶದ ಜಹಿರಾಬಾದ ಪಟ್ಟಣದಲ್ಲಿದ್ದ ಶಿವರಾಮ ಮಹಾರಾಜರು ಹಣಮಂತರಾವ ಅವರ ಆಧ್ಯಾತ್ಮಿಕ ಗುರುಗಳು. ಅವರು ಹಣಮಂತ ಅವರಿಗೆ ವೈದಿಕ ದೀಕ್ಷೆಯನ್ನು ಅನುಗ್ರಹಿಸಿದರು. ಗುರುಗಳ ಆಶ್ರಯದಲ್ಲಿ ಅವರು ಹಲವಾರು ಆಧ್ಯಾತ್ಮಿಕ ಗ್ರಂಥಗಳನ್ನು ಓದಿದರು. ಆಧ್ಯಾತ್ಮಿಕ ತತ್ತ್ವಗಳನ್ನು ಅರಗಿಸಿಕೊಂಡರು.

ಗುರುಕರುಣೆಯಾದಂದಿನಿಂದ ಹಣಮಂತರಾವ ಅವರು ದಿನನಿತ್ಯ ಎರಡು ಸಲ ಸ್ನಾನ ಮಾಡತೊಡಗಿದರು. ಎರೆಮಣ್ಣಿನಿಂದ ಲಿಂಗವನ್ನು ತಯ್ಯಾರಿಸಿ, ಅದನ್ನು ಎರಡು ಹೊತ್ತು ಪೂಜಿಸುತ್ತಿದ್ದರು. ಶಿವ-ರಾಮ-ಕೃಷ್ಣರ ಬಗೆಗೆ ಅಪಾರ ಭಕ್ತಿಯನ್ನು ಅವರು ಬೆಳೆಯಿಸಿಕೊಂಡರು. ಭಕ್ತಿಗೀತೆಗಳನ್ನು ಕಲಿತುಕೊಂಡರು. ಮನೆಯ ಮಹಡಿಯ ಮೇಲೆ ಕುಳಿತು ಅವರು ದಿನನಿತ್ಯ ಏಕತಾರಿ ನುಡಿಸುತ್ತ ಭಕ್ತಿ ಗೀತೆಗಳನ್ನು ಹಾಡುತ್ತಿದ್ದರು.

ಹಣಮಂತರಾವ ಅವರು ಕೆಲವು ಕಾಲ ಸಂಚಾರ ಕೈಕೊಂಡರು. ತಮ್ಮ ಸಂಚಾರದಲ್ಲಿ ಅವರು ಹನ್ನೆರಡು ಜ್ಯೋತಿರ್ಲಿಂಗಗಳ ದರುಶನ ಪಡೆದರು. ದಾರಿಯಲ್ಲಿ ಸಿಕ್ಕ ಗ್ರಾಮದ ಭಕ್ತರಿಗೆ ಪ್ರವಚನದ ಮೂಲಕ ದೈವೀ ಮಹತ್ವವನ್ನು ಮನಗಾಣಿಸಿಕೊಟ್ಟರು. ಹೀಗಾಗಿ ಹಣಮಂತರಾವ ಅವರಿಗೆ ನೂರಾರು ಜನ ಶಿಷ್ಯರಾದರು. ಹಣಮಂತರಾವ ಅವರು ರಾಮ-ಕೃಷ್ಣ-ಹನುಮಾನ ಜಯಂತಿಗಳ ಆಚರಣೆಗೆ ಆರಂಭ ಮಾಡಿದರು. ಅವುಗಳನ್ನು ವೈಭವದಿಂದ ನಡೆಸತೊಡಗಿದರು.

ಹೀಗೆ ಹಲವಾರು ಸಾಂಸ್ಕೃತಿಕ ಕಾರ್ಯ ಸಾಧನೆಗಳಿಂದ ಆಧ್ಯಾತ್ಮದ ಚೇತನವಾಗಿ ಬೆಳೆದು ನಿಂತ ಹಣಮಂತರಾವ ಅವರಲ್ಲಿ ಹಲವಾರು ಆಧ್ಯಾತ್ಮದ ಹಾಡುಗಳು ಸಹಜವಾಗಿ ಹುಟ್ಟುವುದಕ್ಕೆ ಆರಂಭವಾದವು. ಹಣಮಂತರಾವ ಅವರು ಒಬ್ಬ ಆಧ್ಯಾತ್ಮ-ಅನುಭಾವದ ಕವಿಗಳಾದರು. ಅವರು ಕನ್ನಡ-ಹಿಂದಿ-ಮರಾಠಿ ಭಾಷೆಗಳಲ್ಲಿ ಹಲವಾರು

ಪದ್ಯಗಳನ್ನು ರಚಿಸಿದ್ದಾರೆ. ಅವರ ಶಿಷ್ಯರು ಇಂದು ಪದ್ಯಗಳನ್ನು ಹಾಡುತ್ತಾರೆ. ಅವರು ಹಲವು ನಾಟಕಗಳನ್ನು ರಚಿಸಿದ್ದಾರೆ. ಕಲಬುರ್ಗಿ ಜಿಲ್ಲೆ ಚಿಂಚೋಳಿ ತಾಲ್ಲೂಕಿನಲ್ಲಿ ಬರುವ ಚೆನ್ನೂರು ಗ್ರಾಮದಲ್ಲಿ ಹಣಮಂತರಾವ ಅವರ ಆತ್ಮೀಯ ಗೆಳೆಯ ಮಂಡಲಿಕಪ್ಪ ಕಂಬಾರ ಎಂಬುವರು ಇದ್ದರು.

ಹಣಮಂತರಾವ ಅವರು ಆಗಾಗ ಮಂಡಲಿಕಪ್ಪನವರೊಡನೆ ಅನುಭಾವ ಗೋಷ್ಠಿಗಾಗಿ ಚೆನ್ನೂರಿಗೆ ಹೋಗುತ್ತಿದ್ದರು. ಇಂದು ಅವರು ಇಲ್ಲ. ಅವರ ಮಗ ಪಿರೋಜಿ ಅವರು ಹಣಮಂತರಾವ ಅವರ ಸಾಹಿತ್ಯ ಸಂಗ್ರಹಿಸಿ ಇಟ್ಟುಕೊಂಡಿದ್ದಾರೆ. ಪ್ರಕಟಿಸುವ ಯೋಚನೆಯಲ್ಲಿದ್ದಾರೆ.

ಹಣಮಂತರಾವ ಅವರು ದಿ. ೨೬-೪-೧೯೮೫ರಂದು ನಿಧನ ಹೊಂದಿದರು. ಅವರ ಸಮಾಧಿಯು ಇಂದು ಅವರ ತೋಟದಲ್ಲಿ ಕಾಣಬಹುದಾಗಿದೆ.

ಹಣಮಂತರಾವ ಅವರು 'ನಿಜಾನಂದ' ಎಂಬ ಮುದ್ರಿಕೆಯಲ್ಲಿ ತತ್ತ್ವಪದಗಳನ್ನು ಬರೆದಿರುವರು. ಅವರ ಎರಡು ಪದ್ಯಗಳನ್ನು ಇಲ್ಲಿ ಕೊಡಲಾಗಿದೆ:

ಕೋಗಿಲೆ ಹಾಡಿತು

ಕೋಗಿಲೆ ಹಾಡುತಾದೋ ಮನುಜಾ
ಶಿವ-ರಾಮ-ಕೃಷ್ಣ ನಾಮ ನುಡಿಯುತಾದೋ ॥ ಪ ॥

ಹೊರಗಿನ ಕಣ್ಣಿಗೆ ಕಾಣದ ಕೋಗಿಲೆ
ಅರಗಿನ ಬಣ್ಣದ ಕಾಣದ ಕೋಗಿಲೆ
ಮರಗಿ ಮರುಗಿ ನೋಡಿದರ ಕಾಣದ ಕೋಗಿಲೆ
ಪರಮಾತ್ಮನ ನಾಮ ನುಡಿಯುವ ಕೋಗಿಲೆ ॥ ೧ ॥

ರಾಮನನ್ನು ಹೊಟ್ಟೆಯಲ್ಲಿ ಇಟ್ಟು ಕೊಂಡ ಕೋಗಿಲೆ
ಪ್ರೇಮ ಕೃಷ್ಣನನ್ನು ಧರಿಸಿರುವ ಕೋಗಿಲೆ
ಕಾಮ ರಹಿತವಾದ ಸಂಪ್ರೀತಿ ಕೋಗಿಲೆ
ನೇಮಾದಿ ದೇವ ಭಕ್ತಿ ಆಚರಿಪ ಕೋಗಿಲೆ ॥ ೨ ॥

ಆತ್ಮದ ಕೋಗಿಲೆ ಅದು ನೋಡು ಮನುಜಾ
ಸ್ವಾತ್ಮದಿಂದಲೇ ನೀನು ಕಂಡುಕೋ ಮನುಜಾ

'ನಿಜಾನಂದ' ದಲ್ಲಿ ನಿಂತು ಕೋಗಿಲೆ ನಾದ ಕೇಳು ಮನುಜಾ
ಸಹಜಾನಂದವು ಹೊಂದು ನೀನು ಮನುಜಾ ॥ ೩ ॥

ಬಿನ್ನಹ

ನಿಮ್ಮಯ ಪಾದಗಳಲಿ ನಮಿಸುವೆ ನಾನು
ಒಮ್ಮೆ ಯಾದರೂ ದರುಶನ ಕರುಣಿಸು ನೀನು ॥ ಪ ॥


ಭಕ್ತಿ ಭಾವದಿಂದ ಮಣಿಯಲು ಬಂದೆ
ಭಕ್ತನಾಗಿ ನಿನ್ನ ಸನ್ನಿಧಿಗೆ ಸಂದೆ
ಯುಕ್ತನಾಗಿ ಬಿನ್ನಹ ಮಾಡುವೆನು
ಮುಕ್ತಿಪದವ ಕರುಣಿಸೆಂದು ಬೇಡುವೆನು ॥ ೧ ॥

ನಿಮ್ಮ ಉಪದೇಶವು ನನಗೆ ಜ್ಞಾನ ನೀಡಿತು
ನಿಮ್ಮ ದರುಶನ ನನಗೆ ದೇವರ ತೋರಿಸಿತು
ನಿಮ್ಮ ದಾರಿ ನನಗ ಮೋಕ್ಷದ ದಾರಿಯಾಯಿತು
ನಿಮ್ಮ ಸನ್ನಿಧಾನವ ರಾಮ ಪಥವಾಯಿತು ॥ ೨ ॥

ನಿಮ್ಮ ಸೇವೆಯಲಿ ನನ್ನ ಬದುಕು ಸವೆಯಲಿ
ನಿಮ್ಮ ಧ್ಯಾನದಲಿ ನನ್ನ ಮನವು ನಿಲ್ಲಲಿ
ನಿಮ್ಮ ಸ್ತೋತ್ರ ಕೇಳಿ ಕಿವಿ ಪಾವನವಾಗಲಿ
ನಿಮ್ಮ ಮೂರ್ತಿಕಂಡು ಕಣ್ಣು ತಣಿಯಲಿ ॥ ೩ ॥

ನಾನು ನಿಮ್ಮ ಪಾದದಲಿ ಮಾಡುವ ಬಿನ್ನಹ
ಇನ್ನು ಬಿಡಸಯ್ಯ ಭವದ ಸನ್ನೆಯ
'ನಿಜಾನಂದ'ವ ಕರುಣಿಸು ಎನಗೆ
ಸಹಜಾನಂದದ ಬೆಳಕು ತೋರು ನನಗೆ ॥ ೪ ॥


(ಈ ವಿವರಗಳನ್ನು ಕವಿಗಳ ಮಗನಾದ ಡಾ. ಅರುಣಾಚಲ ಅವರು ನೀಡಿದ್ದಾರೆ.)



ಹಣಮಂತರಾವ ಮಂಕಾಲ ಅವರ ಮನೆ (ಚಿಟಗುಪ್ಪಾ)



ಹಣಮಂತರಾವ
ಮಂಕಾಲ ಅವರ
ಛಾಯಾ ಚಿತ್ರ,



ಹಣಮಂತರಾವ
ಮಂಕಾಲ ಅವರ
ಸಮಾಧಿ (ತೋಟದಲ್ಲಿದೆ.)

೮. ತಿಪ್ಪಣ್ಣ ಯಾದೇಲಿ (ಕ್ರಿ.ಶ.ಸು. ೧೯೦೫–೧೯೯೫)

ಬೀದರ ಜಿಲ್ಲೆಯ ಹುಮನಾಬಾದ ತಾಲ್ಲೂಕಿನಲ್ಲಿ ಬರುವ ಗ್ರಾಮ ಚಿನಕೇರಾವು ತಿಪ್ಪಣ್ಣ ಯಾದೇಲಿ ಅವರ ಸ್ವಗ್ರಾಮವಾಗಿದೆ. ಇವರು ಕೋಳಿ ಸಮಾಜಕ್ಕೆ ಸೇರಿದವರಾಗಿದ್ದಾರೆ.

ತಿಪ್ಪಣ್ಣನವರ ತಂದೆ ಹಣಮಂತ ಯಾದೇಲಿ. ಕೃಷಿ ಕಾಯಕ ಮಾಡಿ ಜೀವನ ನಿರ್ವಹಿಸುತ್ತಿದ್ದ ಬಡತನದ ವ್ಯಕ್ತಿ. ಅವನ ಹೆಂಡತಿ ಕಮಲಮ್ಮ. ಗಂಡ–ಹೆಂಡತಿ ಕೂಡಿಯೇ ದುಡಿದು ಮನೆಯ ಸಂಸಾರ ನಡೆಸುತ್ತಿದ್ದರು. ಹಣಮಂತ ಯಾದೇಲಿ ಅವರು ದೈವಭಕ್ತರಾಗಿದ್ದರು. ಊರಿನ ಗ್ರಾಮದೇವತೆಯಾದ ಭವಾನಿಯಲ್ಲಿ ಭಕ್ತಿವುಳ್ಳವರಾಗಿದ್ದರು. ಭವಾನಿಯ ಹೆಸರಿನಲ್ಲಿ ಒಂದು ಭಜನೆಯ ಸಂಘ ಕಟ್ಟಿಕೊಂಡು ಭಜನೆ ಮಾಡುತ್ತಿದ್ದರು. ತಂದೆಯ ಈ ಪ್ರವೃತ್ತಿಯು ತಿಪ್ಪಣ್ಣವರಲ್ಲಿ ಇಳಿದು ಬಂದಿತೆನ್ನಬೇಕು.

ತಿಪ್ಪಣ್ಣ ಯಾದೇಲಿ ಅವರು ಹುಟ್ಟಿದ್ದು ಕ್ರಿ.ಶ.ಸು. ೧೯೦೫ರ ವರ್ಷದಲ್ಲಿ. ಅವರಿಗೆ ಶಾಲೆಗೆ ಹೋಗುವ ಅವಕಾಶವು ದೊರೆಯಲಿಲ್ಲ. ನಿರಕ್ಷರಿಯಾಗಿಯೇ ಬೆಳೆದರು. ತಂದೆಯೊಡನೆ ಹೊಲದ ಕೆಲಸಗಳಿಗೆ ಹೋಗ ತೊಡಗಿದರು. ಹೀಗಾಗಿ ಅವರಿಗೆ ಕೃಷಿಕಾಯಕದ ಪರಿಚಯವಾಗತೊಡಗಿತು. ಹಾಗೆಯೇ ತಂದೆಯ ಹಾಡುಗಾರಿಕೆಯ ಹವ್ಯಾಸವೂ ಬಾಲಕ ತಿಪ್ಪಣ್ಣನಲ್ಲಿ ಚಿಗುರಾಗಿ ಮೊಳೆಕೆಯೊಡೆಯ ತೊಡಗಿತು. ಅವನು ಆಗಾಗ ತಂದೆಯೊಡನೆ ಭಜನೆಗೆ ಹೋಗಿ, ತಾಳಬಾರಿಸುತ್ತ ಹಾಡುತ್ತಿದ್ದುದುಂಟು. ತಂದೆಗೆ ಮಗನ ಹಾಡುಗಾರಿಕೆ ಹರುಷವನ್ನುಂಟು ಮಾಡುತ್ತಿದ್ದಿತು. ಅವನು ಮಗನ ಹಾಡುವಿಕೆಗೆ ಧಾರಳವಾಗಿ ಪ್ರೋತ್ಸಾಹ ನೀಡಿದನು.

ತಿಪ್ಪಣ್ಣ ಯಾದೇಲಿ ಅವರು ಸಂಸಾರಸ್ಥರಾಗಿ ಕೃಷಿಕಾಯಕವನ್ನೇ ಮಾಡತೊಡಗಿದರು. ಸಮಯ ಸಿಕ್ಕಾಗಲೆಲ್ಲ ಭಜನೆಗಳಿಗೆಂದು ತಿರುಗಾಟ ಮಾಡುತ್ತಿದ್ದರು. ಅವರ ಪತ್ನಿ ರತ್ನಮ್ಮ. ಗಂಡನು ಭಜನೆಗೆಂದು ಹೋದರೆ ಮನೆಯ ಜವಾಬ್ದಾರಿಯು ರತ್ನಮ್ಮನವರೇ ನಿರ್ವಹಿಸುತ್ತಿದ್ದರು. ಈ ದಂಪತಿಗಳಿಗೆ ಇಬ್ಬರು ಗಂಡು ಮಕ್ಕಳಿದ್ದರು. ಹಿರಿಯಮಗ ಶರಣಪ್ಪ; ಕಿರಿಯ ಮಗ ಹಣಮಂತ. ತಿಪ್ಪಣ್ಣನವರು ತಮ್ಮ ತಂದೆಯ ಹೆಸರನ್ನೇ ಎರಡನೆಯ ಮಗನಿಗೆ ಇಟ್ಟರು. ಕಾಲಾಂತರದಲ್ಲಿ ಇಬ್ಬರೂ ತೀರಿ ಕೊಂಡರು. ಈಗ

ಉಳಿದು ಕೊಂಡಿರುವವರು ಶರಣಪ್ಪನ ಸೊಸೆ ಮಾತ್ರ. ಶರಣಪ್ಪನಿಗೆ ಒಬ್ಬ ಮಗನಿದ್ದನು. ಈಗ ಅವನೂ ತೀರಿ ಕೊಂಡಿದ್ದಾನೆ. ಸೊಸೆ ಶಕುಂತಲಾ ತನ್ನ ಮೂರು ಜನ ಮಕ್ಕಳೊಂದಿಗೆ ಯಾದೇಲಿ ತಿಪ್ಪಣ್ಣನವರ ನೆನಪುಗಳನ್ನು ಕಾಪಿಟ್ಟುಕೊಂಡು ಜೀವಿಸುತ್ತಿದ್ದಾರೆ. ಅವರ ಬಂಧುಗಳು ಇದ್ದಾರೆ. ತಿಪ್ಪಣ್ಣನವರ ಅಳಿಯ ಹನುಮಂತ. ಅವನ ವಯಸ್ಸು ಈಗ ಸು. ಅರವತ್ತೈದು ವರುಷಗಳು. ಕಾಳಪ್ಪ ಅವರ ಇನ್ನೊಬ್ಬ ಅಳಿಯ, ಅವನ ವಯಸ್ಸು ಸು. ಅರವತ್ತಾರು ವರುಷಗಳು.

ಧುಮ್ಮನಸೂರಿನ ಸಿದ್ಧಪ್ರಭುಗಳ ಶಿಷ್ಯರಲ್ಲಿ ಈ ತಿಪ್ಪಣ್ಣ ಯಾದೇಲಿಯವರೂ ಒಬ್ಬರಾಗಿದ್ದರು. ಅವರು ಸಿದ್ಧಪ್ರಭುಗಳೊಡನೆ ಭಜನೆ ಮಾಡುತ್ತ ಊರಿಂದ ಊರಿಗೆ ಅಡ್ಡಾಡುತ್ತಿದ್ದರು. ತಿಪ್ಪಣ್ಣನವರ ಉತ್ತಾರಾರ್ಧದ ಬದುಕು ಸಿದ್ಧಪ್ರಭುಗಳ ಸತ್ಸಂಗದಿಂದ ಸಂಪೂರ್ಣ ಆಧ್ಯಾತ್ಮಮಯವಾಯಿತು. ಈವರೆಗೂ "ತಿಪ್ಪಣ್ಣ ಯಾದೇಲಿ" ಆಗಿದ್ದರು. ಈಗ ಜನರ ಬಾಯಲ್ಲಿ "ಸಾಧು ತಿಪ್ಪಣ್ಣ"ನವರಾದರು. ಸಿದ್ಧಪ್ರಭುಗಳೊಂದಿಗೆ ಅವರು ಸಾದಾ-ಸಂತ ಬದುಕನ್ನು ಬದುಕುತ್ತ; ಲೋಕದ ಬದುಕಿನತ್ತ ವಿಮುಖರಾಗಿ ಜನೋದ್ಧಾರದೆಡೆಗೆ ಮುಖಮಾಡಿ ಹೊರಟರು. ತಮ್ಮನ್ನು ತಿಪ್ಪಣ್ಣನವರು ಸಿದ್ಧಪ್ರಭುವಿನ ಪಾದಕ್ಕೆ ಸಂಪೂರ್ಣವಾಗಿ ಅರ್ಪಿಸಿಕೊಂಡರು. ಅವರ ಸೊಸೆ ಅವರು ತಮ್ಮ ಮನೆತನದ ಹಿರಿಯರಾದ ತಿಪ್ಪಣ್ಣನವರ ಬಗೆಗೆ ಹೀಗೆ ಹೇಳುತ್ತಾರೆ: "ಇಂದು ಚಿನಕೇರಾ ಗ್ರಾಮದ ಎಲ್ಲ ಜಾತಿ-ಮತ-ಪಂಥ-ಪಂಗಡದ ಜನರು ಹಿರಿಯರಾದ ತಿಪ್ಪಣ್ಣನವರ ಬಗೆಗೆ ಒಳ್ಳೆಯ ಭಾವನೆ ಹೊಂದಿದವರಾಗಿದ್ದಾರೆ. ಅವರ ಕಾರಣದಿಂದಲೇ ಎಲ್ಲರೂ ನಮ್ಮನ್ನು ಸದ್ಭಾವದಿಂದ ಕಾಣುತ್ತಾರೆ. ತಿಪ್ಪಣ್ಣನೆಂದರೆ ನಮ್ಮ ಊರನ್ನು ಮೆರೆಯಿಸಿದ ಸಾಧು ಕವಿಯೆಂದು ಅವರು ಮೆಚ್ಚುಗೆಯಿಂದ ನುಡಿಯುತ್ತಾರೆ. ಅವರು ಸಾಯುವ ಕಾಲಕ್ಕೆ ಮನೆ ಮಾರು ಎಲ್ಲವೂ ಬಿಟ್ಟರು. ಹಲವು ಕಾಲ ಧುಮ್ಮನಸೂರಿನಲ್ಲಿಯೇ ಇದ್ದರು. ಸಿದ್ಧಪ್ರಭುಗಳು ಸಂಚಾರದಲ್ಲಿದ್ದರೆ ಅವರೂ ಜೊತೆಯಲ್ಲಿ ಹೋಗುತ್ತಿದ್ದರು, ಸಂಚಾರಮಾಡುತ್ತಲೇ ಅವರು ಹಾಡುಗಳನ್ನು ಕಟ್ಟುತ್ತಿದ್ದರು. ಭಜನೆ ಮಾಡುವುದು ಅವರ ದೈನಂದಿನ ನೇಮವೇ ಆಗಿತ್ತು. ಅವರ ಅಂತಿಮ ಬದುಕು ವೈರಾಗ್ಯದ ಬದುಕೇ ಆಗಿತ್ತು".

ಯಾದೇಲಿ ತಿಪ್ಪಣ್ಣನವರು ಹಲವಾರು ತತ್ತ್ವಪದಗಳನ್ನು ಕಟ್ಟಿ ಹಾಡಿದ್ದಾರೆ. ಅವುಗಳಿಗೆ ತಮ್ಮ ಗುರು ಸಿದ್ಧ ಪ್ರಭುವಿನ ಮುದ್ರೆಯನ್ನು ಇರಿಸಿಕೊಂಡಿದ್ದಾರೆ. ಅವರ ಎರಡು ಹಾಡುಗಳನ್ನು ಇಲ್ಲಿ ಕೊಡಲಾಗಿದೆ:

ನಿನ್ನುಪಕಾರ ದೊಡ್ಡದು

ನಿನ್ನುಪಕಾರ ದೊಡ್ಡದು ಗುರುರಾಯ
ಗನ್ನಗತನವಿಲ್ಲದೆ ಕಳದೆಲ್ಲೊ ಮಾಯಾ ॥ ಪ ॥

ನೋಡ-ನೋಡೊದರೊಳಗ ಬಂದಿ
ಹಾಡ-ಹಾಡದರೊಳಗ ಬಂದಿ
ದೌಡ ಮಾಡಿ ಕೈಯ ಹಿಡದಿ
ನನಗ ಆದಿ ನೀನೆ ತಂದಿ ॥ ೧ ॥

ಆರು ಭ್ರಮಿ ಒಳಗ ನಾನು
ಖೂನಾ ಇಲ್ಲದೆ ಕೊರಗುತಿದ್ದೆನು
ಭಾನುವಾಗಿ ಬಂದಿ ನೀನು
ಸ್ವಾನುಭಾವ ನೀಡಿದೆ ನೀನು ॥ ೨ ॥

ಹೊರಗ ನಾನು ಹುಡುಕತಿದ್ದೆ
ಹೊರಗ ಅದ ಅಂತ ತಡಕುತಿದ್ದೆ
ಹೊರಗ ಇಲ್ಲ ಒಳಗ ಎಂದು
ಕರೆದು ತೋರಿದಿ ಶಿವನೆ ಇಂದು ॥ ೩ ॥

ನಿನ್ನ ಪಾದಕ ಶರಣ ಹೋದೆನು
ಚಿನ್ಮಯ ರೂಪನೆ ನಾನು ಆದೇನು
ಸಿದ್ಧ ಪ್ರಭುವು ನಾನೆ ಎಂದೆನು
ಬದ್ಧ ಭವವ ಹರಿದು ಒಗದೆನೋ ॥ ೪ ॥

ಜೀವ-ಶಿವ ಒಂದೆ

ಜೀವನು ಒಂದೇ
ಶಿವನು ಒಂದೇ
ಬೇರಿಲ್ಲ ತಮ್ಮಾ ತಿಳಿ ಮುಂದೆ ॥ ಪ ॥

ಜೀವನು ಶಿವನ ಕೂಡಲು ಬೇಕು
ಜೀವನು ಶಿವನ ಹಾಡಲು ಬೇಕು
ಜೀವನು ಸಾಧನ ಮಾಡಲು ಬೇಕು
ಜೀವನ ಸಾಧನೆ ನಡೆಯಲು ಬೇಕು ॥ ೧ ॥

ಅಜ್ಞಾನ ಕತ್ತಲೆ ಕಳೆಯಲು ಬೇಕು
ಜ್ಞಾನದ ಬೆಳಕು ಬೆಳಗಲು ಬೇಕು
ಜ್ಞಾನ ಮೂರುತಿ ನೀನಾಗ ಬೇಕು
ಅಜ್ಞಾನದ ಗೊಂದಲ ನೀಗಲು ಬೇಕು ॥ ೨ ॥


ಕಾಯದ ಕತ್ತಲಿ ದೂರಿರಬೇಕು
ಭಾವದ ಭ್ರಮಿಯ ಹರಿದಿರಬೇಕು
ಸಾವದು–ಹುಟ್ಟುದು ಮರೆತಿರಬೇಕು
ಜೀವನೆ ಶಿವನಾಗಿ ಕುಳಿತಿರಬೇಕು ॥ ೩ ॥

ಜೀವ–ಶಿವನು ಒಂದೇ ಎನಬೇಕು
ಜೀವದ ಜೋಲಿಯ ತಪ್ಪಿರಬೇಕು
ಜನನ–ಮರಣ ಸಂದಿರಬೇಕು
ಮೋಕ್ಷದ ಅಂಚಿಗೆ ಬಂದಿರಬೇಕು ॥ ೪ ॥

ಸಿದ್ಧ ಪ್ರಭುವಿನಲಿ ಧ್ಯಾನಿರಬೇಕು
ಗುರುವಿನ ಧ್ಯಾನವ ನಡೆದಿರಬೇಕು
ಶಿವಶಿವ ಮಂತ್ರವ ಜಪಿಸಲುಬೇಕು
ಶಿವನಾಗಿ ಮೋಕ್ಷಾ ಹೊಂದಿರಬೇಕು ॥ ೫ ॥

(ಕವಿಗಳ ಸಂಬಂಧಿಕರಾದ ಶಕುಂತಲಾ; ಕಾಶಪ್ಪ–ಹಣಮಂತ ಅವರು ಈ ವಿವರಗಳನ್ನು ನೀಡಿದ್ದಾರೆ.)


☐



ತಿಪ್ಪಣ್ಣ ಯಾದೇಲಿ ಅವರ ಮನೆ (ಚಿನಕೇರಾ).



ತಿಪ್ಪಣ್ಣ ಯಾದೇಲಿ ಅವರ ಸಂಬಂಧಿಗಳು



ತಿಪ್ಪಣ್ಣ ಯಾದೇಲಿ ಅವರ ಆರಾಧ್ಯ ದೇವರು ಭವಾನಿ ಗುಡಿ (ಚಿನಕೇರಾ)

೯. ಶಿಲ್ಲಪ್ಪ ಭೂತಾಳೆ (ಕ್ರಿ.ಶ.ಸು. ೧೯೦೬-೧೯೫೪)

ಬೀದರ ಜಿಲ್ಲೆಯ ಹುಮನಾಬಾದ ತಾಲ್ಲೂಕಿನಲ್ಲಿ ಬರುವ ಗ್ರಾಮ ಚಿಟಗುಪ್ಪಾ ಶಿಲ್ಲಪ್ಪ ಅವರ ಸ್ವಗ್ರಾಮವಾಗಿದೆ. ಈ ಗ್ರಾಮದಲ್ಲಿ ಭೂತಾಳೆ ಮನೆತನದವರು ಕೊಡ ಮಾಡುವುದನ್ನು ತಮ್ಮ ಕಾಯಕವಾಗಿಸಿಕೊಂಡು ಬಂದಿದ್ದರು. ಶಿಲ್ಲಪ್ಪ ಭೂತಾಳೆಯವರ ಅಜ್ಜಂದಿರಾದ ಮಲ್ಲಪ್ಪ ಮತ್ತು ಅಜ್ಜಿ ಸಾಯಬವ್ವಾ ಈ ದಂಪತಿಗಳು ಕೊಡ ಮಾಡುವ ಕಾಯಕದಿಂದಲೇ ತಮ್ಮ ಮಕ್ಕಳಾದ ಶಿವಪ್ಪ, ಗುಂಡಪ್ಪ, ನರಸಮ್ಮ, ಭೀಮಾವ್ವಾ ಎಂಬುವರನ್ನು ಸಲಹುತ್ತ ಬದುಕಿನ ನಿರ್ವಹಣೆ ಮಾಡುತ್ತಿದ್ದರು. ಮಲ್ಲಪ್ಪನ ಮಕ್ಕಳಾದರೂ ಅದೇ ವೃತ್ತಿಯನ್ನು ಮುಂದುವರೆಸಿದರು.

ಮಲ್ಲಪ್ಪನವರ ಹಿರಿಯ ಮಗನಾದ ಶಿವಪ್ಪನವರೇ ಶಿಲ್ಲಪ್ಪ ಕವಿಯ ತಂದೆ. ಶಿವಪ್ಪ-ಮಲ್ಲಮ್ಮ ದಂಪತಿಗಳಿಗೆ ಒಟ್ಟು ನಾಲ್ಕು ಜನ ಹೆಣ್ಣುಮಕ್ಕಳು; ಒಬ್ಬ ಗಂಡು ಮಗನಿದ್ದನು. ಈ ಮಗನೆ ಶಿಲ್ಲಪ್ಪ ಕವಿಗಳು. ಅವರು ಹುಟ್ಟಿದ ವರ್ಷ ಕ್ರಿ.ಶ.ಸು. ೧೯೦೬.

ಶಿಲ್ಲಪ್ಪನವರು ತಮ್ಮ ಜೀವನಾರಭ್ಯದ ದಿನಗಳನ್ನು ತಂದೆಯೊಡನೆ ಕೃಷಿ ಕಾಯಕಾದಿಗಳನ್ನು ನಿರ್ವಹಿಸುತ್ತಲೇ ಕಳೆದರು. ತಂದೆ-ತಾಯಿಗಳು ಮಗ ಶಿಲ್ಲಪ್ಪನವರನ್ನು ಅಕ್ಕರೆಯಿಂದಲೇ ಬೆಳೆಯಿಸತೊಡಗಿದರು.

ಶಿಲ್ಲಪ್ಪನವರಿಗೆ ಹದಿನೈದು ವರುಷಗಳ ವಯಸ್ಸು ತುಂಬುತ್ತಿರುವಾಗ ಬೆಳಕೇರಾ ಗ್ರಾಮದಲ್ಲಿದ್ದ ಅವರ ಅಕ್ಕನ ಗಂಡನು ಮೃತನಾದನು. ಹೀಗಾಗಿ ಅಕ್ಕನೊಡನೆ ಇರಲೆಂದು ತಂದೆ-ತಾಯಿಗಳು ಶಿಲ್ಲಪ್ಪನವರನ್ನು ಬೆಳಕೇರಾ ಗ್ರಾಮಕ್ಕೆ ಕಳುಹಿಸಿಕೊಟ್ಟರು. ಅಲ್ಲಿ ಈ ವರೆಗೂ ಅವರ ಮಾವನವರು ನಿರ್ವಹಿಸುತ್ತಿದ್ದ ಮಜಕುರಿ ಕೆಲಸವನ್ನು ಶಿಲ್ಲಪ್ಪನವರಿಗೆ ವಹಿಸಲಾಯಿತು. ಈ ಕೆಲಸದಿಂದ ಶಿಲ್ಲಪ್ಪನವರಿಗೆ ಆ ಗ್ರಾಮದ ಶ್ರೀನಿವಾಸ ಕುಲಕರ್ಣಿ ಅವರ ಸಂಪರ್ಕದೊರಕಿತು. ಕುಲಕರ್ಣಿ ಅವರು ಶಿಲ್ಲಪ್ಪನಿಗೆ ಒಳ್ಳೆಯ ಸಂಸ್ಕಾರ ದೊರಕುವಂತೆ ಮಾಡಿದರು. ಒಂದು ಸಲ ಕುಲಕರ್ಣಿಯವರೊಂದಿಗೆ ಆಂಧ್ರ ಪ್ರದೇಶದ ಸಾಧನ ಗಡ್ಡೆಯ ಪಾಂಡುರಂಗನ ದರ್ಶನಕ್ಕೆಂದು ಹೋದಾಗ, ಅಲ್ಲಿನ ಭಜನೆಯಿಂದ ಶಿಲ್ಲಪ್ಪನವರು ಆಕರ್ಷಿತರಾದರು. ಅವರಲ್ಲಿ ಪಾಂಡುರಂಗನ

ಬಗೆಗೆ ಅಪಾರ ಭಕ್ತಿಯೂ ಬೇರೂರಿತು. ಅಂದಿನಿಂದ ಹಾಡುವುದು-ಭಜನೆ ಮಾಡುವುದು ಶಿಲ್ಲಪ್ಪನವರ ಬದುಕಿನ ಅವಿಭಾಜ್ಯವಾದ ಅಂಗವಾಯಿತು. ದಿನನಿತ್ಯ ಬೆಳಗಿನಜಾವ ಭಜನೆ ಮಾಡುವುದು ಅವರ ಬಿಡದ ನೇಮವೂ ಆಯಿತು.

ಶ್ರೀನಿವಾಸ ಕುಲಕರ್ಣಿ ಅವರ ಸತ್ಸಂಗದಲ್ಲಿ ಶಿಲ್ಲಪ್ಪನವರಿಗೆ ಅಕ್ಷರಜ್ಞಾನವಾಯಿತು. ಮೋಡಿ ಲಿಪಿಯು ಅಕ್ಷರ ಜ್ಞಾನದ ಮಾಧ್ಯಮವಾಯಿತು. ಕನ್ನಡದೊಂದಿಗೆ ಮರಾಠಿ, ಹಿಂದಿ, ಉರ್ದು, ತೆಲಗು ಭಾಷೆಗಳು ಕರಗತವಾದವು.

ಹದಿನೆಂಟನೆಯ ವಯಸ್ಸಿಗೆ ಬರುವ ಹೊತ್ತಿಗೆ ಶಿಲ್ಲಪ್ಪ ಕವಿಗೆ ಸಾಹಿತ್ಯದೇವಿ ಒಲಿದಂತಾಯಿತು. ಹಲವಾರು ಪ್ರಕಾರದ ಹಾಡುಗಳು ಅವರ ಲೇಖನಿಯಿಂದ ಮೂಡಿದವು. ಶಿಲ್ಲಪ್ಪ ಕವಿಗಳು ಡಪ್ಪಿನ ಆಟವೂ ಬರೆದಂತೆ ತಿಳಿದು ಬರುತ್ತದೆ.

ಶಿಲ್ಲಪ್ಪನವರು ಸಂಸಾರಸ್ಥರು. ಅವರಿಗೆ ಮೂರು ಜನ ಹೆಂಡಂದಿರು. ಹದಿನೈದನೆಯ ವಯಸ್ಸಿನಲ್ಲಿಯೇ ಅವರ ಮದುವೆ ಖಾನಾಪುರದ ನಿಂಗಮ್ಮ ಎಂಬುವಳೊಡನೆ ನಡೆಯಿತು. ಈ ದಂಪತಿಗಳಿಂದ ಮಾಣಿಕಪ್ಪ-ಶಿವರಾಯ ಎಂಬ ಮಕ್ಕಳು ಜನಿಸಿದರು. ಏಳು ವರ್ಷಗಳ ದಾಂಪತ್ಯದ ನಂತರ ನಿಂಗಮ್ಮ ತೀರಿಕೊಂಡರು. ಎರಡನೆಯ ವಿವಾಹವು ಗಂಗಮ್ಮನೊಡನೆ ಆಯಿತು. ಗಂಗಮ್ಮನವರು ಶಾಂತಾಬಾಯಿ ಎಂಬ ಮಗಳಿಗೆ ಜನ್ಮ ನೀಡಿ ಇಹಲೋಕಯಾತ್ರೆ ಮುಗಿಸಿದರು. ಮೂರನೆಯ ಹೆಂಡತಿ ರತ್ನಮ್ಮ. ಇವರ ಹೊಟ್ಟೆಯಿಂದ ಸುಭಾಷ, ಸುಶೀಲಾ, ಶಕುಂತಲಾ, ಕಮಲಾ, ಶ್ರಾವಣ, ಅಮೃತ, ಶೋಭಾ ಎಂಬ ಮಕ್ಕಳು ಹುಟ್ಟಿದರು. ಶಿಲ್ಲಪ್ಪನವರ ಮಕ್ಕಳೆಲ್ಲ ಸುಶಿಕ್ಷಿತರಾಗಿದ್ದಾರೆ. ಅವರಲ್ಲಿ ಶಿವರಾಯ ಎಂಬುವವರು ಸೈನ್ಯದಲ್ಲಿ ಸೇರಿ ಸೇವೆ ಸಲ್ಲಿಸಿ ಈಗ ನಿವೃತ್ತಿಯಾಗಿದ್ದಾರೆ. ಸುಭಾಷ ಎಂಬುವವರು ಹೆಸರಾಂತ ವೈದ್ಯರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಶಿಲ್ಲಪ್ಪನವರು ಬದುಕಿನ ನಿರ್ವಹಣೆಗಾಗಿ ಹಲವಾರು ಕಾಯಕಗಳನ್ನು ಕೈಕೊಂಡರು. ಕೊಡ ಮಾಡುವುದು, ಮಜಕುರಿ ಕೆಲಸ, ಕೃಷಿ, ಗೌಂಡಿ ಕೆಲಸ, ಜೋಳದ ವ್ಯಾಪಾರ ಹೀಗೆ ಅವರು ಕೈಕೊಂಡ ಕಾಯಕ ಪ್ರಕಾರಗಳಾಗಿವೆ. ಏನೇ ಮಾಡಿದರು ಶಿಲ್ಲಪ್ಪನವರು ಪ್ರಾಮಾಣಿಕತೆಯಿಂದ ಮಾಡಿದರು; ಸತ್ಯ-ಶುದ್ಧತೆಯಿಂದ ಮಾಡಿದರು.

ಶಿಲ್ಲಪ್ಪನವರು ಸಮಾಜ ಸೇವಕರಾಗಿದ್ದರು; ವಿಚಾರಶೀಲ ಮನದವರಾಗಿದ್ದರು. ಅವರು ಆರ್ಯ ಸಮಾಜದ ಸದಸ್ಯರಾಗಿ ಹಲವಾರು ಸಮಾಜಹಿತ ಕಾರ್ಯ ಮಾಡಿದರು. ಅಂತರ್ ಜಾತಿ ವಿವಾಹಗಳನ್ನು ಪ್ರೋತ್ಸಾಹಿಸಿದರು. ತಮ್ಮ ಮಕ್ಕಳ ವಿವಾಹಗಳನ್ನು ವರದಕ್ಷಿಣೆಯಿಲ್ಲದೆ ಮಾಡಿದರು. ಶಿಲ್ಲಪ್ಪನವರು ಹಲವಾರು ಪ್ರಕಾರದ ನೂರಾರು ಹಾಡುಗಳನ್ನು ಬರೆದಿರುವರು. ಅವರೊಬ್ಬ ಉತ್ತಮ ನಟರೂ, ನಾಟಕ

ರಚಯಿತೃಗಳೂ ಆಗಿದ್ದರು. ಅವರು 'ಚಿತ್ರಸೇನ' ಎಂಬ ಹೆಸರಿನ ಡಪ್ಪಿನಾಟವನ್ನು ಸ್ವತಃ ಬರೆದು ಆಡಿಸಿದ್ದಾರೆ.

ಶಿಲ್ಲಪ್ಪ ಕವಿಗಳಲ್ಲಿದ್ದ 'ಆಶುಕವಿತ್ವ' ಶಕ್ತಿ ಅದ್ಭುತವಾದುದಾಗಿತ್ತು. ತಮ್ಮ ತತ್ತ್ವಪದಗಳಿಗೆ ಶಿಲ್ಲಪ್ಪನವರು 'ಶಿವದಾಸ' ಎಂಬ ಮುದ್ರಿಕೆಯನ್ನು ಇರಿಸಿಕೊಂಡಿರುವರು. ಅವರ ಕೆಲವು ತತ್ತ್ವಪದಗಳನ್ನು ಇಲ್ಲಿ ಕೊಡಲಾಗಿದೆ:

ದಯ ಬೇಕು

ಪ್ರೇಮ ಕೂಡಿದ ಮ್ಯಾಲೆ ಭಯವ್ಯಾಕ
ಬೊಗಳಿದರೆ ಬೊಗಳಲಿ ಜನಲೋಕ ॥ ಪ ॥

ಮನಸಿನ ಮಾತು ಮನದೊಳಗಿಟ್ಟು
ಮರಗುತ ತಿರಗುವ ಮನೆಮಾರು ಬಿಟ್ಟು
ಮಡದಿಯ ಮಕ್ಕಳ ಬಳಗವ ಬಿಟ್ಟು
ದುಡಿದಿರುವ ಪ್ರಭು ನಿನ್ನ ಪಾದಕ ॥ ೧ ॥

ಆದ ದಿಗಂಬರ ಅರವಿಯ ಬಿಟ್ಟು
ಅನ್ನ ನೀರಿಲ್ಲದೆ ನಿದ್ರಿಯ ಸುಟ್ಟು
ಅನುದಿನ ನಿನ ಧ್ಯಾನ ಮನದೊಳಗಿಟ್ಟು
ಕರಗಿಸುವ ಈ ಕಾಯವ ॥ ೨ ॥

ಈಸಿದ ನದಿಯೊಳು ನಿನ ನಂಬಿಗಿಟ್ಟು
ನೀ ಹೋಗಬ್ಯಾಡಯ್ಯಾ ಎನ್ನ ಕೈ ಬಿಟ್ಟು
ಪರದೇಶಿ ಬಂದೇನು ನಿನಗಾಗಿ ಹೊಂಟು
ಶಿವದಾಸನ ಮೇಲ ದಯಬೇಕು ॥ ೩ ॥

ಕಾಯ ಬಾರೊ

ದೇವ ಕರುಣಾದಿ ಕಾಯ ಬಾರೊ
ದೇವ ಕೃಪೆಯು ಬೇಗ ಬಾರೊ

ಭವ ಸಾಗರದಲಿ ನೂಕುವರೊ
ದಯ ಪಾಲಿಸಿ ಕೈ ಹಿಡಿಯ ಬಾರೊ ॥ ಪ ॥

ಆರು ವೈರಿಯವರೊ
ಜೋರಮಾಡಿ ಎಳಿವರೊ
ತೋರುವ ಅವರ ಹೆಸರೊ
ಬರಕೊಂಡ ಹಿಡಕೋರೊ
ಬರದಿದ್ದರೆ ಕೊಲ್ಲುವರೊ ॥ ೧ ॥

ಕಾಮ ಕಾಲ್ಹಿಡಿವರೊ
ಕ್ರೋಧ ಕೈ ಹಿಡಿವರೊ
ಮದ ಕಣ್ಮುಚ್ಚುವರೊ
ಮುಖದಲ್ಲೆ ಮತ್ತರೊ
ಈ ಪರಿಯ ಜಗ್ಗುವರೊ ॥ ೨ ॥

ಮೋಹ ಮುಂದ ಎಳಿವರೊ
ಲೋಭ ಹಿಂದ ಎಳಿವರೊ
ಹೊನ್ನ ಎನ್ನಲಿ ಮೂರೊ
ಚೆನ್ನಾಗಿ ಬಂದು ಕಳ್ಳರೊ
ಎನಗೆ ಕೊಲ್ಲಿ ಒಯ್ಯುವರೊ ॥ ೩ ॥

ತನು ಮನ ಧನ ಮೂರೊ
ನಿನ್ನಲ್ಲೆ ಇಟ್ಟುಕೋರೊ
ಇನ್ನಾರು ವೈರಿಯರು
ನಿನ್ನನೇನು ಮಾಡುವರೊ
ಬೆನ್ನಿಂದ ನೀ ಬೇಗ ಬಾರೊ ॥ ೪ ॥

ಶಿವದಾಸ ನಿಮ್ಮ ದ್ವಾರೊ
ಶಿವಾಸನ ಮಾಡುವರೊ
ದೋಷ ಮಾಡಯ್ಯ ದೂರೊ
ಮುಕ್ತಿ ಮಾರ್ಗವ ತೋರೊ
ಭಕ್ತರು ಬಡವರು ಬಾರೊ ॥ ೫ ॥

ಜೀವಣ್ಣ

ಪಂಚಾಂಗ ನೋಡಿಕೊಂಡ
ಅಂಗದೇವಿ ಹೆಣ್ಣಿನ ಕಂಡ
ಜೀವಣ್ಣ ಇವಳಗಂಡ
ಇಬ್ಬರು ಕೂಡಿಕೊಂಡ ॥ ಪ ॥

ಆರು ಮಕ್ಕಳು ಇವರಿಗೆ ಪುಂಡ
ಎರಡು ಹೆಣ್ಣು ನಾಲ್ಕು ಗಂಡು
ಲಗು ಅಂಗಡಿ ಮಾಡಿಕೊಂಡು
ಮಡಿದು ನಾಲ್ವರು ಮಾಡ್ಯಾರ ದಂಡ ॥ ೧ ॥

ತಾಯಿ ಅಳತಳ ನೆನಸಿಕೊಂಡ
ಮಣ್ಣಿಗಾಗಿ ಬೆಳದೇನೋ ದಂಡ
ನಡು ನೀರಿನೊಳು ಸಂಗಡ
ಅಗಲಿ ಮಾಡಿರಿ ಅಗಡ ॥ ೨ ॥

ಹೆಣ್ಣು ಮಕ್ಕಳು ಇಬ್ಬರು ಜೋಡ
ಹಂಗೇ ಉಳಿದಾರೋ ತಾಯಿ-ತಂದಿಗೂಡ
ನಾಲ್ವರಿಗೆ ಆಯಿತೋ ಕೇಡ
ಸತ್ತು ಸೇರಿ ಸುಡಗಾಡ ॥ ೩ ॥

ಪಂಚಾಂಗ ತತ್ತ್ವದ ಖಂಡ
ಅನುಭವದಿಂದ ತಿಳಿಕೊಂಡ
ಶಿವದಾಸ ಸಂತರ ಕಂಡ
ಶರಣಾಗಿ ಉರುಳ್ಯಾರ ದಿಂಡಾ ॥ ೪ ॥

ಆರು ಮಂದಿ

ಆರು ಮಂದಿ ಕಳ್ಳರ ಊರ ಒಳಗ ಹೊಕ್ಕಾರ
ದಾರ ಮಾಡಿ ಸಿಕ್ಕುವರ ಅತ್ಯಾಚಾರ ॥ ಪ ॥
ಐದು ಮಂದಿ ಪಂಚರ ಕರೆದು ಕೇಳಿ ಸದರ
ಊರಾಗಾದ ಖಟಕ ತಿಳಿಸಂದರಾ ॥ ೧ ॥

ನೋಡಿದವರು ಇಬ್ಬರ ಖಡಿ ಸುಮ್ಮನೆ ನಿಂತಾರ
ಕೇಳಿದವರು ಇಬ್ಬರು ಹೇಳೆವಲ್ಲರಾ ॥ ೨ ॥

ಐದನೆ ಪಂಚ ಚಾತುರ ಮಾಡಿದಾನೋ ಉಚ್ಚಾರ
ನೋಡಿಲ್ಲ, ಕೇಳಿಲ್ಲ ನಾನರ ಇದ್ದೇವಾಚಾರ
ಎಲ್ಲ ಬಲ್ಲ ಸದರ ಸಾಕ್ಷಿಯಿಲ್ಲ ಎದುರ
ಎಲ್ಲಾ ಶಿವದಾಸರ ಖುಲ್ಲಾ ಮಾಡ್ಯಾರ ॥ ೩ ॥

(ಈ ವಿವರಗಳನ್ನು ಕವಿಗಳ ಮಕ್ಕಳಾದ ಶ್ರೀ ಶಿವರಾಯ ಅವರು ನೀಡಿದ್ದಾರೆ.)

□



ಶಿಲ್ಲಪ್ಪ ಭೂತಾಳೆ
ಅವರ ಮನೆ
(ಚಿಟಗುಪ್ಪಾ)



ಶಿಲ್ಲಪ್ಪನವರ ಎರಡನೆಯ ಮಗ ಶಿವರಾಯ (ಮಾಜಿ ಸೈನಿಕ)



ಶಿಲ್ಲಪ್ಪ ಭೂತಾಳೆ



ಶಿಲ್ಲಪ್ಪ - ರತ್ನಮ್ಮ
(ದಂಪತಿಗಳು).



ಶಿಲ್ಲಪ್ಪನವರ ಮಗ - ಸೊಸೆಯವರಾದ ಡಾ.ಸುಭಾಷ ಹಾಗೂ ಅವರ ಪತ್ನಿ
ಶಾಂತಾ ದಂಪತಿಗಳು

೧೧. ಮಲ್ಲಪ್ಪ ಮೈಲಾರ (ಕ್ರಿ.ಶ.ಸು. ೧೯೧೦-೧೯೯೦)

ಮಲ್ಲಪ್ಪನವರ ಮೂಲಸ್ಥಲ ಮೈಲಾರ ಗ್ರಾಮ. ಅವರ ಹಿರಿಯರು ಕಾರಣಾಂತರದಿಂದ ಆ ಗ್ರಾಮವನ್ನು ಬಿಟ್ಟು ಡಾಕುಳಗಿಗೆ ಬಂದು ನೆಲೆಸಿದರು. ಈ ಗ್ರಾಮದ ಜನರು ಮಲ್ಲಪ್ಪನ ಹಿರಿಯರನ್ನು "ಮೈಲಾರದ ಮನೆತನ"ದವರೆಂದೇ ಕರೆದು ಗುರುತಿಸ ತೊಡಗಿದರು. ಹೀಗಾಗಿ ಮಲ್ಲಪ್ಪನವರು ಮೈಲಾರಯೆಂಬ ಅಡ್ಡ ಹೆಸರನ್ನು ಪಡೆದುಕೊಂಡರು.

ಬೀದರ ಜಿಲ್ಲೆಯ ಹುಮನಾಬಾದ ತಾಲ್ಲೂಕಿನಲ್ಲಿ ಬರುವ ಡಾಕುಳಗಿ ಗ್ರಾಮದ ಮಲ್ಲಪ್ಪ ದಲಿತ ಜನಾಂಗ (ಮಾದಾರ)ಕ್ಕೆ ಸೇರಿದವರು.

ಮಲ್ಲಪ್ಪನವರ ತಂದೆ ನರಸಪ್ಪನವರು ಬಡತನದ ಬದುಕಿನಲ್ಲಿಯೇ ಪ್ರಾಮಾಣಿಕ ಕೃಷಿಕರಾಗಿ ಬದುಕಿದ್ದವರು. ಆದರಿಂದಲೇ ಹಾಡುಗಾರಿಕೆಯನ್ನು ಮೈಗೂಡಿಸಿಕೊಂಡು ಮೇಲೆದ್ದವರು. ಅವರ ಹಾಡುಗಾರಿಕೆಯೆಂದರೆ ನಾಲ್ಕು ಹಳ್ಳಿಗಳ ಜನರ ಬಾಯಲ್ಲಿ ನಲಿದಾಡುವಂತಿದ್ದಿತು. ಹೀಗಾಗಿ ಬಡತನದ ಬದುಕಿನಲ್ಲಿದ್ದರೂ ನರಸಪ್ಪನವರು ಶ್ರೀಮಂತರಂತೆ ಜನರ ನಡುವೆ ಮೆರೆದರು. ಅವರು ಗಳಿಸಿದ್ದು ಆರ್ಥಿಕ ಶ್ರೀಮಂತಿಕೆಯಲ್ಲ; ಕಲೆಯ ಶ್ರೀಮಂತಿಕೆ.

ಮಲ್ಲಪ್ಪನವರು ಹುಟ್ಟಿದ್ದು ಕಲಾವಂತ ತಂದೆ ನರಸಪ್ಪನವರ ಮಗನಾಗಿ. ಅವರ ತಾಯಿ ಗುರಮ್ಮ. ಕ್ರಿ.ಶ.ಸು. ೧೯೧೦ ಮಲ್ಲಪ್ಪನವರ ಜನ್ಮದ ವರ್ಷ. ಮಲ್ಲಪ್ಪನವರಿಗೆ ಸರಕಾರಿ ಶಾಲೆಯಾಗಲಿ, ಗವಠಿ ಶಾಲೆಗಳಾಗಲಿ ಶಿಕ್ಷಣಕ್ಕಾಗಿ ಬಾಗಿಲು ತೆರೆಯಲಿಲ್ಲ. ಹಾಗೆ ತೆರೆದರೂ ಅವರಿಗೆ ಆರ್ಥಿಕ ಮುಗ್ಗಟ್ಟು ದೊಡ್ಡ ಅಡ್ಡಿಯಾಗಿತ್ತು. ಆದುದರಿಂದ ಅವರು ತಂದೆಯೊಡನೆ ನಿಸರ್ಗದ ಬಯಲಿಗೆ ದುಡಿಯಲು ಹೋದರು. ದನ ಕಾಯಲು ಹೋದರು. ದನಗಳಿಗೆ ಹುಲ್ಲು ತರಲು ಹೋದರು. ತಂದೆಯವರ ಒಡನಾಟದಲ್ಲಿಯೇ ಹಾಡಿನ ಕಲೆಯನ್ನು ಮೈಗೂಡಿಸಿಕೊಂಡರು.-ಕೆಲವು ವಾದ್ಯಗಳನ್ನು ನುಡಿಸುವುದು ಕಲಿತುಕೊಂಡರು.

ತಾರುಣ್ಯಕ್ಕೆ ಕಾಲಿಡುತ್ತಲೇ ಅವರಲ್ಲಿ ಹಾಡಿನ ಕಲೆಯು ಹುರಿಗೊಂಡು ಹರೆಯದ ವಯಸ್ಸು ತಳೆದು ನಿಂತಿತು. ಮದುವೆ ಮಾಡಲಾಯಿತು. ಮಲ್ಲಪ್ಪನವರಿಗೆ ಇಬ್ಬರು

ಹೆಂಡಂದಿರು. ಒಬ್ಬರು ಅಂಬವ್ವ; ಇನ್ನೊಬ್ಬರು ಚಂದವ್ವ. ಈ ದಂಪತಿಗಳಿಗೆ ಒಟ್ಟು ಏಳು ಜನ ಮಕ್ಕಳು. ಮಲ್ಲಪ್ಪನವರದು ಈ ದೃಷ್ಟಿಯಿಂದ ದೊಡ್ಡ ಕುಟುಂಬವೇ ಆಗಿದ್ದಿತು. ಆದರೆ ಶ್ರಮಜೀವಿಗಳಾಗಿದ್ದ ಅವರಿಗೆ ದೊಡ್ಡ ಸಂಸಾರದ ನಿರ್ವಹಣೆ ಕಷ್ಟದ ಕೆಲಸವೇನೂ ಆಗಲಿಲ್ಲ.

ಇಬ್ಬರು ಪತ್ನಿಯರನ್ನೂ, ಕೈಗೆ ಬಂದ ಮಕ್ಕಳನ್ನೂ ಕೂಡಿಸಿಕೊಂಡು ಮಲ್ಲಪ್ಪನವರು ಭೂಮಿತಾಯಿಯ ಮಡಿಲಲ್ಲಿ ಶ್ರಮವಹಿಸಿ; ಪ್ರಾಮಾಣಿಕ ಭಾವದಿಂದ ದುಡಿಯ ತೊಡಗಿದರು. ಅವರ ಕಾಯಕ ಶ್ರದ್ಧೆಗೆ ಭೂಮಿ ತಾಯಿ ಸಾಕಾಗುವಷ್ಟು ಫಲವನ್ನು ನೀಡತೊಡಗಿದಳು; ಮಲ್ಲಪ್ಪನವರ ಜೀವನವು ನಿರಾತಂಕವಾಗಿ ಸಾಗತೊಡಗಿತು. ಮಲ್ಲಪ್ಪನವರು ಯೋಗಾ-ಯೋಗವೆನ್ನುವಂತೆ ಲಕ್ಷ್ಮಿದೇವಿಯ ಭಕ್ತರಾಗಿದ್ದುದು ವಿಶೇಷ.

ಇಂದು ಡಾಕುಳಗಿ ಗ್ರಾಮದಲ್ಲಿ ತಮ್ಮ ತಂದೆಯವರ ಸ್ಮರಣೆಯ ಸಂಪತ್ತನ್ನು ಕಾಯ್ದಿಟ್ಟುಕೊಂಡು ಅದನ್ನು ಬೇಕೆಂದವರಿಗೆ ಪರಿಚಯಿಸುತ್ತಾ ನಿಂತುಕೊಂಡಿರುವವರು ಮಲ್ಲಪ್ಪನವರ ಕಿರಿಯ ಮಗ ಶಿವರಾಜ ಮೈಲಾರ ಅವರು. ಅವರ ವಯಸ್ಸು ಐವತ್ತೈದು ವರುಷಗಳು. ಹೆಂಡತಿ ಕಮಲಾಬಾಯಿಯೊಂದಿಗೆ ನಾಲ್ಕು ಮಕ್ಕಳನ್ನು ಹೊಂದಿದ ಶಿವರಾಜ ಅವರು ತಂದೆ ಗತಿಸಿಹೋದ ಸ್ಥಳದಲ್ಲಿ ಬದುಕುತ್ತಲಿದ್ದಾರೆ.

ಶಿವರಾಜ ಅವರು ತಮ್ಮ ತಂದೆಯವರನ್ನು ಕುರಿತು ಹೇಳುವ ಮನದಾಳದ ಮಾತುಗಳು ಅರ್ಥಪೂರ್ಣವಾದವುಗಳಾಗಿವೆ: "ನಮ್ಮ ತಂದೆಯವರಿಂದ ನಮಗೆ ಗೌರವದಕ್ಕಿದೆ. ನಾವು ಮಲ್ಲಪ್ಪನವರ ಮಕ್ಕಳೆಂದು ಹೇಳಿಕೊಳ್ಳುವುದಕ್ಕೆ ಅತೀವ ಹೆಮ್ಮೆಯೆನಿಸುತ್ತದೆ. ನಮ್ಮ ತಂದೆ ಹಾಡುಗಾರ-ಕವಿಗಾರರಾಗಿ ನಮ್ಮ ಮನೆಯ ಹೆಸರನ್ನು ಅಷ್ಟೇ ಅಲ್ಲ; ಡಾಕುಳಗಿಯ ಹೆಸರನ್ನು ಬೀದರ ಜಿಲ್ಲೆಯ ತುಂಬ ಮೆರೆಸಿದ್ದಾರೆ. ಊರಿನ ಜನರಿಗಾದರೂ ನಮ್ಮ ತಂದೆಯವರ ಬಗೆಗೆ ಅತಿ ಅಭಿಮಾನವಿದೆ. ನಮ್ಮ ತಂದೆ ಬಡವರಾಗಿದ್ದರೂ; ಪಕ್ಕಾ ಸ್ವಾಭಿಮಾನಿಗಳಾಗಿದ್ದರು. ಅವರು ಎಂದೂ ತಮ್ಮ ಬದುಕಿನ ಒಳಗಿನ ಗುಟ್ಟನ್ನು ಬಿಟ್ಟು ಕೊಟ್ಟವರಲ್ಲ. ಹಸಿದಿದ್ದರೂ ಅವರು ಹೊರಗೆ ಹಸನ್ಮುಖರಾಗಿಯೇ ಇರುತ್ತಿದ್ದರು. ಅವರ ದೈವೀ ನಂಬುಗೆ ಅಗಾಧವಾದುದ್ದಾಗಿತ್ತು. ಲಕ್ಷ್ಮೀದೇವಿ-ಭೂಮಿತಾಯಿ ಅವರನ್ನೆ ನಂಬಿದ್ದ ಅವರು ಬೇಡುವದಿದ್ದರೆ ದೇವರಿಗೆ ಮಾತ್ರ ಬೇಡುತ್ತಿದ್ದರು. ಅವರು 'ಮನುಷ್ಯರು ಕೊಟ್ಟಿದ್ದು ಹಂಗಿನ ಕೊಡುಗೆ; ದೇವರು ನೀಡಿದ್ದು ಕೊನೆಯ ತನಕ ಇರುವುದು' ಎಂದೇ ಹೇಳುತ್ತ ನಮ್ಮಲ್ಲಿಯೂ ಅಂತಹ ಸ್ವಾಭಿಮಾನವನ್ನು ಬೆಳೆಯಿಸಿದರು. ಅವರೊಬ್ಬ ತತ್ತ್ವಜ್ಞಾನಿಯಂತೆ ಮಾತನಾಡುತ್ತಿದ್ದರು".

ಮಲ್ಲಪ್ಪನವರು ಹಲವಾರು ಗೀಗೀ ಹಾಡುಗಳನ್ನು ಬರೆದರು. ಅವುಗಳಲ್ಲಿ ಸವಾಲು-ಜವಾಬು ಪದ್ಯಗಳನ್ನು ಕಾಣಬಹದು. ಕೋಲಾಟದ ಪದಗಳನ್ನು ಬರೆದರು. ಮೋಹರಮ್ ಹಾಡುಗಳನ್ನು ಕಟ್ಟಿ ಹಾಡಿದರು. ಮೋಹರಮ್ ಹಬ್ಬದ ಸಂದರ್ಭದಲ್ಲಿ ಅವರು

ಅಲಾವಿ ಪೀರನ ಎದುರು ಹಾಡುತ್ತ, ಹೆಜ್ಜೆ ಹಾಕಿ ಕುಣಿಯುವ ಕಲೆಯನ್ನು ಕಲಿತುಕೊಂಡಿದ್ದರು.

ಮಲ್ಲಪ್ಪನವರು ರಚಿಸಿರುವ ತತ್ತ್ವಪದಗಳಿಗೆ ತಮ್ಮ ಹೆಸರನ್ನೆ ಅಂಕಿತವಾಗಿ ಬಳಕೆ ಮಾಡಿದ್ದಾರೆ. ಅವರ ಎರಡು ಪದ್ಯಗಳನ್ನು ಇಲ್ಲಿ ಕೊಡಲಾಗಿದೆ:

ಖರೆ ಇದ್ದುದು ಸುಳ್ಳ ಮಾಡುತಿ

ಖರೆ ಇದ್ದುದು ಸುಳ್ಳ ಮಾಡುತಿ
ತಿರುಚಿ ತಿರುಚಿ ಸುಳ್ಳ ಖರೆವ ಮಾಡುತಿ ॥ ಪ ॥

ತರವಲ್ಲ ತಮ್ಮ ಈ ಎಲುಬಿನ ಕಾಯೊ
ಅರವಿರಬೇಕು ತಿಳಿದಿಲ್ಲ ಆಯಾ
ಮರೆವಿನಲ್ಲಿ ಮರೆತಿ ಡಂಬಿನ ಛಾಯಾ
ಯಾರು ಮಾಡುತಾರೋ ನಿನಗ ಸಹಾಯ ॥ ೧ ॥

ಸತ್ಯದ ನೆಲಿ ತಿಳಿಯಲಿಲ್ಲ
ನೀತಿ-ನೇಮ ಹಿಡಿಯಲಿಲ್ಲ
ಗುರುವಿನ ಪಾದ ನಂಬಲಿಲ್ಲ
ಖರೆವ ಸುಳ್ಳ ಮಾಡಿದೆಯಲ್ಲ ॥ ೨ ॥

ಗತ್ತ ಗ್ಯೆರತ್ತು ನಡೆಸಿದಿಯಲ್ಲ
ಮುತ್ತ-ಮಾಣಿಕ್ಯ ಬೇಕಂತಿಯಲ್ಲ
ಸುತ್ತಳ್ಳ ಶರಣರ ಸಂಗ ಎಂದೂ ನೀನು ಮಾಡಲಿಲ್ಲ
ಮುತ್ತಿನಂತ ಶರಣರ ವಚನ ಕೇಳಲಿಲ್ಲ ॥ ೩ ॥

ಬಾಳ-ಬದುಕ ಒಳ್ಳೆದಂತ
ಕಾಳ ಕತ್ತಲ್ದಾಗ ನಿಂತಿ
ತಿಳಿಯಲಿಲ್ಲ ಹಿರಿಯರ ಮಾತ
ಹೊಳಿಯ ಸುಳಿಯಾಗ ಸಿಕ್ಕಿ ॥ ೪ ॥

ಸುಳ್ಳ ಮಾತ ಆಡಬ್ಯಾಡ
ಖರೆಯ ಮಾತ ಬಿಡಲು ಬ್ಯಾಡ
ಖರೆವ ಸುಳ್ಳ ಮಾಡ ಬ್ಯಾಡ
ಸುಳ್ಳ ಖರೆವಂತ ವಾದಿಸಬ್ಯಾಡ ॥ ೫ ॥

ಧರಿಯೊಳಗ ಡಾಕುಳಗಿ ಊರಾ
ಮಲ್ಲಪ್ಪನ ನುಡಿ ಕೇಳು ಪೂರಾ
ಎಲ್ಲ ಅದ ಅಲ್ಲಿ ಭರಪೂರಾ
ಬಾರದೆಂದು ದುಃಖದ ಘೋರಾ ॥ ೬ ॥

ಮನದಾಗ ಸಮವಿರಲಿ

ಮನದಾಗ ಸಮವಿರಲಿ ಯಣ್ಣಾ
ಅನುಮಾನದ ಭೂತವ ತೆಗೆದು ಹಾಕೋ ಅಣ್ಣಾ ॥ ಪ ॥

ದುಃಖ ಬಂದಾಗ ಕುಗ್ಗಬ್ಯಾಡ
ಸುಖ ಬಂದಾಗ ಹಿಗ್ಗಬ್ಯಾಡ
ಸುಖ-ದುಃಖ ಎರಡು ಜೋಡ
ಲೋಕನಾಥನ ಕರುಣ ಅನಾದು ಪಾಡ ॥ ೧ ॥


ಬೈದರೆಂದು ನೊಯ್ಯ ಬ್ಯಾಡ
ಹೊಗಳಿದರೆಂದು ಹಿಗ್ಗಬ್ಯಾಡ
ಸಾಗಬೇಕು ಶಿವನ ಇಚ್ಛೆಯ ಕೂಡ ॥ ೨ ॥

ಕರೆಯಲಿಲ್ಲೆಂದು ಹಳಹಳಿಸಬ್ಯಾಡ
ಕರೆವರೆಂದು ಕುಣಿಯುವುದು ಬ್ಯಾಡ
ಕರೆಯಲಿಲ್ಲವೆಂಬುದು ಶಿವನ ಇಚ್ಛೆ ಅನಾದು ಪಾಡ
ಇರುತಾವಪ್ಪ ಅವು ಒಂದಕ್ಕೊಂದು ಜೋಡ ॥ ೩ ॥

ಶಿರಿವಂತಿಕಿಗಿ ಎಗರ ಬ್ಯಾಡ
ಬಡತನಕ ಮರಗ ಬ್ಯಾಡ
ಬಡತನ ಶಿರಿವಂತಕಿ ದೇವರದಯ ಅನಾದು ಪಾಡ
ಜೋಡ ಇರತಾವ ಅವು ತಿಳಿದು ನೋಡ ॥ ೪ ॥

ದೇಶಕಧಿಕವಾದ ವಾಸುಳ್ಳ ಡಾಕುಳಗಿ
ಕೂಸ ಕವಿ ಮಲ್ಲಪ್ಪನ ಹಾಡು ರುಚಿಯಾದ ಕಿವೀಗಿ
ಶ್ವಾಸ ಹೋಗಾತನಕ ಬದುಕ ಮಾಡು ಲೇಸಾಗಿ
ಈಶಾನ ಧ್ಯಾನವ ಮಾಡು ನೀನು ಶಿಶುವಾಗಿ ॥ ೫ ॥


(ಈ ವಿವರಗಳನ್ನು ಕವಿಯ ಮಗನಾದ ಶಿವರಾಜ ಅವರು ನೀಡಿದ್ದಾರೆ.)



ಮಲ್ಲಪ್ಪ ಮೈಲಾರ ವಾಸಿಸುತ್ತಿದ್ದ ಸ್ಥಳ (ಡಾಕುಳಗಿ).




ಮಲ್ಲಪ್ಪನವರ ಮಗ ಶಿವರಾಯ – ಸೊಸೆ ಕಮಲಾಬಾಯಿ.



ಮಲ್ಲಪ್ಪನವರ ಆರಾಧ್ಯ ದೇವತೆ ಲಕ್ಷ್ಮಿ ದೇವಾಲಯ (ಡಾಕುಳಗಿ).



ಲಕ್ಷ್ಮಿಯ ದರ್ಶನ ಪ್ರತಿಮೆ.



ಮಲ್ಲಪ್ಪನ ಸಮಾಧಿ.

೧೧. ಶಂಕರರಾವ ಬೋತಗಿ (ಕ್ರಿ.ಶ.ಸು. ೧೯೧೦–೧೯೯೫)

ಸು.ಎಂಬತ್ತೈದು ವರ್ಷಗಳ ಸಾರ್ಥಕ ಮತ್ತು ಸಾಧಕ ಬದುಕನ್ನು ಬದುಕಿದ್ದ ಶಂಕರರಾವ ಅವರು ದಲಿತ ಕುಟುಂಬದಲ್ಲಿ ಹುಟ್ಟಿದ ಅತ್ಯುತ್ತಮ ತತ್ತ್ವಪದಕಾರ. ಕನ್ನಡ–ಹಿಂದಿ–ಮರಾಠಿಯಲ್ಲಿ ಆಧ್ಯಾತ್ಮ ಗೀತೆಗಳನ್ನು ಬರೆಯುವ ಶಕ್ತಿಯುಳ್ಳ ಈ ಕವಿಗಳು ಸು. ೧೫ವರ್ಷಗಳ ಹಿಂದೆ ಇಹಲೋಕವನ್ನು ತ್ಯಜಿಸಿದರು. ಇಂದು ಬೋತಗಿ ಗ್ರಾಮದ ಜನತೆ ಅವರ ಹಾಡುಗಳನ್ನು ಎದೆಯಲ್ಲಿ ಬಚ್ಚಿಟ್ಟುಕೊಂಡಿದ್ದಾರೆ.

ಬೀದರ ಜಿಲ್ಲೆ ಹುಮನಾಬಾದ ತಾಲ್ಲೂಕಿನಲ್ಲಿ ಬರುವ ಗ್ರಾಮವು ಬೋತಗಿ. ಇಲ್ಲಿನ ಶಂಬಣ್ಣ ಹರಿಜನ ಅವರ ಕುಟುಂಬದಲ್ಲಿ ಶಂಕರರಾವ ಅವರು ಕ್ರಿ.ಶ.೧೯೧೦ರ ವರ್ಷದಲ್ಲಿ ಹುಟ್ಟಿದರು. ಶಂಬಣ್ಣ ಸರಳ ಮತ್ತು ಅತ್ಯಂತ ಮುಗ್ಧ ಸ್ವಭಾವದ ರೈತಾಪಿ ವ್ಯಕ್ತಿ. ತನ್ನ ಹೆಂಡತಿ ನೀಲಮ್ಮನೊಂದಿಗೆ ಜೀವನ ನಿರ್ವಹಣೆಗಾಗಿ ಕೂಲಿಯನ್ನು ಮಾಡುತ್ತಿದ್ದ. ಬೇರೆಯ ಹೊಲಗಳಿಗೆ ಹೋಗಿ ಕೃಷಿ ಕೆಲಸಗಳಲ್ಲಿ ತೊಡಗಿ ದುಡಿಯುತ್ತಿದ್ದನು. ಬಂದ ಉತ್ಪನ್ನದಿಂದ ತನ್ನ ಕುಟುಂಬವನ್ನು ಸಲಹುತ್ತಿದ್ದನು. ಆರ್ಥಿಕವಾಗಿ ಬಡತನದಲ್ಲಿದ್ದ ಶಂಬಣ್ಣ ಅತಿ ಆಶೆಯಿಂದ ದೂರವಾಗಿ ಸಂತೃಪ್ತ ಬದುಕನ್ನು ಸಾಗಿಸುತ್ತಿದ್ದನು.

ಇಂತಹ ಬಡತನದ ಪರಿಸ್ಥಿತಿಯಲ್ಲೂ ಶಂಕರರಾವ ಅವರಿಗೆ ಗವಠಿ ಶಾಲೆಯಲ್ಲಿ ನಾಲ್ಕನೆಯವರೆಗೆ ಓದುವ ಅವಕಾಶ ದೊರಕಿದುದು ಯೋಗಾ ಯೋಗ. ಅಲ್ಲಿ ಅವರು ಮೋಡಿ, ಮರಾಠಿ, ಉರ್ದು ಭಾಷೆಗಳ ಅಭ್ಯಾಸ ಮಾಡಿದರು. ಮುಂದೆ ಅವರಿಗೆ ಹಲಾಲಪುರದ ಪೀರಪ್ಪ ಜ್ಯೋತಿ ಎಂಬುವರ ಸಂಪರ್ಕ ದೊರಕಿತು. ಅವರು ಒಳ್ಳೆಯ ಹಾಡುಗಾರರೂ; ಭಜನೆಯಲ್ಲಿ ಪಳಗಿದವರೂ; ಸಂಗೀತ ಕಲಾವಿದರೂ ಆಗಿದ್ದರು. ಅವರಿಗೆ ಕನ್ನಡ ಭಾಷೆಯ ಬಗೆಗೆ ಅತೀವ ಪ್ರೇಮವಿದ್ದಿತು. ಪಂಡರಾಪುರದ ವಿಠ್ಠಲನ ಭಕ್ತರಾಗಿದ್ದ ಶಂಕರರಾವ ಅವರನ್ನು ಪೀರಪ್ಪ ಅವರು ನಿಜವಾದ ಅರ್ಥದಲ್ಲಿ ಕನ್ನಡದ ಭಕ್ತರಾಗುವಂತೆ ಮಾಡಿದರು. ಅವರ ಸತ್ಸಂಗದಿಂದ ಶಂಕರರಾವ ಅವರು ಹಿಂದಿ – ಮರಾಠಿಗಳೊಂದಿಗೆ ಕನ್ನಡದಲ್ಲೂ ಆಧ್ಯಾತ್ಮ ಗೀತೆಗಳನ್ನು ಬರೆಯುವುದಕ್ಕೆ ಆರಂಭ ಮಾಡಿದರು. ಪೀರಪ್ಪ ಜ್ಯೋತಿ ಅವರನ್ನೇ ತಮ್ಮ ಗುರುಗಳೆಂದು ಶಂಕರರಾವ ಅವರು ಸ್ವೀಕರಿಸಿದರು. ಅವರ ಮಾರ್ಗದರ್ಶನದಂತೆ ತಮ್ಮ ಮುಂದಿನ ಬಾಳನ್ನು ರೂಪಿಸಿಕೊಳ್ಳಲು ನಿರ್ಧರಿಸಿದರು.

ಶಂಕರರಾವ ಅವರ ಪತ್ನಿ ಗೌರಮ್ಮ. ಈ ದಂಪತಿಗಳಿಗೆ ಒಬ್ಬಳು ಮಗಳಿದ್ದಂತೆ ತಿಳಿದು ಬರುತ್ತದೆ.

ಶಂಕರರಾವ ಅವರು ತಮ್ಮ ಜೀವನದ ಸಾಗಿಸುವಿಕೆಗಾಗಿ ಹಮಾಲಿ ಮತ್ತು ಕೂಲಿ ಕೆಲಸಗಳನ್ನು ಮಾಡುತ್ತಿದ್ದರು. ಇಂದು ಬೋತಗಿ ಗ್ರಾಮಕ್ಕೆ ಕವಿಶಂಕರರಾವ ಅವರನ್ನು ಅರಸಿಕೊಂಡು ಹೋದರೆ, ಅಲ್ಲಿನ ದಲಿತಕೇರಿಯಲ್ಲಿ ಅವರು ವಾಸಿಸುತ್ತಿದ್ದ ಬಾಗಿಲು ಮುಚ್ಚಿದ ಹಾಳುಮನೆಯೊಂದು ಕಾಣುತ್ತದೆ. ಅದರಲ್ಲಿ ಇಂದು ಯಾರೂ ವಾಸಿಸುವುದಿಲ್ಲ. ಅದರ ಮುಂದಿನ ಸ್ಥಳದಲ್ಲಿ ಶಂಕರರಾವ ಅವರ ತಂಗಿ ಪಾರಮ್ಮನವರು ಇರುತ್ತಾರೆ. ಈಗ ಅವರ ವಯಸ್ಸು ಸು.ಎಂಬತ್ತೈದು ವರುಷಗಳು. ಶಂಕರರಾವ ಅವರ ಬಗೆಗೆ ವಿವರಗಳು ಬೇಕಾದರೆ ಪಾರಮ್ಮನವರನ್ನೆ ವಿಚಾರಿಸಬೇಕಾಗುತ್ತದೆ.

ಶಂಕರರಾವ ಅವರ ಒಡನಾಡಿಗಳಾಗಿ ಅವರನ್ನು ನೋಡಿದವರು ಆ ಕೇರಿಯಲ್ಲಿದ್ದಾರೆ. ಅವರಲ್ಲಿ ಅತ್ಯಂತ ಮಹತ್ವದ ವ್ಯಕ್ತಿಗಳೆಂದರೆ ಮಾಣಿಕರಾವ ಮತ್ತು ಪೀರಪ್ಪ ಲಾಲಪ್ಪ ಅವರು. ಈಗ ಅವರಿಗೆ ಸು. ೭೫-೮೫ರ ವಯಸ್ಸು. ವಯೋವೃದ್ಧರಾದ ಈ ಹಿರಿಯರು ಶಂಕರರಾವ ಅವರ ಸಾಹಿತ್ಯ ಸಾಧನೆಯ ಬಗೆಗೆ ಸವಿವರವಾಗಿ ಬಿಚ್ಚಿಡುತ್ತಾರೆ. ಅವರು ಒಕ್ಕೊರಲಿನಿಂದ ಹೇಳುವ ಕೆಲವು ಮುಖ್ಯ ವಿಚಾರಗಳನ್ನು ಇಲ್ಲಿ ದಾಖಲಿಸಲಾಗಿದೆ.

"ಶಂಕರರಾವ ಅವರು ಮೊದಲಿಗೆ ಮರಾಠಿ ಭಾಷೆ ಮತ್ತು ಹಿಂದಿ ಭಾಷೆಯಲ್ಲಿ ಹಾಡುಗಳನ್ನು ಬರೆಯುತ್ತಿದ್ದರು. ಅವರು ಆಗಾಗ ಪಂಢರಾಪುರಕ್ಕೆ ಹೋಗಿ ವಿಠ್ಠಲನ ದರ್ಶನ ಮಾಡಿಕೊಂಡು ಬರುತ್ತಿದ್ದರು. ಅಭಂಗಗಳನ್ನು ಅವರು ಸುಶ್ರಾವ್ಯವಾಗಿ ಹಾಡುತ್ತಿದ್ದರು. ನಂತರದಲ್ಲಿ ಅವರಿಗೆ ಕನ್ನಡದಲ್ಲಿ ಬರೆಯಬೇಕೆಂಬ ಮನಸ್ಸಾಯಿತು. ಅಂತಹ ಮನಸ್ಸನ್ನು ಸಿದ್ಧಗೊಳಿಸಿದವರು ಅವರ ಗುರುಗಳಾದ ಪೀರಪ್ಪ ಜ್ಯೋತಿ ಅವರು. ಅವರು ಹಲವಾರು ಕನ್ನಡದಲ್ಲಿ ತತ್ತ್ವಪದಗಳನ್ನು ಬರೆದರು, ಹಾಡಿದರು. ಇಂದು ನಮ್ಮ ನೆನಪಿನಲ್ಲಿ ಒಂದೆರಡು ಹಾಡುಗಳು ಉಳಿದುಕೊಂಡಿವೆ. ಅವರು ಕನ್ನಡ ಹಾಡುಗಳನ್ನು "ಗುರು ಪೀರಪ್ಪ" ಎಂಬ ಮುದ್ರಿಕೆಯಿಂದಲೇ ಬರೆದಿರುವರು. ಶಂಕರರಾವ ಸಂಗೀತದಲ್ಲೂ ಸಿದ್ಧಹಸ್ತರಾಗಿದ್ದರು. ಅವರು ಹಾರ್ಮೋನಿಯಂ ನುಡಿಸುವುದರಲ್ಲಿ ಪಳಗಿದ್ದರು. ಕೆಲವು ನಾಟಕಗಳಿಗೆ ಅವರು ಪೇಟಿ ಮಾಸ್ತರರಾಗಿ ಕೆಲಸ ಮಾಡಿದ ನೆನಪು ಇದೆ. ನಾವು ವಯಸ್ಸಿನಲ್ಲಿ ಅವರಿಗಿಂತಲೂ ಕಿರಿಯರಾಗಿದ್ದೇವು. ಅವರನ್ನು ನೋಡಿದ್ದೇವೆ. ಅವರ ಹಾಡು ಕೇಳಿದ್ದೇವೆ. ನಾಟಕ ನೋಡಿದ್ದೇವೆ". ಅವರು ರಚಿಸಿದ ಹಲವಾರು ತತ್ತ್ವಪದಗಳಲ್ಲಿನ ಎರಡು ಹಾಡುಗಳು ಇಲ್ಲಿ ಕೊಡಲಾಗಿದೆ:

ಜಗದ ಉದ್ಧಾರಕ ಗುರುದೇವ

ಗುರುದೇವನೆ ಜಗದ ಉದ್ಧಾರಕನು
ವರ ಸಂತರಿಗೆಲ್ಲ ಅವನೇ ಪ್ರಿಯನು ॥ ಪ ॥

ಸದ್ಗುರುವಿನ ಮಹಿಮೆ ಅಪಾರ
ಉದ್ಧರಿಸುವನು ಜನ್ಮದ ಕತ್ತಲೆ ಕಳೆದು ಧೀರ
ಮದ್ಗುರುವಿಗೆ ಶರಣು ಎಂದರೆ ಬದುಕ ಸಸಾರ
ಉದ್ಗಾರ ತೆಗೆತಾವು ವೇದ ಆಗಮ ವಿಚಾರ ॥ ೧ ॥

ಕುಡಿಸಿದನು ಲೋಕಕ್ಕವನು ಅಮೃತವನು
ತೊಡಿಸಿದನು ಅಮರತ್ವ ಜನ ಜೀವ ಜಾಲಕ್ಕವನು
ಬಿಡಿಸಿದನು ಜನ್ಮದ ಬಂಧನವನು
ಹಿಡಿಸಿದನು ಮೋಕ್ಷದ ಸನ್ಮಾರ್ಗವನು ॥ ೨ ॥

ನರಜನ್ಮದಲಿ ಗುರು ನಾಮ ಸ್ಮರಿಸಲು ಬೇಕು
ಚೌರಾಂಸಿ ಜನ್ಮಗಳೆದು ದುಃಖ ನೀಗಲಿ ಬೇಕು
ಗುರು ಎಲ್ಲ ಸಂತರಿಗೆ ಶಕ್ತಿಯಾಗಿದನು ಠೀಕು
ಅವನ ಬಿಟ್ಟು ಬೇರೆ ಯಾರಿಹರು ದಿಕ್ಕು ? ॥ ೩ ॥

ನರ ಜನ್ಮ ಮತ್ತ ಸಿಗುವುದಿಲ್ಲ ತಮ್ಮಾ
ಗುರುವಿನ ಬಳಿ ಹೋಗಿ ತಿಳಿದುಕೊ ತಮ್ಮಾ
ಮರುವಿಲೆ ಕೆಡಬ್ಯಾಡ ವಿಚಾರ ಮಾಡೊಮ್ಮಾ
ಅರುವಿನ ಜನ್ಮಕ ನೀ ಬಂದೀದಿ ಗುಮ್ಮಾ ॥ ೪ ॥

ಗುರು ಚರಣಕಮಲ ಮುಕ್ತಿ ನೋಡೋ
ಹರನ ಜಾಗ ಅದರಲ್ಲಿ ನೋಡೋ
ತಿರುಗಬ್ಯಾಡ ಬಿಟ್ಟು ಪಾದ ಹಿಡಿಯೋ
ಮರುಗುತಿ ಬಿಟ್ಟರ ಗುರುವಿನ ಬೇಡೋ ॥ ೫ ॥

ಗುರುವಿಲ್ಲದ ಜಾಗವು ಕತ್ತಲೆಯ ತಾಣ
ಪೀರಪ್ಪ ಜ್ಯೋತಿ ನನಗ ಗುರುದೇವ ಕಾಣ
ಕರ ಹಿಡಿದು ಎತ್ತ್ಯಾನ ನನಮ್ಯಾಲ ಕರುಣ
ವರ ನೀಡುತಾನ ನಮಗೆಲ್ಲ ತಿಳಿಯರಣ್ಣಾ ॥ ೬ ॥

ಭವ ಸಾಗರದಲಿ ಈಜಾಡೋ

ಭವ ಸಾಗರದಲಿ ಈಜಾಡೋ
ಮನುಜಾ ಈಜಿ ದಡವ ಸೇರುದು ಪಾಡೋ ॥ ಪ ॥

ಭವ ಸಾಗರದ ಆಳ ಭಾಳ ತಿಳಿ ಖೂಳ
ನವ ಋಷಿಗಳಿಗೆ ತಿಳಿಯಲಿಲ್ಲ ಅದರ ಆಳ
ಯಾವ ಯಾವ ಸುಳಿಯೊಳಗ ಸಿಲುಕಿದೆ ಮೂಳ
ಭಾವ ಸುದ್ದಿಯಲಿ ದಾಟೋ ಭವಸಾಗದ ಆಳ ॥ ೧ ॥

ಭವ ಸಾಗರದೊಳಗ ಬಿದ್ದಿ
ಯವ್ವ ಯವ್ವ ಅಂತ ಒದುರುತ್ತಿದ್ದಿ
ಮುಳುಗಿ ಹೋಗಬ್ಯಾಡ ಜಿದ್ದಿ
ಒಳಗ ಮುಳುಗಿ ಈಜುತ ದಾಟು ನೀ ಗೆದ್ದಿ ॥ ೨ ॥


ಮುಳಗಿ ಬಿಟ್ಟರ ಯಾರು ಮಾಡುವರಿಲ್ಲ ಪಾರ
ಗುಳುಂ ಅನಿಸುತಾವ ನಿನಗ ತಿಮಿಂಗಲ್ಹಾರ
ಬಲಗೊಂಡು ಬರತಾವು ಮೊಸಳಿಗಳು ಜೋರಾ
ಮುಳುಗಿ – ಮುಳುಗಿ ಹೋಗುತಿ ಅದರ ಆಳ ಅಪಾರ ॥ ೩ ॥

ಮುಳುಗಿದರ ಒಳಗಿನ ರತ್ನ ಮ್ಯಾಲ ತಾರೋ
ಮ್ಯಾಲ ಭೋರ್‍ರ್ಯಾಡ್‌ತಾವ ತೆರೆಗಳು ಭಾರೋ
ಕಾಳಿಂದಿ ಕಡಲಾದ ದೂರದ ತೀರೋ
ಜ್ವಾಕಿಲಿಂದ ಈಜಿ ನೀ ದಡವ ಸೇರೋ ॥ ೪ ॥


ಭವಸಾಗರದ ದಡದ ಮ್ಯಾಲ ನಾವಿಕ ಜೋಡೋ
ಶಿವರೂಪಿ ಪೀರಪ್ಪ ಗುರು ಹಾನ ನೋಡೋ

ಅವನಿಗಿ ನಂಬಿದರ ಮ್ಯಾಲ ತರತಾನ ಇಲ್ಲ ಕೇಡೋ
ಅವನ ಪಾದಕ ನಂಬಿ ಬಿಡಾದು ಅತಿ ಪಾಡೋ ॥ ೫ ॥


(ಈ ವಿವರಗಳನ್ನು ಕವಿಗಳ ತಂಗಿ ಪಾರಮ್ಮ ಮತ್ತು ಅವನ ಸಹಗೆಳೆಯರು ನೀಡಿದ್ದಾರೆ.)



ಶಂಕರರಾವ ಅವರ ಮನೆ (ಬೋತಗಿ)



ಶಂಕರ ಅವರು ಇದ್ದ ಕೇರಿಯ ಪರಿಸರ



ಶಂಕರರಾವ ಅವರ ತಂಗಿ ಪಾರಮ್ಮ ತನ್ನ ಇತರ ವಂಶಸ್ಥರೊಂದಿಗೆ

೧೨. ರೇವಣಾರಾಧ್ಯರು (ಕ್ರಿ.ಶ.ಸು. ೧೯೨೫–೧೯೯೧)

ಬೀದರ ಜಿಲ್ಲೆ, ಹುಮನಾಬಾದ ತಾಲ್ಲೂಕಿನಲ್ಲಿ ಬರುವ ಸಿಂಧನಕೇರಾ ಗ್ರಾಮವು ಶ್ರೀ ರಾಚೋಟೀಶ್ವರ ವಿರಕ್ತ ಮಠದ ನೆಲಸುವಿಕೆಯಿಂದ ಅದೊಂದು ಆಧ್ಯಾತ್ಮದ ನೆಲೆಯಾಗುವುದಕ್ಕೆ ಸಾಧ್ಯವಾಗಿದೆ. ಮಠದ ಶಿವಯೋಗಿಗಳಾಗಿದ್ದ ರಾಚೋಟೀಶ್ವರರು ಪವಾಡ ಪುರುಷರಾಗಿದ್ದು; ಜನೋದ್ಧಾರ ಮಾಡಿದರು. ಸಾಮಾಜಿಕ ಸ್ವಾಸ್ಥ್ಯದ ರಕ್ಷಣೆಗಾಗಿಯೇ ಅವರು ದಿನನಿತ್ಯ ತ್ರಿಕಾಲ ಲಿಂಗಾರ್ಚನೆ ಮಾಡುತ್ತಿದ್ದರಂತೆ. ಅಂತಹ ಆದರ್ಶ ಮಠದ ಸಂಬಂಧ ಹೊಂದಿರುವವರು ರೇವಣಾರಾಧ್ಯರು. ಶ್ರೀ ಮಠದ ಬದಿಯಲ್ಲಿಯೇ ಅವರ ಮನೆಯಿದೆ. ರೇವಣಾರಾಧ್ಯರ ಕಿರಿಯ ಪುತ್ರರನ್ನೆ ಶ್ರೀ ಮಠಕ್ಕೆ ಇಂದು ಅಧಿಪತಿಗಳಾಗಿ ಮಾಡಲಾಗಿದೆ.

ರೇವಣಾರಾಧ್ಯರ ಜಂಗಮ ಮನೆತನಕ್ಕೆ ವಿಶ್ವಾರಾಧ್ಯ ಮಠವೆಂಬ ಹೆಸರಿದೆ. ವಿಶ್ವರಾಧ್ಯ ಮಠದ ಸಿದ್ಧರಾಮಯ್ಯನವರು ಸದಾಚಾರ ಸಂಪನ್ನರು. ಜಂಗಮ ನೇಮದಲ್ಲಿ ನಿಷ್ಠೆಯುಳ್ಳವರು. ಶಿಷ್ಯ ಪ್ರೇಮಿಗಳು. ಸಮಾಜ ಸೇವಕರು. ಭಕ್ತಿಭಾವದ ಹೃದಯದವರು. ಕಲಬುರ್ಗಿ ಜಿಲ್ಲೆಯ ಮಹಾಗಾವಿಯ ಗಚ್ಚಿನ ಮಠದ ಸ್ವಾಮಿಗಳು ವಿಶ್ವಾರಾಧ್ಯ ಮಠ ಮನೆತನದ ಗುರುಗಳಾಗಿ; ಕಾಲಾನುಕಾಲಕ್ಕೆ ಆ ಮನೆತನದ ಸದಸ್ಯರಿಗೆ ಸಾತ್ವಿಕ ಸಂಸ್ಕಾರವನ್ನು ಧಾರೆಯೆರೆದರು. ಈ ಗುರುಕರುಣೆಯ ಅವಕಾಶವು ಸಿದ್ಧರಾಮಯ್ಯನವರಿಗೂ ಲಭ್ಯವಾಯಿತು. ರೇವಣಾರಾಧ್ಯರಿಗೂ ಲಭ್ಯವಾಯಿತು.

ರೇವಣಾರಾಧ್ಯರು ಸಿದ್ಧರಾಮಯ್ಯ–ಮಹಾದೇವಿ ದಂಪತಿಗಳ ಮಡಿಲಿನಿಂದ ಕ್ರಿ.ಶ.ಸು.೧೯೨೫ರಂದು ಜನಿಸಿದರು. ಗಚ್ಚಿನ ಮಠದ ಗುರುಗಳಿಂದ ಗುರುಕರುಣೆಯಾಯಿತು. ರೇವಣಾರಾಧ್ಯರು ಮೊದಲಿಗೆ ಮಠದ ಖಾಸಗಿ ಶಾಲೆಯಲ್ಲಿ ತಮ್ಮ ಶಿಕ್ಷಣ ಆರಂಭ ಮಾಡಿದರು. ನಂತರ ಅವರು ಹೆಚ್ಚಿನ ಶಿಕ್ಷಣಕ್ಕಾಗಿ ಹುಮನಾಬಾದ–ಬೀದರ–ಹೈದರಾಬಾದ ಸ್ಥಳಗಳಿಗೆ ಸಂಚರಿಸಿದರು. ಕನ್ನಡದೊಂದಿಗೆ ಹಿಂದಿ, ಮೋಡಿ, ಮರಾಠಿ, ಉರ್ದು, ಸಂಸ್ಕೃತ ಭಾಷೆಗಳಲ್ಲಿ ಪಾಂಡಿತ್ಯವನ್ನು ಪಡೆದುಕೊಂಡರು. ಹಳಗನ್ನಡ–ನಡುಗನ್ನಡ ಕಾವ್ಯಗಳಲ್ಲಿ ಗತಿಯನ್ನು ಸಾಧಿಸಿದರು. ಶರಣರ ವಚನ ವಾಙ್ಮಯವನ್ನು ಅಧ್ಯಯನ ಮಾಡಿದರು. ವೀರಶೈವ ತತ್ತ್ವಜ್ಞಾನಕ್ಕೆ

ಸಂಬಂಧಿಸಿದ ಪ್ರಾಚೀನವಾದ ಸಂಸ್ಕೃತ ಗ್ರಂಥಗಳಲ್ಲಿನ ಜ್ಞಾನವನ್ನು ಕರಗತವಾಗಿಸಿಕೊಂಡರು. ಹೀಗಾಗಿ ರೇವಣಾರಾಧ್ಯರು ಒಂದು ಜ್ಞಾನದ ಖಜಾನೆಯಂತಾದರು.

ಜೀವನದ ನಿರ್ವಹಣೆಗಾಗಿ ಮತ್ತು ಹಂಬಲದಿಂದ ಅವರು ಆಯ್ಕೆ ಮಾಡಿಕೊಂಡದು 'ಶಿಕ್ಷಕ'ನ ಕಾಯಕ. ಅದನ್ನು ಅವರು ತಮ್ಮ ವೃತ್ತಿಯುದ್ದಕ್ಕೂ ಅತ್ಯಂತ ಶ್ರದ್ಧೆಯಿಂದ ನಿರ್ವಹಿಸಿದರು. ಸಾವಿರಾರು ವಿದ್ಯಾರ್ಥಿಗಳನ್ನು ಜ್ಞಾನದ ದೀಪಗಳನ್ನಾಗಿಸಿ ಬೆಳಗಿದರು. ತಾವೂ ಸುಜ್ಞಾನದ ಜ್ಯೋತಿಯಾಗಿ ಹೊಳೆದರು.

ರೇವಣಾರಾಧ್ಯರು ಗೃಹಸ್ಥಾಶ್ರಮಕ್ಕೆ ಕಾಲಿರಿಸಿ ನಿಂತಾಗ ಅವರಿಗೆ ಆಶ್ರಯದ ಶಕ್ತಿಯಾಗಿ ಬಂದವರು ಪಾರ್ವತಿದೇವಿ ಅವರು. ಈ ದಂಪತಿಗಳಿಗೆ ಮೂವರು ಗಂಡು ಮಕ್ಕಳು, ನಾಲ್ವರು ಹೆಣ್ಣುಮಕ್ಕಳು ಜನಿಸಿದರು. ಮೂವರು ಗಂಡುಮಕ್ಕಳಲ್ಲಿ ಒಬ್ಬರು ಮಠದ ಸ್ವಾಮಿಗಳಾಗಿದ್ದಾರೆ; ಒಬ್ಬರು ಹೈದರಾಬಾದಿನಲ್ಲಿ ನೌಕರಿ ಮಾಡುತ್ತಿದ್ದಾರೆ. ಶ್ರೀ ಗಂಗಾಧರ ಅವರು ಕನ್ನಡ ಸಾಹಿತ್ಯದಲ್ಲಿ ಎಂ.ಎ.ಪದವಿಧರರಾಗಿ ಮಠದ ಆಶ್ರಯದಲ್ಲಿ ನಡೆಯುತ್ತಿರುವ ರಾಚೋಟೇಶ್ವರ ಶಿಕ್ಷಣ ಸಂಸ್ಥೆಯ ಮೇಲ್ವಿಚಾರಣೆ ನೋಡಿಕೊಳ್ಳುತ್ತಲಿದ್ದಾರೆ.

ರೇವಣಾರಾಧ್ಯರು ಶಿಕ್ಷಕರಾಗಿದ್ದಂತೆ ಪ್ರಸಿದ್ಧ ಆಯುರ್ವೇದ ವೈದ್ಯರೂ ಆಗಿದ್ದರು; ಜ್ಯೋತಿಷ್ಯ ಶಾಸ್ತ್ರಜ್ಞರೂ ಆಗಿದ್ದರು. ಹೀಗಾಗಿ ಅವರಲ್ಲಿಗೆ ಪರಿಹಾರ ಕೇಳಿಕೊಂಡು ದಿನನಿತ್ಯ ಹಲವಾರು ಜನರು ಬರುತ್ತಿದ್ದರು. ರೇವಣಾರಾಧ್ಯರು ತಮ್ಮಲ್ಲಿಗೆ ಬರುತ್ತಿದ್ದವರ ಸಮಸ್ಯೆಗಳನ್ನು ಅತ್ಯಂತ ಸಮಾಧಾನದಿಂದ ಆಲಿಸುತ್ತಿದ್ದರು. ಅವರಿಂದ ಯಾವುದೇ ಹಣವನ್ನು ತೆಗೆದುಕೊಳ್ಳುತ್ತಿರಲಿಲ್ಲ. ಉಚಿತವಾಗಿ ಅವರವರಿಗೆ ಪರಿಹಾರವನ್ನು ದೊರಕಿಸಿ ಕೊಡುತ್ತಿದ್ದರು. ಅವರು ಆಯುರ್ವೇದ ಮತ್ತು ಜ್ಯೋತಿಷ್ಯ ಕುರಿತಾದ ಕೆಲವು ಕೃತಿಗಳನ್ನು ಬರೆದಿರುವರು.

ರೇವಣಾರಾಧ್ಯರು ವಾಙ್ಮಯ ಕೃಷಿಕರಾಗಿ ಹಲವಾರು ವಚನಗಳನ್ನು; ಹಾಡುಗಳನ್ನು ಬರೆಯುವುದರೊಂದಿಗೆ, ಕೆಲವು ಗದ್ಯ ಕೃತಿಗಳನ್ನೂ; ಪುರಾಣ ಕಾವ್ಯಗಳನ್ನೂ ರಚಿಸಿದ್ದಾರೆ. ರೇವಣಾರಾಧ್ಯರ ವ್ಯಕ್ತಿತ್ವ ಕುರಿತಂತೆ ಅವರ ಪುತ್ರರಾದ ಗಂಗಾಧರ ಅವರು ಹೀಗೆ ಹೇಳುತ್ತಾರೆ:

"ನಮ್ಮ ತಂದೆ ರೇವಣಾರಾಧ್ಯರು ಸತ್ಯಸಂಧರು; ಆಚಾರ ಸಂಪನ್ನರು; ದಿಟ್ಟ ನಿಲುವಿನವರು; ಗಟ್ಟಿ ವ್ಯಕ್ತಿತ್ವದವರು. ಅವರೊಬ್ಬ ಆದರ್ಶ ಶಿಕ್ಷಕ. ಸಮಾಜ ಸೇವಕ ಮತ್ತು ಚಿಂತಕರಾಗಿದ್ದರು. ನೈತಿಕ ನೆಲೆಗಟ್ಟಿನ ಮೇಲೆ ಸಮಾಜವನ್ನು ರೂಪಿಸಬೇಕೆಂಬ ಕಳಕಳಿಯಿಂದ ಅವರು ಎಲೆಯ ಮರೆಯ ಹೂವಾಗಿ ಕಾರ್ಯ ಮಾಡಿದರು. ಅವರು

ಅತ್ಯಂತ ಸರಳರು. ನೋಡುವುದಕ್ಕೆ ಗಾಂಭೀರ್ಯದ ನಿಲುವು. ಸದಾ ಖಾದಿ ಬಟ್ಟೆಗಳನ್ನೇ ಅವರು ಧರಿಸುತ್ತಿದ್ದರು. ಅವರು ನಿವೃತ್ತಿಯ ನಂತರವೂ ಸುಮ್ಮನೆ ಕುಳಿತವರಲ್ಲ. ಏನಾದರೊಂದು ಮಾಡುತ್ತಿದ್ದರು; ಅಥವಾ ಬರೆಯುತ್ತಿದ್ದರು. 'ದುಡಿಯದೆ ಜೀವಿಸುವುದು ಮಹಾಪಾಪ' ವೆಂಬುದು ಅವರ ಬದುಕಿನ ಧ್ಯೇಯವಾಗಿತ್ತು".

ರೇವಣಾರಾಧ್ಯರು ಬರೆದ ತತ್ತ್ವಪದಗಳು ಸ್ವನಾಮ ಅಂಕಿತದಲ್ಲಿರುವುದನ್ನು ಕಾಣಬಹುದು; ಇಲ್ಲಿ ಎರಡು ಪದ್ಯಗಳನ್ನು ಕೊಡಲಾಗಿದೆ:

ಮರವಿನ ಸಂಸಾರದಲೆ ಕುಂತಿ

ಯಾರಪ್ಪ ಯಾರಂತೀ
ಬರೀ ಸಂಸಾರದಲೆ ಕುಂತಿ ॥ ಪ ॥

ಕೊರೈಸತಾದ ಕಣ್ಣಂತಿ
ಕಾರಭಾರ ಭಾಳೆ ಜೋರ ಮಾಡತಿ
ವಾರಿ-ವಾರಿ ನೋಡುತಿ
ಮಾರಿ ಮುಸಕ ಹಾಕಿಯಾರ ಧ್ಯಾನ ಮಾಡತಿ ॥ ೧ ॥

ಕಾಡಿಗೆ ಗೊಡಂತೀ
ಮೇಡಿಗೆ ಸರಿಯಂತಿ
ದೇವನ ನೆನೆಯದೆ ಸುಮ್ಮನೆ ಕುಂತಿ
ಯಾವದು ಬಡಿದೀತು ನಿನಗ ಭ್ರಾಂತಿ ॥ ೨ ॥

ನೇಮ ಮಾಡ್ಯೆನಂತೀ
ಹೋಮ ನಡೆಸ್ಯನಂತಿ
ಭ್ರಾಮಕ ಜಗದೊಳು ಸಿಕ್ಕು ಮರ್ತಿ ॥ ೩ ॥

ಧರಿಯೊಳು ಮರವಿದು ಸಿಂಧನ ಕೇರಾ
ರೇವಣಾರಾಧ್ಯನು ಹೇಳಿದ ಸಾರಾ
ತಿಳಿಕೊ ತಮ್ಮಾ ದೃಷ್ಟಾಂತ ಪೂರಾ
ಕಳಕೊ ಸುತ್ತಿದ ಭವದ ಘೋರಾ ॥ ೪ ॥

ಬೆಳಗುತಾದ ನಿನ್ನೊಳಗೆ

ಬೆಳಗುತಾದ ನಿನ್ನೊಳಗೆ ಬೆಳಗ ॥ ಪ ॥

ಮೇಲಿನ ಧೂಳಾ ವರಸೋ
ಆಲಿಯ ಮಂಜು ಹರಿಸೋ
ಬತ್ತಿಯ ಜರ ಮ್ಯಾಲ ಸರಸೋ
ವತ್ತಿ ವತ್ತಿ ಮ್ಯಾಲ ದೀಪಾ ಏರಿಸೋ ॥ ೧ ॥


ನೋಡ ಬ್ಯಾಡ ಹೊರಗಾ
ಓಡಬ್ಯಾಡ ಮರಗಾ
ಆಡಬ್ಯಾಡ ಹುಸಿ ಮಾತ ತಿಳಿಯೋ
ಬಿಡಬ್ಯಾಡ ಲಿಂಗನ ಒಳಗಿನ ಕಳೆಯೋ ॥ ೨ ॥

ನಿನ್ನ ರೂಪ ಅಂಗ ಅಲ್ಲ
ಲಿಂಗವೆಂದು ನೀನು ತಿಳಿಯೋ
ಅಂಗ ಲಿಂಗ ಒಂದು ಮಾಡಿ
ಜ್ಯೋತಿ ಹಚ್ಚಿ ಕತ್ತಲಿ ಕಳಿಯೋ ॥ ೩ ॥

ಲಿಂಗ ಸಂಗ ಬಿಡುವುದು ಬ್ಯಾಡೋ
ಲಿಂಗ ಸಂಗ ಹಿಡಿವುದು ಪಾಡೋ
ಅಂಗವನ್ನು ಲಿಂಗಾ ಮಾಡೋ
ಒಳಗ ತುಂಬಿದ ಬೆಳಕ ನೋಡೋ ॥ ೪ ॥

ಧರಿಯೊಳಗಧಿಕವಾದ ಪುರಸಿಂಧನಕೇರಾ
ವರಕವಿ ರೇವಣಾರಾಧ್ಯ ಲಿಂಗ ಮಹಿಮೆ ಹೇಳತಾರ
ನರರಿಗೆ ಮುಕ್ತಿಯ ಧಾರಿಯ ತೋರುತಾರ
ಅರಿತು ನಡಿಯೋ ಬೆಳಕಿನೊಳಗ ಇದುವೆ ಕಡಿವೂರಾ ॥ ೫ ॥


(ಈ ವಿವರಗಳನ್ನು ಕವಿಗಳ ಮಗ ಶ್ರೀ ಗಂಗಾಧರ ಅವರು ನೀಡಿದ್ದಾರೆ.)



ರೇವಣಾರಾಧ್ಯರ ಮನೆ (ಸಿಂಧನ ಕೇರಾ)




ರೇವಣಾರಾಧ್ಯರು



ರೇವಣಾರಾಧ್ಯರ ಆರಾಧ್ಯ ಶಕ್ತಿ ರಾಚೋಟೇಶ್ವರ ಮಠದ ಶಾಲೆಯ ವಿದ್ಯಾರ್ಥಿ ಸಮೂಹ-ಶಿಕ್ಷಕಿ



ರಾಚೋಟೇಶ್ವರ ಮಠದ ಒಳಾಂಗಣ ನೋಟ.



ರೇವಣಾರಾಧ್ಯರ ಸಮಾಧಿ (ಸಿಂಧನಕೇರಾ).

೧೩. ಜಮಾಲ ಸಾಹೇಬ ಮಂಗಲಗಿ (ಕ್ರಿ.ಶ.ಸು. ೧೯೩೪)

ಬೀದರ ಜಿಲ್ಲೆಯ ಹುಮನಾಬಾದ ತಾಲ್ಲೂಕಿನಲ್ಲಿ ಬರುವ ಡಾಕುಳಗಿ ಗ್ರಾಮವು ಜಮಾಲ ಸಾಹೇಬರ ಸ್ವಗ್ರಾಮವಾಗಿದೆ. ಇಂದು ಜಮಾಲ ಸಾಹೇಬರಿಗೆ ಎಪ್ಪತ್ತಾರರ ವಯಸ್ಸು. ಆದರೂ ಅವರು ದೈಹಿಕವಾಗಿ ಗಟ್ಟಿಯಾಗಿದ್ದಾರೆ. ಹೊಲಕ್ಕೆ ಹೋಗುತ್ತಾರೆ. ಒಕ್ಕಲುತನದ ಕೆಲಸಗಳನ್ನು ಮಾಡುತ್ತಾರೆ.

ಮಂಗಲಗಿಯ ಮನೆತನದ ಮೀರಾಸಾಹೇಬರು ಜಮಾಲ ಸಾಹೇಬರ ತಂದೆ. ಅವರು ಕಟ್ಟಾ ಧಾರ್ಮಿಕವಾದಿಗಳಾಗಿದ್ದರು. ದಿನನಿತ್ಯ ಕುರಾನ ಪಠಣ ಮಾಡುವುದು; ಐದುಸಲ ನಮಾಜ ಮಾಡುವುದು ಅವರ ನೇಮವಾಗಿದ್ದಿತು. ಅವರು ತಮ್ಮ ತೊಂಬತ್ತು ವರುಷಗಳ ವಯಸ್ಸಿನವರೆಗೂ ಎಂದೂ ಈ ನೇಮವನ್ನು ತಪ್ಪಲಿಲ್ಲವಂತೆ. ಸಾಯುವ ಹೊತ್ತಿನಲ್ಲೂ ಅವರು ಕುರಾನ ಓದುತ್ತಲೇ ಕಣ್ಣು ಮುಚ್ಚಿದರೆಂದು ಅವರ ಮಗ ಜಮಾಲ ಸಾಹೇಬರು ಹೇಳುತ್ತಾರೆ. ಮೀರಾ ಸಾಹೇಬರದು ದೈವೀ ಭಕ್ತಿಯ ಮನಸ್ಸು. ಆ ಭಕ್ತಿಯ ರೂಪವೇ ವಿಶಾಲ ಭಾವದ ನೆಲೆಯಲ್ಲಿ ಬಂದು ಜಮಾಲ ಸಾಹೇಬರಲ್ಲಿ ನೆಲೆಸಿದಂತೆ ಕಾಣುತ್ತದೆ.

ಮೀರಾಸಾಹೇಬರ ಮನೆತನದ ಹೆಸರು 'ಮಂಗಲಗಿ' ಎಂಬುದಾಗಿದೆ. ಬಹುಶಃ ಅವರ ಹಿರಿಯರು ಹಿಂದೆ ಮಂಗಲಗಿ ಗ್ರಾಮವನ್ನು ಬಿಟ್ಟು ಬಂದು ಡಾಕುಳಗಿಯಲ್ಲಿ ನೆಲೆಸಿರಬೇಕು. ಡಾಕುಳಗಿಯ ಜನರು ಮಂಗಲಗಿಯಿಂದ ಬಂದ ಜಮಾಲರ ಹಿರಿಯರನ್ನು "ಮಂಗಲಗಿ ಮನೆತನದವರೆಂದು" ಕರೆದಿರಬೇಕು.

ಜಮಾಲ ಸಾಹೇಬರು ಖಾಸಗಿ ಶಾಲೆಯಲ್ಲಿ ನಾಲ್ಕನೆಯ ತರಗತಿಯವರೆಗೆ ಓದಿದ್ದಾರೆ. ಅವರಿಗೆ ಹಿಂದಿ-ಮೋಡಿ-ಉರ್ದು ಭಾಷೆಗಳು ಬರುತ್ತವೆ. ಅವರು ಹಿಂದಿಯಲ್ಲಿ ಬರೆಯುತ್ತಾರೆ. ಉರ್ದುವಿನಲ್ಲಿ ಬರೆಯುತ್ತಾರೆ. ಮೋಡಿ ಲಿಪಿಯ ಪರಿಚಯವೂ ಉಳ್ಳವರಾಗಿದ್ದಾರೆ.

ಜಮಾಲ ಸಾಹೇಬರು ಸಂಸಾರಸ್ಥರಾಗಿ ತಮ್ಮ ಉಪಜೀವನದ ಸಲುವಾಗಿ ಗೌಂಡಿ ಕೆಲಸವನ್ನು ಆಯ್ಕೆ ಮಾಡಿಕೊಂಡರು. ಆ ಕೆಲಸವು ಇಲ್ಲದ ಸಮಯದಲ್ಲಿ ಒಕ್ಕಲುತನದ ಕೆಲಸಗಳನ್ನು ಮಾಡಲು ಬೇರೆಯವರ ಹೊಲಗಳಿಗೆ ಹೋಗುತ್ತಾರೆ.

ಜಮಾಲರ ಹೆಂಡತಿ ಅಬ್‌ಜಲ್‌ಬಿ, ಈ ದಂಪತಿಗಳಿಗೆ ಒಟ್ಟು ಹನ್ನೆರಡು ಜನ ಮಕ್ಕಳು.

ಜಮಾಲ ಸಾಹೇಬರ ತಂದೆ ಮೀರಾಸಾಹೇಬರು ತಮ್ಮ ಮನೆತನದ ಗುರುಗಳನ್ನಾಗಿ ಚಿಟಗುಪ್ಪಾದ ಸಯ್ಯದ್‌ಅಲಿ ಅವರನ್ನು ನಂಬಿದ್ದರು. ಈಗಲೂ ಜಮಾಲ ಸಾಹೇಬರು ಧಾರ್ಮಿಕವಾಗಿ ಅದೇ ಪರಂಪರೆಯಲ್ಲಿ ಭಕ್ತಿಯುಳ್ಳವರಾಗಿದ್ದಾರೆ. ಆದರೆ ಜಮಾಲರಲ್ಲಿ ವಿಶಾಲವಾದ ದೃಷ್ಟಿಕೋನವಿದೆ. ಅವರಿಗೆ ಸಕಲ ಧರ್ಮಗಳಲ್ಲಿ ವಿಶ್ವಾಸವಿದೆ. ವೀರಶೈವಧರ್ಮ-ಸಿದ್ಧಾಂತಗಳನ್ನು ಸರಿಯಾಗಿ ತಿಳಿದುಕೊಂಡಿದ್ದಾರೆ. ಅವರಿಗೆ ಹಾರಕೂಡದ ಚೆನ್ನಬಸವ ಶಿವಯೋಗಿ, ಡಾಕುಳಗಿ ಚೆನ್ನಬಸವಸ್ವಾಮಿ, ಇಟಗಿಯ ಚೆನ್ನಮಲ್ಲ, ಧುಮ್ಮನಸೂರಿನ ಸಿದ್ಧಪ್ರಭು ಇವರ ಬಗೆಗೆ ಅಪಾರವಾದ ಭಕ್ತಿಯಿದೆ. ಆದುದರಿಂದಲೇ ಈ ಮಹಾಪುರುಷರನ್ನು ಕುರಿತು ಜಮಾಲರು ಹಾಡುಗಳನ್ನು ರಚಿಸಿದ್ದಾರೆ. ಅದರಲ್ಲೂ "ಧುಮ್ಮನಸೂರಿನ ಸಿದ್ಧಪ್ರಭುಗಳನ್ನು ತಮ್ಮ ತತ್ತ್ವಪದ ಸಾಹಿತ್ಯದ ಗುರುಗಳು" ಎಂದು ಜಮಾಲರು ಭಾವಿಸುತ್ತಾರೆ. ಕಲಿಮುಲ್ಲಾ ಪಾಶಾನ ಧ್ಯಾನವು ಅವರ ಹಾಡುಗಳಲ್ಲಿ ಆಗಾಗ ಪ್ರಕಟಗೊಳ್ಳುತ್ತದೆ.

ಬಾಲ್ಯದಿಂದಲೇ ಜಮಾಲರಿಗೆ ಹಾಡುಗಾರಿಕೆಯ ಕಲೆಯು ಸಿದ್ಧಿಸಿತ್ತು. ಅವರು ಒಳ್ಳೆಯ ಹಾಡುಗಾರರಾಗಿ ಹಲವಾರು ಭಜನೆಗಳಿಗೆ ಹೋಗುತ್ತಿದ್ದುದುಂಟು. ತಮ್ಮ ನಲವತ್ತನೆಯ ವಯಸ್ಸಿನಿಂದ ಪದ್ಯ ಕಟ್ಟುವುದಕ್ಕೆ ಜಮಾಲರು ಆರಂಭ ಮಾಡಿದರಂತೆ. ಇಲ್ಲಿಯವರೆಗೆ ಅವರು ಹಲವಾರು ಪ್ರಕಾರದ ಹಾಡುಗಳನ್ನು ಬರೆದಿರುವರು. ಅವುಗಳಲ್ಲಿ ಮೋಹರಮ್ ಹಾಡುಗಳು; ಭಜನೆ ಹಾಡುಗಳು; ಕೋಲಾಟದ ಹಾಡುಗಳು, ಹಂತಿ ಹಾಡುಗಳು, ಸವಾಲ್-ಜವಾಬ್ ಹಾಡುಗಳು ಒಳಗೊಳ್ಳುತ್ತವೆ.

ಇಟಗಿ ಚೆನ್ನಮಲ್ಲರು ಜಮಾಲರ ಹಾಡುಗಳಿಗೆ ಹೆಚ್ಚಿನ ಪ್ರೋತ್ಸಾಹ ನೀಡಿ ಆಶೀರ್ವದಿಸಿದರು. ತಮ್ಮ ಮಠಕ್ಕೆ ಕರೆಯಿಸಿ ಸನ್ಮಾನ ಮಾಡಿದರು. ಅದರಂತೆ ಜಮಾಲ ಸಾಹೇಬರಿಗೆ ಹಲವಾರು ವೀರಶೈವ ಮಠದ ಸ್ವಾಮಿಗಳವರು ಸತ್ಕಾರ ನೀಡುವುದರ ಮೂಲಕವಾಗಿ ಮನ್ನಣೆ ಮಾಡಿದ್ದಾರೆ. ಜಮಾಲರು "ತಮಗೆ ಜನತೆ ಹೊಗಳುತ್ತಾರೆ. ಸನ್ಮಾನ-ಪ್ರಶಸ್ತಿ ನೀಡುತ್ತಾರೆಂದು" ಹಾಡುಗಳನ್ನು ಬರೆಯಲಿಲ್ಲ. ದೇವರು ತಮಗೆ ಆ ಶಕ್ತಿಯನ್ನು ಕೊಟ್ಟಿದ್ದಕ್ಕಾಗಿ; ಅದನ್ನು ಅವನ ಸೇವೆಗೆಂದು ಅವರು ಹಾಡುತ್ತಾರೆ; ಹಾಡುಗಳನ್ನು ರಚಿಸುತ್ತಾರೆ.

ಜಮಾಲ ಸಾಹೇಬರು ಹಿಂದೂ-ಮುಸ್ಲೀಮ್ ಸಂಸ್ಕೃತಿಯ ಸಮನ್ವಯದಂತೆ ಸಮಾಜದಲ್ಲಿ ಜೀವಿಸುತ್ತಿದ್ದಾರೆ. ಅವರ ಹಣೆಯ ಮೇಲೆ ಮೂರು ಬೆರಳಿನ ವಿಭೂತಿ ಯಾವಗಲೂ ಕಾಣುತ್ತದೆ. ಹಾಗೆಯೇ ಮುಸ್ಲೀಮ್ ಧರ್ಮದ ಲಾಂಛನಗಳೂ ಅವರ ಮೈಮೇಲೆ ಬಿಂಬಿಸುತ್ತವೆ. ಅವರಿಗೆ ವೀರಶೈವ-ಶೈವ ಸಿದ್ಧಾಂತಗಳ ಆಳವಾದ ತಿಳಿಕೆಯಿದೆ.

ಜಮಾಲ ಸಾಹೇಬರು "ಸಯ್ಯದ್‌ಅಲಿ ಶಹ" ಅವರ ಅಂಕಿತದಲ್ಲಿ ತಮ್ಮ ಹಾಡುಗಳನ್ನು ಬರೆದಿರುವರು. ಅವರ ಎರಡು ಹಾಡುಗಳನ್ನು ಇಲ್ಲಿ ಉದ್ಧರಿಸಲಾಗಿದೆ:

ಶರಣು ಗುರುವೆ

ಶರಣು ಗುರುವೆ ಶರಣು ನಿಮಗೆ
ಪರತರ ಪರಮ ಗುರುವೀಗೆ ॥ ಪ ॥

ಪಿಂಡಾಂಡದ ರಹಸ್ಯವ ತಿಳಿಸಿದವಗೆ
ಜಗದ ಉದ್ಧಾರಕಗೆ.
ಹುಟ್ಟಿದ ಮನೆಯ ಆಶಿ ಬಿಡಿಸಿದವಗೆ
ಕೆಟ್ಟ ಆಶೆಗಳ ಕಡಿಸಿದವಗೆ ॥ ೧ ॥

ವೈರಾಗ್ಯದ ವಿಚಾರ ತೊಟ್ಟವಗೆ
ತನ್ನ ರೂಪವನೆ ಶಿಷ್ಯಗ ಕೊಟ್ಟವಗೆ
ಕಾಮ-ಕ್ರೋಧ ಲೋಭ ಸುಟ್ಟವಗೆ
ಭ್ರಮೆಯ ಬೆಂಕಿಯ ಬೇಗೆ ಆರಿಸಿದವಗೆ ॥ ೨ ॥

ಪಂಚರ ವಂಚಿಸಿ ಬಿಟ್ಟವಗೆ
ಹಂಚಾದ ಮನದ ಸಂಚ ತೆಗೆದವಗೆ
ಶ್ರೀಶೈಲಕ್ಕೊಂದು ಪಾದ ಇಟ್ಟವಗೆ
ಕಾಶಿ ಕಾಯದೊಳಗ ನೆಲೆಸಿದವಗೆ ॥ ೩ ॥

ಕಾಲನ ಲೀಲೆಯ ತಿಳಿದವಗೆ
ಕಾಲ ಕರ್ಮಗಳ ಗೆಲಿದವಗೆ
ಶೀಲರೂಪ ಲೋಭ ಗುರುರಾಯಗೆ
ಶರಣು ಶರಣು ಗುರುವೆ ನಿಮಗೆ ॥ ೪ ॥

ಡಾಕುಳಗಿ ಒಳಗಿರುವದು ಮ್ಯಾಲ
ಕಾಕುಮನ ಕಳೆಯುವುದು ಗುರುಕೀಲ

ಸಯ್ಯದ್ ಅಲಿಶಹ ಹೇಳಿದ ಶೀಲ
ಮರೆಯದೆ ಅರಿತು ಶರಣೆನ್ನಿರಿ ಗುರುವೀಗ ॥ ೫ ॥

ಎಲ್ಲವೂ ಅಲ್ಲಾನೆ

ಅವನು ರಾಮ ಅಂದ; ಅವನು ರಹೀಮ ಅಂದ
ಎಲ್ಲಾವೂ ಅಲ್ಲಾನೆ ಎಂದ ॥ ಪ ॥

ನೀನೆ ರಾಮನು ನೀನೆ ರಹೀಮನು
ನೀನೆ ಶರಣನು, ನೀನೆ ಫಕೀರನು
ನೀನೆ ಪಿಂಡನು, ಬ್ರಹ್ಮಾಂಡನು
ನೀನೆ ಎಲ್ಲವೂ ಅಲ್ಲಾನು ನೀನು ॥ ೧ ॥

ಯೋಗ ದೊಡ್ಡದೇನು ?
ಭಕ್ತಿ ದೊಡ್ಡದೇನು ?
ಕಾರ್ಯದೊಡ್ಡದೇನು ?
ಕಾರಣ ದೊಡ್ಡದೇನು ? ॥ ೨ ॥


ಜ್ಞಾನ ದೊಡ್ಡದೆಂದೆ
ವೈರಾಗ್ಯ ದೊಡ್ಡದೆಂದೆ
ಎಲ್ಲವೂ ಒಂದೆ ಎಂದೆ
ಅಲ್ಲಾನ ಮುಂದೆ ಎಲ್ಲಾವೂ ಒಂದೆ ॥ ೩ ॥

ನೀನೂ ಅಲ್ಲಾನೆ, ನಾನೂ ಅಲ್ಲಾನೆ
ಅವನೂ ಅಲ್ಲಾನೆ, ಅವಳೂ ಅಲ್ಲಾನೆ
ಏಸೂ ಅಲ್ಲಾನೆ, ಜೇಸೂ ಅಲ್ಲಾನೆ
ಎಲ್ಲಾ ರೂಪಾ ಅಲ್ಲಾನೆ, ಬ್ಯಾರೆ ಮತ್ತೊಂದು ಇಲ್ಲಾನೆ ॥ ೪ ॥


ಡಾಕುಳಗಿ ಊರಾ ಒಂದೆ
ಅಲ್ಲನ ಜನರೆಲ್ಲ ಚಂದೆ

ಬ್ಯಾರೆ ಯಾರೂ ಇಲ್ಲ ಅಂದೆ
ಸಯ್ಯದ್ ಅಲಿಶಹಾ ಅಲ್ಲಾ ಒಂದೆ ॥ ೫ ॥

(ಈ ವಿವರಗಳನ್ನು ಸ್ವತಃ ಕವಿಗಳೇ ನೀಡಿದ್ದಾರೆ.)



ಜಮಾಲ ಸಾಹೇಬರ ಮನೆ (ಡಾಕುಳಗಿ).



ಜಮಾಲ ಸಾಹೇಬ ಮಂಗಲಗಿ



ಶರಣ ಸಂಸ್ಕೃತಿಯ ಹಿನ್ನೆಲೆ ಹೊಂದಿರುವ ಜಮಾಲ ಸಾಹೇಬರು

೧೪. ಅಜೀಜ್ ಪಟೇಲ (ಕ್ರಿ.ಶ.ಸು. ೧೯೩೮–೨೦೦೯)

ಬೀದರ ಜಿಲ್ಲೆಯ ಹುಮನಾಬಾದ ತಾಲ್ಲೂಕಿನಲ್ಲಿ ಬರುವ ಮದ್ದಿನವಾಡಿ ಗ್ರಾಮವು ಅಜೀಜ್ ಪಟೇಲ ಅವರ ಸ್ವಗ್ರಾಮವಾಗಿದೆ. ಮದ್ದಿನವಾಡಿಗೆ ಜನರು ಅಮೀರಾಬಾದ ವಾಡಿಯೆಂತಲೂ ಕರೆಯುತ್ತಾರೆ. 'ಪಟೇಲ' ಎಂಬುದು ಕವಿಗಳ ಮನೆತನದ ಹೆಸರಾಗಿದೆ. ಮದ್ದಿನವಾಡಿ ಗ್ರಾಮದ ಮಾಲಿಪಾಟೀಲ ಮನೆತನಕ್ಕೆ ಅವರು ಸೇರುತ್ತಾರೆ. ಆದುದರಿಂದಲೇ ಕವಿಗಳನ್ನು ಜನರು 'ಅಜೀಜ್‌ಪಟೇಲ್' ಎಂದು ಕರೆದಿರುವರು.

ಮದ್ದಿನವಾಡಿಯ ಶಮಶೋದ್ದೀನ್ ಪಟೇಲರು ಗ್ರಾಮದ ಪಟೇಲಗಿರಿಯನ್ನು ನೋಡಿಕೊಳ್ಳುತ್ತಿದ್ದರು. ಸ್ವಭಾವತಃ ಒಳ್ಳೆಯ ವ್ಯಕ್ತಿಗಳಾಗಿ ಗ್ರಾಮದ ಜನರಿಗೆ ಬೇಕಾದ ಗೌರವದ ವ್ಯಕ್ತಿಗಳೇ ಆಗಿದ್ದರು. ಅವರು ಖಾಸಗಿ ಶಾಲೆಯಲ್ಲಿ ಓದಿ ಉರ್ದು-ಮೋಡಿ ಭಾಷೆಗಳನ್ನು ಕಲಿತುಕೊಂಡಿದ್ದರು. ಇವು ಅವರ ಗೌಡಕಿಯ ಅಧಿಕಾರ ನಿಭಾಯಿಸುವಿಕೆಯಲ್ಲಿ ಸಾಕಷ್ಟು ಉಪಯುಕ್ತವಾಗಿದ್ದವು.

ಶಮಶೋದ್ದೀನರ ಹೆಂಡತಿ–ಅಹ್ಮದ್‌ಬಿ. ಧಾರ್ಮಿಕ ಸ್ವಭಾವದ ಹೆಣ್ಣು ಮಗಳು. ಈ ದಂಪತಿಗಳ ಮಗನಾಗಿ ಅಜೀಜ್ ಪಟೇಲರು ಕ್ರಿ.ಶ. ೧೯೩೮ರಂದು ಹುಟ್ಟಿದರು. ಅಜೀಜ್ ಪಟೇಲರಿಗೆ ಒಬ್ಬ ಕಿರಿಯ ಸಹೋದರಿಯು ಇದ್ದಳು. ಅವಳ ಹೆಸರು ಆಶಾಬೇಗಮ್.

ಅಜೀಜ್ ಪಟೇಲರ ವಿದ್ಯಾಭ್ಯಾಸವು ಉರ್ದು ಮಾಧ್ಯಮದಲ್ಲಿ ಆರಂಭವಾಯಿತು. ಉರ್ದುಭಾಷೆಯೊಂದಿಗೆ ಅವರು ಸ್ವಪ್ರಯತ್ನದಿಂದ ಕನ್ನಡ, ಹಿಂದಿ, ಮರಾಠಿ ಭಾಷೆಗಳನ್ನು ಕಲಿತುಕೊಂಡರು. ದೊಡ್ಡ ಹಳ್ಳಿಖೇಡದ ಉರ್ದು ಶಾಲೆಯಲ್ಲಿ ಅವರು ಎಂಟನೆಯ ವರ್ಗದವರೆಗೂ ಓದಿ ಅನಂತರ ಲೋಕದ ರಂಗಕ್ಕೆ ಧುಮುಕಿದರು.

ಅಜೀಜ್ ಪಟೇಲರು ಆರ್ಥಿಕ ಸುಸ್ಥಿತಿಯಿಂದ ಕೂಡಿದವರಾಗಿದ್ದರು. ಒಳ್ಳೆಯ ಒಕ್ಕಲುತನದ ವ್ಯವಸ್ಥೆ ಇದ್ದಿತು. ಕೃಷಿಗೆ ಫಲವತ್ತಾದ ಸಾಕಷ್ಟು ಜಮೀನು ಇದ್ದಿತು. ಅಜೀಜ್ ಪಟೇಲರ ತಂದೆಯವರಾದರೂ ಉತ್ತಮ ಕೃಷಿಕರೇ ಆಗಿದ್ದರು. ಅತ್ಯಂತ ಕಾಳಜಿಯಿಂದ ಅವರು ಕೃಷಿಕಾರ್ಯ ನಡೆಸುತ್ತಿದ್ದರು. ಅಜೀಜ್ ಪಟೇಲರಾದರೂ ತಂದೆಯ ಹಾದಿಯಲ್ಲಿಯೇ ಮುಂದುವರೆದು ಆರ್ಥಿಕ ಸಬಲತೆಗಾಗಿ ಒಕ್ಕಲುತನದ

ಸುಧಾರಣೆ ಮಾಡಿದರು. ಗೌಡರಾಗಿ ಊರಿನ ಆಡಳಿತ ನಡೆಸಿದಂತೆ; ಕೃಷಿಕರಾಗಿ ಕೃಷಿಕಾಯಕವನ್ನು ಅವರು ಶ್ರದ್ಧೆಯಿಂದ ಕೈಕೊಂಡರು.

ಅಜೀಜ್ ಪಟೇಲ ಅವರದು ದೊಡ್ಡ ಸಂಸಾರವಾಗಿರುವಂತೆ; ಸುಖದ ಸಂಸಾರವೂ ಆಗಿತ್ತು. ಅವರ ಹೆಂಡತಿ ಸುಗರಾಬೇಗಮ್. ಈ ದಂಪತಿಗಳಿಗೆ ಮಹಮ್ಮದ್ ಪಟೇಲ, ಅಲ್ಲಾವುದ್ದೀನ ಪಟೇಲ್, ಸಲೀಮ್ ಪಟೇಲ್, ಖಾಜಾ ಪಟೇಲ್. ರಿಯಾಜೋದ್ದೀನ್ ಪಟೇಲ್ ಎಂಬ ಐದು ಜನ ಗಂಡು ಮಕ್ಕಳೂ, ಖಾಜಾ ಬೇಗಮ್, ನಜಮಾ ಬೇಗಮ್‌ರೆಂಬ ಇಬ್ಬರು ಹೆಣ್ಣುಮಕ್ಕಳೂ ಇದ್ದಾರೆ.

ಅಜೀಜ್ ಪಟೇಲರದು ಸಮನ್ವಯದ ಬದುಕು. ಅವರ ಜೀವನದಲ್ಲಿ ಹಿಂದೂ ಮತ್ತು ಮುಸ್ಲೀಮ್ ಸಂಸ್ಕೃತಿಯ ಸಮನ್ವಯತೆಯಿದೆ. ಅವರು ವೀರಶೈವತತ್ತ್ವ-ಸಿದ್ಧಾಂತಗಳ ಬಗೆಗೆ ಸರಿಯಾದ ತಿಳಿಕೆಯುಳ್ಳವರಾಗಿದ್ದರು. ಅವರಿಗೆ ಹಲವಾರು ವೀರಶೈವ ಶರಣ-ಸಂತ-ಮಹಾಪುರುಷರ ಸಂಪರ್ಕವಿದ್ದಿತು. ಪುರಾಣ ಪ್ರವಚನ-ಭಜನೆಯಂತಹ ಕಾರ್ಯಕ್ರಮಗಳಲ್ಲಿ ಅವರು ಹೋಗಿ ಭಾಗವಹಿಸುತ್ತಿದ್ದರು. ವೀರಶೈವ ಪುಣ್ಯ ಪುರುಷರನ್ನು ಕುರಿತು ಭಕ್ತಿಯ ಗೀತೆಗಳನ್ನು ಬರೆದು ಹಾಡುತ್ತಿದ್ದರು. ಹುಡಗಿ ಕರಿಬಸವ, ನಾವದಗಿ ರೇವಪ್ಪಯ್ಯ, ಕಲ್ಯಾಣ ಬಸವಣ್ಣ, ಕಲಬುರ್ಗಿ ಶರಣಬಸವ, ರೇಕುಳಗಿ ಶಂಭುಲಿಂಗ ಇವರಲ್ಲಿ ಅಜೀಜ್ ಪಟೇಲರಿಗೆ ಭಕ್ತಿಯಿದ್ದಿತು.

ಬೀದರ ಜಿಲ್ಲೆ ಹುಮನಾಬಾದ ತಾಲ್ಲೂಕಿನಲ್ಲಿ ಬರುವ ಸಿಂದಬಂದಗಿ ಗ್ರಾಮದ ನೀಲಕಂಠೇಶ್ವರ ಸ್ವಾಮಿಗಳು ಪಟೇಲರ ಗುರುಗಳಾಗಿದ್ದರು. ಅಜೀಜ್ ಪಟೇಲರು ನಿಲಂಗಾದ ಪೀರ್ ಪಾಶಾ ಖಾದ್ರಿಯನ್ನು ತಮ್ಮ ಧರ್ಮದ ಗುರುವೆಂದು ಭಾವಿಸಿದ್ದರು. ತಮ್ಮ ಊರಿನ ಚಂದಾಹುಸೇನಿ, ಲಕ್ಷ್ಮೀ, ಬಸವಣ್ಣ ದೇವರನ್ನು ಅವರು ಶ್ರದ್ಧೆಯಿಂದ ನಡೆದುಕೊಳ್ಳುತ್ತಿದ್ದರು.

ಅಜೀಜ್ ಪಟೇಲರು ಚಿಕ್ಕಂದಿನಲ್ಲಿಯೇ ತಮ್ಮ ತಂದೆ-ತಾಯಿಗಳನ್ನು ಕಳೆದುಕೊಂಡವರಾಗಿದ್ದರು. ಹೀಗಾಗಿ ದೊಡ್ಡಪ್ಪನವರಾಗಿದ್ದ ಮಂಜಲೇ ಪಟೇಲ ಅವರ ಪಾಲನೆ-ಪೋಷಣೆಯಲ್ಲಿಯೇ ಬೆಳೆದರು. ಮಂಜಲೇ ಪಟೇಲ ಅವರು ಸ್ವತಃ ಹಾಡುಗಳನ್ನು ರಚಿಸುತ್ತಿದ್ದರು. ಅವರ ರಚನೆಯಲ್ಲಿ ಮೋಹರಮ್ ಹಾಡುಗಳು ಇವೆ. ಅವರು ತಾವು ಕಟ್ಟಿದ ಹಾಡುಗಳನ್ನು ಒಳ್ಳೆಯ ಧ್ವನಿಯಲ್ಲಿ ಹಾಡುತ್ತಿದ್ದರು. ಮಂಜಲೇ ಪಟೇಲರ ಕಾವ್ಯಶಕ್ತಿ ಮತ್ತು ಹಾಡುಗಾರಿಕೆಯ ಕಲೆ-ಇವು ಬಾಲಕ ಅಜೀಜ್ ಪಟೇಲರ ಮನದ ಮೇಲೆ ಗಾಢವಾದ ಪರಿಣಾಮವನ್ನುಂಟು ಮಾಡಿದವು. ಅಜೀಜ್ ಪಟೇಲರು ತಾರುಣ್ಯ ವಯದಿಂದಲೇ ಹಾಡುಗಳನ್ನು ಹಾಡುವುದಕ್ಕೆ ಆರಂಭ ಮಾಡಿದರು. ಹಾಗೆಯೇ ತಮ್ಮದೇ ಆದ ರೀತಿಯಲ್ಲಿ ಪದ್ಯಗಳನ್ನು ರಚಿಸತೊಡಗಿದರು.

ಅಜೀಜ್ ಪಟೇಲರ ಹಾಡುಗಳಲ್ಲಿ ಮೋಹರಮ್ ಹಾಡುಗಳು, ಭುಲಾಯಿ ಹಾಡುಗಳು, ತತ್ತ್ವಪದಗಳು ಇವೆ.

ಅಜೀಜ್ ಪಟೇಲರು ತಮ್ಮ ತತ್ತ್ವಪದಗಳಿಗೆ ನೀಲಕಂಠ ಗುರುವಿನ ಮುದ್ರೆಯನ್ನು ಇರಿಸಿದ್ದಾರೆ. ಅವರ ಎರಡು ಹಾಡುಗಳನ್ನು ಇಲ್ಲಿ ಕೊಡಲಾಗಿದೆ:

ಇಂದು ಮಾಡಿದ್ದು ಮುಂದ ಉಣ್ಣಬೇಕು

ಇಂದು ಮಾಡಿದ್ದು ಮುಂದ ಉಣ್ಣಬೇಕು
ಹಿಂದ ಮುಂದ ನೋಡದೆ ಭೋಗಿಸಬೇಕು ॥ ಪ ॥

ಎರಡು ಕೂಡಿಸಿ ಕಾರ್ಯವ ಮಾಡು
ಶಿವ-ಜೀವರು ಇರುತಾರ ಜೋಡು
ಭಾವದ ಬಣವೆಯ ಒಟ್ಟಿ ನೋಡು
ಶ್ರವದ ಗೊಡವೆಯ ಬಿಟ್ಟು ನೋಡು ॥ ೧ ॥

ಶಿವ ಜೀವ ಪ್ರಕೃತಿ ಮೂರು ಕೂಡಿ
ಭವದಲ್ಲಿ ನೀನು ಬಿದ್ದು ಒದ್ದ್ಯಾಡಿ
ಮೂರು ವ್ಯವಹಾರ ನಡಿಸುವದು ನೋಡಿ
ಮೂರು ಬಿಟ್ಟು ನಡೆಯಲಾರದು ವ್ಯವಹಾರ ಖೋಡಿ ॥ ೨ ॥

ಅಷ್ಟ ವಿಚಾರವನು ತಿಳಿದು ನೀ ನೋಡು
ಆತ್ಮ-ಪರಮಾತ್ಮನ ಒಂದು ನೀ ಮಾಡು
ಇಂದು ಮಾಡಿದ್ದು ಮುಂದು ಉಣ್ಣುವದು ಕೇಡು
ಅಂದಂದಿಗೆ ಕೈ ಮ್ಯಾಲದ ಕರ್ಮದ ಜೋಡು ॥ ೩ ॥

ಮಾನವಗ ಯಮ ಬೆನ್ನ ಹತ್ತ್ಯಾನ
ಖೂನ ಹಿಡಿದು ಅವನ ಹಿಡಿತಾನ
ಅನುಮಾನ ಬ್ಯಾಡೋ ತಮ್ಮ ನಿನ್ನ ಹಿಂದೆ ಹಾನ
ಕೊಟ್ಟಿದರಿಂದೆ ಕೊಳ್ಳುತಾನ ॥ ೪ ॥

ದೇಶದೊಳಗ ಸಿಂದಬಂದಗಿ ಊರ ಚಂದ
ಈಶ ನೀಲಕಂಠನ ನುಡಿ ಭಾಳ ಆನಂದ
ಇಂದ ಮಾಡಿದ್ದು ಮುಂದ ಉಣಬೇಕು ಅಂದ
ಮಂದಮತಿಗಳು ತಿಳಿಯಿರಿ ಇದು ಅರಿವಿಲಿಂದ ॥ ೫ ॥

ಶರಣರ ಸಂಗದಿಂದ ಜ್ಞಾನ ಉತ್ಪನ್ನ

ಕಟ್ಟಿಗೀಗಿ ಅಗ್ನಿ ಪುಟವ ಕೊಟ್ಟಂತೆ
ದಿಟ್ಟ ಶರಣರ ಸಂಗದಿಂದ ಜ್ಞಾನ ಉತ್ಪತ್ತಿಯಂತೆ ॥ ಪ ॥

ಸರ್ವವೂ ಶಿವಮಯ ಆಯಿತೆನ್ನು
ಭವದ ಬಾಧೆ ಹೋಯಿತೆನ್ನು
ನಾ ಮಾಡಿದ ಕರ್ಮ ನನಗೆ ತಿಂದಿತೆನ್ನು
ಜ್ಞಾನದಿಂದ ಅಜ್ಞಾನ ಹೋಯಿತೆನ್ನು ॥ ೧ ॥

ಸುಜನರು ಹೇಳಿದ ಜಾಣನುಡಿ
ಕುಜನರು ಕೇಳರು ಅವರ ನುಡಿ
ಸದ್ವಿಚಾರದ ಮಂತ್ರದ ಸರಣಿ
ಬರೆದು ಹೇಳುತಾನ ಗುರು ಕರುಣಿ ॥ ೨ ॥

ಆರು ಸ್ಥಲಗಳ ಮರ್ಮ ಅರಿಬೇಕು
ಮೂರು ಸ್ಥಲಗಳ ಮರ್ಮ ತಿಳಿಬೇಕು
ಒಂಬತ್ತು ಸ್ಥಲಗಳ ಜ್ಞಾನ ಮೀರಿರಬೇಕು
ಹನ್ನೊಂದು ಸ್ಥಲಗಳಲ್ಲಿ ನೀನಿರಬೇಕು ॥ ೩ ॥

ಶರಣರು ಹೇಳುತಾರ ಸ್ಥಲದವಿಚಾರ
ಅವರಿಂದ ಬಂದೀತು ಸ್ಥಲಾಚಾರಾ
ಶರಣರ ಅನುಭಾವ ಭವದ ಕೇಡೆಂದು
ಶಿವದಿಂದೆ ನಡಿವದು ಹಿತವೆಂದು ॥ ೪ ॥


ಧರಿಯೊಳು ಮೆರೆಯುವ ಮದ್ದಿನವಾಡಿ
ಗುರು ನೀಲಕಂಠನ ದರುಶನ ಮಾಡಿ

ಪರಿಪರಿಯಿಂದಲಿ ಶರಣರ ಹಾಡಿ
ಶರಣರ ಜ್ಞಾನದ ಭಜನೆಯ ಮಾಡಿ ॥ ೫ ॥

(ಈ ವಿವರಗಳನ್ನು ಕವಿಗಳ ಮಗ ಸಲೀಮ್ ಪಟೇಲ ಅವರು ನೀಡಿದ್ದಾರೆ.)




ಅಜೀಜ್ ಪಟೇಲ
ಅವರ ಮನೆ
(ಮದ್ದಿನವಾಡಿ)




ಅಜೀಜ್ ಪಟೇಲರು
ಕುಳಿತುಕೊಳ್ಳುತ್ತಿದ್ದ
ಮಂಚ.



ಅಜೀಜ್ ಪಟೇಲರ
ಆರಾಧ್ಯ ದೇವರು
ಮಹಿಬೂಬ
ಸುಭಾನಿ
ದರ್ಗಾ
(ಮದ್ದಿನವಾಡಿ)



ಅಜೀಜ್‌ಪಟೇಲರ
ಆರಾಧ್ಯ ದೇವತೆ
ಲಕ್ಷ್ಮಿದೇವಾಲಯ
(ಮದ್ದಿನವಾಡಿ).



ಅಜೀಜ್ ಪಟೇಲರ
ಸಮಾಧಿ.

೧೫. ಬಂಡೆಪ್ಪ ಖೂಬಾ (ಕ್ರಿ.ಶ.ಸು. ೧೯೩೮)

ಬಿ.ಎಸ್.ಖೂಬಾಯೆಂದೇ ಖ್ಯಾತರಾಗಿರುವ ಬಂಡೆಪ್ಪ ಖೂಬಾ ಅವರು "ಖೂಬ್ ಬಹುತ್ ಖೂಬ್" ಎಂದು ಶ್ಲಾಘಿಸುವಂತಹ ಲೇಖಕರು ಮತ್ತು ಕವಿಗಳು. ಪ್ರಚಾರಕ್ಕಾಗಿ ಎಂದೂ ಯಾರಿಗೂ ದುಂಬಾಲು ಬಿದ್ದವರಲ್ಲ. "ಮಾಡಿಯೂ ಮಾಡದಂತೆ" ಮೌನವಾಗಿಯೇ ಸಾಹಿತ್ಯ ಕೃಷಿಯಲ್ಲಿ ತಮ್ಮನ್ನು ತೊಡಗಿಸಿಕೊಂಡವರು. ಯಾರ ಮುಂದೆಯೂ ಅವರು ತಮ್ಮ ಬಗೆಗೆ ಹೇಳಿಕೊಂಡವರಲ್ಲ. ಪರಿಚಯವಿರುವವರು ಯಾರಾದರೂ ಅವರನ್ನು ಕುರಿತು ಬೇರೆಯವರಿಗೆ ಹೇಳತೊಡಗಿದರೆ ಸಂಕೋಚ ಪಡುವ ಸ್ವಭಾವದವರು. ಅತ್ಯುತ್ತಮ ಶಿಕ್ಷಕರು. ಮಕ್ಕಳಿಗೆ ಮನ ಮುಟ್ಟುವಂತೆ ಪಾಠ-ಪ್ರವಚನಗಳನ್ನು ಮಾಡುವಲ್ಲಿ ಅವರಿಗೆ ಎಲ್ಲಿಲ್ಲದ ಆನಂದವಿದ್ದಿತು.

ಬೀದರ ಜಿಲ್ಲೆ ಹುಮನಾಬಾದ ತಾಲ್ಲೂಕಿನ ಗಡವಂತಿ ಗ್ರಾಮವು ಖೂಬಾ ಅವರ ಮೂಲನೆಲೆ. ಆ ಮನೆಗೆ ಅವರು 'ಕಲಬುರ್ಗಿ' ಮನೆತನವೆಂದು ಒಪ್ಪಿಕೊಂಡು ಬಂದವರು. 'ಬಂಡೆಪ್ಪ ಕಲಬುರ್ಗಿ' ಎಂದು ಕರೆಯಿಸಿಕೊಳ್ಳುವದಕ್ಕಿಂತಲೂ ಅವರು 'ಬಂಡೆಪ್ಪ ಖೂಬಾ'ಯೆಂದು ಹೆಚ್ಚು ಪರಿಚಿತರಾಗಿದ್ದಾರೆ.

ಬಂಡೆಪ್ಪನವರ ತಂದೆ ಶರಣಪ್ಪ ಖೂಬಾ ಅವರು. ವೀರಶೈವ ಸಂಸ್ಕೃತಿಯ ಅನುಸಂಧಾನಕರು; ಸದಾಚಾರ ಶೀಲರು. ತಾಯಿ ರತ್ನಮ್ಮನವರು ಪತಿಗೆ ಒಪ್ಪುವ ಸತಿ. ದಿ. ೮-೭-೧೯೩೮ರಂದು ಬಂಡೆಪ್ಪನವರು ಜನಿಸಿದರು. ಬೀದರ ಜಿಲ್ಲೆ ಬಸವಕಲ್ಯಾಣ ತಾಲ್ಲೂಕಿನಲ್ಲಿ ಬರುವ ರಾಜೋಳ ಗ್ರಾಮವು ಬಂಡೆಪ್ಪನವರ ಜನ್ಮಸ್ಥಳವಾಗಿದೆ.

ಬಂಡೆಪ್ಪನವರಿಗೆ ಅತ್ಯುತ್ತಮ ಸಂಸ್ಕಾರ ದೊರಕಿದಂತೆ ಸತ್ವಪೂರ್ಣವಾದ ಶಿಕ್ಷಣವೂ ದೊರಕಿತು. ವಿದ್ಯಾರ್ಥಿದೆಸೆಯಿಂದಲೂ ಚುರುಕು ಬುದ್ಧಿಯ; ಸೂಕ್ಷ್ಮ ಮನಸ್ಸಿನವರಾದ ಬಂಡೆಪ್ಪನವರ ವ್ಯಕ್ತಿತ್ವದಲ್ಲಿ "ಶಿಕ್ಷಕ", "ಕವಿ", "ತತ್ತ್ವಜ್ಞಾನಿ" ಈ ಮೂರು ಶಕ್ತಿಗಳು ಸಂಗಮವಾಗಿವೆ. ಅವುಗಳ ಸ್ಪಷ್ಟ ಸ್ವರೂಪವು ಪ್ರಕಟಗೊಳ್ಳುವುದಕ್ಕೆ ಅವರ ಹಿರಿಯರು ತಕ್ಕ ಪರಿಸರವನ್ನು ರೂಪಿಸಿಕೊಟ್ಟರು. ಮೊದಲು ಅವರು ಶಿಕ್ಷಕರಾಗಿ ಪ್ರಾಥಮಿಕ ಶಾಲೆಯೆಡೆಗೆ ನಡೆದರು. ಪ್ರಾಥಮಿಕ ಹಂತದ ವಿದ್ಯಾರ್ಥಿಗಳ ನಡುವೆ ನಿಂತು;

ಮಕ್ಕಳ ಮನವನ್ನು ಅರಳಿಸಿದರು. ಸುಜ್ಞಾನದೆಡೆಗೆ ಅವರನ್ನು ಹೊರಳಿಸಿದರು. ಅತ್ಯುತ್ತಮ ಶಿಕ್ಷಕ ವ್ಯಕ್ತಿತ್ವಕ್ಕೆ ಪದೋನ್ನತಿ ದೊರಕಿ, ಪ್ರೌಢಶಾಲೆಯಲ್ಲಿನ ವಿದ್ಯಾರ್ಥಿಗಳಿಗೆ ಬೋಧೆ ಮಾಡುವ ಅವಕಾಶ ದೊರಕಿತು. ಬಂಡೆಪ್ಪನವರು ಬರೀ ಮಕ್ಕಳಿಗೆ ಅಥವಾ ವಿದ್ಯಾರ್ಥಿಗಳಿಗೆ ಕಲಿಸುವ ಶಿಕ್ಷಕರಾಗಲಿಲ್ಲ; ತಾವು ವಿದ್ಯಾರ್ಥಿಗಳಾಗಿ ಕಲಿಯುತ್ತಲೆ ಶಿಕ್ಷಕ ವೃತ್ತಿಯನ್ನು ನಿರ್ವಹಿಸಿದವರು. ಹೀಗಾಗಿ ಅವರು ಕನ್ನಡದಲ್ಲಿ ಎಂ.ಎ; ಹಿಂದಿಯಲ್ಲಿ ಎಂ.ಎ ಪದವಿಗಳನ್ನು ಪೂರೈಸಿದರು. ಬಿ.ಇಡಿ. ಪದವಿಯನ್ನು ರಾಷ್ಟ್ರಭಾಷೆ ಮತ್ತು ಸಾಹಿತ್ಯದ ವಿಶೇಷ ಅಧ್ಯಯನಕ್ಕೆ ಪೂರಕವಾಗಿಯೇ ಪೂರೈಸಿಕೊಂಡರು. ದಿ.೧೫-೩-೧೯೫೯ರಲ್ಲಿ ವೃತ್ತಿ ಬದುಕಿಗೆ ಪಾದಾರ್ಪಣೆ ಮಾಡಿದ ಬಂಡೆಪ್ಪನವರು ದಿ.೩೧-೭-೧೯೯೬ರ ವರೆಗೆ ಸಾರ್ಥಕವಾದ ಸೇವೆ ಸಲ್ಲಿಸಿದರು.

ಬಂಡೆಪ್ಪನವರ ಕೌಟುಂಬಿಕ ಜೀವನ ಸುಖ-ಶಾಂತಿಯಿಂದ ಕೂಡಿದ್ದು; ಪತ್ನಿ ಅಯ್ಯಮ್ಮನವರು. ಈ ದಂಪತಿಗಳಿಗೆ ಈಶ್ವರ-ವಿರುಪಣ್ಣಾ ಎಂಬ ಇಬ್ಬರು ಮಕ್ಕಳು. ಮಂಗಲಾ, ಸುಜಾತಾ, ಜಯಶ್ರೀ. ಭಾಗ್ಯಶ್ರೀ ಎಂಬ ನಾಲ್ಕು ಜನ ಪುತ್ರಿಯರು.

ಬಂಡೆಪ್ಪನವರ ವೃತ್ತಿ ಶಿಕ್ಷಕರದಾಗಿದ್ದಂತೆ; ಪ್ರವೃತ್ತಿ ಕವಿಯದಾಗಿತ್ತು; 'ಸಾಹಿತಿ'ಯದಾಗಿತ್ತು. ಹೀಗಾಗಿ ಅವರು ಹಲವಾರು ಕವನಗಳನ್ನು ಬರೆದು ಪ್ರಕಟಿಸಿದರು. ಹಲವಾರು ಕತೆಗಳನ್ನು ಬರೆದು ಹೊರಹಾಕಿದರು. ಹಿಂದಿ ಸಾಹಿತ್ಯದಿಂದ ಹಲವಾರು ಕತೆಗಳನ್ನು ಕನ್ನಡಕ್ಕೆ ಅನುವಾದ ಮಾಡಿದರು. ಕನ್ನಡದ ಅತ್ಯುತ್ತಮ ಗ್ರಂಥಗಳನ್ನು ಹಿಂದಿಗೆ ಭಾಷಾಂತರಗೊಳಿಸಿದರು. ಕವಿಗಳಾಗಿ; ಕತೆಗಾರರಾಗಿ, ತತ್ತ್ವಪದಕಾರರೂ ಆಗಿದ್ದಾರೆ. ಅವರು "ಸರಸ್ವತಿ ತನಯಜಿಮ್ಮ" ಯೆಂಬ ಕಾವ್ಯ ನಾಮದಿಂದ ಶಿಷ್ಟಕಾವ್ಯಗಳನ್ನು ಬರೆದಿರುವರು, "ಹುಲಿಯ ಸಿದ್ಧೇಶ್ವರ" ಎಂಬ ಅಂಕಿತದಿಂದ ವಚನ ಮತ್ತು ತತ್ತ್ವಪದಗಳನ್ನು ರಚಿಸಿರುವರು. ಇಲ್ಲಿಯ ವರೆಗಿನ ಅವಧಿಯಲ್ಲಿ ಅವರು ರಚಿಸಿರುವ ಒಟ್ಟು ಕೃತಿಗಳ ಸಂಖ್ಯೆ ಹದಿನೈದನ್ನು ಮೀರಿದೆ. ನಾಡಿನ ಪ್ರಸಿದ್ಧ ಸಾಹಿತ್ಯಕ ಪತ್ರಿಕೆ, ಸಂಚಿಕೆ-ಸಂಪುಟಗಳಲ್ಲಿ ಖೂಬಾ ಅವರ ಕತೆ-ಕವನ ಲೇಖನಗಳು ಪ್ರಕಟವಾಗಿವೆ.

ಬಂಡೆಪ್ಪ ಖೂಬಾ ಅವರು ಎಂದೂ ಪ್ರಶಸ್ತಿಗಳ ಬಗೆಗೆ ಒಲವು ತೋರಿದವರಲ್ಲ. ಅವರ ವಾಙ್ಮಯ ಸಾಧನೆಗೆ ಒಲಿದು ಬಂದ ಹಲವು ಪ್ರಶಸ್ತಿ-ಪುರಸ್ಕಾರ, ಮಾನ-ಸಮ್ಮಾನಗಳಿವೆ. ಅವುಗಳಲ್ಲಿ ಪ್ರಮುಖವಾದವುಗಳನ್ನು ಇಲ್ಲಿ ಉಲ್ಲೇಖಿಸಲಾಗಿದೆ.

ಬೀದರ ಜಿಲ್ಲಾ ಅತ್ಯುತ್ತಮ ಶಿಕ್ಷಕ ಪ್ರಶಸ್ತಿ (೧೯೯೪), ತಾಲ್ಲೂಕಾ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಸ್ಥಾನ(೧೯೯೭); ಬೀದರ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ (೧೯೯೭), ಗುಲಬರ್ಗಾ ವಿಶ್ವವಿದ್ಯಾಲಯ ರಾಜ್ಯೋತ್ಸವ ಪ್ರಶಸ್ತಿ (೧೯೯೯), ಭಾಲ್ಕಿಯ ಕನ್ನಡ

ಸಂಘದ ಪ್ರಶಸ್ತಿ (೨೦೦೩), ಬೀದರಿನ ಸುರಭಿ ಪ್ರಶಸ್ತಿ (೨೦೦೪), ಭಾಲ್ಕಿಯ ಪಟ್ಟದದೇವರ ಶತಮಾನೋತ್ಸವ ಸಮಾರಂಭದಲ್ಲಿ ಸನ್ಮಾನ (೨೦೦೪)ಇವು ಕೆಲವಾಗಿವೆ. ಗುಲ್ಬರ್ಗ ವಿಶ್ವವಿದ್ಯಾಲಯದಲ್ಲಿ ಬಿ.ಎಸ್.ಖೂಬಾ ಅವರ ಬಗೆಗೆ ಸಂಶೋಧನೆ ಮಾಡಿ ಒಬ್ಬ ವಿದ್ಯಾರ್ಥಿ ಎಂ.ಫಿಲ್ ಪದವಿಯನ್ನು ಪಡೆದುಕೊಂಡಿದ್ದಾನೆ.

ಬಿ.ಎಸ್.ಖೂಬಾ ಅವರು ನಿವೃತ್ತಿಯ ಬದುಕನ್ನು ಸಾಹಿತ್ಯ ಮತ್ತು ಆಧ್ಯಾತ್ಮಕ್ಕೆ ಅರ್ಪಿಸಿದ್ದಾರೆ. ಆಧ್ಯಾತ್ಮದ ಅನುಸಂಧಾನದ ಮಂಗಳದ ಗಳಿಗೆಯೇ ಅವರನ್ನು ತತ್ತ್ವಪದಗಳ ರಚನೆಗೆ ಪ್ರೇರಣೆ ನೀಡಿದೆ. ಅವರ ರಚನೆಯ ಕೆಲವು ತತ್ತ್ವಪದಗಳನ್ನು ಇಲ್ಲಿ ನಿದರ್ಶನಕ್ಕಾಗಿ ನೀಡಲಾಗಿದೆ:

ಕ್ಷಮಯಾಚನೆ

ಹೇ ದೇವ ದೀನಬಂಧು ರಕ್ಷಿಸು ಗೌರೀವರ
ಕರುಣದಿಂ ಬಾಲಕನ ಕ್ಷಮಿಸಯ್ಯ ಶಂಕರ ॥ ಪ ॥

ಮಮಪಾಪ ಕಡಲಿಂಗೆ ಎಲ್ಲಿ ಕಾಣುವದು ತೀರ ?
ವಚನ ಪಾಲಕನೆನಿಸಿ ಹೊರಗೆ ಡಂಭಾಚಾರ
ಕಪಟ ಮತ್ಸರದಿಂದ ಗರ್ವ-ಅಹಂಕಾರ
ಷಡ್ರಿಪುಗಳ ಸ್ನೇಹವರಸಿ ಕಷ್ಟ ಭಯಂಕರ ॥ ೧ ॥

ಹೊಂದಿರುವ ಬಾಲಕನ ಕ್ಷಮಿಸಯ್ಯ ಶಂಕರ
ದುಃಸ್ಸಂಗ ದುಶ್ಚಟವೆಂಬ ಅತಿ ಅತೀ ಘೋರ
ವ್ಯಸನಗಳಲ್ಲಿ ಸಿಲುಕಿ ನೊಂದಿಹೆನಹಿಧರ
ಶಪಥ ಶತವ ಮಾಡಿ ಸೋತು ತಿರುಗಿ ಘೋರ ॥ ೨ ॥

ಪಾತಕಿಗಳ ಸ್ನೇಹ ಬಿಡಲಿಲ್ಲ ಅಘಹರ
ಘಾತುಕ ತನದಲಿ ನೊಂದು ಬೆಂಡಾದೆ ಹರ ಹರ
ಹುಲಿಯ ಸಿದ್ಧನು ನೀನು ಮಹಾಕರುಣ ಸಾಗರ
ಪಾತಕಿ ಜಿಮ್ಮನ ಕ್ಷಮಿಸಯ್ಯ ಶಂಕರ ॥ ೩ ॥

ತಾಳ್ಮೆ

ಜೀವನದತಿ ಕಷ್ಟಕೆ ನೀನಂಜದಿರಯ್ಯ
ನೀ ಹರುಷದಿಂದ ಸಹನೆಯನಂಗೀಕರಿಸಯ್ಯ ॥ ಪ ॥

ಕಷ್ಟಗಳತಿಶಯದೀ ಜಗದೊಳು ಹೀಗೆ
ಜೀವಿಸುವುದು ಅತಿಶಯ ದುಸ್ತರ ನಿನಗಾಗೆ
ಹೆದರಿ ನೀನು ಹಿಂದಕ್ಕಡಿ ಸರಿಸದಿರಯ್ಯ
ನೀ ಹರುಷದಿಂದ ಸಹನೆಯನಂಗೀಕರಿಸಯ್ಯ ॥ ೧ ॥

ಪಾವನವಿಹ ನಿನ್ನನು ಜಗನಿಂದಿಸುತಿಹುದು
ಶುಭ್ರ ಸತ್ಯ ಹೃದಯವನ್ನು ಟೀಕಿಸುತಿಹದು
ಭ್ರಮೆಯ ಭಾವವು ಬಯಲ ತಾಕಬಹುದು
ಶಮೆಯಭಾವ ಒಮ್ಮೆ ಕಾಣಬಹುದು ॥ ೨ ॥

ನೀ ಹರುಷದಿಂದ ಸಹನೆಯನಂಗೀಕರಿಸಯ್ಯ
ಹುಲಿಯ ಸಿದ್ದೇಶನ ಮರೆತು ಕೊರಗಿ ಕುಂದದಿರಯ್ಯ
ಬಲಿಯಾಗದಿರು ಮಾಯೆಗೆ ತಿಳಿಯಯ್ಯ
ಮಲೀನದಿಂದ ಮೇಲೆದ್ದು ನಿಲ್ಲಬೇಕಯ್ಯ ॥ ೩ ॥

ಮನ

ಮಂಗ್ಯಾನಂತಿರುವ
ಮಾನವನ ಮನವೆ ॥ ಪ ॥

ಬದುಕುವ ಬದಲಿಗೆ ಸಾವಿನ ಹಾದಿಯ ಹಿಡಿದಿ
ಕಲ್ಲು-ಮುಳ್ಳುಗಳ ತುಳಿಯುತ ನಡದಿ
ಬಲ್ಲ ಬಲ್ಲವರಿಗೆ ಏನೂ ತಿಳಿಯದಾದಿ
ಸುಲಲಿತವಾದುದು ನಿನಗ ಸಿಗಲಿಲ್ಲ ಹಾದಿ ॥ ೧ ॥


ನೀತಿಯ ಮಾತನು ಗಾಳಿಗೆ ತೂರುತ
ಮಾನವತೆಯ ಕೊಲೆ ಮಾಡುತ

ಅಂತಜ್ಞಾನವನು ನೀನು ಮರೆಯುತ
ಮಂಗನಂತೆ ಬರಿ ಕುಣಿಯುತ ॥ ೨ ॥


ಸಾಯುವಾಗ ನೀನು ಮರಗುವ ಹಾಗೆ
ನಿನ್ನ ಹೀನತೆಯ ಮೆರೆಯುತಲಿರುವೆ
ದಾನವನಾಗುವ ದಾರಿಯ ತುಳಿಯುತ
ಹುಲಿಯ ಸಿದ್ಧೇಶನ ಮರೆಯುತಲಿರುವೆ ॥ ೩ ॥

(ಈ ವಿವರಗಳನ್ನು ಸ್ವತಃ ಕವಿಗಳೇ ನೀಡಿದ್ದಾರೆ.)

▯



ಬಂಡೆಪ್ಪ ಖೂಬಾ ಅವರ ಮನೆಯ ಎದುರಿನ ನೋಟ (ಗಡವಂತಿ)




ಮನೆಯ ಪಾರ್ಶ್ವ
ನೋಟ




ಬಂಡೆಪ್ಪ ಖೂಬಾ.



ಅಧ್ಯಯನ
ಕೋಣೆಯಲ್ಲಿ
ಬಂಡೆಪ್ಪ ಖೂಬಾ
ಅವರು.



ಬಂಡೆಪ್ಪ ಖೂಬಾ ಅವರ ಆರಾಧ್ಯ ದೇವರು ಹುಲಿಯಸಿದ್ಧೇಶ್ವರ.



ಹುಲಿಯ ಸಿದ್ಧೇಶ್ವರ ಗುಡಿ (ಗಡವಂತಿ).

೧೬. ಸಿದ್ಧಾನಂದ ಶಿವಯೋಗಿ (ಕ್ರಿ.ಶ.ಸು. ೧೯೩೯)

ಇಂದು ಸಿದ್ಧಾನಂದ ಶಿವಯೋಗಿಗಳನ್ನು ಹುಡುಕಿಕೊಂಡು ಬೀದರ ಜಿಲ್ಲೆ ಹುಮನಾಬಾದ ತಾಲ್ಲೂಕಿನಲ್ಲಿ ಬರುವ ಕೊಡಂಬಲ್ಲು–ಮುದನಾಳಗಳ ನಡು ಸೀಮೆಗೆ ಹೋಗಬೇಕು. ಅಲ್ಲಿ ಸಿದ್ಧಾನಂದ ಶಿವಯೋಗಿಗಳ ಆಶ್ರಮವು ಎದುರುಗೊಳ್ಳುತ್ತದೆ. ಆಶ್ರಮವು ಸ್ಥಾಪಿತವಾಗಿರುವುದು ಮುದನಾಳ ಸೀಮೆಯ ತಿರುಪತಿಯವರ ಹೊಲದಲ್ಲಿ. ತಿರುಪತಿ ರೆಡ್ಡಿ ಕುಟುಂಬದವರು ಸಿದ್ಧಾನಂದ ಶಿವಯೋಗಿಗಳಿಗೆ ಭಕ್ತಿಯಿಂದ ಒಂದಿಷ್ಟು ಸ್ಥಳವನ್ನು ನೀಡಿದ್ದಾರೆ.

ಸಿದ್ಧಾನಂದರಿಗೆ ಪೂರ್ವಾಶ್ರಮವೊಂದಿದೆ. ಅದು ಕಲಬುರ್ಗಿ ಜಿಲ್ಲೆ; ಚಿಂಚೋಳಿ ತಾಲ್ಲೂಕಿಗೆ ಸಂಬಂಧ ಪಡುತ್ತದೆ. ಪೂರ್ವಾಶ್ರಮವು 'ರೇವಣಸಿದ್ಧಪ್ಪ ಜ್ಯಾಪಟ್ಟಿ' ಎಂಬ ವ್ಯಕ್ತಿಯನ್ನು ಪರಿಚಯಿಸಿಕೊಟ್ಟರೆ; ಸಧ್ಯದ ಅವರ ಆಶ್ರಮವು ಸಿದ್ಧಾನಂದ ಶಿವಯೋಗಿ ಮತ್ತು ಅವರ ಆಧ್ಯಾತ್ಮ ಸಾಧನೆಯನ್ನು ಪರಿಚಯಿಸಿಕೊಡುತ್ತದೆ. ಅವರು ಕವಿಯಾಗಿ ಬೆಳೆದುದು 'ಸಿದ್ಧಾನಂದ ಶಿವಯೋಗಿ'ಯ ಆವಸ್ಥೆಯಲ್ಲಿಯೆ.

ಸಿದ್ಧಾನಂದರ ಪೂರ್ವದ ಹೆಸರು 'ರೇವಣಸಿದ್ಧಪ್ಪ' ಎಂಬುದಾಗಿತ್ತು. ಅವರ ತಂದೆ ಗುರುಲಿಂಗಪ್ಪ; ತಾಯಿ ರೇವಮ್ಮನವರು. ಜ್ಯಾಪಟ್ಟಿಯೆಂಬುದು ಅವರ ಮನೆತನದ ಹೆಸರು. ಜ್ಯಾಪಟ್ಟಿ ಗುರುಲಿಂಗಪ್ಪ–ರೇವಮ್ಮ ದಂಪತಿಗಳು ನೆಲೆನಿಂತುದು ಕಲಬುರ್ಗಿ ಜಿಲ್ಲೆ; ಚಿಂಚೋಳಿ ತಾಲ್ಲೂಕಿನಲ್ಲಿ ಬರುವ ಚಿಂತಕೋಟಿ ಗ್ರಾಮದಲ್ಲಿ. ಈ ದಂಪತಿಗಳ ಉದರದಿಂದ ಸಿದ್ಧಾನಂದರು ದಿ. ೫.೭.೧೯೩೯ರಂದು ಜನಿಸಿದರು.

ಜ್ಯಾಪಟ್ಟಿ ಗುರುಲಿಂಗಪ್ಪನವರು ತಮ್ಮ ಮಗನಿಗೆ ಮನೆಯಲ್ಲಿ ಆಧ್ಯಾತ್ಮಿಕ ಸಂಸ್ಕಾರವನ್ನು ನೀಡಿದರು. ಮನೆಯ ಹೊರಗಡೆ ಅವರಿಗೆ ಉತ್ತಮ ಶಿಕ್ಷಣ ದೊರಕುವಂತೆ ಮಾಡಿದರು. ಚಿಂತಕೋಟಿಯ ಮಠದ ವಿರುಪಾಕ್ಷಯ್ಯನವರು ಮೊದಲಿಗೆ ಸಿದ್ಧಾನಂದರಿಗೆ ಅಕ್ಷರದೀಕ್ಷೆ ನೀಡಿದರು. ಸಿದ್ಧಾನಂದರು ಎಚ್.ಎಸ್.ಸಿ, ಬಿ.ಎ; ಬಿ.ಇಡಿ. ಪದವಿಗಳನ್ನು ಪಡೆದುಕೊಂಡು ಶಿಕ್ಷಕರಾಗಿ ವೃತ್ತಿಗೆ ತೊಡಗಿದರು. ಕೋಡ್ಲಿ; ಸುಲೇಪೇಟೆ, ಕಲಬುರ್ಗಿ ಇವು ಅವರ ಶಿಕ್ಷಣದ ನೆಲೆಗಳಾಗಿದ್ದವು. ಶಿಕ್ಷಣಾವಧಿಯಲ್ಲಿ ಸಿದ್ಧಾನಂದರು ಕನ್ನಡ; ಹಿಂದಿ; ಇಂಗ್ಲೀಷ್ ಭಾಷೆಗಳಲ್ಲಿ ಪಾರಂಗತತೆಯನ್ನು ಪಡೆದರು. ಕನ್ನಡದ

ಹಲವಾರು ಅತ್ಯುತ್ತಮ ಕಾವ್ಯಗಳನ್ನು ಅಧ್ಯಯನ ಮಾಡಿದರು. ಶರಣರ ತತ್ತ್ವಗಳನ್ನು ವಚನ ಸಾಹಿತ್ಯದ ಅಭ್ಯಾಸದಿಂದ ತಿಳಿದುಕೊಂಡರು. ಹೆಚ್ಚಿನ ಜ್ಞಾನಹಂಬಲದಿಂದ ಸ್ನಾತಕೋತ್ತರ ಅಭ್ಯಾಸ ಮಾಡಿ, ಎಂ.ಎ ಪದವಿಯನ್ನು ಹೊಂದಿದರು. ತಾವು ಅರ್ಜಿಸಿಕೊಂಡ ಸುಜ್ಞಾನವನ್ನು ಶಿಕ್ಷಕರಾಗಿ ವಿದ್ಯಾರ್ಥಿಲೋಕಕ್ಕೆ ದಾಸೋಹ ಮಾಡಿದರು.

ಸಿದ್ಧಾನಂದರು ರೇವಣಸಿದ್ಧಪ್ಪನವರಾಗಿದ್ದಾಗ ಪ್ರಪಂಚದಿಂದಲೇ ಪಾರಮಾರ್ಥದ ಸಾಧನೆಗೆ ಹೊರಟರು. ಸಿದ್ಧಾನಂದರ ಸಂಸಾರಿಕ ಬದುಕನ್ನು ಸಾರವತ್ತಾಗಿಸಿದವರು ಸಾಧ್ವಿ ತಾರಾಬಾಯಿ (ನೀಲಮ್ಮ) ಅವರು. ಈ ದಂಪತಿಗಳಿಗೆ ಒಟ್ಟು ನಾಲ್ಕು ಜನ ಮಕ್ಕಳು. ಅವರಲ್ಲಿ ಇಬ್ಬರು ಗಂಡು ಮತ್ತು ಇಬ್ಬರು ಹೆಣ್ಣು ಮಕ್ಕಳು.

ಸಿದ್ಧಾನಂದರು ಕಲಬುರ್ಗಿ ತಾಲ್ಲೂಕಿನ ಹೊನ್ನಕಿರಣಿಗಿ ಗ್ರಾಮದ ಸಂಸ್ಥಾನಮಠದ ಅಧಿಪತಿಗಳಾದ ಷ.ಬ್ರ.ಶ್ರೀ ಕರಿಬಸವ ಶಿವಾಚಾರ್ಯರಿಂದ ವೀರಶೈವ ದೀಕ್ಷೆಯನ್ನು ಪಡೆದುಕೊಂಡರು. ಅವರಿಂದಲೇ ಸಿದ್ಧಾನಂದರು ಆಧ್ಯಾತ್ಮ ಅನುಸಂಧಾನದ ಹಾದಿಯನ್ನು ಅರಿತುಕೊಂಡರು. ಶಿಕ್ಷಕರಾಗಿದ್ದ ರೇವಣಸಿದ್ಧಪ್ಪನವರಲ್ಲಿ 'ಶಿವಯೋಗಿ'ಯಾಗುವ ಎಲ್ಲ ಲಕ್ಷಣಗಳು ಒಡೆದು ಕಾಣುತ್ತಿದ್ದವು. ರೇವಣಸಿದ್ಧರ ಮರೆಯಲ್ಲಿ ಸಿದ್ಧಾನಂದ ಯೋಗಿಯ ವಿಕಸನವಾಗುತ್ತಿದ್ದಿತು. ಸಿದ್ಧಾನಂದರ ವಿಕಸನದ ಪರಿಪೂರ್ಣ ಫಲಿತಾಂಶವೆನ್ನುವಂತೆ ಅವರು ಕ್ರಿ.ಶ. ೧೯೯೭ರಲ್ಲಿ ವೃತ್ತಿಯಿಂದ ನಿವೃತ್ತರಾಗಿ ಸಂಸಾರದಿಂದ ದೂರಾಗಿ ನಿಂತುಕೊಂಡರು. ಸಂನ್ಯಾಸ ಆಶ್ರಮಕ್ಕೆ ಕಾಲಿರಿಸಿದರು.

ಮೊದಲಿಗೆ ಅವರು ಕಲಬುರ್ಗಿ ಜಿಲ್ಲೆ ಚಿಂಚೋಳಿ ತಾಲ್ಲೂಕಿನಲ್ಲಿ ಬರುವ ಖೈಚಾಪೂರ ಎಂಬ ಒಂದು ಹಾಳು ಊರಿನ ರಾಮಲಿಂಗೇಶ್ವರ ದೇವಾಲಯದ ಸಮೀಪದಲ್ಲಿ ಆಶ್ರಮವೊಂದನ್ನು ಸ್ಥಾಪಿಸಿಕೊಂಡು ಆಧ್ಯಾತ್ಮ ಸಾಧನೆಗೆ ತೊಡಗಿದರು. ಅಲ್ಲಿ ಮೂರು ವರ್ಷಗಳ ಕಾಲ ಅನುಷ್ಠಾನದಲ್ಲಿ ಕಾಲಕಳೆದರು. ಅಲ್ಲಿಂದ ಬಿಟ್ಟು ಭಕ್ತರ ಬಿನ್ನಹದಂತೆ ಮುಂದೆ ಸಿದ್ಧಾನಂದರು ಸಧ್ಯದ ಆಶ್ರಮದ ಸ್ಥಳಕ್ಕೆ ಬಂದರು. ಈ ಸ್ಥಲದಲ್ಲಿ ಅವರು ಸಂಪೂರ್ಣವಾಗಿ "ರೇವಣಸಿದ್ಧಪ್ಪ"ನೆಂಬ ನಾಮದ ಸೀಮೆಯನ್ನು ಮೀರಿನಿಂತು ಸಿದ್ಧಾನಂದ ಶಿವಯೋಗಿಗಳಾದರು.

ಸಿದ್ಧಾನಂದರು ಇಲ್ಲಿಯವರೆಗೆ ಹಲವಾರು ಅನುಷ್ಠಾನಗಳನ್ನು ಮಾಡಿ ತಮ್ಮ ಆಧ್ಯಾತ್ಮಿಕ ವ್ಯಕ್ತಿತ್ವವನ್ನು ಬೆಳೆಯಿಸಿಕೊಂಡಿದ್ದಾರೆ. ಹಲವಾರು ಜನರು ಸಿದ್ಧಾನಂದರ ಶಿಷ್ಯರಾಗಿದ್ದಾರೆ. ತಾವು ನೆಲೆನಿಂತ ಸ್ಥಳದಲ್ಲಿ ಭಕ್ತರಿಗಾಗಿ ಬೃಹತ್ ಕಟ್ಟಡವೊಂದನ್ನು ಕಟ್ಟಿದ್ದಾರೆ. ರೇಣುಕಾಚಾರ್ಯರ ಮಂದಿರ ನಿರ್ಮಿಸಿ; ರೇಣುಕರ ವಿಗ್ರಹ ಸ್ಥಾಪನೆ ಮಾಡಿದ್ದಾರೆ. ತಮ್ಮ ಅರ್ಚನೆ-ಧ್ಯಾನಕ್ಕಾಗಿ 'ಗುಂಪಾ'ವೊಂದನ್ನು ಕಟ್ಟಿ ಕೊಂಡಿದ್ದಾರೆ.

ಸ್ವಯಂಪಾಕದಿಂದ ಪ್ರಸಾದ ಸೇವಿಸುತ್ತ; ನಿರಂಜನ–ನಿಸ್ಸಂಗಿಯಾಗಿ ಸಿದ್ಧಾನಂದರು ಇಂದು ಭಕ್ತರ ಉದ್ಧಾರ; ಸಮಾಜಸೇವೆಯಲ್ಲಿ ತೊಡಗಿದ್ದಾರೆ. ಚಿಟಗುಪ್ಪಾದಿಂದ ಸಿದ್ಧಾನಂದರ ಆಶ್ರಮವು ಸು.ಐದಾರು ಕಿ.ಮೀಟರ್‌ಗಳಷ್ಟು ಅಂತರವಾಗುತ್ತದೆ. ಆಶ್ರಮವು ಇಂದು ಹಲವಾರು ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ ಕಾರ್ಯಕ್ರಮಗಳ ತಾಣವಾಗಿ ಭಕ್ತರನ್ನು ಕರೆಯುತ್ತ ನಿಂತುಕೊಂಡಿದೆ.

ಸಿದ್ಧಾನಂದರು ತಪಸ್ಸು, ಇಷ್ಟಲಿಂಗಾರ್ಚನೆ; ಅನುಭಾವ ಗೋಷ್ಠಿಗಳೊಂದಿಗೆ ಸಾಹಿತ್ಯದ ಆರಾಧನೆಯೂ ಮಾಡುತ್ತಿದ್ದಾರೆ. ಅವರ ಲೇಖನಿಯಿಂದ ಈಗಾಗಲೇ ರೇವಣಸಿದ್ಧರ ಪುರಾಣ ಕಾವ್ಯ; ಆಧ್ಯಾತ್ಮಿಕ ಕಥಾ ಸಂಗಮ ಎನ್ನುವಂತಹ ಕೃತಿಗಳು ರಚನೆಗೊಂಡು ಪ್ರಕಟವಾಗಿವೆ. ಹಾಗೆಯೇ ಅವರು ಹಲವಾರು ತತ್ತ್ವಪದಗಳನ್ನು ರಚಿಸಿದ್ದಾರೆ. ತತ್ತ್ವಪದಗಳಿಗೆ ಅವರು 'ಸಿದ್ಧಾನಂದ' ಎಂಬ ಮುದ್ರೆಯನ್ನೇ ಇರಿಸಿಕೊಂಡಿದ್ದಾರೆ. ಅವರ ಕೆಲವು ಪದ್ಯಗಳನ್ನು ಇಲ್ಲಿ ಉದಾಹರಣೆಗಾಗಿ ಕೊಡಲಾಗಿದೆ:

ಸಂಸಾರವೆಂಬುದು ಶಿವನಾಟ

ಸಂಸಾರವೆಂಬುದು ಶಿವನಾಟ ತಿಳಿಯೋ
ಶಿವನಿರದ ಸಂಸಾರ ಬರಿ ಮಾಟೋ ॥ ಪ ॥

ಶಿವನೆ ಮೂಲನು ಹಾನ
ಅವನೆ ಈ ಭುವಿ ನಿರ್ಮಿಸಿದಾನ
ಭವದ ಒಳಗೆ ಅವ ಅಡಗಿ ಕುಳಿತಾನ
ಜೀವವು ಶಿವನಾಗುವುದು ನಿಜದ ಖೂನ ॥ ೧ ॥

ಹುಟ್ಟು–ಸಾವುಗಳು ಜೀವಕ ಗಂಟು
ಮೆಟ್ಟ ಬೇಕಪ್ಪ ಅವುಗಳ ನಂಟು
ಕಟ್ಟ ಬೇಕಪ್ಪ ಶಿವನೇಣದಿಂದೆಂಟು
ಮುಟ್ಟ ಬೇಕಪ್ಪ ಜೀವದಮೃತವ ಈಂಟು ॥ ೨ ॥

ಸಂಸಾರ ಮಾಡಿಕೊಳ್ಳು ಸಸಾರ
ಸಂಸಾರದ ಗೊಂದಲವೆ ಭವಭಾರ
ಸಂಸಾರ ಜಂಜಡವ ಕಳಕೋರಾ
ಸಂಸಾರ ಮಾಡಿಕೊಳ್ಳು ಶಿವ ಸಾರಾ ॥ ೩ ॥

ಭವ ಬಿಟ್ಟು ಭಯಗೊಂಡು ಒಡಬ್ಯಾಡ
ಶಿವನನು ಅದರಾಗ ಹುಡುಕಿ ನೋಡ
ಶಿವನಾಮ ಸ್ಮರಣೆಯ ದಿನದಿನಕ ಮಾಡ
ಭವವೆಂಬುದ ಶಿವವಾಗುವುದು ಪಾಡ ॥ ೪ ॥

ಧರಿಯೊಳು ಮುದನಾಳ ನೆಲೆಯಲ್ಲಿ
ಇರುವನು ಸಿದ್ಧಾನಂದ ಯೋಗಿ ಸ್ಥಿರವಾಗಿಯಿಲ್ಲಿ
ಬರುವರು ಭಕ್ತಿಯ ಅರ್ಪಿಸಲಲ್ಲಿ
ಮಾಡುವರು ಭಕ್ತಿಯ ಪಸರವನಲ್ಲಿ ॥ ೫ ॥

ಲಿಂಗಪೂಜೆ

ಲಿಂಗಪೂಜೆ ಯಾಗುತಾದಣ್ಣಾ ಗುರುಲಿಂಗಜಂಗಮರ
ಲಿಂಗಪೂಜೆ ಯಾಗುತಾದಣ್ಣಾ ॥ ಪ ॥

ಲಿಂಗಪೂಜೆ ಯಾಗುತಾದಾ ಅಂಗೈಯಲ್ಲಿ ಹಿಡಿದುಕೊಂಡು
ಮಂಗಲಾತ್ಮಕ ಗುರುವೆ ನಿಮ್ಮಯ ಲಿಂಗಪೂಜೆಯಾಗುತಾದಾ ॥ ೧ ॥

ಆರುಗುಣಗಳರಿಯಬೇಕಣ್ಣಾ ಮೇಲೇರಿ ಮತ್ತೆ
ಮೂರುಗುಣಗಳು ತಿಳಿಯಬೇಕಣ್ಣಾ
ಆರು ಮೂರೊಂಬತ್ತು ಕಟ್ಟಿ ಮೇಲಕ್ಕೇರಿದವರೆ ಘಟ್ಟಿ
ಪಾರಮಾರ್ಥಿಕ ಗುರುವೆ ನಿಮ್ಮಯ ಪರಮ ಪೂಜೆಯಾಗುತಾದಾ ॥ ೨ ॥

ಭವ ಬೀಜ ಅಳಿಯ ಬೇಕಣ್ಣಾ ಅಭವವೆಂಬ ಬ್ರಹ್ಮಜ್ಞಾನ ತಿಳಿಯಬೇಕಣ್ಣ
ಭಾವಬಲಿದು ಭ್ರಾಂತಿ ಅಳಿದಲಿ
ದೇವ ನಿನ್ನಯ ಒಲುಮೆ ಪಡೆದಿಲ್ಲಿ
ಜಾವ ಜಾವದೊಳೆದ್ದು ನಿನ್ನಯ ದೇವ ಪೂಜೆಯಾಗುತಾದಾ ॥ ೩ ॥

ಅಷ್ಟಮದಗಳಳಿಯಬೇಕಣ್ಣಾ ಈ ಸೃಷ್ಟಿಯಲ್ಲಿ
ನಿಷ್ಠವಂತನಾಗಿ ಬಾಳಣ್ಣಾ
ಶ್ರೇಷ್ಠ ಗುರುವಿನ ಪಾದ ಪಿಡಿದು ಇಷ್ಟಲಿಂಗದ ಧ್ಯಾನವಿಡಿದು
ಶ್ರೇಷ್ಠವಾದ ಮುಕ್ತಿ ಪದವಿ ಪಡೆಯ ಬೇಕಣ್ಣಾ ॥ ೪ ॥

ಲಿಂಗ ಮಹಿಮೆ ಅರಿಯಬೇಕಣ್ಣಾ
ಅದನು ನೀನು ಜಂಗಮಾರ್ಯನ ಮುಖದಿ ಕೇಳಣ್ಣ
ಅಂಗೈಯಲ್ಲಿ ಲಿಂಗಡಿದು ಜಂಗಮಾರ್ಯನ ಧ್ಯಾನದಿಂದಲಿ
ಸಿದ್ಧಾನಂದನ ನುಡಿಯ ಪಾಡುತ ॥ ೫ ॥

ಪಾದಪೂಜೆ

ಪಾದ ಪೂಜೆಯ ಮಾಡುವೆ ಸದ್ಗುರುವಿನ
ಪಾದ ಪೂಜೆಯ ಮಾಡುವೆ ॥ ಪ ॥

ಪಾದ ಪೂಜೆಯ ಮಾಡಿ ಭೇದ ಭಾವವತಿಳಿದಲಿ
ಪಾದಕೆರಗಿ ನಾ ಪಾವನನಾಗುವೆ ಪಾಲಿಸೊ ಗುರುವೆ
ಪರಮ ಪಾವನ ಗುರುವೆ ಪಾಲಿಸೊ ನೀ ಯನ್ನಾ ॥ ೧ ॥

ಮರುವೆಂಬ ಮತಿಯಳಿದು ಅರುವೆಂಬ ಮಲೆಗೊಟ್ಟು
ಕರುಣದಿ ಕಾಯೋ ಯನ್ನ ಶರಣು ಬಂದೆನೊ ನಿನ್ನ
ಚರಣ ಕೆರಗುವೆ ಶ್ರುತಿಗೊಟ್ಟು ಕಾಯೊಯನ್ನ ॥ ೨ ॥

ಪತಿತ ಪಾವನ ಗುರುವೆ ಅತಿಹಿತದಿ ಸಲಹೆಂದು
ಸುತನೆಂದು ಭಾವಿಸಿ ಕರಪಿಡಿದು ನಡಿಸೆನ್ನ
ಗತಿಯು ಕಾಣದೆ ನಿನ್ನ ಪಾದವ ಪಿಡಿದಿರುವೆ ॥ ೩ ॥

ಮನವೆಂಬ ಮರ್ಕಟವು ಚರಿಸ್ಯಾಡುತಿರುವದು
ಪರಿಪರಿ ಪೇಳಿದರೂ ಸರಿಯಾಗಿ ತಿಳಿಯದೆ
ಅಳಿವೊಂದು ಇದಕಿಹುದು ಉಳಿಗಾಲವಿಲ್ಲದೆ ॥ ೪ ॥

ಭವದಲ್ಲಿ ಬಂದಿರುವೆ ಬಂಧನದಿ ಸಿಲುಕಿರುವೆ
ಕಂದನ ಕೈ ಬಿಡದೆ ಬಂಧನವ ಬಿಡಿಸಯ್ಯಾ
ಮಂದ ಮತಿಯು ನಾನು ಮನದುಂಬಿ ಪಾಡುವೆ ॥ ೫ ॥

ಹರನು ತಾ ಮುನಿದರೆ ಗುರುವು ಕಾಯುವನೆಂದು
ಧರೆಯೊಳು ಶ್ರುತಿವಾಕ್ಯ ಬಿಡದೆ ಸಾರುತಿಹುದು
ಪಾರು ಮಾಡಯ್ಯ ಗುರುವೆ ಪರಮ ಪದವಿಯ ನೀಡಿ ॥ ೬ ॥

ಎಣೆ ಇಲ್ಲವೀ ಪಾದಕ್ಕೆ ಹಣೆಮಣಿದು ಬೇಡುವೆ
ಶರಣು ಬಂದೆನೊ ನಿನ್ನ ಕರುಣದಿ ಕಾಯೆನ್ನ
ಸಡಗರದಿ ಭಜಿಸುವೆ ವರಕಂದ ಸಿದ್ಧಾನಂದ ॥ ೭ ॥

ಬೆಡಗ ಹೇಳತೀನಿ ಕೇಳಣ್ಣಾ

ಬೆಡಗ ಹೇಳತೀನಿ ಕೇಳಣ್ಣಾ
ನುಡಿ ಗಡಣದ ಬೆಡಗ ತಿಳಿಯಣ್ಣಾ ॥ ಪ ॥

ವಡಕ ಗಡಗಿಯ ಬೆಡಗ ಏನಣ್ಣಾ ?
ಅದಕ ಒಂಬತ್ತು ತೂತಾವ ಹೇಳಣ್ಣಾ
ನಡುಕ ಸ್ಥಿರವಿಲ್ಲೋ ತಿಳಿಯಣ್ಣಾ
ಅದು ಯದಕ ಬಂದಾದ ಹೇಳಣ್ಣಾ ? ॥ ೧ ॥

ಎಂಟು ಭಂಟರ ಬೆಡಗ ಹೇಳಣ್ಣಾ
ಗಂಟು ಬಿದ್ದರ ಅವರು ಬಿಡರಣ್ಣಾ
ಒಂದ್ಯಾಗಿ ಅವರೀಗಿ ಸಿಗದಿರಣ್ಣಾ
ಗಂಟಿ ಚೌಡ್ಯಾರಂಗ ಕಾಡುತಾರಣ್ಣಾ ॥ ೨ ॥


ಮೂರು ಮಂದಿ ಬೆರಕಿ ಏನಣ್ಣಾ
ಮೂರಾಬಟ್ಟಿ ಮಾಡಿ ಬಿಡುತಾರಣ್ಣಾ
ಭಾರಿ ಭಾರಿ ಅಂದರವರ ಚಿಂದಿ ಹರಿತಾರಣ್ಣಾ
ಮಾರಿ ನೋಡಿ ಮಣಿ ಹಾಕಬ್ಯಾಡಣ್ಣಾ ॥ ೩ ॥

ದೇಶಕಧಿಕವಾದ ವಾಸುಳ್ಳ ಮುದನಾಳ
ಈಶ ಸಿದ್ಧಾನಂದನ ಬೆಡಗ ಬೆಳಗಿನಾಳ


ರೋಷ–ಕ್ಲೇಷ ಬಿಡು ಮನದಾಳ
ಸ್ವಚ್ಛ ಸುಂದರ ನಿನ ಗಂಗಾಳ ॥ ೪ ॥

(ಈ ವಿವರಗಳನ್ನು ಸ್ವತಃ ಕವಿಗಳೇ ನೀಡಿದ್ದಾರೆ.)


□




ಸಿದ್ಧಾನಂದ ಶಿವಯೋಗಿಗಳ ಆಶ್ರಮದ ಪರಿಸರದಲ್ಲಿರುವ ಅತಿಥಿಗೃಹ (ಮುದನಾಳ).



ಪಂಚಾಕ್ಷರಿ ಮಂತ್ರ ಧ್ಯಾನಮಗ್ನ ಸಿದ್ಧಾನಂದರು



ಸಿದ್ಧಾನಂದ ಶಿವಯೋಗಿ.




ಅನುಷ್ಠಾನಕ್ಕಾಗಿ
ನಿರ್ಮಿಸಿದ
ಗುಂಪಾ



ಸಿದ್ಧಾನಂದ
ಶಿವಯೋಗಿಗಳ
ಇಷ್ಟಲಿಂಗ
ಪೂಜಾಸ್ಥಲ.




ಸಿದ್ಧಾನಂದ
ಶಿವಯೋಗಿಗಳ
ಗ್ರಂಥಾಲಯ.



ಸಿದ್ಧಾನಂದ
ಶಿವಯೋಗಿಗಳ
ಪೂರ್ವಾಶ್ರಮದ
ಮನೆ
(ಚಿಂತಕೋಟೆ).



ಮನೆಯ
ಒಳಾಂಗಣ
ನೋಟ.



ಸಿದ್ಧಾನಂದ
ಶಿವಯೋಗಿಗಳು
ಕಟ್ಟಿಸಿದ
ರೇಣುಕಾಚಾರ್ಯರರ
ಮಂದಿರ
(ಮುದನಾಳ).



ರೇಣುಕರ ದರ್ಶನ ಪ್ರತಿಮೆ.



ಭಕ್ತರಿಗೆ ದರ್ಶನ ನೀಡಲು
ಕುಳಿತಿರುವ ಸಿದ್ಧಾನಂದರು.



ಪೂರ್ವಾಶ್ರಮದ ಪರಿವಾರದೊಂದಿಗೆ ಸಿದ್ಧಾನಂದ ಶಿವಯೋಗಿ.

೧೭. ಗುರುನಾಥ ಮಹಾರಾಜ (ಕ್ರಿ.ಶ.ಸು. ೧೯೪೧)

ಬೀದರ ಜಿಲ್ಲೆ; ಹುಮನಾಬಾದ ತಾಲ್ಲೂಕಿನ ಘಾಟಬೋರಾಳ ಗ್ರಾಮದಲ್ಲಿನ ಜನತೆಗೆ ಗುರುನಾಥ ಮಹಾರಾಜ ಚಿರಪರಿಚಿತರು. ಜನರು ಅವರನ್ನು ಗುರುತಿಸುವುದು 'ಮಹಾರಾಜ' ಎಂದೆ. ಆದರೆ ಅವರು ಅತ್ಯಂತ ಸೀದಾ–ಸಾದಾ–ಸರಳ ವ್ಯಕ್ತಿಯಾಗಿದ್ದಾರೆ. ತಲೆಯ ಮೇಲೆ ಟೊಪ್ಪಿಗೆ, ಕಮೀಸ ಅಂಗಿ; ಧೋತರ ಉಟ್ಟ ಸಣಕಲು ಶರೀರದ ಈ ವ್ಯಕ್ತಿಯನ್ನು ನೋಡಿದರೆ ಅವರಲ್ಲಿ ಯಾವುದೇ 'ಠೀಕು–ಠಾಕು'ಗಳು ಕಾಣುವುದಿಲ್ಲ. ಆದರೆ ಗುರುನಾಥ ಅವರು ಅಂತರಂಗದಲ್ಲಿ ಸಂತರಾಗಿ ಬದುಕುತ್ತಿರುವ ಕಾರಣದಿಂದಾಗಿ, 'ಮಹಾರಾಜ'ರಾಗಿದ್ದಾರೆ.

ಗುರುನಾಥ ಅವರು ಕ್ರಿ.ಶ. ೧೯೪೧ರಲ್ಲಿ ಜನಿಸಿದರು. ತಂದೆ ಸಂತರಾಮ ಮಹಾರಾಜ, ತಾಯಿ ಲಕ್ಷ್ಮಿಬಾಯಿ. ಇಬ್ಬರು ಸೋದರರು, ಮೂವರು ಸೋದರಿಯರ ನಡುವೆ ಹುಟ್ಟಿ ಬೆಳೆದ ಗುರುನಾಥ ಅವರು ತಂದೆಯು ನೀಡಿದ ಸಂಸ್ಕಾರವನ್ನು ಪೂರ್ಣವಾಗಿ ತಮ್ಮದನ್ನಾಗಿಸಿಕೊಂಡರು.

ಗುರುನಾಥ ಅವರು ಕನ್ನಡ ಶಾಲೆಗೆ ಸೇರಿದರು. ಮ್ಯಾಟ್ರಿಕ್‌ವರೆಗೆ ಓದಿದರು. ಕನ್ನಡದೊಂದಿಗೆ; ಮರಾಠಿ, ಉರ್ದು ಭಾಷೆಗಳನ್ನು ಕಲಿತುಕೊಂಡರು. ತಮ್ಮ ತಂದೆ ಸಂತರಾಮ ಅವರ ಹಾಡುಗಳನ್ನು ಕನ್ನಡದಲ್ಲಿ ಬರೆದಿಡುವ ಕಾಯಕ ಶ್ರದ್ಧೆಯಿಂದ ಕೈಕೊಂಡು ಅವರ ಸಾಹಿತ್ಯ ಉಳಿಸುವುದಕ್ಕೆ ಕಾರಣರಾಗಿದ್ದಾರೆ.

ಘಾಟಬೋರಾಳದ ದಲಿತ ಕೇರಿಯಲ್ಲಿ ಒಂದು ಸಣ್ಣದಾದ ಮನೆಯಲ್ಲಿ ವಾಸವಾಗಿದ್ದಾರೆ. ಏಕಾಕಿಯಾಗಿಯೇ ಇದ್ದು ಆಧ್ಯಾತ್ಮ ಸಾಧನೆ ಮಾಡುತ್ತಲಿದ್ದಾರೆ. ತಂದೆಯಿಂದ ಬಳುವಳಿಯಾಗಿ ಬಂದಿರುವ ಆಧ್ಯಾತ್ಮ ಪರಂಪರೆಯ ಸಾರವನ್ನು ಮೈಗೊಂಡಿರುವ ಗುರುನಾಥ ಅವರು ಪಂಡರಪುರದ ವಿಠ್ಠಲನ ಪರಮ ಭಕ್ತರಾಗಿದ್ದಾರೆ.

ಗುರುನಾಥ ಅವರಿಗೆ ಮೊದಲ ಗುರು ತಂದೆಯೇ ಆಗಿದ್ದಾರೆ. ಖಟಕ್ ಚಿಂಚೋಳಿಯ ಮಠಕ್ಕೆ ಅವರು ಭಕ್ತಿಯಿಂದ ನಡೆದುಕೊಳ್ಳುತ್ತಿದ್ದಾರೆ. ಪ್ರತಿವರುಷ ಭಜನೆಯ ಮೇಳ ತೆಗೆದುಕೊಂಡು, ಪಾದಯಾತ್ರೆ ಮಾಡುತ್ತಾ ಪಂಡರಾಪುರದ ವಿಠ್ಠಲನ ದರ್ಶನಕ್ಕೆ ಹೋಗಿ ಬರುತ್ತಾರೆ. ಭಜನೆಗಾಗಿ ಗುರುನಾಥ ಅವರು ಹಲವಾರು

ತತ್ತ್ವಪದ ಮತ್ತು ಭಜನೆ ಹಾಡುಗಳನ್ನು ರಚಿಸಿದ್ದಾರೆ. ಅವುಗಳನ್ನು ತಮ್ಮ ಅನುಯಾಯಿಗಳಿಗೆ ಹಾಡಲು ಕಲಿಸಿಕೊಟ್ಟಿದ್ದಾರೆ.

ತಂದೆಯಿಂದ ಗುರುನಾಥ ಅವರು ಜ್ಯೋತಿಷ್ಯ ಹೇಳುವುದನ್ನು ಕಲಿತುಕೊಂಡಿದ್ದಾರೆ. ಹೀಗಾಗಿ ಹಲವಾರು ಜನರು ಅವರಲ್ಲಿಗೆ ಭವಿಷ್ಯ ಕೇಳಲು ಬರುತ್ತಾರೆ. ಗುರುನಾಥ ಅವರು ತಮಗೆ ತಿಳಿದಷ್ಟು ಭಕ್ತರಿಗೆ ಹೇಳುತ್ತಾರೆ. ಸಮಸ್ಯೆಗಳಿಗೆ ಸಮಾಧಾನ ತಿಳಿಸುತ್ತಾರೆ. ಪೂಜೆ–ಪುನಸ್ಕಾರಗಳನ್ನು ಮಾಡಿಸುತ್ತಾರೆ. ಪ್ರತಿ ವರುಷ ಅವರು ನಿಯಮಿತ ಅವಧಿಯಲ್ಲಿ ಸಂಚಾರ ಕೈಕೊಂಡು ಶಿಷ್ಯರುಗಳ ಮನೆಗಳಿಗೆ ಹೋಗುತ್ತಾರೆ. ಬೀದರ–ಕಲಬುರ್ಗಿ ಜಿಲ್ಲೆಯಲ್ಲಿ ಗುರುನಾಥ ಅವರಿಗೆ ಹಲವಾರು ಜನರು ಶಿಷ್ಯರಿದ್ದಾರೆ. ಈ ಶಿಷ್ಯ ಸಮೂಹದಲ್ಲಿ ಮುಸ್ಲೀಮರೂ ಸೇರಿದ್ದಾರೆ.

ಗುರುನಾಥ ಅವರು ಜನ್ಮಕುಂಡಲಿ ಬರೆಯುವುದರಲ್ಲಿ ಸಿದ್ಧ ಹಸ್ತರೆಂದು ಜನರು ಹೇಳುತ್ತಾರೆ. ತಮ್ಮ ಮಕ್ಕಳ ಜನ್ಮ ಕುಂಡಲಿಗಳನ್ನು ಬರೆಯಿಸುತ್ತಾರೆ. ಯಾವುದಕ್ಕೂ ಗುರುನಾಥ ಅವರು ಹಣವನ್ನು ಬೇಡಿ ಪಡೆಯುವುದಿಲ್ಲ. ಭಕ್ತರು ಕೊಟ್ಟರೆ ತೆಗೆದುಕೊಳ್ಳುತ್ತಾರೆ. ಇಲ್ಲದಿದ್ದರೆ ಇಲ್ಲ. ಯಾವುದಕ್ಕೂ ಅವರು ಆಶೆ ಪಡಲಾರರು. ಹಿತ–ಮಿತದ ಬದುಕಿನ ಸಂತರಾಗಿ ಗುರುನಾಥ ಅವರು ಶಿಷ್ಯ ಲೋಕಕ್ಕೆ ಆದರ್ಶವಾಗಿದ್ದಾರೆ.

ಗುರುನಾಥ ಅವರು ತಮ್ಮ ಸಾಹಿತ್ಯ ಕೃಷಿಯ ಬಗೆಗೆ ಅತ್ಯಂತ ನಿಷ್ಪೃಹ ಭಾವ ಹೊಂದಿದ್ದಾರೆ. ಅವರಿಗೆ 'ಕವಿ'ಯೆಂಬ ಅಹಂಕಾರವಿಲ್ಲ. "ತಂದೆಯಿಂದ ದತ್ತವಾದ ಸಹಜ ಶಕ್ತಿಯಿದು. ಇದನ್ನು ಬಳಸಬೇಕು; ಬೆಳೆಯಿಸಬೇಕು" ಎಂದು ಹೇಳುತ್ತಾ ತಮ್ಮಿಂದ ತಾವೇ ಈ ಪರಂಪರೆಗೆ ಒಪ್ಪಿಸಿಕೊಂಡು ಬದುಕಿದ್ದಾರೆ.

ಗುರುನಾಥ ಅವರು ತಮ್ಮ ತಂದೆಯವರು ಬರೆದ ತತ್ತ್ವಪದಗಳನ್ನು ಪ್ರಸಾರ ಮಾಡುವುದರೊಂದಿಗೆ, ಸ್ವತಃ ಹಲವಾರು ತತ್ತ್ವಪದಗಳನ್ನು ರಚಿಸಿದ್ದಾರೆ. ಅವರ ಹಾಡುಗಳ ಅಂಕಿತವು "ಪಂಡರಪುರದ ವಿಠ್ಠಲ" ಎಂಬುದೇ ಆಗಿದೆ. ಒಂದು ಪದ್ಯವನ್ನು ನಿದರ್ಶನಕ್ಕಾಗಿ ಕೊಡಲಾಗಿದೆ:

ಕೆಟ್ಟ ಮನುಜಾರು

ಸೀಗರಕಂಟಿಯಂತ ಕೆಟ್ಟ ಮನುಜಾರು।
ಜಗದಾಗ ತುಂಬ್ಯಾರೋ ತಮ್ಮಾ ॥
ಮ್ಯಾಗ ನೋಡುತ ಕೆಳಗಿನ ನೆಲಾ ಅವರು
ಬ್ಯಾಗ ಮರತಾರೋ ತಮ್ಮಾ ॥ ಪ ॥

ಮನುಜನ್ಮ ಅನಾದು ಪುಕ್ಕಟ್ಟಲ್ಲಾ ತಮ್ಮಾ
ಹೀನರಿಗೆ ಅದು ತಿಳಿಯದು ಒಮ್ಮಾ
ನಾನು–ನಾನು ಅಂತ ನೆಗಿತಾರು ಸುಮ್ಮಾ
ಬ್ಯಾನಿ ಬಡಕೊಂಡಂಗ ಆಗ್ಯಾರೋ ತಮ್ಮಾ ॥ ೧ ॥

ಭೂಮೀಗಿ ಬಂದ ಮ್ಯಾಲ ಭೂಮ್ಯಾಂಗ ಇರಬೇಕು
ನೆಮ್ಮೀಗಿ ಇಟ್ಟು ಜೀವನ ಮಾಡಬೇಕು
ಬೊಮ್ಮಾನ ಮಾತುಗಳು ಬಾಯೀಲೆ ಆಡದಿರಬೇಕು
ಹಮ್ಮೀನ ಗುಣಗಳು ಸುಟ್ಟಿರಬೇಕು ॥ ೨ ॥

ಮಾಟಾದ ಸಂಸಾರ ನೇಟಿಲ್ಲ
ಗೂಟಾದ ಕಾರದು ಸ್ಥಿರವಲ್ಲ
ಮಟ–ಮಟ ಮಧ್ಯಾನಾದಾಗ ಹೊಂಟ್ಯೆಲ್ಲ
ವಿಠ್ಠಲನ ಧ್ಯಾನವ ಬಿಟ್ಯಾಲ್ಲ ॥ ೩ ॥

[ಸ್ವತಃ ಕವಿಗಳೇ ಈ ವಿವರಗಳನ್ನು ನೀಡಿದ್ದಾರೆ.]

□

೧೮. ಲಕ್ಷ್ಮಣ ಪವಾರ (ಕ್ರಿ.ಶ.ಸು. ೧೯೪೯–೨೦೦೧)

ಲಕ್ಷ್ಮಣ ಅವರು ಲಿಂಗೈಕ್ಯರಾಗಿ ಒಂಬತ್ತು ವರುಷಗಳು ಮುಗಿಯುತ್ತಿವೆ. ಅವರು ಭೌತಿಕವಾಗಿ ಇಲ್ಲ. ಆದರೂ ಜಲಸಂಗಿಯ ಜನರ ಮನಗಳಲ್ಲಿ ಅವರ ಹೆಸರು ನೆನಪಿನ ತರಂಗಗಳನ್ನು ಎಬ್ಬಿಸುತ್ತಲಿದೆ. ಜನರು ಅವರನ್ನು 'ಲಕ್ಷ್ಮಣ ಗೌಳಿ' ಎಂತಲೂ 'ಲಕ್ಷ್ಮಣ ಪವಾರ' ಎಂತಲೂ ಗುರುತಿಸುತ್ತಾರೆ. ಜಲಸಂಗಿ ಗ್ರಾಮವು ಬೀದರ ಜಿಲ್ಲೆ ಹುಮನಾಬಾದ ತಾಲ್ಲೂಕಿನಲ್ಲಿ ಬರುತ್ತದೆ.

ಇಂದು ಲಕ್ಷ್ಮಣ ಅವರ ಮಕ್ಕಳು–ಮೊಮ್ಮಕ್ಕಳು ಇದ್ದಾರೆ. ಅವರು ಕವಿಗಾರ ಲಕ್ಷ್ಮಣನ ಸಾಧನೆಗಳನ್ನು ಬಣ್ಣಿಸಿ ಹೇಳುತ್ತಾರೆ.

ಲಕ್ಷಣ ಗೌಳಿ ಅವರ ತಂದೆ ಮಾರುತಿರಾವ. ಮರಾಠಿ ಜನಾಂಗದವರು. ಆದರೂ ಅವರು ಮನೆಯಲ್ಲಿ ಕನ್ನಡ ವಾತಾವರಣವನ್ನು ಕಾಪಾಡಿಕೊಂಡು ಬಂದಿದ್ದರು. ಅವರ ಪತ್ನಿ ಸೋನುಬಾಯಿ. ಈ ದಂಪತಿಗಳಿಗೆ ಮಗನಾಗಿ ಲಕ್ಷ್ಮಣ ಅವರು ಹುಟ್ಟಿದ್ದು ಕ್ರಿ.ಶ.ಸು. ೧೯೪೯ರ ವರ್ಷದಂದು.

ಲಕ್ಷಣ ಗೌಳಿ ಖಾಸಗಿ ಶಾಲೆಯಲ್ಲಿ ಮೂರನೆಯ ತರಗತಿವರೆಗೆ ಕಲಿತರು. ಅಲ್ಲಿ ಅವರು ಕಲಿತದ್ದು ಮರಾಠಿ–ಮೋಡಿ ಭಾಷೆಗಳನ್ನು. ಶಾಲೆಯ ಹೊರಗಡೆಯ ಅವರಿಗೆ ಸರಿಯಾದ ರೀತಿಯಲ್ಲಿ ಕನ್ನಡ ಸತ್ವದ ದೀಕ್ಷೆ ದೊರಕಿತು.

ಲಕ್ಷಣ ಅವರು ಬಾಲ್ಯದಿಂದಲೇ ಹಾಡುಗಾರಿಕೆಯಲ್ಲಿ ಪಳಗತೊಡಗಿದರು. ಅವರ ತಂದೆ ಮಾರುತಿರಾವ ಅದಕ್ಕೆ ಹೆಚ್ಚು ಪ್ರೋತ್ಸಾಹ ನೀಡಿದರು. ಅವರ ಕಾಲದಲ್ಲಿ ಜಲಸಂಗಿಯ ಹನುಮಾನ ದೇವಾಲಯ ಮತ್ತು ಮಹಾದೇವರ ಮಂದಿರದಲ್ಲಿ ಭಜನೆಗಳು ನಡೆಯುತ್ತಿದ್ದವು. ಮಾರುತಿರಾವ ಭಜನೆಯಲ್ಲಿ ಹೋಗಿ ಹಾಡುತ್ತಿದ್ದರು. ತಂದೆಯ ಹಾದಿಯಲ್ಲೇ ಲಕ್ಷ್ಮಣ ತನ್ನ ಚಿಕ್ಕಹೆಜ್ಜೆಗಳನ್ನು ಊರುತ್ತ ನಡೆಯ ತೊಡಗಿದರು. ತಾರುಣ್ಯ ವಯಸ್ಸಿಗೆ ತಲುಪುವ ಹೊತ್ತಿಗಾಗಲೇ ಲಕ್ಷ್ಮಣ ದೊಡ್ಡ ಹಾಡುಗಾರರಾಗಿದ್ದರು. 'ಹನುಮಾನ ಭಜನಾ ಸಂಘದ' ಸಂಸ್ಥಾಪಕರಾಗಿದ್ದರು. ಅವರ ಹಾಡಿನ ಧ್ವನಿಯ ತರಂಗಗಳು ಜಲಸಂಗಿಯ ಪರಿಸರಕ್ಕಷ್ಟೇ ಸೀಮಿತಗೊಂಡು ಹರಡಲಿಲ್ಲ. ಅದರ ಗಡಿಯನ್ನು ದಾಟಿ, ಬೀದರ ಜಿಲ್ಲೆಯಾದ್ಯಂತ ಹರಡಿಕೊಂಡವು. ಅದರ ಹೊರಗಡೆಯೂ

ಪ್ರಸಾರವಾದವು. ಲಕ್ಷ್ಮಣ ಅವರ ಕಂಠವು ಅತ್ಯಂತ ಚಿತ್ತಾಕರ್ಷಕವಾಗಿತ್ತು.

ಅವರ ಕಂಠದಿಂದ ಹೊರಡುವ ಎಂತಹ ಹಾಡಿದ್ದರೂ ಅದು ಕೇಳುಗರಿಗೆ ಸೊಗಸಾಗಿಯೆ ಅನುಭವಕ್ಕೆ ಬರುತ್ತಲಿದ್ದಿತು. ಲಕ್ಷ್ಮಣನಿಗೆ ಹಿಂದೂ ದೇವರುಗಳಾದ ಹನುಮಾನ, ಭವಾನಿ, ಮಹಾದೇವರುಗಳಲ್ಲಿ ಭಕ್ತಿಯಿರುವಂತೆ, ಮುಸ್ಲೀಮ್ ದೇವರುಗಳಾದ ಘೋಡವಾಡಿಯ ಇಸ್ಮಾಯಿಲ್ ಖಾದ್ರಿ, ಬಂದಾನವಾಜ, ಮೌಲಾಲಿ, ಲಾಲ್ ಹೈದರಿ ಮುಂತಾದವರಲ್ಲಿಯೂ ಭಕ್ತಿಯಿದ್ದಿತು. ಹಾಗಾಗಿ ಅವರ ಹಾಡುಗಳಲ್ಲಿ ಅವರೆಲ್ಲರ ಬಗೆಗಿನ ಹಾಡುಗಳು ದೊರಕುತ್ತವೆ.

ಲಕ್ಷ್ಮಣ ಅವರು ಸಂಸಾರಸ್ಥ. ಹೆಂಡತಿ ನರಸಮ್ಮ. ಈ ದಂಪತಿಗಳಿಗೆ ಇಬ್ಬರು ಹೆಣ್ಣು ಮಕ್ಕಳು ಮತ್ತು ಒಬ್ಬ ಮಗ. ಸಧ್ಯ ಇರುವ ಅವರ ಮಗ ನರಸಿಂಗರಾವ ಅವರು ತಂದೆಯಂತೆ ಕವಿಗಳು. ಅವರು ತಂದೆಯ ಪರಂಪರೆಯನ್ನು ರಕ್ಷಿಸಿಕೊಂಡು ಬರುತ್ತಲಿದ್ದಾರೆ. ಅವರಿಗೆ ಐದು ಜನ ಮಕ್ಕಳಿದ್ದಾರೆ. ಅವರಲ್ಲಿ ಮೂವರು ಹೆಣ್ಣುಮಕ್ಕಳು ಮತ್ತು ಇಬ್ಬರು ಗಂಡುಮಕ್ಕಳು. ಈಗ ಮಗ ನರಸಿಂಗರಾವ ಅವರ ವಯಸ್ಸು ಸು. ೪೫ವರ್ಷಗಳು.

ಲಕ್ಷ್ಮಣ ಮತ್ತು ತಮ್ಮ ಅಣ್ಣನವರ ಬಗೆಗೆ ಕವಿಗಳ ಎರಡನೆಯ ಮಗಳಾದ ಅನಿತಾ ಅವರು ವಿವರಗಳನ್ನು ನೀಡಿದ್ದಾರೆ. ಅವರ ಪತಿ ಅಂಬೋಜಿ. ಅವರಿಗೆ ಕವಿಗಾರ ಲಕ್ಷ್ಮಣ ಅವರ ಬಗೆಗೆ ಅತೀವ ಗೌರವದ ಭಾವವಿದೆ.

ಲಕ್ಷ್ಮಣ ಅವರು ತಮ್ಮ ಹರೆಯದ ವಯಸ್ಸಿನಲ್ಲಿಯೇ ಹಾಡುಗಳನ್ನು ಕಟ್ಟುವುದಕ್ಕೆ ಆರಂಭ ಮಾಡಿದರು. ಅವರಿಂದ ಮೊದಲಿಗೆ ಮೋಹರಮ್ ಹಾಡುಗಳು ಮೂಡಿ ಬಂದವು. ಮೋಹರಮ್ ಹಾಡುಗಳಿಗೆ ಲಕ್ಷ್ಮಣ ಅವರು ಮುಸ್ಲೀಮ್ ದೇವರುಗಳ ಹೆಸರುಗಳನ್ನೇ ಮುದ್ರೆಯಾಗಿ ಬಳಕೆ ಮಾಡಿದ್ದಾರೆ. ಹೆಚ್ಚಾಗಿ ಅವರು ಘೋಡವಾಡಿಯ ಇಸ್ಮಾಯಿಲ್ ಖಾದ್ರಿಯ ಹೆಸರನ್ನು ಮೋಹರಮ್ ಹಾಡುಗಳಿಗೆ ಅಂಕಿತವಾಗಿ ಬಳಕೆ ಮಾಡಿದ್ದುಂಟು. ಅವರು ಮೋಹರಮ್ ಹಾಡುಗಳಿಗೆ ವಸ್ತುವಾಗಿಯೂ ಮುಸ್ಲೀಮ್ ಮಹಾಪುರುಷರ ಜೀವನ ವಿವರಗಳನ್ನು ಬಳಕೆ ಮಾಡಿಕೊಂಡಿದ್ದಾರೆ.

ಲಕ್ಷ್ಮಣ ಅವರಿಗೆ ಭಜನೆಯ ಸತ್ಸಂಗವು ತತ್ತ್ವಪದಗಳನ್ನು ಕಟ್ಟುವುದಕ್ಕೆ ಪ್ರೇರಣೆ ನೀಡಿತು. ಮೋಹರಮ್ ಹಾಡಿನ ನಡುವೆ ಅವರು ಹಲವು ತತ್ತ್ವಪದಗಳನ್ನು ರಚನೆ ಮಾಡಿಕೊಟ್ಟಿದ್ದಾರೆ. ತತ್ತ್ವಪದಗಳಿಗೆ ಅಂಕಿತವಾಗಿ ತಮ್ಮ ಹೆಸರನ್ನು ಬಳೆಸಿದ್ದಾರೆ. ಅವರು ರಚಿಸಿರುವ ಎರಡು ಪದಗಳನ್ನು ಇಲ್ಲಿ ಉದಾಹರಣೆಗಾಗಿ ಕೊಡಲಾಗಿದೆ:

ನಿನ್ನ ನೀನು ಬಯ್ಕೊ

ನಿನ್ನ ನೀನು ಬಯ್ಕೊ ತಮ್ಮಾ
ನಿನ್ನ ಕೈಯ್ಯ ಮ್ಯಾಲ ಮಾಡಿದ ಕರ್ಮ ಹೊಯ್ಕೋ ॥ ಪ ॥

ನೀ ಮಾಡಿದ ಅಡುಗಿ ಯಾರೀಗಿ ಇಡುತಿ?
ನೀನು ಉಣ್ಣಲುಬೇಕು ಮುಖಯಾಕ ತಿರುತಿ ?
ವಲ್ಲ ಅಂದರ ತಮ್ಮಾ ನಡ್ಯುದಿಲ್ಲ ಪುರುತಿ
ಖುಲ್ಲ ಹೇಳತೀನಿ ಯಮ ತಗೋತಾನ ಝಡತಿ ॥ ೧ ॥

ಎಟ್ಟು ಎಟ್ಟು ಕೇರಿಯ ಜಲ್ಮ ತಿರುಗಿ ಬಂದಿ
ಕೆಟ್ಟು ಕೆಟ್ಟು ನೀನು ಸೊರಗಿ ನೊಂದಿ
ಹೇಲ ಕಂಡರ ತಿನಾದು ಬಿಡಲಿಲ್ಲ ಹಂದಿ
ಮೂಲ ಜಲ್ಮದ ನೆಲೆ ತಿಳಿಯಲಿಲ್ಲ ಮಂದಿ ॥ ೨ ॥

ನೀ ಮಾಡಿದ ಕರ್ಮಕ ಮಂದಿಗಿ ಬಯ್ಯಬ್ಯಾಡ
ನಿನ್ನ ಹೊಲಸ ರಾಡಿ ನೀನು ತೊಳ್ಕೊಳ್ಳುದು ಪಾಡ
ಸಾತಕಿಲ್ಲ ತಮ್ಮಾ ಯಾರ್‍ಯಾರ ಜೋಡ
ನೆಪಕಿರತಾರ ಹೆಂಡತಿ ಮಕ್ಕಳು ನೋಡ ॥ ೩ ॥

ಒಳ್ಳೆ ಜನ್ಮಕ ಬಂದೀದಿ ನೀನು
ಒಳ್ಳೇದು ಮಾಡುತ ನಡಿಬೇಕಿನ್ನು
ಗೊಳ್ಳ ಜನರ ತಂಟಿ ಬಿಡಬೇಕು ನೀನು
ಸುಳ್ಳ ಮಾತುಗಳ ಆಡಬಾರದು ಇನ್ನು ॥ ೪ ॥

ಭೂಮಿ ಮ್ಯಾಲ ದೊಡ್ಡ ಊರ ಜಲಸಂಗಾವಿ
ನೇಮ ಇಟ್ಟು ನಡಿ ಅಂತಾನ ಲಕ್ಷ್ಮಣ ಕವಿ
ಸಿಟ್ಟಾದರ ನಿನ್ನ ನೀನೆ ಬಯ್ಕೋ
ನೇಟಾದರ ಪುಣ್ಯ ನಿನ್ನ ಕಿಸ್ಯಾದಾಗ ಹೊಯ್ಕೊ ॥ ೫ ॥

ಫೌಜ ಹೊಂಟಾದ ಎಚ್ಚರಿರು

ಫೌಜ ಹೊಂಟಾದೋ ಮನುಜಾ
ಮೋಜ ಮಾಡದೆ ಎಚ್ಚರಿರಬೇಕು ॥ ಪ ॥

ಎಂಟು ಜನ ಕೈಯ್ಯಾಗ ಖತಾರಿ ನೋಡು
ಬಂಟರವರು ಮ್ಯಾಲ ಬಿದ್ದಾರು ನೋಡು
ಏಳು ಜನರು ಗದಾ ಹಿಡಿದಾರ ನೋಡು
ಪಾಳೆಯದ ಒಳಗ ನುಗ್ಗತಾರ ನೋಡು ॥ ೧ ॥


ಆರು ಸೈನಿಕರು ಮಹಾ ಘೋರರು
ಪಾರು ಪಾಮರರವರು ಮ್ಯಾಲ ಹಾರಿ ಬರತಾರು
ಮೂರು ಸೈನಿಕರು ಮಹಾ ಬೆರಕಿ ಇಹರು
ಮೂರಾ ಬಟ್ಟಿ ಮಾಡಿ ಮೂಲೆ ಗೂಡಿಸುತಾರು ॥ ೨ ॥

ಐದು ಮಂದಿ ಫೌಜುಗಳು ತುಬಾಕಿ ಹಿಡದಾರ
ಹಾದಿ-ಬೀದಿ ತಿರುಗಿ ಜನಕ ಹುಡುಕುತಾರ
ನಾಕು ಮಂದಿ ನಿಂತ ಪಾರೆ ಕಾಯತಾರ
ಜೋಕಿಲಿಂದ ತಪ್ಪಿಸಿಗೊಳ್ಳದಾಂಗ ನೋಡುತಾರ ॥ ೩ ॥


ಇಬ್ಬರ ಉಪಟಳ ಅತಿಯಾಯ್ತು ತಮ್ಮಾ
ಒಬ್ಬೊಬ್ಬರ ಹಿಡಿದು ಹೊಡಿತಾರೋ ಧಮ್ಮಾ
ನಿಬ್ಬೆರಗಲಿ ಯುದ್ಧ ನಡದಾದ ತಮ್ಮಾ
ಕೊಬ್ಬಿ ನಿಂತವರಿಗಿ ಮಾರಿಯಾಯಿತು ತಮ್ಮಾ ॥ ೪ ॥

ಜಲಸಂಗಿ ಊರಾಗ ತುಂಬ್ಯಾದ ಫೌಜು
ಗೆಲಕೋತ ನಡದಾದ ನೆಲದಾ ಸೈಜು
ಲಕ್ಷ್ಮಣ ಕವಿ ನಿಂತು ಕಹಳೆ ಊದಾದು ಮೋಜು
ಕೇಳಿಕೊಂಡಾಗಿರಿ ನೀವೆಲ್ಲ ಬಾಜು ॥ ೫ ॥


(ಈ ವಿವರಗಳನ್ನು ಕವಿಗಳ ಮಗಳಾದ ಶ್ರೀಮತಿ ಅನೀತಾ ಅವರು ನೀಡಿದ್ದಾರೆ.)




ಲಕ್ಷ್ಮಣ ಪವಾರ ಅವರ ಮನೆ




ಲಕ್ಷ್ಮಣ ಪವಾರ



ಲಕ್ಷ್ಮಣ ಪವಾರ ಅವರ
ಮಗ ನರಸಿಂಗರಾವ.



ಲಕ್ಷ್ಮಣ ಪವಾರ ಅವರ ಆರಾಧ್ಯ ದೇವರು ಘೋಡವಾಡಿಯ
ಇಸ್ಮಾಯಿಲ್ ಖಾದ್ರಿ ದರ್ಗಾ



ದರ್ಗಾದ ಒಳಗಿರುವ ದರ್ಶನ ಸಮಾಧಿ

೧೯. ಈಶ್ವರರಾವ ಕರುಣಸಾಗರ (ಕ್ರಿ.ಶ.ಸು. ೧೯೫೨--೨೦೦೭)

ಬೀದರ ತಾಲ್ಲೂಕಿನ ಅಣದೂರು ಗ್ರಾಮವು ಈಶ್ವರ ಅವರ ಹಿರಿಯರ ಮೂಲಸ್ಥಳ. ಈ ಗ್ರಾಮದಲ್ಲಿನ ಹೆಸರಾಂತ ತತ್ತ್ವಪದಕಾರ; ನಾಟಕಕಾರರಾಗಿದ್ದ ಮೋನಪ್ಪ ಕೊಂಡಾರ ಅವರು ಈಶ್ವರರಾವ ಅವರ ತಂದೆಯವರು. ಈಶ್ವರ ಅವರ ಮನೆತನಕ್ಕೆ ಮೊದಲಿಗೆ 'ಕೊಂಡರ್' ಎಂಬ ಹೆಸರು ಇದ್ದಿತು. ಈಶ್ವರ ಅವರಿಗೆ ಅರ್ಥಹೀನವಾದ ಈ ಹೆಸರು ಸರಿಕಾಣಲಿಲ್ಲ. ಅದನ್ನು "ಕರುಣಸಾಗರ" ಎಂದು ಬದಲಾಯಿಸಿಕೊಂಡರು. ಈಶ್ವರ ಅವರು ಹುಟ್ಟಿದ್ದು ಅಣದೂರು ಗ್ರಾಮದಲ್ಲಿ. ಬೀದರ ಜಿಲ್ಲೆ; ಹುಮನಾಬಾದ ತಾಲ್ಲೂಕಿನ ಹಳ್ಳಿಖೇಡ(ಬಿ) ಗ್ರಾಮವನ್ನು ನಂತರದಲ್ಲಿ ಅವರು ತಮ್ಮ ಕಾರ್ಯ ಕ್ಷೇತ್ರವನ್ನಾಗಿಸಿಕೊಂಡರು. ಅಲ್ಲಿಯೇ ನೆಲೆಸಿದರು.

ಅಣದೂರಿನ ಮೋನಪ್ಪನವರು ಸಂಸ್ಕಾರಶೀಲ ಮನಸ್ಸಿನವರು. ತಮ್ಮ ಮಕ್ಕಳಿಗೆ ಶಿಕ್ಷಣದ ಸಂಸ್ಕಾರವನ್ನು ನೀಡುವುದರೊಂದಿಗೆ, ಸಾಹಿತ್ಯದ ಸಂಸ್ಕಾರವನ್ನೂ ನೀಡಿದರು. ಸಂಗೀತದ ವಾದ್ಯಗಳನ್ನು ಬಳುವಳಿಯಾಗಿ ಕೊಡುವುದರ ಮುಖಾಂತರ ಸಂಗೀತ ಕಲೆಯನ್ನೂ ಕೊಟ್ಟರು. ಹೀಗಾಗಿಯೇ ಈಶ್ವರ ಅವರಿಗೆ ಸಂಗೀತ ಕಲೆಯು ಒಲಿದಿತ್ತು.

ಕ್ರಿ.ಶ. ೧೯೫೨ರಂದು ಈಶ್ವರ ಅವರು ಮೋನಪ್ಪ-ಲಕ್ಷ್ಮಿಬಾಯಿ ದಂಪತಿಗಳ ಉದರದಿಂದ ಜನಿಸಿದರು. ಎಸ್.ಎಸ್.ಎಲ್.ಸಿ ಶಿಕ್ಷಣ ಪೂರೈಸುತ್ತಲೇ ಈಶ್ವರ ಅವರಿಗೆ ಪ್ರಾಥಮಿಕ ಶಾಲೆ ಶಿಕ್ಷಕ ಹುದ್ದೆಗೆ ಕರೆ ಬಂದಿತು. ಅತ್ಯಂತ ಆಸಕ್ತಿಯಿಂದ ಅವರು ಆ ಹುದ್ದೆಯನ್ನು ಸ್ವೀಕರಿಸಿದರು. ಮಕ್ಕಳಿಗೆ ಪಾಠ ಹೇಳಿದರು; ನೀತಿ ಕಲಿಸಿದರು. ಹಾಡನ್ನು ಹಾಡಿ; ಅವರ ಮನವನ್ನು ತಣಿಸಿದರು. ಈಶ್ವರ ಅವರು ಅತ್ಯಂತ ಕರುಣಾಮಯಿ. ಉದಾರ ಮನದವರಾಗಿದ್ದರು. ಬಡವ ವಿದ್ಯಾರ್ಥಿಗಳಿಗೆ ತಮ್ಮ ಕೈಲಾದ ಆರ್ಥಿಕ ಸಹಾಯವನ್ನು ನೀಡುತ್ತಿದ್ದರು.

ಈಶ್ವರ ಅವರು ತಮ್ಮ ಹಿರಿಯರಿಂದ ಉಪಕೃತಗೊಂಡ ಪರಿಯನ್ನು ಸ್ಮರಿಸುತ್ತಾರೆ: "ಮನೆಯೇ ಮೊದಲ ಪಾಠಶಾಲೆ ಎಂಬಂತೆ ನನ್ನ ಸೋದರ ಮಾವ ಕೃಷ್ಣಮೂರ್ತಿ ಶಾಸ್ತ್ರಿ ಹಳ್ಳಿಖೇಡ (ಬಿ) ಇವರು ನನ್ನ ವಿದ್ಯಾಭ್ಯಾಸಕ್ಕೆ ಮೊದಲ ಗುರುವಾಗಿ ದೊರಕಿದರು. ಅವರ ಕೆಲವು ಬದುಕಿನ ಆದರ್ಶಗಳು ನನಗೆ ಮಾರ್ಗದರ್ಶಕವಾದವು. ನನ್ನ ಅಭ್ಯಾಸದಲ್ಲಿ ನಾನು ತಲ್ಲಿನನಾದೆನು.

ಹೀಗೆ ಮುಂದೆ ಸಾಗುತ್ತಿದ್ದಂತೆ ಸ್ವಂತ ಕವಿ ಹಾಗೂ ನಾಟಕಕಾರರಾದ ನನ್ನ ತಂದೆ ನನ್ನನ್ನು ಬಾಲ್ಯದಿಂದಲೂ ಯಾವುದೇ ದುಶ್ಚಟಕ್ಕೆ ಬಲಿಯಾಗದಂತೆ ಭದ್ರ ಕವಚವಾಗಿ ರಕ್ಷಿಸಿ, ಚಿಕ್ಕಂದಿನಿಂದಲೇ ಹಾಡುವ ಕಲೆ ಮೈಗೂಡುವಂತೆ ಮಾಡಿದರು". (ಧರ್ಮ ಸಂದೇಶದ ಗೀತೆಗಳು–ಪು.೧)

ಈಶ್ವರ ಕರುಣಸಾಗರ ಅವರ ಸಂಸಾರಿಕ ಬದುಕು ಸಾರವತ್ತಾಗಿದ್ದಿತು. ಹೆಂಡತಿ ಮುತಳಾಬಾಯಿ ಅವರು ಸಭ್ಯ ಗೃಹಸ್ಥೆ. ಈ ದಂಪತಿಗಳಿಗೆ ಐದು ಜನ ಗಂಡು ಮತ್ತು ನಾಲ್ಕು ಜನ ಹೆಣ್ಣುಮಕ್ಕಳು. ಈಶ್ವರ ಅವರು ಪ್ರಾಥಮಿಕ ಶಾಲೆಯ ಶಿಕ್ಷಕರಾಗಿದ್ದಂತೆ, ಅವರು ಸಮಾಜದ ಶಿಕ್ಷಕರೂ ಆಗಿದ್ದರು. ಮಕ್ಕಳಿಗೆ ನೀತಿಯ ಪಾಠ ಹೇಳುವಂತೆ, ತನ್ನ ಸುತ್ತಮುತ್ತಲಿನ ಜನತೆಗೆ ಸಂಬುದ್ಧನ ತತ್ತ್ವಗಳನ್ನು ಅರುಹುತ್ತಿದ್ದರು. ಅವರಿಗೆ ಬುದ್ಧ–ಬಸವ–ಬಾಬಸಾಹೇಬರ ತತ್ತ್ವಗಳಲ್ಲಿ ಅಪಾರ ವಿಶ್ವಾಸವಿದ್ದಿತು. ಹೀಗಾಗಿ ಈ ಮೂರು ಶಕ್ತಿಗಳ ತತ್ತ್ವಗಳನ್ನು ಕುರಿತಂತೆ ಹಲವಾರು ಲೇಖನ–ಹಾಡುಗಳನ್ನು ಈಶ್ವರ ಅವರು ಬರೆದಿರುವರು. ಅವರು ಕ್ರಿ.ಶ. ೧೯೯೭ರಲ್ಲಿ ಪ್ರಕಟಿಸಿದ "ಧಮ್ಮ ಸಂದೇಶ ಗೀತೆಗಳು" ಎಂಬುದು ಕೆಲವು ಉತ್ತಮ ಹಾಡುಗಳ ಸಂಕಲನವಾಗಿದೆ. ಇದರ ಬಗೆಗೆ ಕವಿಗಳಾದ ಈಶ್ವರ ಅವರು ಹೀಗೆ ಬರೆಯುತ್ತಾರೆ: "ಪ್ರಯತ್ನಕ್ಕೆ ಫಲವೆಂಬಂತೆ ನನಗಿಷ್ಟವಾದ ಶಿಕ್ಷಣ ಕ್ಷೇತ್ರವೇ ನನಗೊದಗಿದ ಕಾಯಕ. ಶಿಕ್ಷಕ ಸೇವೆಯ ಭಾಗ್ಯ ದೊರೆತು ಹಳ್ಳಿಗಳಲ್ಲಿ ಸೇವೆ ಸಲ್ಲಿಸತೊಡಗಿದೆ. ಆಗ ಯಾವುದೋ ಒಂದು ಅಗಾಧ ಶಕ್ತಿ ನನ್ನನ್ನು ಸಮಾಜದ ದುರ್ಜನರಿಂದ ರಕ್ಷಿಸಿ, ಸದಾ ಸನ್ಮಾರ್ಗದ ಕಡೆ ಸೆಳೆಯುವಂತೆ ಅನುಭವವಾಯಿತು. ನನ್ನ ಸಮಯವು ಸತ್ಸಂಗಕ್ಕೆ ವಿನಿಯೋಗವಾಗ ತೊಡಗಿತು. ಮನವು ಅಂತಿಮ ಸತ್ಯದಲ್ಲಿ ಲೀನವಾಯಿತು. ಆಗ ಹುಟ್ಟಿದವುಗಳೇ ಈ ಹಾಡುಗಳು".

ಈಶ್ವರ ಅವರು ಒಳ್ಳೆಯ ಕವಿಗಳಾಗಿದ್ದರು. ಅವರಿಗೆ ದೇವರು ಹೆಚ್ಚು ಆಯುಷ್ಯ ಕೊಡಲಿಲ್ಲ. ಬೀದರ ಜಿಲ್ಲೆಯ ಹಾಲಹಳ್ಳಿಯಲ್ಲಿ ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯರಾಗಿ ಕಾರ್ಯನಿರ್ವಹಿಸುತ್ತಿದ್ದಾಗ ಕ್ರಿ.ಶ. ೨೦೦೭ರಲ್ಲಿ ಈಶ್ವರ ಅವರು ಹೃದಯಾಘಾತದಿಂದ ವಿಧಿವಶರಾದರು. ಅವರು ರಚಿಸಿದ ಹಾಡುಗಳು ಇಂದು ನಮ್ಮ ನಿಮ್ಮ ನಡುವೆ ಕೃತಿಯಾಗಿ ಉಳಿದುಕೊಂಡಿವೆ.

ಮಾನವ ಕುಲವೆಲ್ಲ ಒಂದು

ಮಾನವ ಕುಲವೆಲ್ಲ ಮಾಡಿದ ಒಂದ
ಬಂದ ಬಂದ ಭೀಮ ಬಂದ ॥ ಪ ॥

ಕಾಗೆ ತಾನೊಂದು ಅಗುಳ ಕಂಡರೆ
ಕೂಗಿ ಕರೆವುದು ತನ್ನ ಬಳಗ
ಕೋಳಿ ಕರೆವುದು ತನ್ನ ಬಳಗ
ಕಾಗಿ ಕೋಳಿಗಿಂತ ಕನಿಷ್ಟ ಗುಣಗಳು
ಇದ್ದವನೆ ಹೊಲೆಯ ಭ್ರಷ್ಟ
ಪ್ರಾಣಿಗಿಂತಲೂ ಕನಿಷ್ಟ ॥ ೧ ॥

ನಾಲ್ಕು ದಿನದ ಈ ಸಂತೆಯಲ್ಲಿ
ನಿನ್ನ ಆಳ್ವಿಕೆಯಾದರೂ ಎಷ್ಟು?
ನಾ ಅಂಬೋ ಅಹಂಕಾರದಲ್ಲಿ
ಹೊತ್ತುಗಳೆಯದಿರೊ ಬರೇ ನಷ್ಟ
ತನ್ನ ಶರೀರ ಮೇಲಂಗಿ
ಎಂದು ತಾ ತಿಳಿದು ನಡೆದವನೇ ಶ್ರೇಷ್ಠಾ
ಎಲ್ಲ ಪ್ರಾಣಿಗಿಂತ ಕನಿಷ್ಟ ॥ ೨ ॥

ಭಾರತದೇಶ ಪುಣ್ಯಭೂಮಿ
ಇದು ಜಗತ್ತಿನಲ್ಲಿ ಬಲು ಶ್ರೇಷ್ಠ
ಸರ್ವರೊಂದಾಗಿ ದುಡಿದರೆ ನಮ್ಮ
ಮುಂದೆ ಇನ್ನಾವದಿಲ್ಲೊ ಪರರಾಷ್ಟ್ರ
ಬಸವಣ್ಣನವರ ಶಿಶು ಕರುಣಾಸಾಗರೀತ
ಹೇಳಿದ ತಾ ತಿಳಿದಷ್ಟ
ಪ್ರಾಣಿಗಿಂತಲೂ ಆಗಬೇಡ ಕನಿಷ್ಟ ॥ ೩ ॥

ಸಾಕೋ ಈ ಸಂಸಾರ

ಸಾಕೋ ಸಾಕೋ ಈ ಸಂಸಾರ ಝೋಲಿ
ನಿಮ್ಮ ಬಾಯೀಗಿ ಬಿದ್ದಾದೊ ಕೀಲಿ ॥ ಪ ॥

ಸ್ವಲ್ಪ ಸುಖ ಕಾಮಕ್ಕೆ ಬಿದ್ದಿ ಬಲಿ
ನಿನ್ನ ಯೌವನದ ಆ ಮಬ್ಬಿನಲಿ
ಇಲ್ಲಿಗೆ ಬರುವಾಗ ಬಂದೀದಿ ಖಾಲಿ
ಮುಂದೆ ಹೋಗುವಾಗ ಏನಿಲ್ಲ ಹುಚಪ್ಯಾಲಿ ॥ ೧ ॥

ಮಾನವ ಕುಲದಲಿ ಹುಟ್ಟಿ ಬಂದಿ
ಇನ್ನೂ ಬೇರಾವ ಕುಲಕ್ಕೆ ಹೋಗಬೇಕಂದಿ
ಮಾಡೋ ವಿಚಾರ ಮರೆಯದಿರು ಹಾದಿ
ನಿಜವಿದ್ದರ ಬರೋದಿಲ್ಲೊ ಭಾದಿ ॥ ೨ ॥

ಬೇರೆ ಬೇರೆ ಧರ್ಮಗಳಿದ್ದುದ್ದಕ್ಕಾಗಿ
ನೀನು ಕಚ್ಚಾಡ ಬೇಡೋ ಮಂಕಾಗಿ
ಎಲ್ಲರೂ ಸೇರುವುದು ಒಂದೇ ಜಾಗ
ಇರಲಾರದಂಗ ನೀ ಕೂಡುತಿ ಆಗ ॥ ೩ ॥

ಜನ್ಮವಿತ್ತವರ ಸೇವಾ ಮಾಡುವಲ್ಲಿ
ನಿನಗ ದೊರೆವನು ದೇವರ್‍ಯಾವಲ್ಲಿ ?
ಜನ್ಮ ಕೊಟ್ಟವರ ಸೇವೆ ಮಾಡೋ ಇಲ್ಲಿ
ನಿನ್ನ ದೇವರು ಇದ್ದಾನೋ ನಿನ್ನಲ್ಲಿ ॥ ೪ ॥

ದೊಡ್ಡ ಹಳ್ಳಿಖೇಡ ಗ್ರಾಮದ ಕವಿಗಳಗುಡಿ
ಸತ್ಯ ಬುದ್ಧ ದೇವನ ತತ್ತ್ವದಿ ನೀನು ನಡಿ
ದಾಸ ಮಾನವ ತನ್ನ ಶಿಶುವಿಗೆ ಬೋಧನ ಮಾಡಿ
ಶಿಶು ಕರುಣ ಸಾಗರ ಹೇಳಿದ ಕವಿಮಾಡಿ ॥ ೫ ॥

(ಈ ವಿವರಗಳನ್ನು ಕವಿಗಳ ಹೆಂಡತಿಯಾದ ಪುತಳಾಬಾಯಿ ಅವರು ನೀಡಿದ್ದಾರೆ.)


▯




ಈಶ್ವರ ಕರುಣಸಾಗರ (ಮೋನಪ್ಪ ಕೊಂಡರ ಅವರ ಮಗ) ಅವರ ಮನೆ (ಹಳ್ಳಿಖೇಡ - ಬಿ).



ಈಶ್ವರ ಕರುಣಸಾಗರ



ಮೋನಪ್ಪ ಕೊಂಡರ (ಈಶ್ವರ ಅವರ ತಂದೆ)



ಈಶ್ವರ ಅವರ ಪತ್ನಿ ಪುತಳಾಬಾಯಿ ತಮ್ಮ ಮಕ್ಕಳೊಂದಿಗೆ

೨೦. ಬಸಪ್ಪ ಗೋಪಾ (ಕ್ರಿ.ಶ.ಸು. ೧೯೫೫)

ವೀರಶೈವ ಮನೆತನದ ಬಸಪ್ಪನವರು ಬೀದರ ಜಿಲ್ಲೆ ಹುಮನಾಬಾದ ತಾಲ್ಲೂಕಿನಲ್ಲಿ ಬರುವ ಉಡಬಾಳ ಗ್ರಾಮದವರು. ಆಧ್ಯಾತ್ಮಿಕ ಸಂಸ್ಕಾರವನ್ನು ಮೈಗೂಡಿಸಿಕೊಂಡಿರುವ ಅವರು ಹಲವಾರು ಭಕ್ತ-ಶಿಷ್ಯರನ್ನು ಹೊಂದಿರುವರು. ಹೆಚ್ಚಾಗಿ ಸಂಚಾರದಲ್ಲಿಯೇ ಇರುವ ಬಸಪ್ಪನವರು ಸಂಗೀತ ದಾಸೋಹಿಗಳಾಗಿದ್ದಾರೆ. ಅವರ ಮೂಲ ಕಲೆ ಸಂಗೀತ. ಜನತೆ ಅವರನ್ನು ಗುರುತಿಸುವುದು "ಸುಪ್ರಸಿದ್ಧ ಸಂಗೀತಗಾರ"ರೆಂದೆ.

ಗೋಪಾ ಮನೆತನದ ಮಾಣಿಕಪ್ಪನವರು ಸದಾಚಾರ ಸಂಪನ್ನರು; ಕಾಯಕ ಪ್ರೇಮಿಗಳು. ಗುರು-ಲಿಂಗ-ಜಂಗಮ ಆರಾಧಕರಾಗಿದ್ದರು. ಹುಮನಾಬಾದ ತಾಲ್ಲೂಕಿನಲ್ಲಿ ಬರುವ ರಾಮಪುರದ ರಾಮಲಿಂಗ ದೇವರನ್ನು ಅವರು ಭಕ್ತಿಯಿಂದ ನಡೆದುಕೊಳ್ಳುತ್ತಿದ್ದರು. ರಾಮಲಿಂಗ ದೇವರು ಗೋಪಾ ಮನೆತನದ ಆರಾಧ್ಯ ದೇವರು. ಮಾಣಿಕಪ್ಪನವರು ಊರಿಗೆ ಬರುವ ಸಾಧು ಸಂತರನ್ನು ಕಾಣದೆ ಇರುತ್ತಿರಲಿಲ್ಲ. ಅವರನ್ನು ಮನೆಗೆ ಬಿನ್ನಹಕ್ಕೆ ಆಮಂತ್ರಿಸುತ್ತಿದ್ದರು. ಮನೆಗೆ ಬರುವ ಗುರು-ಶಿವ-ಚರ ಭಕ್ತರು; ಮಹಾಪುರಷರ ಸೇವೆಯನ್ನವರು ಮನ ಮುಟ್ಟಿ ಮಾಡುತ್ತಿದ್ದರು. ಹೀಗೆ ಗೋಪಾ ಅವರ ಮನೆಯು ಮಹಾಪುರಷರ ಆಗಮನ ಮತ್ತು ಅವರ ಸೇವೆಯಿಂದಾಗಿ ಆಧ್ಯಾತ್ಮದ ವಾತಾವರಣವನ್ನು ಒಳಗೊಂಡಂತಿದ್ದಿತು. ಇಂತಹ ಪರಿಸರದಲ್ಲಿ ಬಸಪ್ಪನವರು ಹುಟ್ಟಿದರು. ಮಾಣಿಕಪ್ಪನವರು ತಮ್ಮ ಮಗ ಬಸಪ್ಪನವರಿಗೆ ಸಂಪ್ರದಾಯಿಕವಾದರೂ ಒಳ್ಳೆಯ ಸಂಸ್ಕಾರವನ್ನು ನೀಡಿದರು. ಶಿಕ್ಷಣ ಹೊಂದಲು ಶಾಲೆಗೆ ಕಳುಹಿಸಿದರು. ಬಸಪ್ಪನವರು ಸರಕಾರಿ ಶಾಲೆಯಲ್ಲಿ ಹತ್ತನೆಯ ತರಗತಿಯವರೆಗೆ ಓದಿದರು. ಅವರಿಗೆ ನೇಮಗಳಿಂದ ಕೂಡಿದ ಸರಕಾರಿ ಶಿಕ್ಷಣಕ್ಕಿಂತಲೂ ತಮ್ಮದೆ ಆದ ರೀತಿಯಲ್ಲಿ ಕಲಿಯಬಹುದಾದ ಕಲಾತ್ಮಕ ಶಿಕ್ಷಣದೆಡೆಗೆ ಹಂಬಲವಾಯಿತು. ಆಗ ಅವರ ಮನಸ್ಸು ಸೆಳೆದದ್ದು ಸಂಗೀತ ಕಲೆ. ಶಿಕ್ಷಣದ ಆವರಣ ದಾಟಿಕೊಂಡು ಬಸಪ್ಪ ಅವರು ಸಂಗೀತ ಕಲೆಯ ಸಾಧನೆಯತ್ತ ಧಾವಿಸಿದರು. ಸಂಗೀತ ವಿದ್ವಾಂಸರನ್ನು ಭೇಟಿಯಾದರು. ಅವರ ಸೇವೆ ಮಾಡಿದರು. ಸಂಗೀತದ ಆರಾಧನೆ ಬಸಪ್ಪನವರಿಗೆ ದೈವೀ ಆರಾಧನೆಯೇ ಆಯಿತು. ಲಕ್ಷವಿಟ್ಟು ಅದನ್ನು ಅವರು ಮೈಗೂಡಿಸಿಕೊಂಡರು. ಖ್ಯಾತ ಸಂಗೀತಗಾರರಾದರು.

ಬಸಪ್ಪನವರನ್ನು ಇಂದು ಯಾರಾದರೂ ನೋಡಿದರೆ ಅವರು ಸಾಧು-ಸಂನ್ಯಾಸಿಗಳೇ ಇರಬಹುದೆಂಬಂತೆ ಕಾಣುತ್ತಾರೆ. ಆದರೆ ಅವರು ಗೃಹಸ್ಥ ಬದುಕಿನ ನಿರ್ವಹಣೆ ಮಾಡುತ್ತಲೇ ಸಾಧುತ್ವದ ಸಿದ್ಧಿಯಲ್ಲಿ ತೊಡಗಿದ್ದಾರೆ. ಬಸಪ್ಪನವರ ಪತ್ನಿ ಜಗದೇವಿ. ಈ ದಂಪತಿಗಳಿಗೆ ಐದು ಜನ ಹೆಣ್ಣು ಮಕ್ಕಳಿದ್ದಾರೆ. ಒಬ್ಬ ಮಗನಿದ್ದಾನೆ.

ಬಸಪ್ಪನವರ ಮೇಲೆ ಗುರುಲಿಂಗಸಾಧುಗಳ ಕರುಣೆಯಾಯಿತು. ಅವರು ಬಂದು ಉಡಬಾಳದಲ್ಲಿಯೇ ನೆಲೆಸಿದರು. ಬಸಪ್ಪನವರು ಗುರುಗಳಿಗಾಗಿ ಆಶ್ರಮವೊಂದನ್ನು ನಿರ್ಮಿಸಿಕೊಟ್ಟರು. ಇಂದು ಗ್ರಾಮದ ಹೊರವಲಯದ ಪ್ರಶಾಂತ ತಾಣದಲ್ಲಿ ಗುರುಲಿಂಗ ಸಾಧುಗಳ ಆಶ್ರಮವನ್ನು ಕಾಣಬಹುದಾಗಿದೆ. ಗುರುಗಳ ಆಶ್ರಮವು ಬಸಪ್ಪನವರಿಗೆ ಆಧ್ಯಾತ್ಮ ಸಾಧನೆಯ ವೇದಿಕೆಯಾಯಿತು. ಏಕಾಗ್ರತೆಯನ್ನು ನೀಡುವ ಮಾಧ್ಯಮವಾಯಿತು. ಗುರುಲಿಂಗ ಸಾಧುಗಳು ಪವಾಡ ಪುರುಷರಾಗಿದ್ದರು. ಆಧ್ಯಾತ್ಮದ ತಪಸ್ವಿಗಳಾಗಿದ್ದರು. ಅವರಿಗೆ ಸಂಗೀತವೆಂದರೆ ಪ್ರೀತಿಯ ಕಲೆಯಾಗಿದ್ದಿತು. ಗುರುಗಳು ಆಧ್ಯಾತ್ಮದ ಹಾಡುಗಳನ್ನು ಹಾಡುತ್ತಿದ್ದರು.

ಗುರುಗಳ ಸನ್ನಿಧಾನದಲ್ಲಿ ಆಧ್ಯಾತ್ಮ-ಕಲೆಗಳ ಸಾಧನೆಗೈದ ಬಸಪ್ಪ ಗೋಪಾ ಅವರು ಇಂದು ಶರಣ-ಸಾಧು ವ್ಯಕ್ತಿತ್ವವನ್ನು ಬೆಳೆಯಿಸಿಕೊಂಡಿದ್ದಾರೆ. ತಮಗೆ ತಿಳಿದಿರುವ ಆಧ್ಯಾತ್ಮಿಕ ತತ್ತ್ವಗಳನ್ನು ಉಪದೇಶ ಮಾಡಲೆಂದು ಆಗಾಗ ಗುರುಗಳ ಆಶ್ರಮದಲ್ಲಿ ಅನುಭಾವ ಗೋಷ್ಠಿಯನ್ನು ನಡೆಯಿಸುತ್ತಾರೆ. ಸಂಗೀತ ಕಾರ್ಯಕ್ರಮಗಳನ್ನು ಏರ್ಪಡಿಸುತ್ತಾರೆ.

ಬಸಪ್ಪ ಗೋಪಾ ಅವರು ಸಂಗೀತದಲ್ಲಿ ಸಿದ್ಧಹಸ್ತರಾಗಿ ಮುಂದುವರೆಯುತ್ತಿದ್ದಂತೆ ಕವಿಗಳಾಗಿಯೂ ಬೆಳೆಯ ತೊಡಗಿದ್ದಾರೆ. ಸ್ವತಃ ಆಧ್ಯಾತ್ಮದ ಹಾಡುಗಳ ರಚನೆ ಮಾಡಿದ್ದಾರೆ; ಮಾಡುತ್ತಲಿದ್ದಾರೆ. ಗುರುಲಿಂಗರ ಹೆಸರನ್ನೇ ತಮ್ಮ ಆಧ್ಯಾತ್ಮದ ಹಾಡುಗಳಿಗೆ ಮುದ್ರೆಯನ್ನಾಗಿಸಿ ಕೊಂಡಿದ್ದಾರೆ. ನಾನು ಅವರನ್ನು ಕುರಿತು "ನೀವು ಪದ್ಯಗಳನ್ನು ಬರೆಯುತ್ತೀರೆಂದು ಕೇಳಿದ್ದೇನೆ, ಆದುದರಿಂದ ನಿಮ್ಮ ಪರಿಚಯ ತೆಗೆದುಕೊಳ್ಳಲು ಬಂದೆ" ಎಂದೆನು. ಅದಕ್ಕೆ ಅವರು "ನಾನು ಮೂಲತಃ ಸಂಗೀತಗಾರ. ಹಲವಾರು ಜನರಿಗೆ ಸಂಗೀತ ಕಲೆ ಕಲಿಸಿದ್ದೇನೆ. ಗುರುಗಳ ಕೃಪೆಯಿಂದ ಅದು ನನಗೆ ಉಸಿರಿನಂತಾಗಿದೆ. ಇತ್ತೀಚೆಗೆ ನಾನು ಹಾಡು ರಚನೆ ಆರಂಭ ಮಾಡಿದ್ದೇನೆ. ಅದಕ್ಕೂ ಗುರುಗಳ ಕೃಪೆಯೇ ಕಾರಣವಾಗಿದೆ. ಆಧ್ಯಾತ್ಮದ ಹಾಡುಗಳನ್ನು ಬರೆದು ಹಾಡುತ್ತಿದ್ದೇನೆ. ಅವು ನಿಮ್ಮಂಥ ಪಂಡಿತರು ನೋಡಿ ತಿದ್ದಬೇಕು" ಎಂದು ವಿನೀತ ಭಾವದಿಂದ ಹೇಳಿದರು.

ಬಸಪ್ಪ ಗೋಪಾ ಅವರು ಬರೆದ ಎರಡು ಹಾಡುಗಳನ್ನು ಇಲ್ಲಿ ಕೊಡಲಾಗಿದೆ:

ಗುರುಕರುಣ ಚಂದ್ರ

ಗುರುಕರುಣೆಯ ಚಂದ್ರನು
ವರ ಹೃದಯದಲ್ಲಿ ಮೂಡಿದನು ॥ ಪ ॥

ಬೆಳಕು ಬೆಳಕಾಯಿತು ಅಂತರಂಗ
ಬೆಳಕಿನ ಬದುಕಾಯಿತು ಬಹಿರಂಗ
ಕೊಳಕಿನ ಕಾಳಿಕೆ ಬಿಟ್ಟು ಹೋಯಿತು ಸಂಗ
ಥಳಕಾಯಿತು ಅಂಗ ನಿರಂಗ ॥ ೧ ॥

ಲೋಕದ ಕಾಕವು ಇಲ್ಲವಾಯಿತು
ಪಾಕವಾಯಿತು ಮನ-ಭಾವ ತಂಪು
ಏಕವಾಯಿತು ಅಂಗಲಿಂಗ ಸಂಗವನಾಂತು
ವ್ಯಾಕುಲವು ಎಲ್ಲಿಯದು ನಿಜದಲಿಂತು ॥ ೨ ॥

ಚಾರು ಚರಿತದ ಸಂಗವ ದೊರಕಿತು
ಗುರುಚರರ ಕರುಣೆಯ ಹರಕೆಯಿಂತು
ಮೊರೆವ ಭೇಕಗಳ ಸದ್ದಡಗಿತು
ಅರಿವಿಗೆ ಅರಿವು ಕಣ್ಣು ತೆರೆಯಿತು ॥ ೩ ॥

ಪಾಲಕನು ಗುರು ದೇವನು
ಲೀಲಾ ಮೂರುತಿಯೇ ಅವನು ಇಹನು
ಕಾಲಕಾಲಕೆ ಮಹಿಮೆ ದೋರುತಿಹನು
ಮ್ಯಾಲಕೆ ಬಾಯೆಂದು ನನ್ನ ಕರೆಯುತಿಹನು ॥ ೪ ॥

ಧರಿಯೊಳು ಶ್ರೇಷ್ಠವಹ ಉಡಬಾಳ
ಗುರುಲಿಂಗ ಸಾಧುವಿನ ಮನದಾಳ
ಅರಿಯಬೇಕಪ್ಪ ಸೇವೆ ಮಾಡಿ ನೀ ಬಾಳ
ಮರ್ತ್ಯದ ಬದಕಾಗುವದು ಶಿವನ ಸ್ಥಳ ॥ ೫ ॥

ಸ್ವಾಮಿ ಆಗುವದು ಮರತಿ

ಕಾಮಿತಾರ್ಥವ ಕೇಳುತ ನಿಂತಿ
ಸ್ವಾಮಿಯಾಗುವುದು ಮರತಿ ॥ ಪ ॥

ನಾಮದ ಸೀಮೆಯ ದಾಟದೆ ನಿಂತಿ
ಕಾಮದ ಬಂಧನ ಬಿಡದೇನಂತಿ
ವಾಮದ ಹಾದಿ ಹಿಡಿದು ನೀ ಹೊಂಟಿ
ನೇಮದ – ಪ್ರೇಮದ ನೆಲಿ ಸಿಲುಕದೆ ಕುಂತಿ ॥ ೧ ॥

ಯಾರಿಲ್ಲ ಸ್ವಾಮಿ ಯಾರಿಲ್ಲ ನೇಮಿ
ಊರಿಗೆ ಊರಲ್ಲ ಸ್ವಾಮಿ – ನೇಮಿ
ನಿನಗೆ ನೀನು ಆಗು ಸ್ವಾಮಿ
ನಿನಗೆ ನೀನು ಆಗು ನೇಮಿ ॥ ೨ ॥

ಪ್ರೇಮವ ಮಾಡು ಸ್ವಾಮಿ ಆಗು
ಜಗದ ಜಂಜಡವ ನೀನು ನೀಗು
ಗುರುಲಿಂಗ ಸಾಧುವಿನ ಪಾದಕೆ ಬಾಗು
ಅರುವಿಗೆ ಅರುವಾಗಿ ಗುರುವಾಗು ॥ ೩ ॥

(ಈ ವಿವರಗಳನ್ನು ಸ್ವತಃ ಕವಿಗಳೇ ನೀಡಿದ್ದಾರೆ.)

□



ಬಸಪ್ಪ ಗೋಪಾ ಅವರ ಮನೆ (ಉಡಬಾಳ).



ಬಸಪ್ಪ ಗೋಪಾ




ಬಸಪ್ಪ ಗೋಪಾ ಅವರ
ತಂದೆ ಮಾಣಿಕಪ್ಪ



ಬಸಪ್ಪ ಗೋಪಾ ಅವರ ಪತ್ನಿ ಜಗದೇವಿ ಅವರು ಮಗಳೊಂದಿಗೆ.



ಬಸಪ್ಪ ಗೋಪಾ ಅವರ ಗುರು ಗುರುಲಿಂಗ ತ್ಯಾಗಿ ಅವರು.




ಗುರುಲಿಂಗ ತ್ಯಾಗಿಗಳ ಆಶ್ರಮ (ಉಡಬಾಳ).




ಗುರುಲಿಂಗ ತ್ಯಾಗಿಗಳ
ಆಶ್ರಮದಲ್ಲಿವ ಶ್ರೀ ರೇಣುಕರ
ಪ್ರತಿಮೆ. ಅದರ
ಎದುರಿನಲ್ಲಿರುವ ಧುನಿ.



ಗುರುಲಿಂಗ ತ್ಯಾಗಿಗಳ
ಸಮಾಧಿ ಗದ್ದುಗೆ.



ಬಸಪ್ಪ ಗೋಪಾ ಅವರ
ಪೂಜಾಗೃಹ.



ಬಸಪ್ಪ ಗೋಪಾ ಅವರ ಆರಾಧ್ಯ ದೇವತೆ ರೇಣುಕಾ ಎಲ್ಲಮ್ಮ ಮಂದಿರ (ಉಡಬಾಳ).

ರೇಣುಕಾ ಎಲ್ಲಮ್ಮನ
ದರ್ಶನ ಪ್ರತಿಮೆ.





ಎಲ್ಲಮ್ಮನ ಮಂದಿರದ
ಒಳಾಂಗಣ ನೋಟ.

೨೧. ಅಣೆಪ್ಪ ಕಟ್ಟೀಮನಿ (ಕ್ರಿ.ಶ.ಸು. ೧೯೫೫)

ಬೀದರ ಜಿಲ್ಲೆಯ ಹುಮನಾಬಾದ ತಾಲ್ಲೂಕಿನಲ್ಲಿ ಬರುವ ಚಿಕ್ಕಗ್ರಾಮ ಕಲ್ಲೂರು ಅಣೆಪ್ಪನವರ ಸ್ವಗ್ರಾಮವಾಗಿದೆ. ಈ ಕವಿಗೆ ಒಳ್ಳೆಯ ಪರಿಸರ ವಿದ್ದಿತು. ಕಲಿಯುವ ಮನಸ್ಸು ಇದಿದ್ದರೆ ಅಣೆಪ್ಪನವರು ಸರಿಯಾಗಿ ಶಿಕ್ಷಣ ಹೊಂದಿ, ಮೇಲೆ ಬರಬಹುದಿತ್ತು. ಆದರೆ ಅಣೆಪ್ಪನವರು ಶೈಕ್ಷಣಿಕವಾಗಿ ಮುಂದೆ ಹೋಗುವ ಮನಸ್ಸು ಮಾಡಲಿಲ್ಲವೆಂದೇ ಹೇಳಬೇಕಾಗುತ್ತದೆ.

ದಲಿತ ಕುಟುಂಬದ ಯಜಮಾನನಾಗಿ ಇನ್ನೂ ಬದುಕಿನ ಉತ್ಸಾಹದಿಂದಲೇ ಇರುವ ಎಪ್ಪತ್ತರ ವಯಸ್ಸು ಮೀರಿದ ಲಾಲಪ್ಪನವರು ನಿಜಕ್ಕೂ ಸಂಸ್ಕಾರ ಮನದ ವ್ಯಕ್ತಿಗಳು. ತಾವು ಬಡತನದ ಬವಣೆಯಲ್ಲಿ ಬೆಂದರೂ ತಮ್ಮ ಮಕ್ಕಳಿಗೆ ಮುಂದೆ ಒಳ್ಳೆಯ ಭವಿಷ್ಯವು ದೊರಕಲೆಂದು ಬಯಸಿ, ಅವರನ್ನು ಸುಶಿಕ್ಷಿತರನ್ನಾಗಿಸುವುದಕ್ಕೆ ಸಾಕಷ್ಟು ಪ್ರಯತ್ನಶೀಲರಾದುದುಂಟು. ಈ ಪ್ರಯತ್ನದ ಫಲದಿಂದಾಗಿಯೇ ಲಾಲಪ್ಪನವರ ಒಬ್ಬ ಮಗ ಇಂಜಿನಿಯರ್ ಆಗಿ ಸಾಕಷ್ಟು ಸಂಬಳ ಹೊಂದುತ್ತ; ಮನೆತನದ ಆರ್ಥಿಕ ಸ್ಥಿತಿಯ ಬಲವರ್ಧನೆಗೆ ಕಾರಣರಾಗಿದ್ದಾರೆ.

ಲಾಲಪ್ಪ ದಂಪತಿಗಳೇನೋ ಇಂದು ಸುಖವಾಗಿದ್ದಾರೆ. ಆದರೆ ಅಣ್ಣ-ತಮ್ಮಂದಿರು ಬೇರೆ-ಬೇರೆಯಾಗಿರುವ ಕಾರಣದಿಂದ ಅವರವರ ಜೀವನಕ್ಕೆ ಅವರವರೆ ಹೊಣೆಯೆಂಬಂತಾಗಿ ಕವಿಗಳಾದ ಅಣೆಪ್ಪನವರಿಗೆ ಆರ್ಥಿಕ ಮುಗ್ಗಟ್ಟಿನ ಬದುಕೇ ಯಥಾವತ್ತಾಗಿ ಉಳಿದಿದೆ.

ತಂದೆ ಲಾಲಪ್ಪ--ತಾಯಿ ಸುಭದ್ರಾ ಅವರಿಗೆ ಮಗನಾಗಿ ಅಣೆಪ್ಪನವರು ಜನಿಸಿದ್ದು ಕ್ರಿ.ಶ. ೧೯೫೫ರಲ್ಲಿ. ಅಣೆಪ್ಪನವರಿಗೆ ತಂದೆ ಲಾಲಪ್ಪನವರು ಸರಕಾರಿ ಶಾಲೆಗೆ ಹಾಕಿದರು. ಹಿರಿಯಮಗನಿಗೆ ಒಳ್ಳೆಯ ಸುಶಿಕ್ಷಿತನಾಗಿ ಮಾಡಬೇಕೆಂದು ಅವರು ಬಯಸಿದರು. ಆದರೆ ಅಣೆಪ್ಪನವರು ಶೈಕ್ಷಣಿಕವಾಗಿ ಮುಂದುವರೆಯದೆ ಸಾಂಸ್ಕೃತಿಕವಾಗಿ ತಮ್ಮದೇ ಆದ ಒಂದು ಹಾದಿಯನ್ನು ಹುಡುಕಿಕೊಂಡರು. ಅದು ಅವರಿಗೆ ತತ್ತ್ವಪದ ತೋರಿದ ಹಾದಿ. ಆ ಹಾದಿಯ ಮೂಲಕ ಕ್ರಮಿಸುತ್ತ ಬಂದಿರುವ ಅಣೆಪ್ಪನವರು ಇಂದು ಒಳ್ಳೆಯ ಹಾಡುಗಾರರೂ ಆಗಿದ್ದಾರೆ. ಉತ್ತಮ ತತ್ತ್ವಪದಕಾರರೂ ಆಗಿದ್ದಾರೆ.

ಅಣೆಪ್ಪನವರು ತಮ್ಮ ಬದುಕಿನ ನಿರ್ವಹಣೆಗಾಗಿಯೆಂದು ಕೃಷಿಕಾಯಕವನ್ನು ಆಯ್ಕೆ ಮಾಡಿಕೊಂಡಿದ್ದಾರೆ. ಬೇರೆಯವರ ಹೊಲಗಳಿಗೂ ಹೋಗುತ್ತಾರೆ. ಶ್ರಮದಿಂದ ದುಡಿಯುತ್ತಾರೆ. ಅವರ ಕೆಲಸದಲ್ಲಿ ಅವರ ಪತ್ನಿ ಚಂದ್ರಕಲಾ ಅವರೂ ಸಹಾಯ ಮಾಡುತ್ತಲಿದ್ದಾರೆ. ಅಣೆಪ್ಪ ದಂಪತಿಗಳಿಗೆ ಒಟ್ಟು ನಾಲ್ಕು ಜನ ಮಕ್ಕಳಿದ್ದಾರೆ. ಅವರಲ್ಲಿ ಮೂವರು ಗಂಡು ಮಕ್ಕಳು. ಒಬ್ಬಳು ಮಗಳು.

ಅಣೆಪ್ಪನವರ ತತ್ತ್ವಪದಗಳ ರಚನೆ ಮತ್ತು ಅವರ ಹಾಡುಗಾರಿಕೆಯನ್ನು ಕುರಿತು ಲಾಲಪ್ಪನವರು ಹೀಗೆ ಹೇಳುತ್ತಾರೆ: "ಎಲ್ಲ ಬೆರಳುಗಳು ಒಂದೇ ಸಮ ಇರಬೇಕಂದ್ರ ಸಾಧ್ಯವಿಲ್ಲ. ಹೆಚ್ಚು ಕಡಿಮೆ ಇರಾವೆ. ನನಗೆ ಒಟ್ಟಾರೆ ನನ್ನ ಮಕ್ಕಳು ಒಳ್ಳೆಯವರಾಗಿ, ಜನರ ಬಾಯಲ್ಲಿ ಹೌದು ಎಂದು ಅನ್ನಿಸಿಕೊಳ್ಳಬೇಕೆಂಬುದಾಗಿತ್ತು. ಒಬ್ಬ ಮಗ ಇಂಜಿನಿಯರ್ ಇದ್ದಾನೆ. ಅಣೆಪ್ಪ ಪಿ.ಯು.ಸಿ ವರೆಗೆ ಓದಿದ. ಮುಂದೆ ಅವನಿಗೆ ಓದು ಬೇಡವಾಯಿತು. ಆಗಲೇ ಅವನು ಪದ್ಯ ಬರೆಯುವ ಹವ್ಯಾಸಕ್ಕೆ ಅಂಟಿಕೊಂಡಂತಿದ್ದಿತು. ಈಗ ಅವನೂ ಒಳ್ಳೆಯ ಹೆಸರನ್ನೇ ತಂದಿದ್ದಾನೆ. ನಮಗೆ ಅಣೆಪ್ಪ ಕಲಿಯಲಿಲ್ಲವೆಂಬ ವ್ಯಥೆಯಿಲ್ಲ; ಅವನು ಕವಿಯಾಗಿ ಬೆಳೆದುದು ಅತೀವ ಹರುಷವಾಗಿದೆ. ಅವನಿಗೆ ನಾವೆಲ್ಲರೂ ಪ್ರೋತ್ಸಾಹ ನೀಡುತ್ತಿದ್ದೇವೆ. ಆರ್ಥಿಕವಾಗಿಯೂ ಅವನಿಗೆ ಆಗಾಗ ಅವನ ಸಹೋದರರು ಸಹಾಯ ಮಾಡುತ್ತಾರೆ".

ಅಣೆಪ್ಪನವರು ತಮ್ಮ ಬದುಕಿನ ಬಗೆಗೆ ಸಂತೃಪ್ತ ಭಾವವನ್ನೆ ಹೊಂದಿದವರಾಗಿದ್ದಾರೆ. ಅವರಲ್ಲಿ ಆಧ್ಯಾತ್ಮಿಕ ಶ್ರದ್ಧೆಯಿದೆ. ಬಸವತೀರ್ಥದ ವೀರಭದ್ರ ದೇವರನ್ನು ಅನನ್ಯ ಭಕ್ತಿಯಿಂದ ನಡೆದುಕೊಳ್ಳುತ್ತಾರೆ. ಅವರು ತಮ್ಮ ಬಗೆಗೆ ಹೇಳುತ್ತಾ "ನಾನು ಹೆಚ್ಚು ಕಲಿಯಲಿಲ್ಲವೆಂಬುದರ ಬಗೆಗೆ ನನಗೇನೂ ಖೇದವಿಲ್ಲ. ಈಗಿನ ಎಂ.ಎ ಓದಿದವರಕ್ಕಿಂತಲೂ ನಾನು ಕನ್ನಡದಲ್ಲಿ ಹುಷಾರಾಗಿದ್ದೇನೆ. ಕಾವ್ಯಶಕ್ತಿ ಎಲ್ಲರಿಗೂ ಒಲಿಯುವುದಿಲ್ಲ. ಅಂತಹ ಶಕ್ತಿ ನನಗೆ ದೇವರ ಕರುಣೆಯಿಂದ ದಕ್ಕಿದೆ. ಅದು ನನಗೆ ಬಹುದೊಡ್ಡ ಲಾಭವೆಂದು ಭಾವಿಸಿದ್ದೇನೆ" ಎನ್ನುತ್ತಾರೆ.

ಅಣೆಪ್ಪನವರು ಇಲ್ಲಿಯವರೆಗೆ ಹಲವಾರು ಪ್ರಕಾರದ ಹಾಡುಗಳನ್ನು ಬರೆದಿರುವರು. ಅವುಗಳಲ್ಲಿ ಕೆಲವು ತತ್ತ್ವಪದಗಳೂ ಇವೆ. ತಮ್ಮ ತತ್ತ್ವಪದಗಳಿಗೆ ಅಣೆಪ್ಪ ಅವರು ವೀರಭದ್ರ ದೇವರ ಹೆಸರು ಮತ್ತು ಕೆಲವೆಡೆಗಳಲ್ಲಿ ಸ್ವನಾಮವೆ ಮುದ್ರೆಯಾಗಿ ಬಳಕೆ ಮಾಡಿಕೊಂಡಿದ್ದಾರೆ. ಇಲ್ಲಿ ಅವರ ಎರಡು ಪದ್ಯಗಳನ್ನು ಉದಾಹರಣೆಗಾಗಿ ಕೊಡಲಾಗಿದೆ:

ಹೀನಗುಣ ಬಿಡಬೇಕರಿ ಶರಣಾಗದಕ

ಜ್ಞಾನವಂತರು ಕುಂತು ಕೇಳಿರಿ
ವಿನಯದಿಂದ ಹೇಳುವೆನು ತತ್ತ್ವ ಸಭಕ ॥ ಪ ॥

ಬಂದೀರಿ ಶರಣರು ನೀವೆಲ್ಲ ಅನುಭವ ಮಂಟಪಕ
ಹಿರಿಯರು ಹೇಳಿದ್ದು ಕೇಳದಿದ್ದರ ಬರುತಾದ ನರಕ
ಬ್ಯಾರೆ-ಬ್ಯಾರೆ ಅಂತ ಧಡ್ಡ ಪಂಡಿತರು ಭೇದ ಮಾಡುತಾರ ಯಾಕ ?
ಯಾರೇ ಇರಲಿ ಎಲ್ಲ ಜೀವ ಒಂದೆ ಅಂತ ತಿಳಿದರ ಸ್ವರ್ಗ ಲೋಕ ॥ ೧ ॥

ನೀವು ತಿಳಿದು ನೋಡಬೇಕು ಮನಕ
ಬಂದಿರೆಲ್ಲಿಗೆ, ಹೋಗುದೆಲ್ಲಿಗೆ ಯಾರಿಗಿಲ್ಲ ಪರಕ
ಮಾನವ ಜಲ್ಮ ದೊಡ್ಡದು ಬಂದದ ಭವ ಸಾಗರಕ
ಹೀನ ಗುಣ ಬಿಡಬೇಕರಿ ಶರಣಾಗದಕ ॥ ೨ ॥

ಬಣ್ಣ ರೂಪ ಹೊರಗ ನೋಡಿದರ ಬ್ಯಾರೆ ಕಾಣುತಾದ ಜನಕ
ಯಾರು ಮಾಡೀರಿ ತೂಕ, ಹೆಣ್ಣು-ಗಂಡು ಎರಡೆ ಕೊನಿತನಕ
ಟೊಂಗೆ ಹತ್ತು ಗಿಡದ ಬೊಡ್ಡೆ ಒಂದೇ ಅದ ಬುಡಕ
ನಾ ನೀ ಅಂತ ವದ್ರ್ಯಾಡ್ತೀರಿ ಹಣ್ಣು ಆಗಿ ಹೋಗಾತನಕ ॥ ೩ ॥

ಬೆಳ್ಳಿ ಬಂಗಾರ ರೊಕ್ಕ ರೂಪಾಯಿ ಬರುದಿಲ್ಲ ಕಡಿತನಕ
ಭಕ್ತಿಲಿಂದ ದುಡಿದರ ಫಲ ಸಿಗುತಾದ ಕ್ಷಣಕ
ಹೇಳ್ಯಾನ ನಾಡಿಗೆ ಕಲ್ಲೂರ ಕವಿಗಾರ ಜನಕ
ವೀರಭದ್ರನಲಿ ಭಕ್ತಿ ಇಟ್ಟು ನಂಬಿರಿ ಅವನ ಪಾದಕ ॥ ೪ ॥

ಅಂಗಿ ಅಂತ ಹತ್ತಲಿಲ್ಲ

ಕಾಂತೆ ಕೇಳೆ ಅಂಗಿ ಅಂತ ಹತ್ತಲಿಲ್ಲ
ಎಂಥ ಸಿಂಪಗೇನ ಹುನ್ನಾರ
ಶಾಂತ ಮನದಿಂದ ಕೇಳರಿ ಎಂಥ ಚಮತ್ಕಾರ ॥ ಪ ॥

ಸಿಂಪೆಗೇರ ಶಿವರಾಯ ಸ್ವಂತ ಕೈಲಿಂದ
ಕಪನಿ ತಯ್ಯಾರ ಮಾಡಿದ
ಖಾದಿ ಅಂಗಿ ತಮ್ಮ ತೊಟ್ಟರ ತಂಪ
ಎಂಥ ಅಂಗಿ ನೆಯ್ಯಿದ ಶಿವರಾಯ ಭೂಪ ॥ ೧ ॥

ಅಂಗದ ಅಳತಿಗಿ ಅರಬಿ ಬೇಕಾಗತೈತೊ ಪೋಣೇ ದೋನವಾರ
ತಿಂಗಳ ಗಟ್ಟಲೆ ಟಿಬ್ಬಿ ಹಾಕಿದನು ಇಪ್ಪತ್ತು ಸಾವಿರ ನೂರಾ
ಮೂರು ನೂರಾ ಅರವತ್ತ ಸೂಜಿಲಿಂದ ಅಂಗಿ ಹೊಲಿದಾರ
ಯಾರ-ಯಾರ ಏಕಭಕ್ತಿಯ ಧಾರ ಅದಕ ಸೇರಸ್ಯಾರ ॥ ೨ ॥

ಗುಂಡಿತೂತಗಳು ಎಣಿಸಿ ನೋಡಿದರ
ಕಂಡು ಬರತಾವ ತಮ್ಮಾ ಒಂಬತ್ತು ಭರಪೂರಾ
ಉಂಡಿ-ಕೊಬ್ಬರಿ ಬೆಲ್ಲಾ ಹಾಕಲ್ಲಕ್ಕ ಕಿಸ್ಯಾಹಚ್ಯಾರ ಎದುರಾ
ಕಂಡರ ಹೇಳರಿ ಕಡೆಯ ಟಿಬ್ಬಿಗಳು ಎಲ್ಲಿ ಮುಗಸ್ಯಾರ ॥ ೩ ॥

ಒಂದು ಪೈಸಾಕೊಟ್ಟು ಅಂಗಿ ಖರೀದಿಸಿದರಾ
ಒಂದು ದಿನ ಒಗಿಲ್ದೆ ಇದ್ದರ ನಾರುವುದು ಭಾಳ ಘೋರಾ
ಲಿಂಗದ ಸಂಗ ಅಂಗಿಗಿ ಬೇಕು ಶುದ್ಧ ಆಗಿತು ಪೂರಾ
ಅಂಗಿಯಲ್ಲಿ ಹುಡಕ್ಯಾಡಿದರು ಹತ್ತಲಿಲ್ಲ ಸಿಂಪಗ್ಯಾನ ಹುನ್ನಾರ ॥ ೪ ॥

ಪೊಡವಿಯೊಳಗ ಮ್ಯಾಲ ಕಲ್ಲೂರ ಗ್ರಾಮ
ಬಸವ ತೀರ್ಥದ ವೀರಭದ್ರನ ನಾಮ
ಶಿಶು ನಾನು ಯಾವಾವತ್ತು ಮಾಡುವೆ ಸ್ಮರಣ
ಅಂಗಿಗಾಧಾರ ಹಾನ ಶರಣ ॥ ೫ ॥

(ಈ ವಿವರಗಳನ್ನು ಸ್ವತಃ ಕವಿಗಳೇ ನೀಡಿದ್ದಾರೆ.)


▯




ಅಣೆಪ್ಪ ಕಟ್ಟೀಮನೆ ಅವರ ಮನೆ (ಕಲ್ಲೂರು)



ಅಣೆಪ್ಪ ಕಟ್ಟೀಮನೆ ಅವರು ಗೆಳೆಯನ ವಿವಾಹ ಸಮಾರಂಭದಲ್ಲಿ (ವರನ ಎಡಕ್ಕೆ)



ಅಣೆಪ್ಪ ಅವರ ಆರಾಧ್ಯ ದೇವರು ವೀರಭದ್ರೇಶ್ವರ ಮಂದಿರ (ಬಸವತೀರ್ಥ)



ವೀರಭದ್ರೇಶ್ವರ ದೇವರ ದರ್ಶನ ಮೂರ್ತಿ

೨೨. ಕರುಣಾದೇವಿ

ಐವತ್ತರ ಆಸು–ಪಾಸಿನಲ್ಲಿರುವ ಶ್ರೀಮತಿ ಕರುಣಾದೇವಿ ಅವರು ಸೌಮ್ಯ ಸ್ವಭಾವದ ಸುಶಿಕ್ಷಿತ ಸಾಧ್ವಿ; ಸುಸಂಸ್ಕೃತ ವ್ಯಕ್ತಿತ್ವದ ಶಿಕ್ಷಕಿ. ಅವರನ್ನು ಕುರಿತು "ನೀವು ಬರೆಯುತ್ತಿರುವುದು ಏತಕ್ಕಾಗಿ?" ಎಂಬ ಪ್ರಶ್ನೆ ಕೇಳಿದೆವು. ಅವರು ಕೊಟ್ಟ ಉತ್ತರವು ಅವರ ನುಡಿಗಳಲ್ಲಿಯೇ ಕೇಳಬೇಕು: "ನಾನು ನಿಜವಾಗಿ ಹೇಳಬೇಕೆಂದರೆ ಬರೆಯುವುದು ಸಾಹಿತಿ–ಕವಯಿತ್ರಿ ಆಗಬೇಕೆಂದು ಹಂಬಲಿಸಿಯಂತು ಅಲ್ಲವೇ ಅಲ್ಲ. ಸಾಹಿತ್ಯ ಅಥವಾ ಕಾವ್ಯವು ನಮ್ಮ ಒಳಗಿನ ತಳಮಳವನ್ನು ಹೊರಗೆ ಹಾಕುವುದಕ್ಕೆ ಒಳ್ಳೆಯ ಸಾಧನ. ಆದುದರಿಂದ ನಾನು ನನ್ನ ಒಳಗಿನ ತಳಮಳ–ವಿಚಾರಗಳನ್ನು ಹೊರಗೆ ಹಾಕುವುದಕ್ಕಾಗಿ ಏನಾದರೊಂದು ಬರೆಯುತ್ತಲಿರುತ್ತೇನೆ. ಕಿವಿಯಲ್ಲಿ ಒಂದು ಚಿಕ್ಕ ಹುಳು ಹೊಕ್ಕಾಗ ಅದು ಒಂದೇ ಸವನೆ ಕಿರಿ–ಕಿರಿಯನ್ನುಂಟು ಮಾಡುತ್ತಿರುತ್ತದೆ. ಕಿವಿಯಲ್ಲಿ ಒಂದು ರೀತಿಯಲ್ಲಿ 'ಗುಳುಗುಳು' ಆದ ಅನುಭವ ಉಂಟಾಗುತ್ತದೆ. ಅದನ್ನು ಆದಷ್ಟು ಬೇಗನೆ ಹೊರಗೆ ಹಾಕುವ ಪ್ರಯತ್ನ ಮಾಡುತ್ತೇವೆ. ಅದರಂತೆ ಮನದ ಒಳಗಿರುವ ಎಷ್ಟೊ ವಿಚಾರಗಳು ಕಿವಿಯಲ್ಲಿ ಸೇರಿದ ಹುಳುವಿನಂತೆ ಇರುತ್ತವೆ. ಅವುಗಳನ್ನು ಹೊರಗೆ ಹಾಕದೆ ಸಮಾಧಾನವಾಗುವುದಿಲ್ಲ. ಸಾಹಿತ್ಯವೆಂಬುದು ಮನಸ್ಸಿಗೆ ಸಮಾಧಾನ ಕೊಡುವ ಒಂದು ಮಾಧ್ಯಮ. ಅದಕ್ಕಾಗಿ ನಾನು ಬರೆಯುತ್ತೇನೆ".

ಕರುಣಾದೇವಿ ಅವರ ತವರು ಮನೆ ಕಲಬುರ್ಗಿ ತಾಲ್ಲೂಕಿನ ಕುರಿಕೋಟಾ ಗ್ರಾಮವಾಗಿದೆ. ಅಲ್ಲಿನ ವೀರಶೈವ ಮನೆತನದ ಚೆನ್ನಬಸಪ್ಪನವರು ಕರುಣಾದೇವಿ ಅವರ ತಂದೆ. ತಾಯಿ ಹೀರಾಬಾಯಿ. ಈ ದಂಪತಿಗಳು ಸುಸಂಸ್ಕೃತ ದಂಪತಿಗಳಾಗಿದ್ದು, ತಮ್ಮ ಮಕ್ಕಳಿಗೆ ಸದ್ವಿಚಾರ–ಸದಾಚಾರಗಳನ್ನು ಕಲಿಸಿದರು. ಈ ಬಗಗೆ ಕರುಣಾದೇವಿ ಅವರು ಹೀಗೆ ಹೇಳುತ್ತಾರೆ: "ನಮ್ಮ ತಂದೆ ಚನ್ನಬಸಪ್ಪನವರು ವೀರಶೈವ ಧರ್ಮದ ಕಟ್ಟಾ ಅನುಯಾಯಿಗಳಾಗಿದ್ದರು. ದಿನನಿತ್ಯ ಬೆಳಿಗ್ಗೆಯೆದ್ದು ಸ್ನಾನ–ಪೂಜೆ ಮುಗಿದ ಮೇಲೆಯೇ ಅವರು ಹೊರಗೆ ಹೋಗುತ್ತಿದ್ದರು. ಮನೆಯಲ್ಲಿನ ಎಲ್ಲ ಸದಸ್ಯರ ಕೊರಳಲ್ಲಿ ಇಷ್ಟಲಿಂಗವಿರುವುದು ಕಡ್ಡಾಯವಾಗಿತ್ತು. ಎಲ್ಲರೂ ಹಣೆಯ ಮೇಲೆ ವಿಭೂತಿ ಧಾರಣ ಮಾಡಿಕೊಳ್ಳಬೇಕು. ಯಾರೂ ಸ್ನಾನಮಾಡದೆ ಬಾಯಲ್ಲಿ ಏನನ್ನೂ ಹಾಕಿಕೊಳ್ಳಬಾರದೆಂಬ ಕಟ್ಟಪ್ಪಣೆ ಅವರದಾಗಿತ್ತು. ನಮ್ಮ ತಾಯಿಯವರೂ ಅಷ್ಟೆ.

ತಂದೆ-ತಾಯಿಗಳಿಬ್ಬರೂ ಪ್ರಸಾದಿಕ ದೀಕ್ಷೆ ತೆಗೆದುಕೊಂಡವರಾಗಿದ್ದರು. ಅವರ ಸಂಸ್ಕಾರವನ್ನೇ ನಾವು ಕಲಿತುಕೊಂಡಿದ್ದೇವೆ".

ಕರುಣಾದೇವಿ ಅವರು ಎಸ್.ಎಸ್.ಎಲ್.ಸಿ.ವರೆಗೆ ಓದಿದರು. ಟಿ.ಸಿ.ಎಚ್. ಮುಗಿಸಿ ಸರಕಾರಿ ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಕಿಯಾಗಿ ನೇಮಕಗೊಂಡರು. ಈಗ ಅವರು ಶಿಕ್ಷಣ ಕ್ಷೇತ್ರದಲ್ಲಿ ಸೇವೆಸಲ್ಲಿಸುತ್ತ; ವಚನಕಾರ್ತಿ-ಕವಯಿತ್ರಿಯಾಗಿ ಸಾಹಿತ್ಯದ ಸೇವೆಯನ್ನು ಮಾಡುತ್ತಲಿದ್ದಾರೆ.

ಕರುಣಾದೇವಿ ಅವರ ಪತಿ ವಿಜಯಕುಮಾರ ಅವರು. ಈ ದಂಪತಿಗಳಿಗೆ ಒಬ್ಬ ಮಗ ಮತ್ತು ಒಬ್ಬ ಮಗಳು ಇದ್ದಾರೆ. ಪತಿ ವಿಜಯ ಕುಮಾರ ಅವರು ಸರಕಾರಿ ನೌಕರಿಯಲ್ಲಿದ್ದರು. ಅಕಾಲಿಕ ಮರಣದಿಂದ ತೀರಿಕೊಂಡಿದ್ದಾರೆ. ಕರುಣಾದೇವಿ ಅವರ ಪತಿಯಮನೆ ಇರುವ ಊರು ಕಲಬುರ್ಗಿ ಜಿಲ್ಲೆಯ ವಿ.ಕೆ.ಸಲಗರ ಗ್ರಾಮ. ಆದರೆ ಆ ಗ್ರಾಮವನ್ನು ಬಹಳ ಹಿಂದೆಯೆ ಬಿಟ್ಟು ಬಂದು ಹುಮನಾಬಾದಿನಲ್ಲಿ ಸ್ವತಃ ಮನೆಯೊಂದನ್ನು ಕಟ್ಟಿಸಿಕೊಂಡು, ಅದೇ ಪಟ್ಟಣದವರಾದರು. ಹೀಗಾಗಿ ಕರುಣಾದೇವಿ ಅವರನ್ನು ಹುಮನಾಬಾದಿನವರೆಂದು ಇಲ್ಲಿ ಪರಿಗಣಿಸಲಾಗಿದೆ.

ಕರುಣಾದೇವಿ ಅವರ ಮಾವನವರಾದ ಶ್ರೀ ಸಂಗಪ್ಪ ಸಲಗರ ಅವರು ಎಂ.ಎ.ಎಂ.ಇಡಿ ಪದವಿಧರರು. ಸರಕಾರಿ ಪದವಿ ಪೂರ್ವ ಮಹಾವಿದ್ಯಾಲಯದ ಪ್ರಾಚಾರ್ಯರಾಗಿ ನಿವೃತ್ತರಾಗಿದ್ದಾರೆ. ಅವರು ವಿಚಾರ ಶೀಲರೂ; ಸಮಾಜ ಸೇವಕರೂ ಆಗಿದ್ದಾರೆ. ತಮ್ಮ ಸೊಸೆ ಕರುಣಾದೇವಿ ಅವರ ಸಾಹಿತ್ಯ ಕೃಷಿಯ ಬಗೆಗೆ ಸಂಗಪ್ಪನವರಿಗೆ ಅತೀವ ಪ್ರೀತಿಯಿದೆ. ಅವರು ಹೇಳುವ ಮಾತುಗಳು ಹೀಗಿವೆ: "ನಮ್ಮ ಸೊಸೆಯೆಂದರೆ, ಅವಳು ಮಗಳಂತೆ ಇದ್ದಾಳೆ. ಅವಳಲ್ಲಿ ಅತ್ಯಂತ ಸಮಾಧಾನದ ಮನಸ್ಸಿದೆ. ಸಹನೆಯಿದೆ. ಸುಶಿಕ್ಷಿತ ವಾತಾವರಣದಲ್ಲಿ ಬೆಳೆದು ಬಂದ ಅವಳು ನಮ್ಮ ಕುಟುಂಬದ ಕಣ್ಣಿನಂತಿದ್ದಾಳೆ. ಎಂತಹ ಸಮಸ್ಯೆ ಬಂದರೂ ಅವಳು ನನಗೆ ಮಗ-ಮಗಳು ಎರಡೂ ಆಗಿ ನಿಂತು ಧೈರ್ಯ ಹೇಳುತ್ತಾಳೆ. ಅವಳಿಗೆ ಸಹಜವಾಗಿ ಸಿದ್ಧಿಸಿದ ಸಾಹಿತ್ಯದ ಶಕ್ತಿಯ ಬಗೆಗೆ ನನಗೆ ಹರುಷವಿದೆ. ನಮ್ಮ ಮನೆಯಲ್ಲಿ ಹಿಂದೆ ಯಾರೂ ಸಾಹಿತಿಗಳಿರಲಿಲ್ಲ. ಈಗ ನಮ್ಮ ಸೊಸೆ ಕವಯಿತ್ರಿ-ವಚನಕಾರ್ತಿಯಾಗಿ ಹೆಸರು ಮಾಡುತ್ತಿದ್ದಾಳೆ. ಈ ಮೂಲಕ ನಮ್ಮ ಮನೆಗೆ ಕೀರ್ತಿ ತರುತ್ತಿದ್ದಾಳೆ. ನಮ್ಮ ಪ್ರೋತ್ಸಾಹ ಅವಳಿಗೆ ಯಾವತ್ತೂ ಇದೆ".

ಕರುಣಾದೇವಿ ಅವರು ಹಲವಾರು ಮಾನ-ಸನ್ಮಾನಗಳನ್ನು ಪಡೆದಿದ್ದಾರೆ. ವೀರಶೈವ ಮಠಗಳಲ್ಲದೆ; ಕನ್ನಡ ಪರ ಸಂಘಟನೆಗಳು ಅವರ ಸಾಹಿತ್ಯದ ಸೇವೆಯನ್ನು ಗುರುತಿಸಿ ಸನ್ಮಾನ ಮಾಡಿವೆ. ಈಗಾಗಲೇ ಕರುಣಾದೇವಿ ಅವರು ಎರಡು ವಚನ ಸಂಕಲಗಳನ್ನೊಳಗೊಂಡಂತೆ ಒಟ್ಟು ನಾಲ್ಕು ಗ್ರಂಥಗಳನ್ನು ಪ್ರಕಟಿಸಿ ಸಾಹಿತ್ಯ ಲೋಕಕ್ಕೆ ಅರ್ಪಿಸಿದ್ದಾರೆ.

ಕರುಣಾದೇವಿ ಅವರು ತಾವು ಬರೆದ ತತ್ತ್ವಪದಗಳಿಗೆ "ಶಿವಲಿಂಗೇಶ್ವರ" ಎಂಬ ಅಂಕಿತವನ್ನು ಇರಿಸಿಕೊಂಡಿದ್ದಾರೆ. ಅವರ ಎರಡು ಪದ್ಯಗಳನ್ನು ಇಲ್ಲಿ ಕೊಡಲಾಗಿದೆ:

ಮುಕ್ತಿ ಪಡಿ

ಯಾಕ ಚಿಂತಿ ಮಾಡ್ತಿ
ಎಲ್ಲಾನು ನಂದ್ಯಾಕ ಅಂತಿ
ಬಿಡು ಭ್ರಾಂತಿ
ಹಿಡಿ ನಾಮ ಪಡಿ ಶಾಂತಿ ॥ ಪ ॥

ಸಾಯೋದು ಖರೆ ಅದ
ಬರೀ ಯಾಕ ಗಳಿಸ್ತಿ
ಬಿಟ್ಹೋಗೋದು ಗೊತ್ತದ
ಗಡಿಬಿಡಿ ಯಾಕ ಮಾಡ್ತಿ ॥ ೧ ॥

ಹೆಂಡ್ತಿ ಮಕ್ಕಳಂತಿ
ಆಟಕೊಟ್ಟ ಸಾಮಾನಗಳೆಂದು
ನೀ ತಿಳಿಯಲ್ದೆ ಹೋದರ
ಎದಕ ಬಂತು ನೀ ಭೂಮಿಮ್ಯಾಲ ಹುಟ್ಟಿ ॥ ೨ ॥

ಶೀವಲಿಂಗೆಶನ ನೆಲೆ ನೀ ತಿಳಿ
ಅರಿವಿನ ಬೆಳಕಿನಲಿ ಬೆಳಿ
ಎಲ್ಲಾನು ಅವನದೆಂದರಿಯದ್ದಿದ್ದರ
ಎಂದಾಗೋದೊ ನಿನಗ ಮುಕ್ತಿ ॥ ೩ ॥

ನೆನೆದವರ ಮನದಲ್ಲಿ

ಕಲ್ಯಾಣ ಶರಣರು ಎಲ್ಲಾರೆ ನನ ಗೆಳದಿ
ನೆನದವರ ಮನದಲ್ಲಿ ಮನೆಯ ಮಾಡಿ
ಸಾರಿ ಹಾಕವ್ವ ಯ್ಯಾರಿ ॥ ಪ ॥

ಆಸೆಯ ಅಳಿಬೇಕು
ರೋಷವ ಬಿಡಬೇಕು
ಮದ–ಮತ್ಸರ ಗೆಲ್ಲಬೇಕ ನಾರಿ
ಹಾಕವ್ವ ಯ್ಯಾರಿ ॥ ೧ ॥

ಕಲ್ಲು ದೇವರಿಗಿ ನೀ
ಕೈಯಾಕ ಮುಗಿಯಿತಿ
ಕಾಯಕವೇ ಕೈಲಾಸವೆಂದು ತಿಳಿಯೆ ನಾರಿ
ಹಾಕವ್ವ ಯ್ಯಾರಿ ॥ ೨ ॥


ಕಣ್ಣು ಕಾಣುವ ತನಕ
ಬೆನ್ನು ಬಾಗುವ ತನಕ
ಶರಣರ ಸಂಗ ಮಾಡಿ ನೋಡೆ ನಾರಿ
ಹಾಕವ್ವ ಯ್ಯಾರಿ ॥ ೩ ॥

ಶರಣರ ನೆನೆದರ
ಮನವೆಲ್ಲ ತಂಪಾಗಿ
ಹೋಳೀಗಿ ತುಪ್ಪ ಹೊಡೆದಂಗ ನಾರಿ
ಹಾಕವ್ವ ಯ್ಯಾರಿ ॥ ೪ ॥

ದೇಶದೊಳಗಧಿಕ
ಲೇಸ ಕುರಕೋಟಿಗ್ರಾಮ
ಈಶ ಶಿವಲಿಂಗನ ನೆನೆಯಬೇಕ ನಾರಿ
ಹಾಕವ್ವ ಯ್ಯಾರಿ ॥ ೫ ॥

(ಶ್ರೀ ಸಂಗಪ್ಪ ಸಲಗರ ಹಾಗೂ ಸ್ವತಃ ಕವಯಿತ್ರಿ ಅವರು ಈ ವಿವರಗಳನ್ನು ನೀಡಿದ್ದಾರೆ.)


▯




ಕರುಣಾದೇವಿ ಅವರ ಮನೆ (ಹುಮನಾಬಾದ)



ಕರುಣಾದೇವಿ ಅವರು ತಮ್ಮ ಕರುಳಿನ ಕುಡಿಗಳೊಂದಿಗೆ



ಕರುಣಾದೇವಿ ಅವರ ಮಾವ – ಅತ್ತೆ: ಸಂಗಪ್ಪ ಸಲಗರ ದಂಪತಿಗಳು



ಮಾವ – ಅತ್ತೆ ಅವರೊಂದಿಗೆ ಕರುಣಾದೇವಿ ಮತ್ತು ಅವರ ಮಕ್ಕಳು

ಸಾಹಿತ್ಯದ ವಾದಗಳು ಏನೇ ಇರಲಿ, "ಸಾಹಿತ್ಯವು ಜೀವನ ಮುಖಿಯಾಗಿರಬೇಕೆಂಬುದು" ನಿರ್ವಿವಾದದ ಸಂಗತಿ. ಈ ಸಂಗತಿಯನ್ನು ಅತ್ಯಂತ ಗಟ್ಟಿ ಧ್ವನಿಯಲ್ಲಿ ಸಾರಿ ಕ್ರಿಯಾ ಶೀಲಗೊಳಿಸಿದವರು ವಚನಕಾರರು, ತತ್ತ್ವಪದಕಾರರು, ದಾಸರು. ಇವು ಕಲ್ಯಾಣ ಕರ್ನಾಟಕ ಸಂಸ್ಕೃತಿಯ ಜೀವನದಿಗಳಷ್ಟೇ ಅಲ್ಲ; ಪ್ರಭಾವ – ಪ್ರೇರಣೆಯ ದೃಷ್ಟಿಯಿಂದ ಸೀಮೆಯನ್ನು ಉಲ್ಲಂಘಿಸಿ, ವಿಶ್ವಜನಾಂಗದ ಹಿತ ಸಾಧನೆಯ ನೆಲೆಯತ್ತ ಅವು ಪ್ರವಹಿಸಿವೆ. ಡಾ. ಎಸ್.ಎಂ. ಹಿರೇಮಠ ಅವರು ಬೀದರ ಜಿಲ್ಲೆಯ ತತ್ತ್ವಪದಕಾರರ ಸ್ಮಾರಕಗಳ ಸಂಶೋಧನೆ ಮಾಡಿ ಸಂಪುಟಗಳ ಪ್ರಕಟಣೆಯ ಮೂಲಕ ಇದನ್ನು ಸಾಧಾರಭದ್ರವಾಗಿಸಿದ್ದಾರೆ. ತತ್ತ್ವಪದ ಸಾಹಿತ್ಯವು ನಿಜಕ್ಕೂ ಜನಹಿತದ ಸಾಹಿತ್ಯ, ಜನತೆಯ ಸಾಹಿತ್ಯ, ಜನತೆಯ ನಡುವೆಯೇ ಜೀವನದ ಸತ್ವಸಾರವನ್ನು ಹೀರಿಕೊಂಡು ಹುಟ್ಟಿದ ಸಾಹಿತ್ಯ. ತತ್ತ್ವಪದಕಾರರ ಜೀವನ – ಸಾಹಿತ್ಯ ಸಾಧನೆಯ ವಿವರಗಳ ಒಡಲಲ್ಲಿ ಈ ನೆಲದ ಸಂಸ್ಕೃತಿಯ ಸಂಪತ್ತು ಅಡಗಿದೆ. ಅದರ ಒಳನೋಟಗಳು ಈ ಪ್ರದೇಶದ ಹಿರಿಮೆಗೆ ಪ್ರಕಾಶವನ್ನು ಹಿಡಿಯುತ್ತವೆ. ಗುಲಬರ್ಗಾ ವಿಶ್ವವಿದ್ಯಾಲಯವು ಇಂತಹ ಸಾಂಸ್ಕೃತಿಕ ಸಾಧನೆಗೆ ಕಾರಣವಾದುದರಿಂದ ಅದರ ಕುಲಪತಿಯಾದ ನನಗೆ ಅತೀವ ಸಂತಸವಾಗಿದೆ.

ಪ್ರೊ.ಈ.ಟಿ.ಪುಟ್ಟಯ್ಯ
ಕುಲಪತಿಗಳು

978-81-920110-2-8

ರೂ.500.00